# ಓಂ ಶ್ರೀ ಗುರು ಅಕ್ಕಮಹಾದೇವಿ ಲಿಂಗಾಯ ನಮಃ

## ಅಕ್ಕನ ಚರಿತೆ

ವಿಶ್ವದ ದಾರ್ಶನಿಕರಲ್ಲಿ, ಕವಯಿತ್ರಿಯರಲ್ಲಿ, ವೈರಾಗ್ಯವನಿತೆಯರಲ್ಲಿ ಪ್ರಥಮ ಮಹಿಳೆನಿಸಿದವರು ಮಹಾದೇವಿಯಕ್ಕ. ಅವರನ್ನು ವಿಶ್ವಕ್ಕೆ ನೀಡಿದುದು. ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಶಿರಾಳಕೊಪ್ಪ ಹೋಬಳಿಯ ಉಡುತಡಿ ಗ್ರಾಮ. ಕರ್ನಾಟಕದ ಶ್ರೇಷ್ಠ ಕವಿಪುಂಗವರಾದ ಹರಿಹರ, ಚಾಮರಸ, ವಿರೂಪಾಕ್ಷ ಪಂಡಿತ, ರಾಚಕವಿ ಮೊದಲಾದವರು, ಶೂನ್ಯ ಸಂಪಾದನಕಾರರು, ಅಕ್ಕಮಹಾದೇವಿಯನ್ನು ಉಡುತಡಿಯ ಅಕ್ಕಮಹಾದೇವಿಯೆಂದೇ ತಮ್ಮ ಕೃತಿಗಳಲ್ಲಿ ಕರೆದಿದ್ದಾರೆ. ಇಂತಹ ಪುಣ್ಯ ಶ್ರೇಷ್ಠರು ಜನ್ಮತಳೆದ ಉಡುತಡಿಯೆಂಬ ಗ್ರಾಮ ಕಂದಾಯ ಇಲಾಖೆಯ ಹೆಸರಿನಲ್ಲಿ ಸೇರಿಲ್ಲ. ಆದರೂ ಅದು ಜನ ಸಾಮಾನ್ಯರ ಮನದಾಳದಲ್ಲಿ ಉಡುತಡಿಯ ಕೋಟೆಯೆಂದೇ ಗುರುತಿಸಲಾಗಿದೆ. ಇಲ್ಲಿ ಇದೀಗ ಉಡುತಡಿ ಕೌಶಿಕನ ಕೋಟೆಯೆಂದು ಪರಿಗಣಿಸಲಾಗಿದ್ದ ಸ್ಥಳವನ್ನೇ ಅಕ್ಕಮಹಾದೇವಿಯ ಕ್ಷೇತ್ರವೆಂದು ಜನ ಭಾವಿಸಿದ್ದಾರೆ

ಮಹಾದೇವಿಯಕ್ಕನ ಕ್ಷೇತ್ರದ ಸನಿಹದಲ್ಲಿ ಉಡುಗಣಿಯೆಂಬ ಚಿಕ್ಕಗ್ರಾಮ ಹಾಗೂ ತಡಗಣಿಯೆಂಬ ಇನ್ನೊಂದು ಗ್ರಾಮ, ಅಕ್ಕಪಕ್ಕದ ಗ್ರಾಮಗಳಾಗಿಯೇ ಇವೆ. ಈ ತಡಗಣಿ ಗ್ರಾಮದ ಸನಿಹದಲ್ಲಿ ಚಿಕ್ಕ ಕಸವಿ, ಹಿರೇ ಕಸವಿಯೆಂಬ ಪುಟ್ಟಗ್ರಾಮಗಳೂ ಇವೆ. ಇವುಗಳಲ್ಲಿ 'ಹಿರೇ ಕಸವಿ' ಅಕ್ಕಮಹಾದೇವಿಯ ತವರೂರಾಗಿರಬೇಕೆಂಬ ಭಾವನೆ

ಉಡುತಡಿಯನ್ನು ತಲುಪುವ ದಾರಿ,

ಉಡುತಡಿಯನ್ನು ಸಂದರ್ಶಿಸುವವರು ಶಿವಮೊಗ್ಗದಿಂದ ರಸ್ತೆ ಮಾರ್ಗವಾಗಿ **50** ಕಿ.ಮೀ. ದೂರದಲ್ಲಿ ಶಿಕಾರಿಪುರ, ಅಲ್ಲಿಂದ **16** ಕಿ.ಮೀ. ಹತ್ತಿರದಲ್ಲಿ ಶಿರಾಳಕೊಪ್ಪ, ಅಲ್ಲಿಂದ **6** ಕಿ.ಮೀ. ಅಂತರದಲ್ಲಿ ಉಡುತಡಿ ಇರುತ್ತದೆ. ಬೆಂಗಳೂರು ಪುಣೆ ರಾಷ್ಟ್ರೀಯ ಹೆದ್ದಾರಿ ಎನ್. ಎಚ್. **4**ರಲ್ಲಿ ರಾಣೀಬೆನ್ನೂರಿನ ಮುಖಾಂತರ ಹಿರೇಕೆರೂರಿನಿಂದ ಸುಮಾರು **20** ಕಿ.ಮೀ. ದೂರದಲ್ಲಿ ಹಾಗೂ ಸೊರಬ, ಬನವಾಸಿ, ಶಿರ್ಸಿಗೆ ಹೋಗುವ ಮಾರ್ಗದಲ್ಲಿ ಶಿರಾಳಕೊಪ್ಪದಿಂದ ಉಡುತಡಿಯನ್ನು ತಲುಪಬಹುದು. ರೈಲ್ವೆ ಸಂಚಾರದಲ್ಲಿ ಬರುವವರು ಪುಣೆ-ಬೆಂಗಳೂರು ಮಾರ್ಗದಲ್ಲಿ ರಾಣೀಬೆನ್ನೂರಿನಲ್ಲಿಳಿದು ಬೇರೆ ವಾಹನದಿಂದ ಉಡುತಡಿ ತಲುಪಬೇಕು. ಅದೇ ತೆರನಲ್ಲಿ ಬೆಂಗಳೂರು-ಶಿವಮೊಗ್ಗ ರೈಲಿನಲ್ಲಿ ಶಿವಮೊಗ್ಗಕ್ಕೆ ಬಂದು ಅಲ್ಲಿಂದ ಶಿವಮೊಗ್ಗ-ಶಿರ್ಸಿ ರಸ್ತೆ ಮಾರ್ಗದಲ್ಲಿ ಉಡುತಡಿಯನ್ನು ತಲುಪಬಹುದು. ಇದು ಉಡುತಡಿ ಕ್ಷೇತ್ರದ ಭೌಗೋಲಿಕ ವಿವರ.

ಅಕ್ಕಮಹಾದೇವಿಯವರ ಬದುಕೇ ಒಂದು ಮಹಾಕಾವ್ಯವೆಂದು ಹೇಳಬಹುದು. ಅಕ್ಕನ ಚರಿತ್ರೆ ಪ್ರಾರಂಭವಾಗುವುದು ಮಹಾಕವಿಗಳ ಪ್ರಕಾರ, ಕೈಲಾಸ ದರ್ಶನದಿಂದಲೇ. ಪಾರ್ವತಿ ತನ್ನ ತಾಮಸಕಳೆಯನ್ನು ಮಾಯೆಯೆಂಬ ಹೆಸರಿನಲ್ಲಿ ಬನವಾಸಿಯ ರಾಜದಂಪತಿಗಳಾದ ಮಮಕಾರ-ಮೋಹಿನಿಯರ ಮಗಳಾಗಿ ಜನಿಸುವಂತೆ ಕಳುಹಿಸುತ್ತಾಳೆ. ಅಲ್ಲದೆ ನಿರ್ಮಾಯನಾದ ಅಲ್ಲಮ ಪ್ರಭುವಿನಿಂದ ನಿಜವನ್ನು ಸಾಧಿಸಿಕೊಂಡು ಅಲ್ಲಮಪ್ರಭು ಮಾಯಾಸಕ್ತನೆಂದು ನಿರೂಪಿಸಲು ಮಾಯೆಗೆ ಅಪ್ಪಣೆಕೊಡುತ್ತಾಳೆ. ಆದರೆ ಪ್ರಭುವಿನಿಂದ ಸೋತ ಮಾಯೆ ಕೈಲಾಸಕ್ಕೆ ಮರಳುತ್ತಾಳೆರೆ. ಆಗ ಪಾರ್ವತಿ ಅಲ್ಲಮನನ್ನು ಗೆಲ್ಲುವ ಮಾರ್ಗಯಾವುದು? ಎಂದು ಪ್ರಶ್ನಿಸುತ್ತಾರೆ. ಅದಕ್ಕೆ ಶಿವನು

ನಿಷ್ಕಾಮ ನಿಷ್ಕಲ್ಮಷವಾದ ನಿಜಭಕ್ತಿಯಿಂದ ಅಲ್ಲಮನನ್ನು ಗೆಲ್ಲಬಹುದಲ್ಲದೆ ಮಾಯೆಯಿಂದ ಸಾಧ್ಯವಾಗದೆಂದು ತಿಳಿಸಲು ಪಾರ್ವತಿ ತನ್ನ ಸಾತ್ವಿಕಕಳೆಯನ್ನು ಭೂಲೋಕಕ್ಕೆ ಕಳುಹಿಸಿ, (ಅಲ್ಲಮ ಮತ್ತು ಅಕ್ಕಮಹಾದೇವಿ ಒಂದೇ ಪ್ರಾಂತದವರು, ಈ ಉಡುತಡಿ ಕ್ಷೇತ್ರಕ್ಕೆ ಹೊಂದಿಕೊಂಡಂತೆ ಅಲ್ಲಮಪ್ರಭು ಹುಟ್ಟಿದ ಸ್ಥಳ ಬಳ್ಳಿಗಾವಿ, ಕಿನ್ನರಿ ಬೊಮ್ಮಯ್ಯ ಹಾಗೂ ಅಜಗಣ್ಣ-ಮುಕ್ತಾಯಕ್ಕರ, ಮುತ್ತಿಗೆ, ಅನಿಮಿಷಾರ್ಯರಕೊಪ್ಪಲು, ಮೊದಲಾದ ಶರಣ ಶರಣೆಯರ ಪುಣ್ಯಕ್ಷೇತ್ರಗಳು ಇವೆ.) ಮಹಾದೇವಿಯಂಬ ಹೆಸರಿನಿಂದ ಉಡುತಡಿಯ ,ಅಕ್ಕಮಹಾದೇವಿಯವರ ಹುಟ್ಟಿದ ಊರು ಶಿವಮೊಗ್ಗ

ಜಿಲ್ಲೆಯ ಉಡುತಡಿ ,

ಉಡುತಡಿಯು ಪಶ್ಚಿಮ ಘಟ್ಟ ಪಂತಿಗಳು ಇದ್ದವೆ ಯಾವಾಗಲೂ ಹಸಿರು ಸೀರೆ ಉಟ್ಟಂತಹ . ಪ್ರಕೃತಿ ಪಶ್ಚಿಮ ಘಟ್ಟಗಳು. ಪ್ರಕೃತಿಯ ಮಡಿಲಿನ ಸೌಂದರ್ಯಕ್ಕೆ ಈಗಲೂ ಹೆಸರುವಾಸಿಯಾಗಿದೆ ಉಡುತಡಿ. ಊರಿನ ಒಂದು ಕಡೆ ಕೆರೆ , ಮತ್ತೊಂದು ಕಡೆಗೆ ಅತ್ಯಂತ ಸುಂದರವಾದ ವರ್ದಾನದಿಯು ಹರಿಯುತ್ತಿತ್ತು. ಜುಳು ಜುಳು ಹರಿಯುವ ನೀರಿನ ಶಬ್ದ , ಬಾಳೆ, ತೆಂಗು, ಇತರೆ

ತೋಟಗಳು .ದಟ್ಟವಾಗಿ ಬೆಳೆದ ಕಾಡು ಪ್ರಕೃತಿಯಿಂದ ನಿರ್ಮಿತವಾದ ತಾನಾಗೇ ಇದ್ದಂತಹ ಕಾಡು. ಹಣ್ಣು ಹೂವು,ಫಲ ಪುಷ್ಪಗಳು ಉಡುತಡಿಯ ಪ್ರಕೃತಿಯಲ್ಲಿ ಜೇನಿನ ಜೈಕಾರ ಹೂವಿನ ಸುಂಗಧ ನೀರಿನ ಜಾಲಧಾರೆ. ಉಡುತಡಿಯ ಕೆರೆಯ ನದಿಯ ಸ್ಥಳಗಳಲ್ಲಿ ಹಸುಗಳು, ಎಮ್ಮೆ, ಕುರಿಗಳು ಆ ಹಚ್ಚ ಹಸಿರಿನ ಮಧ್ಯ ನೋಡುವುದೇ ಒಂದು ಭಾಗ್ಯ. ಸಂವೃಧ್ಧಿಯಾಗಿ ಜೀವಿಸುತ್ತಿದ್ದ ಅಲ್ಲಿನ ಜನರು. ಅಲ್ಲಿ ಗಿಳಿಗಳ ಚಿಲಿಪಿಲಿ ಕಲರವ ಕೇಳಿಬರುತ್ತಿತ್ತು ಗುಬ್ಬಿಗಳು, ನವಿಲಿನ ನರ್ತನ, ಕೋಗಿಲೆಯ ಕುಹೂ ಕುಹೂ ಕಲರವ, ಇಲ್ಲಿನ ಜನರು ಸಹ ತುಂಬಾ ಶಾಂತಿಪ್ರೀಯರು, ಧಯೇ, ಧರ್ಮ, ನೀತಿವಂತರು.

ಉಡುತಡಿಯ ಸುತ್ತಲೂ ಮುತ್ತಲಿನ ಊರು ಅಲ್ಲಿನ ಪ್ರಕೃತಿಯ ಶಕ್ತಿ ತುಂಬ ವಿಶೇಷ ಮಹಾನುಭವರು, ಹುಟ್ಟಿದ

ನಾಡು ಅದು. ಭಾನವಾಸಿ ನಾಡು ಸಣ್ಣ ಊರು ಶಾಂತಿಪ್ರೀಯರು, ಧರ್ಮದವರು ದೇವರನ್ನು ನಂಬಿ ಜೀವನ ಮಾಡುವಂತವರು. ಬಹಳಷ್ಟು ಜನರು. ಕೃಷಿಕರು ಆಗಿದ್ದು ಜೀವನ ಮಾಡುವರು. ಆ ಊರಿನಲ್ಲಿ ದಂಪತಿಗಳು ಇದ್ದರು ಅವರ ಹೆಸರೇ ಮಹನ್

ಶಿವಶರಣರಾದ ನಿರ್ಮಲಶೆಟ್ಟಿ(ಓಂಕಾರಶೆಟ್ಟಿ) ಸುಮತಿ (ಲಿಂಗಮ್ಮ) ಗರ್ಭದಲ್ಲಿ ಜನಿಸುವಂತೆ ಅನುಗ್ರಹಿಸುತ್ತಾಳೆ. (ಅಂತೆಯೇ ಕವಿ ಚಾಮರಸನ ಅಭಿಪ್ರಾಯದಲ್ಲಿ ಮಹಾದೇವಿಯಕ್ಕ ಪಾರ್ವತಿಯ ಅಂಶ.) ಉಡುತಡಿಯ ತಂದೆ, ನಿರ್ಮಲಶೆಟ್ಟಿ, ತಾಯಿ, ಸುಮತಿಯವರ ಅಕ್ಕರೆಯ ಮಗಳೇ ಮಹಾದೇವಿ. ಶಿವಪೂಜಾಸಕ್ತರೂ, ವೀರಶೈವಲಿಂಗಾಯಿತ ಧರ್ಮದವರು (ಒಳಪಂಗಡ ಸಜ್ಜನಶೆಟ್ಟರು,ಕೊರಿಶೇಟ್ಟರು) ಶ್ರೀ ಶೈಲಪೀಠ ಚೆನ್ನಮಲ್ಲಿಕಾರ್ಜುನ ಕುಲ ದೇವರು (ಮನೆ ದೇವರು)

ಓಂಕಾರ ಶೆಟ್ಟಿ-ಲಿಂಗಮ್ಮ ಸುಸಂಸ್ಕೃತರು, ಶಿವಭಕ್ತರು. ಶಿವಚಿಂತೆ- ಶಿವಧ್ಯಾನವೇ ಅವರ ಸದಾಕಾಲದ ಕಾಯಕವಾಗಿತ್ತು. ಆದರ್ಶ ದಂಪತಿಯಾಗಿ ಶಿವಪಥದಲ್ಲಿ ಸಾಗುತ್ತಿದ್ದರು. ವ್ಯಾಪಾರ ಓಂಕಾರ ಶೆಟ್ಟಿಯು ಪ್ರತಿಷ್ಠಿತ ಬಂಗಾರ, ಬೆಳ್ಳಿಯ ವ್ಯಾಪಾರಿಯಾಗಿದ್ದರು, ತುಂಬಾ ಶ್ರೀಮಂತಿಕೆ ಇದ್ದರು ನೆಮ್ಮದಿ ಇರಲಿಲ್ಲ,ಮುತ್ತುರತ್ನಗಳ

ವ್ಯಾಪರಿಯಾಗಿದ್ದರು. ಅವರ ಕಾಯಕ. ಪ್ರಾಮಾಣಿಕವಾಗಿದ್ದು ಕೊಂಡೆ ಇದ್ದುದರಲ್ಲೇ ತೃಪ್ತಿಯಿಂದಿದ್ದರು. ಸಾಕಷ್ಟು ಅನುಕೂಲಸ್ಥರೂ ಆಗಿದ್ದರು. ಬಡವರ ಬಗ್ಗೆ ವಿಶೇಷ ಪ್ರೀತಿ, ಮಮಕಾರ; ಕೈಲಾದ ಸಹಾಯವನ್ನು ಮಾಡುತ್ತಿದ್ದರು. ಸಮಾಜದಲ್ಲಿ ಅವರಿಗೆ ವಿಶೇಷ ಗೌರವವೂ ಇತ್ತು. ಆದರೆ, ಒಂದು ಕೊರತೆ ಮಾತ್ರ ದಂಪತಿಯನ್ನು ಕಾಡುತ್ತಿತ್ತು. ಮದುವೆಯಾಗಿ ಇಪ್ಪತ್ತು ವರ್ಷವಾದರೂ ಮಕ್ಕಳಾಗಿರಲಿಲ್ಲ. ಇದರಿಂದಾಗಿ ಲಿಂಗಮ್ಮ ಸಮಾಜದಲ್ಲಿ ಬಂಜೆ ಎಂಬ ಪಟ್ಟ ಕಟ್ಟಿಕೊಂಡಿದ್ದರು. ಒಳಗೊಳಗೆ ಯಾತನೆ ಅನುಭವಿಸುತ್ತಿದ್ದರು.

ಮಕ್ಕಳಾಗಲಿಲ್ಲ. ಈ ಚಿಂತೆ ತಂದೆತಾಯಿಗಳಿಗೆ ಬಾಧಿಸುತ್ತಿತ್ತು. ಹಿಂದೆ ಈಗಿನ ಹಾಗೆ ವೈಜ್ಞಾನಿಕ ಅಧ್ಯಯನಗಳಿರಲಿಲ್ಲ. ಮಕ್ಕಳಾಗಲಿಲ್ಲ ಎಂದರೆ ಪೂಜೆ, ವ್ರತ, ನೇಮ, ದೇವಾಲಯ, ಮಠ, ಗುರುಗಳು, ಜ್ಯೋತಿಷಿಗಳು, ಹೇಳಿಕೆ ಹೇಳುವವರ ಬಳಿ ಹೋಗುತ್ತಿದ್ದರು. ಓಂಕಾರಶೆಟ್ಟಿ ದಂಪತಿಗಳು ತಮ್ಮ ಗುರುಗಳಾದ ಗುರುಲಿಂಗದೇವರ ಬಳಿಗೆ ಹೋದರು.ಅವರು ಉಡುತಡಿಯಿಂದ, ಶಿರಾಳಕೊಪ್ಪ ದಾರಿಯಲ್ಲಿರುವ ಮಲ್ಲಿಕಾರ್ಜುನ ದೇವಾಲಯದಲ್ಲಿ ವಾಸ ಮಾಡುತ್ತಿದ್ದರು. ಆ ಗುರುಗಳು ಅಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ, ಯೋಗ, ಸಂಗೀತ ವಿದ್ಯೆ ಹೇಳಿಕೊಡುವ ಸನ್ಯಾಸಿ ಸ್ವಾಮಿಗಳಾಗಿದ್ದರು. ಅವರು ಉಡುತಡಿ ಸುತ್ತಮುತ್ತಲ ಗ್ರಾಮದಲ್ಲಿ ಜನಮನ್ನಣೆ ಪಡೆದ ಗುರುಗಳಾಗಿದ್ದರು.ಈ ಗುರುಗಳ ಬಳಿಗೆ ಹೋದರು. ಅವರು ಈ ದಂಪತಿಗಳ ಮನದ ವಿಚಾರವನ್ನೆಲ್ಲ ಕೇಳಿ. ಗುರುಗಳು ಅವರಿಗೆ ಸಮಸ್ಯೆಗೆ ಪರಿಹಾರ ಸೂಚಿಸಿ ಶಿವಸಂಕಲ್ಪವನ್ನು ಮಾಡಲು ಹೇಳಿದರು.

ಒಂದುವರ್ಷಕಾಲ ಪರಶಿವನನ್ನು ಕುರಿತು ಇಷ್ಟಲಿಂಗ ಪೂಜೆಯನ್ನು ಬೆಳಗಿನ ಪ್ರಾತಃಕಾಲ ನಾಲ್ಕು ಗಂಟೆಗೆ ನಡೆಸಿಕೊಂಡು ವ್ರತ, ನೇಮದ ವಿಚಾರವನ್ನು ತಿಳಿಸಿಕೊಟ್ಟರು. ಅದರಂತೆ ಇವರು ವಿಶೇಷಭಕ್ತಿಯನ್ನು ಶಿವನಲ್ಲಿ ನಡೆಸಿಕೊಂಡು ಹೋಗುತ್ತಿದ್ದರು

ಇದೇ ಸಂದರ್ಭದಲ್ಲಿ ದಂಪತಿಗಳಿಗೆ ಮಂಗಳಕರವಾದ ಒಂದು ಕನಸು ಬೀಳುತ್ತದೆ. ಅದು ಅವರಿಗೆ ಮಗುವಾಗುವ ಸಂಕೇತವನ್ನು ಹೊತ್ತ ಮನೋಲ್ಲಾಸದ ಕನಸು. ಶ್ರೀ ಶೈಲ ಮಲ್ಲಿಕಾರ್ಜುನನಿಗೆ ಹರಸಿಕೊಂಡರು. ಆ ದೈವದ ಹರಕೆಯಿಂದಲೇ.

ಶಿವಪುಜೆ ಧ್ಯಾನಕ್ಕೆ ಕುಳಿತ ಲಿಂಗಮ್ಮ,ಒಂದು ಬೆಳಕು ನಿದಾನವಾಗಿ ಚಲಿಸಿ ಲಿಂಗಮ್ಮನ ದೇಹವನ್ನು ಪ್ರವೇಶ ಮಾಡಿತು, ಆಗ ಲಿಂಗಮ್ಮನ ಸಂಕಲ್ಪ ಸಿದ್ದಿಸುತ್ತದೆ ಕೆಲವೇ ದಿನಗಳಲ್ಲಿ ಲಿಂಗಮ್ಮ ಗರ್ಭಿಣಿ ಎಂಬ ಸುದ್ದಿ ಎಲ್ಲೆಡೆ ಹರಡಿತು. ಒಂಬತ್ತು ತಿಂಗಳ ಬಳಿಕ

ಮೊದಲ ಹೆರಿಗೆ ತವರಿನಲ್ಲಾಗುವುದು ಲೋಕರೂಢಿ. ಆದರೆ ಓಂಕಾರಸೆಟ್ಟರು ಉಡುತಡಿಯಲ್ಲಿಯೇ ಬಾಣಂತನದ ವ್ಯವಸ್ಥೆ ಮಾಡಿದರು.

ಉಗಾದಿಯ ನಂತರ ಹೊಸ ಸಂವತ್ಸರದ ಮೊದಲ ಹುಣ್ಣಿಮೆ 'ದವನದ ಹುಣ್ಣಿಮೆ'ಯ ದಿನ. ಅಂದು ಬೆಳಗಿನ ಜಾವ ಪಡುವಲದಲ್ಲಿ ಬೆಳಕು ಸುರಿಸುತ್ತ ಪೂರ್ಣಚಂದ್ರನಿದ್ದರೆ ಮೂಡಣವು ನಸುಕಿನ ಬೆಳಕು ಹರಿಸುವ ತಯಾರಿಯಲ್ಲಿ ಕೆಂಪಾಗತೊಡಗಿತ್ತು. ಉಡುತಡಿಯ ಮನೆಯ ಹೊರಭಾಗ ಚಂದ್ರನ ಬೆಳದಿಂಗಳಿನಲ್ಲಿ ಮೀಯುತ್ತಲಿರುವಾಗ ಒಳಮನೆಯಲ್ಲಿ ಲಿಂಗಮ್ಮನ ಮಡಿಲು ಬೆಳಕಿನೊಳಗೆ ಮತ್ತೊಂದು ಬೆಳಕಿನಿಂದ ತುಂಬಿಕೊಂಡಿತು. **1130**ರಂದು

ಶುಭಗಳಿಗೆಯಲ್ಲಿ ಲಿಂಗಮ್ಮನಿಗೆ**(**ಸುಮತಿ**)** ಹೆಣ್ಣು ಶಿಶುವೊಂದು

ಜನಿಸಿತು.

ನಸುಕಿನ ಜಾವ ನೆಲದೇವತೆಗಳು ಜಾಗೃತಗೊಳ್ಳುವ ಹೊತ್ತು. ಕಾಳು ಮೊಳಕೆ ಕಟ್ಟುವ, ತೆನೆಯಲ್ಲಿ ಹಾಲು ತುಂಬುವ, ಹೂವು ಬೀಜಗೊಳ್ಳುವ ಶುಭಗಳಿಗೆ ಎಂದು ಒಕ್ಕಲುಮಕ್ಕಳೆಲ್ಲ ನಂಬಿರುವರು. ಅಂತಹ ಕ್ಷಣದಲ್ಲಿ ಮನೆಯು ಕೂಸಿನ ಅಳುವಿನಿಂದ ತುಂಬಿತು. ಸೂಲಗಿತ್ತಿಯ ಕೈ ತುಂಬುವಷ್ಟು ದೊಡ್ಡದಿದ್ದ, ಕೆಂಪುಕೆಂಪಾದ, ನೀಳ ಎಳಸು ಕೈ ಬೆರಳುಗಳ, ಪಿಳಿಪಿಳಿ ಕಣ್ಣು ಬಿಡುತ್ತಿದ್ದ ಮಗು. ಎತ್ತಿಕೊಂಡರೆಲ್ಲಿ ಮುದುಡುವುದೋ ಎಂಬಂತೆ ಮಲ್ಲಿಗೆ ಹೂವಿನಂತಿದ್ದ ಮಗು.

ಮಲ್ಲಿಕಾರ್ಜುನ ನಿನ್ನ ದಯಾ, ನೀ ಕಣ್ಣು ತೆರೆದು ನಮ್ಮನೆ ಬೆಳಗತು. ಕೂಸಿಗೆ ಏನು ಹೆಸರಿಡಾಣ ಸುಮತಿ **(** ಲಿಂಗಮ್ಮ**)?**

ತಾನು ತಾಯಿಯಾದದ್ದು ಕನಸೋ ನನಸೋ ತಿಳಿಯದ ಆನಂದದಲ್ಲಿ, ತುಂಬಿದ ಒಡಲ ಬಿಸಿಯ ಹರುಷದಲ್ಲಿ ಲಿಂಗಮ್ಮ ಓಲಾಡಿದರು. ಮಗುವನ್ನೊಮ್ಮೆ ಎತ್ತಿಕೊಂಡು, ನೆತ್ತಿಗೆ ಮುತ್ತಿಟ್ಟು 'ಮಲ್ಲಿಕಾರ್ಜುನ, ಎಲ್ಲಾ ನಿನ್ ದಯಾ. . ಬೇನೆ ತಿಂದು ನಿತ್ರಾಣಗೊಂಡು ಮಲಗಿದ್ದ ಹೆಂಡತಿಯತ್ತ ಸಂತೋಷದ ನೋಟ ಬೀರಿ ಹೊರಬಂದರು.ದವನದ ಹುಣ್ಣಿಮೆಯ ಬೆಳಕು

ಹುಟ್ಟಿದ್ದೇ ಹುಟ್ಟಿದ್ದು, ಮನೆಯ ಅಂದಚಂದವೇ ಬದಲಾಯಿತು. ಸಾಂಬ್ರಾಣಿ ಹೊಗೆಯ ಘಮಘಮ ಸೂರಿನಿಂದ ಮೇಲೆ ಚಿಮ್ಮಿ ಸುತ್ತಮುತ್ತ ಪಸರಿಸಿ ಮನೆಯಲ್ಲಿ ನೆತ್ತಿ ಕಾಯಿಸುವ ಎಳೆಗೂಸು ಇದೆಯೆಂದು ಊರಿಗೇ ಗೊತ್ತು ಮಾಡಿತು. ಮನೆಗೆ ಬರುವ ಬಂಧುಬಳಗ, ಇಷ್ಟಮಿತ್ರರ ಸಂಖ್ಯೆ ಹೆಚ್ಚಾಯಿತು.

ಓಂಕಾರಸೆಟ್ಟರು ತಮ್ಮ ವ್ಯವಹಾರಗಳನ್ನೆಲ್ಲ ಹತ್ತು ದಿನ ನಿಲ್ಲಿಸಿ ಸಂಭ್ರಮವನ್ನು ಕಣಕಣದಲ್ಲಿ ತುಂಬಿಕೊಂಡರು. ಮನೆಯಲ್ಲಿ ಮಗುವಿರುವಾಗ ಮನೆ ತುಂಬ ಧೂಳಿನ ಮೂಟೆ, ಸಾಮಾನುಗಳ ರಾಶಿ ಹಾಕುವುದು ಸರಿಯಲ್ಲವೆಂದು ಸೆಟ್ಟರು ಹೊಸ ಉಗ್ರಾಣ ಕಟ್ಟಿಸತೊಡಗಿದರು. ಮಗು ಬಂದದ್ದೇ ಮನೆಯ ಆಯ, ಅಳತೆ ಬೇರೆಯಾಯಿತು. ಅದಾವುದೋ ದೈವಿಕ ಕಳೆಯನ್ನು ಹೊತ್ತಂತೆ ಅತ್ಯಂತ ಮುದ್ದಾಗಿತ್ತು. ಕಣ್ಣು, ಮೂಗು, ಹಣೆ ಎಲ್ಲವೂ ಕಡೆದಿಟ್ಟ ಹಾಗಿದ್ದವು. ವಿಷಯ ತಿಳಿದು ಲಿಂಗಮ್ಮನ ಮನೆಗೆ ಬಂದ ಗುರುಗಳು ಮಗುವನ್ನು ನೋಡಿ ಹೀಗೆಂದರು: 'ನಿನ್ನ ಮಗಳು ಸಾಕ್ಷಾತ್ ದೇವಿಯ ಸ್ವರೂಪಳು. ಇವಳು ಮಹಾದೇವನ ಸತಿಯಾಗಲಿರುವಳು. ಇವಳಿಗೆ ಮಹಾದೇವಿ ಎಂಬ ಹೆಸರಿಡಿ.

ಅವರ ಪಾಲಿಗೆ ಅವಳು ಮಲ್ಲಿಕಾರ್ಜುನ ವರಪ್ರಸಾದದಿಂದ ಜನಿಸಿದ ಹೆಣುಮಗುವಿಗೆ ಮಲ್ಲಿಕಾರ್ಜುನನ ಹೆಂಡತಿಯ ಹೆಸರನ್ನೆ ಇಟ್ಟರು, ಜನರು ಈಗೆ ಹೇಳುತ್ತಿದ್ದರು ಪಾರ್ವತಿಯಸ್ವರೂಪಳು. ಇವಳು ಮಹಾದೇವನ ಸತಿಯಾಗಲಿರುವಳು. ಇವಳಿಗೆ ಮಹಾದೇವಿ ಎಂಬ ಹೆಸರು ತುಂಬ ಚೆನ್ನಾಗಿ ಇದೆ (ಉಡುತಡಿ ಯಲ್ಲಿ ಈಗಲೂ "ಪರದೇಶಿಮಲ್ಲಪ್ಪನ" ಗುಡಿ ಇದೆ). ಶಿವಭಕ್ತಿಯ ಫಲವಾಗಿ ಹುಟ್ಟಿದ ಮಗಳನ್ನು ತಮ್ಮ ದೈವೀಶ್ರದ್ಧೆಯ ಪರಿಸರದಲ್ಲಿ ತಮ್ಮಂತೆಯೇ ಶಿವಭಕ್ತ ಸಂಪನ್ನೆಯಾಗಿ ಬೆಳೆಯುವಂತೆ ಎಲ್ಲ ಅನುಕೂಲತೆಗಳನ್ನು ಕಲ್ಪಿಸಿಕೊಡುತ್ತಾರೆ.ಮಹಾದೇವಿ ಸುಂದರವಾದ ಮಗು! ತೇಜಸ್ವಿಯಾದ ಮಗು! ತನ್ನ ಮಲ್ಲಿಗೆಯಂಥ ನಗುವಿನಿಂದ, ಆಟಪಾಟಗಳಿಂದ ಆ ಮಗು ತಂದೆ ತಾಯಿಗಳ ಪಾಲಿಗೆ ಸಂತೋಷದ ಮಳೆಯನ್ನೇ ಸುರಿಸಿತು. ಮಹಾದೇವಿಯ ನಗುವಿನ ನಕ್ಷತ್ರಗಳ ಕಿರಣಗಳನ್ನು ಹೊಮ್ಮಿಸುವ ಆ ಮಗು ಅಳುವುದೇ ಕಡಿಮೆಯಾಗಿತ್ತು. ಅಕ್ಕಪಕ್ಕದವರಿರಲಿ, ಬೀದಿಯ ಜನರೆಲ್ಲ ಆ ಮಗುವನ್ನು ಎತ್ತಿಕೊಳ್ಳಲು, ಆಟವಾಡಿಸಲು ಹಾತೊರೆಯುತ್ತಿದ್ದರು. ಯಾರನ್ನು ಕಂಡರೂ ಆ ಮಗು ನಗುತ್ತ ಕೈ ಚಾಚುತ್ತಿತ್ತು. ಅದು ಆಪ್ಯಾಯಮಾನವಾಗಿ ನಕ್ಕರೆ ಎಂಥ ಕಲ್ಲು ಮನಸ್ಸ ಕರಗಿ ಹೋಗುತ್ತಿತ್ತು. ಎಲ್ಲರಿಗೂ ಈ ಮಗು ಎಲ್ಲ ಮಗುವಿನಂತಲ್ಲ, ಇದರಲ್ಲಿ ಏನೋ ವಿಶೇಷವಿದೆ ಎಂಬ ಭಾವನೆ ಬರುತ್ತಿತ್ತು.

ತಾಯಿಗೂ ಅಷ್ಟೆ, ಬೇರೆ ಮಕ್ಕಳಂತೆ ತನ್ನ ಮಗು ಅತ್ತು ರಚ್ಚೆ ಮಾಡುವುದಿಲ್ಲವೆಂದು ಅಚ್ಚರಿಯಾಗಿತ್ತು. ಒಂದೊಂದು ಸಲ ತನ್ನ ಮಗು ಕೂಡ ಎಲ್ಲ ಮಕ್ಕಳಂತೆ ಅಳಬೇಕು, ನಾನೂ ಎಲ್ಲ ತಾಯಂದಿರಂತೆ ರಮಿಸಿ ಸಮಾಧಾನಪಡಿಸಬೇಕು ಎಂದು ಆಸೆಯಾಗುತ್ತಿತ್ತು. ತಾಯಿ ಮನೆಗೆಲಸದಲ್ಲಿ ತೊಡಗಿದ್ದರೂ, ಮಗು ತನ್ನ ಪಾಡಿಗೆ ತಾನು ತೊಟ್ಟಿಲಲ್ಲಿ ಆಡಿಕೊಳ್ಳುತ್ತಿತ್ತು. ತನಗೆ ತಾನೇ ನಗುತ್ತಿತ್ತು. ಯಾರೋ ಎದುರಿಗೆ ಬಂದಂತೆ ಕೈಚಾಚಿ ಸನ್ನೆ ಮಾಡುತ್ತಿತ್ತು. ಕೆಲವು ಸಲ ತಂದೆತಾಯಿಗಳನ್ನೇ ಸಮ್ಮೋಹನಗೊಳಿಸುವಂತೆ ನಗುತ್ತಿತ್ತು. ಆ ನಗುವನ್ನು ಕಂಡರೆ ಸಾಕು, ಅವರಿಗೆ ಊಟ ನಿದ್ರೆಗಳೇ ಮರೆತು ಹೋಗುತ್ತಿದ್ದವು."ಎಂಥ ಮುದ್ದಾದ ಮಗು ತಾಯಿ, ಸದಾ ನೋಡುತ್ತಲೇ ಇರಬೇಕೆನಿಸುತ್ತದೆ."

"ಎಂಥ ಪುಣ್ಯ ಮಾಡಿದ್ದೆಯೇ ತಾಯಿ, ಇಂಥ ರತ್ನದ ಬೊಂಬೆಯನ್ನು ಪಡೆಯಲು!"

"ತಪ್ಪು ತಿಳಿಯಬೇಡ ಲಿಂಗಮ್ಮ(ಸುಮತಿ). ಮತ್ತೆ ಮತ್ತೆ ನಿನ್ನ ಮನೆಗೆ ಬರುತ್ತೇನೆ. ಏನು ಮಾಡಲಿ, ನಿನ್ನ ಮಗಳು ನನ್ನ ಮೇಲೆ ಮೋಡಿ ಮಾಡಿದ್ದಾಳೆ!"

ಹೀಗೆ ಬೀದಿಯ ಹೆಂಗಸರು ಮಾತನಾಡುತ್ತಿದ್ದರು. ಆಗೆಲ್ಲ ಲಿಂಗಮ್ಮಗೆ ಪರಮಾನಂದ ವಾಗುತ್ತಿತ್ತು. ಹತ್ತು ಸಲವಲ್ಲದಿದ್ದರೂ ದಿನಕ್ಕೆ ಎರಡು ಸಲವಾದರೂ ಮಗಳಿಗೆ ದೃಷ್ಟಿ ತೆಗೆಯುತ್ತಿದ್ದಳು.

ಒಮ್ಮೊಮ್ಮೆ ಪೂಜಾ ಮಂದಿರದಲ್ಲಿ ಪತಿ ಪತ್ನಿ ಶಿವಪೂಜೆಗೆ ಕುಳಿತಾಗ ಮಗಳನ್ನು ಲಿಂಗಮ್ಮ ತನ್ನ ತೊಡೆಯ ಮೇಲೆ ಕೂಡಿಸಿಕೊಳ್ಳುತ್ತಿದ್ದರು. ಮಹಾದೇವಿಗೂ ವಿಭೂತಿ ಧರಿಸು ತ್ತಿದ್ದರು. ಆಗ ಮಹಾದೇವಿಯ ತೇಜಸ್ಸು ಇಮ್ಮಡಿಸಿದಂತೆ ಭಾಸವಾಗುತ್ತಿತ್ತು. ಶಿವಲಿಂಗವನ್ನೇ ದಿಟ್ಟಿಸಿ ನೋಡುತ್ತಿದ್ದ

ಮಗುವನ್ನು ಕಂಡು ತಂದೆ ತಾಯಿ ಆಶ್ಚರ್ಯವಾಗುತ್ತಿತ್ತು ಮಹಾ ಶಿವಭಕ್ತರಾದ ಅವರ ಮನೆಯಲ್ಲಿ ನಿತ್ಯ ಬೆಳಿಗ್ಗೆ ಮಧ್ಯಾಹ್ನ ಸಂಜೆ ಮೂರು ಹೊತ್ತು ಶಿವಪೂಜೆ ನಡೆಯುತ್ತಿತ್ತು. ಕೆಲವು ಸಲ ಅವರು ತಮ್ಮ ಮನೆಯಲ್ಲೇ ಶಿವ ಕಥೆಗಳನ್ನು ಏರ್ಪಡಿಸುತ್ತಿದ್ದರು.

ಓಂಕಾಸೇಟ್ಟರಿ,ಲಿಂಗಮ್ಮರಿಗೆ ಸರ್ವವೂ ಶಿವಮಯವಾಗಿತ್ತು. ತಮ್ಮ ಎಲ್ಲ ಸುಖ ಸಂತೋಷಗಳಿಗೂ ಶಿವನೇ ಕಾರಣನೆಂಬ

ಮಗು ಮಹಾದೇವಿಯ ಮನಸ್ಸಿನ ಮೇಲೆ. ಭಕ್ತಿಯ

ಪ್ರಭಾವ ಬೀರದಿರಲು ಸಾಧ್ಯವಾಯಿತು.

ಮಹಾದೇವಿಗೆ ಅಕ್ಕಪಕ್ಕದ ಸ್ತ್ರೀಯರ ಅಕ್ಕರೆಯೂ ಸಮೃದ್ಧವಾಗಿ ದೊರೆಯಿತು. ಪ್ರತಿಯೊಬ್ಬರೂ ಮಹಾದೇವಿಯನ್ನು ಎತ್ತಿಕೊಂಡು ತಮ್ಮ ತೋಳುಗಳು ಧನ್ಯವಾದವೆಂದು ಭಾವಿಸುತ್ತಿದ್ದರು. ಎದೆಗಪ್ಪಿಕೊಂಡು ತಮ್ಮ ಜನ್ಮ ಸಾರ್ಥಕವಾಯಿತೆಂದುಕೊಳ್ಳುತ್ತಿದ್ದರು." "ಎಂಥ ಪುಣ್ಯವಂತೆಯಮ್ಮ ನೀನು!"

ಇಂಥ ಮುದ್ದಿನ ಕಂದನನ್ನು ಶಿವ ನಿನಗೆ ಕರುಣಿಸಿದ್ದಾನೆ." "ಹೌದಮ್ಮ" ಲಿಂಗಮ್ಮ ಹೇಳಿದರು, "ಆ ಪರಶಿವನ ಪರಿಪೂರ್ಣ ಕೃಪೆ ನಮ್ಮ ಮೇಲಿದೆ. ಮಹಾದೇವಿ ನಮಗೆ ಮಗಳಾಗಿ ಹುಟ್ಟಿ ನಮ್ಮ ಜನ್ಮ ಸಾರ್ಥಕವಾಗಿದೆ.

ಇವಳೇ ನಮ್ಮ ಜೀವನ, ಇವಳೇ ನಮ್ಮ ಸರ್ವಸ್ವ."

"ನಿನ್ನ ಮಾತು ನಿಜ ಲಿಂಗಮ್ಮ" ಇಂಥ ಮಗುವಿನ ತಾಯಿ ಎನಿಸಿಕೊಳ್ಳಬೇಕಾದರೆ ಏಳೇಳು ಜನ್ಮದ ಪುಣ್ಯ ಮಾಡಿರಬೇಕು."ಎದುರು ಮನೆಯ ಶಂಕರಮ್ಮ ಒಂದು ದಿನ ಹೇಳಿದಳು, "ಎಲ್ಲರು ಗಂಡು ಮಗು ಬೇಕೆಂದು ಹಂಬಲಿಸುತ್ತಾರೆ. ಗಂಡು ಹುಟ್ಟಿದರೆ ಅವರ ಸಂಭ್ರಮ ಹೇಳತೀರದು. ನೀನಾದರೋ ಹೆಣ್ಣು ಮಗುವನ್ನು ಪಡೆದು ಆನಂದ ಪಡುತ್ತಿರುವೆಲ್ಲ ಲಿಂಗಮ್ಮ. ಆಗ ಲಿಂಗಮ್ಮ ಹೇಳಿದರು

ಮಹಾದೇವಿನೆ ನಮಗೆ ಸರ್ವಸ್ವ.

ಮಹಾದೇವಿಗೆ ದೊಡ್ಡ ಕಪ್ಪು ಕಣ್ಣುಗಳ ನಡುವೆ ದೃಷ್ಟಿಯಾಗಬಾರದೆಂದು ಇಟ್ಟ ಕಾಡಿಗೆಯ ಬೊಟ್ಟು ಮೂರನೆಯ ಕಣ್ಣಿನಂತೆ ಕಾಣುವುದು. ಮಗು ರಚ್ಚೆ ಹಿಡಿದು ಅತ್ತದ್ದಿಲ್ಲ, ಕಿರಿಕಿರಿ ರಗಳೆ ಮಾಡಿದ್ದಿಲ್ಲ. ಹೊಟ್ಟೆಗಷ್ಟು ಬಿದ್ದರೆ, ಎದುರು ಅವ್ವ ಕಾಣುತ್ತ ಇದ್ದರೆ ಮುಗಿಯಿತು. ನೆಲದ ಮೇಲೋ ತೊಟ್ಟಿಲಲ್ಲೋ ತನ್ನಷ್ಟಕ್ಕೆ ತಾನು ಕೈಕಾಲಾಡಿಸುತ್ತ ಮಲಗಿರುವುದು. ಹಾಗಂತ ಪದೇಪದೇ ಬಾಯಿಗೆ ಹಾಕಹೋದರೆ ಮೂತಿ ಚುಳ್ಳಿ ಮಾಡಿ ಬಾಯಿ ಹೊಲಿದು ಮುಖ ಅತ್ತ ತಿರುಗಿಸುವುದು. ತನಗೆ ಬೇಕೆಂದಾಗ ಬೇಕು, ಬೇಡವಾದರೆ ಬೇಡ ಅಷ್ಟೆ.

ಓಂಕಾರ ಸೇಟ್ಟಿ ಮಗುವನ್ನು ಎತ್ತಿಕೊಂಡು, ಮುತ್ತಿಕ್ಕಲು ಮಹಾದೇವಿಯ ಹಣೆಯ ಬಳಿ ಬಾಯಗಲಿಸಿ ಮಗು ಕಿಲಕಿಲ ನಕ್ಕಿತು. ಆಹಾ, ಎಂತಹ ನಗೆಲಾಸ್ಯ! ಅದನ್ನು ನೋಡಿ ಸೆಟ್ಟರಿಗೆ ಶಿವನೇ ತನ್ನ ನೋಡಿ ನಕ್ಕಂತೆ ಭಾಸವಾಯಿತು. ಆಹ ಮಲ್ಲಿಕಾರ್ಜುನ ಎಂತಹ ಭಾಗ್ಯ ಕರುಣಿಸಿದೆ ತಂದೆ! ಅದು ಮತ್ತೊಮ್ಮೆ ತನ್ನ ನೋಡಿ ನಗಬಾರದೇ ಎಂದುಕೊಳ್ಳುತ್ತಿರುವಾಗ ನೋಡನೋಡುತ್ತ ಕೂಸಿನ ಮುಖಭಾವ ಬದಲಾಗಿ, ಬಿಕ್ಕತೊಡಗಿತು. ಅಯ್ಯೋ, ಏನಾಯಿತು, ಮಗುವನ್ನೇನಾದರೂ ಒರಟಾಗಿ ಎತ್ತಿಕೊಂಡೆನೇ ಎಂದು ಸೆಟ್ಟರು ಕಂಗಾಲಾಗಿ ಮಗುವನ್ನು ಹಗೂರವಾಗಿ ತಾಯಿ ಮಡಿಲಿಗೆ ಹಾಕಿದರು ಹಾಲಿನ ವಾಸನೆಯ ಮಡಿಲು ತಲುಪಿದ ಕೂಡಲೇ ಮತ್ತೇನಿದೆ? ಮಗು ಪಕ್ಕ ತಿರುಗಿ ಸೆರಗಿನೊಳಗೆ ಹುದುಗಿದ ಮಹಾದೇವಿ.

ಮಗು ಬೆಳೆಯುತ್ತ ಹೋದಂತೆ ಗಿಲಕಿ, ಗಂಟೆ, ಬೀಸಣಿಗೆಯಂತಹ ಆಟಿಕೆಯ ಸಾಮಾನುಗಳೇನು! ಹತ್ತಿ ನೂಲಿಂದ ನೇಯ್ದ ಮೆತ್ತನ್ನ ಬಟ್ಟೆಗಳನ್ನು ಕತ್ತರಿಸಿ ಲಿಂಗಮ್ಮ ಹೊಲಿದ ಹೊಸಹೊಸ ಅಂಗಿಗಳೇನು! ಕಾಲು, ಕೊರಳು, ಕಿವಿ, ಬೆರಳಿಗೆಲ್ಲ ತೊಡಿಸಿದ ಆಭರಣಗಳೇನು? ದೃಷ್ಟಿಯಾಗಬಾರದೆಂದು ಕಟ್ಟಿದ

ಕಲ್ಲುಮಣಿಯ ಸರವೇನು? ಕಣ್ಣಿಗೆ ಕಾಡಿಗೆಯೇನು? ನೆತ್ತಿ ಕಾಯಿಸಲು ಸಾಂಬ್ರಾಣಿ, ಧೂಪಗಳೇನು? ತಲೆಗೂದಲು ಸೊಂಪಾಗಿ ಬೆಳೆಯಲು ಹಚ್ಚುವ ಶೃಂಗಾಮಲಕ ತೈಲವೇನು? ಮೈಗೆ ಪೂಸಲು ಪರಿಮಳದ ಎಣ್ಣೆಗಳೇನು? ಮೀಯಿಸಲೆಂದು ನಯಸಾಗಿ ಕುಟ್ಟಿ, ಜರಡಿ ಹಿಡಿದು ಅರಿಶಿನದ ಜೊತೆ ಬೆರೆಸಿದ ಅಂಟಲಕಾಯಿಯ ಪುಡಿಯೇನು?

ಅಬ್ಬಬ್ಬ, ಓಂಕಾರಸೆಟ್ಟರ ಮನೆಯ ಪುಟ್ಟಿ ನೂರೆಂಟು ಮೀಸಲುಗಳ ಜೊತೆಗೆ ಯಾವ ರಾಜಕುಮಾರಿಗೂ ಕಡಿಮೆಯಿಲ್ಲದಂತೆ ಬೆಳೆಯುತ್ತಿದ್ದರು ಮಹಾದೇವಿ. ಆಡಿದ ತೊದಲು ಮಾತುಗಳು ಹಾಡಿಗೆ ಸಮ. ಅವಳ ಅಡ್ಡತಿಡ್ಡ ಹೆಜ್ಜೆಗಳ ನಡಿಗೆ ಅಂಬಾರಿ ಉತ್ಸವಕ್ಕೆ ಸಮ. ಬೆಳೆಯುತ್ತ ಹೋದ ಪುಟ್ಟಿ ಓಂಕಾರಸೆಟ್ಟರ ತೊಡೆ ಏರಿ ಕೂರುವಂತಾದಳು. ಕೂಸು ನೋಡುವುದು, ನೋಡುವುದು, ನೋಡುವುದು, ಎಲ್ಲವನ್ನೂ ತದೇಕ ನೋಡುವುದು. ಬರೆಯುವ ಅಪ್ಪನ ಕೈಯನ್ನೇ ನೋಡುವುದು. ಕಾಳು ಸುಲಿಯುವವರ ಬೆರಳುಗಳನ್ನೇ ತದೇಕವಾಗಿ ನೋಡುವುದು. ಅದರ ಕೈಗೆ ನಾಕು ಅವಡೆಯ ಕೋಡು ಕೊಟ್ಟರೆ ಮುಗಿಯಿತು, ಸುಲಿಯಲು ಬರುವುದಿಲ್ಲ, ಅದು ನೋಡುವುದು ಬಿಡುವುದಿಲ್ಲ. ಕಾಳು, ಬೀಜಗಳ ಮೇಲೆ ಕೂಸಿಗೆ ಬಲು ಪ್ರೀತಿ. ಮೂಗಿನೊಳಗೆ ಕಡಲೆಯ ಕಾಳು ತುಂಬಿಕೊಂಡು ಅದನ್ನು ತೆಗೆಸಲು

ಓಂಕಾರಸೆಟ್ಟರು ಪಾಡು ಪಟ್ಟಿದ್ದು ಇದೆ. ಕಿವಿಯೊಳಗೆ ಅವರೆ ಕಾಳು ಗಿಡಿದುಕೊಂಡದ್ದು ಇದೆ. ಮಗುವಿನ ಚುರುಕುತನ ಕಂಡವರು 'ಬಾರೀ ಬಾರೀ ಕೂಸು.

ಮಹಾದೇವಿ ತೀರ ಎಳೆಯ ವಯಸ್ಸಿನಲ್ಲಿಯೇ ಗುರು-ಲಿಂಗ- ಜಂಗಮದಲ್ಲಿ ಶ್ರದ್ದೆ-ನಿಷ್ಠೆಗಳನ್ನು ಬೆಳೆಸಿಕೊಳ್ಳುತ್ತಾ ಬೆಳೆಯುತ್ತಾರೆ. ಅಕ್ಕ ಮಹಾದೇವಿಯ ಬಾಲ್ಯವೆಲ್ಲ ಕಳೆದದ್ದು ಉಡುತಡಿಯಲ್ಲಿಯೇ. ಒಂದು ದಿನ ಉಡುತಡಿಯ ರಾಜಬೀದಿಯಲ್ಲಿ ಲೋಕ ಸಂಚಾರಿಗಿ ಒಬ್ಬ ಮಹಾಯೋಗಿ ಬರುತ್ತನೆ, ಶಿವನಾಮ ಹಾಡು ಹಾಡುತ್ತಾ ಬರುತ್ತಿದ್ದಾರೆ.ಹಿಂದೆ ಕೆಲವು ಶಿಷ್ಯವೃಂದದವರು, ದನಿಗೂಡಿಸಿ ಹಾಡುತ್ತಿದ್ದಾರೆ.ಶುಭ್ರಮಡಿ ಕಾವಿಬಟ್ಟೆಯನ್ನುಟ್ಟ ವೀಣಾ ದಂಡವಿಡಿದು ಹಾಡುತ್ತಾ ಬರುತ್ತಿದ್ದಾರೆ. ಅವರ ತೇಜಸ್ಸು,ವ್ಯಕ್ತಿತ್ವ, ಹಾಡುವ ಕಂಚಿನ ಕಂಠದ ಗಾಯನದ ಸೊಗಸು ಉಡುತಡಿಯನ್ನೆಲ್ಲ ವ್ಯಾಪಿಸಿದೆ. ಇತ್ತ ಲಿಂಗಮ್ಮ(ಸುಮತಿ) ಕೆಲಸದಲ್ಲಿ ನಿರತರಾಗಿದ್ದಾರೆ. ಒಳಗೆ ಓಂಕಾರಶೆಟ್ಟಿ ಶಿವಲಿಂಗ ಪೂಜೆಯಲ್ಲಿ ನಿರತನಾಗಿದ್ದಾರೆ. ಆ ಯೋಗಿ ತನ್ಮಯರಾಗಿ ಆನಂದಭಾವದಲ್ಲಿ ಹಾಡಿಕೊಡು ಬರುತ್ತಿದ್ದಾರೆ.ಅವರ ಹಾಡು ಶಿವದಾಸರ ವಚನ ಶಿವಲೀಲೆಯ ಗಾಯನ ಅಲೆಅಲೆಯಾಗಿ ಗಾಳಿಯಲ್ಲಿ ತೇಲಿ ತೇಲಿ ಬರುತ್ತಿದೆ. ಹಾಡುತ್ತಿರುವ ಗಾಯನವು ಉಡುತಡಿಯಲ್ಲಿನ ಜನರ ಮನಸ್ಸನ್ನು ಆವರಿಸಿಕೊಳ್ಳುತ್ತಿದೆ.ಮುಂಜಾವಿನ ಪ್ರಶಾಂತ ವಾತಾವರಣದಲ್ಲಿ ಮಧುರ ಕಂಠದಲ್ಲಿ ತೇಲಿಬರುವ ಹಾಡು ಕೇಳುಗರ ಮನಸ್ಸನ್ನು ಆವರಿಸಿಕೊಳ್ಳುತ್ತಿದೆ. ಈ ಅಪೂರ್ವ ಗಾಯನ, ಕೇಳುವವರ ಮನಸ್ಸನ್ನು ತುಂಬಿಕೊಳ್ಳುತ್ತಿದೆ. ಎಲ್ಲಿಂದ ಹಾಡು ಕೇಳಿಬರುತ್ತಿದೆ ಎಂದು ದನಿ ಬಂದ ಕಡೆಗೆ ತಿರುಗಿ ನೋಡುತ್ತಾರೆ. ಮನೆಯೊಳಗಿದ್ದವರು, ಮಹಾದೇವಿಯ ತಾಯಿ ಹೊರಬಂದು ನೋಡ ತೊಡಗಿದ್ದಾರೆ. ತಂಬೂರಿಯ ಮೀಂಟು, ತಾಳ, ವಾದ್ಯಗಳ ಮೇಳ ಎಲ್ಲವೂ ಅಪೂರ್ವವಾಗಿದೆ.ಯೋಗಿ ಜಂಗಮ ಗುರುಗಳ ತೇಜಸು ತೇಜಸ್ಸು, ಅವರುಟ್ಟ ಕಾವಿಯ ವಲ್ಕಲ ಅವರ ಕಂಠದಿಂದ ತೇಲಿಬರುವ ಗಾಯನ, ಹಿಮ್ಮೇಳದಲ್ಲಿ ಶಿಷ್ಯರು ದನಿಗೂಡಿಸಿ ಹಾಡುತ್ತಿರುವ ಮಧುರಕಂಠಗಳು ಉಡುತಡಿಯಲ್ಲಿ ಒಂದು ಸಂಚಲನವನ್ನುಂಟು ಮಾಡಿದವು. ಯಾರಿವರು ಗುರುಗಳು? ಗುರುಲಿಂಗದೇವರ ಮಠದವರೆ ಇದ್ದರೆ ಗುರುಲಿಂಗದೇವರು ಹೇಳುತ್ತಿದ್ದರಲ್ಲ. ಇವರು ಯಾರು? ಎಂದು ಲಿಂಗಮ್ಮ(ಸುಮತಿ)ನವರು ಅಂದುಕೊಳ್ಳುತ್ತಿದ್ದಂತೆ ಉಡುತಡಿಯ ಜನರು ಗುರುಗಳ ಶಿಷ್ಯರಿಗೆ ಭಕ್ತಿ ಕಾಣಿಕೆಯನ್ನು, ಧವಸ, ಧಾನ್ಯವನ್ನು ನೀಡುತ್ತ ಗುರುಗಳ ಪಾದಗಳಿಗೆ ವಂದಿಸುತ್ತಿದ್ದಾರೆ. ಗುರುಗಳು ಶಿಷ್ಯರ ಜೋಳಿಗೆಯಿಂದ ಪಡೆದು ವಿಭೂತಿಗಟ್ಟಿಯನ್ನು ನೀಡುತ್ತ, ಹಾಡುತ್ತ ಮುಂದೆ ಮುಂದೆ ಸಾಗಿದ್ದಾರೆ. ಅನೇಕರು ಗುರುಗಳಲ್ಲಿ ತಮ್ಮ ಪ್ರಾರ್ಥನೆಯನ್ನು ನಿವೇದಿಸಿಕೊಳ್ಳುತ್ತಿದ್ದಾರೆ. ಈ ದೃಶ್ಯವನ್ನು ನೋಡಿದ ಲಿಂಗಮ್ಮನವರಿಗೆ,(ಸುಮ್ಮನೆ) ನಾನೂ ಗುರುಗಳಲ್ಲಿ ತನ್ನ ಪ್ರಾರ್ಥನೆಯನ್ನು ತೋಡಿಕೊಳ್ಳಬೇಕು ಎಂದೆನಿಸಿತು. ಆ ಯೋಗಿಗಳು ಬೀದಿಯಲ್ಲಿ ಹಾಡುತ್ತಾ ಸಾಗುತ್ತಾ ಮುಂದೆ ಮುಂದೆ ನಡೆದು ಲಿಂಗಮ್ಮನವರ (ಸುಮತಿ)ಮನೆಯ ಮುಂಬಾಗಿಲಿನ ನೇರಕ್ಕೆ ಬಂದರು. ಲಿಂಗಮ್ಮ (ಸುಮತಿ)ಯೋಗಿಯ ಪಾದಗಳಿಗೆ ನಮಸ್ಕರಿಸಿದರು.ಕೈಮುಗಿದು ಪ್ರಾರ್ಥಿಸತೊಡಗಿದರು. ಪೂಜ್ಯರೆ

ದೇವರು ನಮಗೆ ಬಾಳಿನಲ್ಲಿ ಎಲ್ಲವನ್ನೂ ಕೊಟ್ಟಿದ್ದಾನೆ. ತಮ್ಮಲ್ಲಿ ಒಂದು ವರವನ್ನು ಬೇಡುತ್ತೇನೆ. ಅನುಗ್ರಹಿಸಿ ಕೃಪೆ ಮಾಡಬೇಕು ಎಂದು ಬೇಡಿದರು. ಏಳು ಮಗಳೆ. ನಿನಗೆ ದೇವರು ಅನುಗ್ರಹಿಸಲಿ ಎಂದರು. ಪೂಜ್ಯರೆ ತಾವು ಕೃಪೆ ಮಾಡಿ ಆಶೀರ್ವದಿಸಿರಿ. ನನಗೆ ಒಂದು ವರವನ್ನು ಕೊಡಿರಿ. ದೇವರು ಗುರುಗಳ ರೂಪದಲ್ಲಿ ಬಂದು ಭಕ್ತರ ಇಷಾರ್ಥಗಳನ್ನು ನೆರವೇರಿಸುತ್ತಾನೆ ಎಂದು ಕೇಳಿದ್ದೇನೆ. ನನಗೆ ಅನುಗ್ರಹಿಸು ತಂದೆ ಎಂದು ಲಿಂಗಮ್ಮ(ಸುಮತಿ) ಬೇಡಿದರು. ಯೋಗಿಗುರುಗಳು ತಮ್ಮ ಬಗಲಿನ ಜೋಳಿಗೆಗೆ ಕೈ ಹಾಕಿದರು. ಒಂದು ಮಂತ್ರಿಸಿದ ವಿಭೂತಿಗಟ್ಟಿಯನ್ನು ಅನುಗ್ರಹವಾಗಿ ಲಿಂಗಮ್ಮನ ಮಡಿಲಿಗೆ ಹಾಕಿದರು. ಸೆರಗೊಡ್ಡಿ ಪ್ರಸಾದ ಪಡೆದುಕೊಂಡ ಲಿಂಗಮ್ಮ ನಾನು ಕೃತಾರ್ಥಳಾದೆ ತಂದೆ. ನನ್ನ ಇಚ್ಛೆಯನ್ನು ನೆರವೇರಿಸುವ ಆಶೀರ್ವಾದ ಮಾಡಿರುವಿರಿ. ಒಂದು ಕ್ಷಣ ನಿಲ್ಲು ತಂದೆ. ಬಂದೆ ಎಂದು ಲಿಂಗಮ್ಮ ಸಡಗರದಿಂದ ಮನೆಯೊಳಗೆ ಬಂದಿದ್ದಾರೆ ಗುರುಗಳು ಅನುಗ್ರಹ ಮಾಡಿದರು. ಎಂದು ವೀಭೂತಿಗಟ್ಟಿಯ ಪ್ರಸಾದವನ್ನು ಪತಿಯು ಪೂಜೆ ಮಾಡುತ್ತಿರುವ ಪೂಜಾಮಣೆಯ ಮೇಲೆ ವೀಭೂತಿಗಟ್ಟಿಯನ್ನಿರಿಸಿದರು. ಮೊರದಲ್ಲಿ ಸಡಗರದಿಂದ ಅಕ್ಕಿ, ಬೆಲ್ಲ, ತೆಂಗಿನಕಾಯಿ, ಹಣ್ಣುಗಳು, ಹೊಸ ವಸ್ತ್ರ, ನಗದಕಾಣಿಕೆಯನ್ನಿರಿಸಿ ತೆಗೆದುಕೊಂಡು ಸಡಗರದಿಂದ ಹೊರಗೆ ಬಂದರು. ಪೂಜ್ಯರೆ ಇಷಾರ್ಥಸಿದ್ದಿರಸ್ತು ಎಂದು ಅನುಗ್ರಹ ಮಾಡಿರುವಿರಿ.ಈ ಮಗಳಿಂದ ತಾವು ಕಾಣಿಕೆಯನ್ನು ಸ್ವೀಕರಿಸಿರಿ ಎಂದು ಲಿಂಗಮ್ಮ (ಸುಮತಿ)ಗುರುವಿನಲ್ಲಿ ಬೇಡಿದರು. ತಾಯಿ ನಿನ್ನ ಇಷ್ಟ ಪೂರ್ಣವಾಗಿದೆ. ನಾನೂ ನಿನ್ನಲ್ಲಿ ಒಂದು ಕಾಣಿಕೆ ಬೇಡುತ್ತೇನೆ ನೀಡುತ್ತೀಯ ತಾಯಿ ಎಂದು ಯೋಗಿಗುರುಗಳು ಕೇಳಿದರು. ಕೇಳು ತಂದೆ. ನನಗೆ ಸಂತೋಷವಾಗಿದೆ. ನೀನು ಏನು ಕಾಣಿಕೆ ಕೇಳಿದರೂ ಕೊಡುತ್ತೇನೆ ಎಂದರು. ನಿಜವಾಗಿ ನೀಡುತ್ತೀಯ ತಾಯಿ ಎಂದು ಯೋಗಿಗಳು ಕೇಳಿದರು. ಗುರುವಿನ ಇಚ್ಛೆಯನ್ನು ಪೂರ್ಣಗೊಳಿಸುವುದಕ್ಕಿಂತ ಇನ್ನೇನು ಭಾಗ್ಯವಿದೆ ತಂದೆ. ಕೇಳು ತಂದೆ ಕೇಳು. ಇಲ್ಲವೆನ್ನದೆ ಖಂಡಿತ ಕೊಡುತ್ತೇನೆ ಎಂದರು ಲಿಂಗಮ್ಮ(ಸುಮತಿ) ತಾಯಿ ನೀನು ಈ ಯೋಗಿಗೆ ಕಾಣಿಕೆಯನ್ನು ಕೊಡುವುದೇ ಆದರೆ ನಿನ್ನ ಮನೆಯಲ್ಲಿ ಹುಟ್ಟಿರಿರುವ ನಿನ್ನ ಹೆಣ್ಣು ಮಗುವನ್ನು ನನ್ನ ಜೋಳಿಗೆಗೆ ಕಾಣಿಕೆಯಾಗಿ ನೀಡು ತಾಯಿ.ಧರ್ಮ, ನಾಡು, ನುಡಿಯ ರಕ್ಷಣೆಗಾಗಿ ನಿಮ್ಮಂತಹ ತಾಯಂದಿರು ತಮ್ಮ ಮಕ್ಕಳನ್ನು ಕಾಣಿಕೆಯಾಗಿ ನೀಡಬೇಕು ತಾಯಿ ಎಂದರು ಗುರುಗಳು.

ಲಿಂಗಮ್ಮ(ಸುಮತಿ)ಇಲ್ಲ ಇಲ್ಲ ಇಲ್ಲ . ನಾನು ನನ್ನ ಮಗುವನ್ನು ಕೊಡುವುದಿಲ್ಲ. ನನ್ನ ಮಗುವನ್ನು ಕೊಡುವುದಿಲ್ಲ ಎಂದು ಲಿಂಗಮ್ಮ ಚಿಟ್ಟನೆ ಚೀರಿ ಹಾಗೆ ಕೆಳಕ್ಕೆ ಕುಸಿದು ಬಿದ್ದಿದ್ದಾಳೆ. ಯೋಗಿಗಳು ಮುಂದೆ ಹಾಡುತ್ತಾ ಸಾಗಿದ್ದಾರೆ. ಒಳಗಿನಿಂದ ಪತಿ, ಮನೆಯ ಕೆಲಸದವರು ಓಡೋಡಿ ಬಂದಿದ್ದಾರೆ. ಆರೈಕೆಗೆ ಮುಂದಾಗಿದ್ದಾರೆ.ಶಿಷ್ಯರು ಯೋಗಿಗಳು ದಾರಿ ಹಿಡಿದು ಮುಂದೆ ಸಾಗಿದ್ದಾರೆ. ಪತಿ ಓಂಕಾರಶೆಟ್ಟಿ ಮಡದಿಯನ್ನು ಮಾತನಾಡಿಸುತ್ತಿದ್ದಾನೆ. ಲಿಂಗಮ್ಮನ ಮುಖಕ್ಕೆ ನೀರು ಹಾಕಿ ಮುಖ ಒರೆಸಿದ್ದಾರೆ. ಲಿಂಗಮ್ಮ ಎಚ್ಚರವಾಗುತ್ತಿದ್ದಂತೆ ಇಲ್ಲ ಇಲ್ಲ ನಾನು ನನ್ನ ಮಗುವನ್ನು ಕೊಡುವುದಿಲ್ಲ ಎನ್ನುತ್ತಿದ್ದಾರೆ. ಯಾವ ಮಗು ಎಂದು ಪ್ರಶ್ನೆ ಮಾಡಿದ್ದಾರೆ. ಲಿಂಗಮ್ಮ ಪೂರ್ಣ ಎಚ್ಚರಗೊಂಡು ಸರಿಯಾಗಿ ಕುಳಿತುಕೊಂಡಿದ್ದಾರೆ ಯೋಗಿಗಳು, ಗುರುಗಳೆಲ್ಲಿ? ಹೋಗಿ ಬಿಟ್ಟರೆ? ಕಾಣಿಕೆಯನ್ನು ಅವರು ಸ್ವೀಕರಿಸಲಿಲ್ಲವೆ? ಮತ್ತೊಮ್ಮೆ ಲಿಂಗಮ್ಮ ಕೇಳಿದ್ದಾರೆ. ಏನು ಲಿಂಗಮ್ಮ ಒಗಟು ಮಾತು ಹೇಳುವೆ? ಅದೇನು ವಿಷಯ ಸರಿಯಾಗಿ ಹೇಳು? ಯಾವ ಗುರುಗಳು? ಯಾವ ಯೋಗಿಗಳು ಯಾವ ಮಗು? ಎಂದು ಪತಿ ಓಂಕಾರಶೆಟ್ಟಿ ಕೇಳಿದ್ದಾರೆ. ಮನೆಯ ಸೇವಕರು ಹೊರಗೆ ಇದ್ದ ಮೊರದ ಫಲ ಕಾಣಿಕೆಯನ್ನು ಒಳಗೆ ತಂದಿದ್ದಾರೆ. ಅದನ್ನು ಒಳಗೆ ತರಬೇಡಿರಿ. ಗುರುಲಿಂಗದೇವರ ಮಠಕ್ಕೆ ಮುಟ್ಟಿಸಿಬಿಡಿರಿ ಲಿಂಗಮ್ಮ ಹೇಳಿದ್ದಾರೆ. ಸೇವಕರು ಮೊರದಲ್ಲಿದ್ದ ವಸ್ತುಗಳನ್ನು ತೆಗೆದುಕೊಂಡು ಮಠದ ಕಡೆಗೆ ಹೋದರು.ಇತ್ತ ಲಿಂಗಮ್ಮ ನಡೆದ ಸಂಗತಿಯನ್ನೆಲ್ಲ ವಿವರಿಸಿದರು. ಲಿಂಗಮ್ಮನಿಗೆ ಒಂದೇ ಚಿಂತೆ ಮಗುವನ್ನು ಕೊಡು ಎಂದು ಆ ಯೋಗಿಗಳು ಗುರುಗಳು ಯಾಕೆ ಬೇಡಿದರು. ಹಾಗಾದರೆ ನನ್ನಮಗಳು ಸಾನ್ಯಸಿಯಾಗುವಳೆ, ಇನ್ನೊಂದು ಕಡೆ ಚಿಂತೆಯಲ್ಲಿ ಬಿದ್ದಿದ್ದಾರೆ. ಓಂಕಾರಶೆಟ್ಟಿಯ ಕುಟುಂಬದವರೆಲ್ಲ ವರ್ಷದ ಮಗು ಮಹಾದೇವಿಯನ್ನು ಕರೆದುಕೊಂಡು ಗುರುಗಳಾದ ಗುರುಲಿಂಗದೇವ ರೊಂದಿಗೆ ಕೂಡಿಕೊಂಡು ಶ್ರೀಶೈಲ ಮಲ್ಲಿಕಾರ್ಜುನನ ಯಾತ್ರೆ ಮುಗಿಸಿ ಬಂದಿದ್ದಾರೆ. ಮಗುವಿನ ಸಂತೋಷ, ಆನಂದದಲ್ಲಿ ಕುಟುಂಬದವರೆಲ್ಲ ಹಿರಿ ಹಿರಿ ಹಿಗ್ಗಿದ್ದಾರೆ. ಮಲ್ಲಿಕಾರ್ಜುನ, ಭ್ರಮರಾಂಬ ದೇವಿಯರ ಭಕ್ತಿಯಲ್ಲಿ ಮನಸ್ಸು ಸಂತೋಷಗೊಂಡಿದೆ. ಈ ಹೆಣ್ಣು ಮಗು ಮಹಾದೇವಿಯನ್ನೆ ನಾವು ಗಂಡುಮಗುವಿನಂತೆಯೇ ಸಾಕುತ್ತೇವೆ ಎಂದು ಸಂಕಲ್ಪ ಮಾಡಿದ್ದಾರೆ.ಶಿಶುಮಹಾದೇವಿ ಉಲ್ಲಾಸದ

ಬುಗ್ಗೆಯಾಗಿದ್ದಾಳೆ. ಮನೆ, ಮನ, ಉಡುತಡಿಯ ಭಾಗ್ಯವಾಗಿದ್ದಾರೆ ಮಗಳು ಮಹಾದೇವಿಯೊಂದಿಗೆ ಮನೆ ಮಂದಿಯೆಲ್ಲ ಮಗು ಮಹಾದೇವಿಯ ಜೊತೆ ಸಂಭ್ರಮದಿಂದ ದಿನ ಕಳೆಯುತ್ತಿದ್ದಾರೆ ಎಂದರೆ ವರ್ಷಗಳು ದಿನಗಳಂತೆ ಉರುಳಿ ಹೋದವು. ಮಹಾದೇವಿಗೆ ಮನೆಯಲ್ಲಿ ಮಠದ ಗುರುಲಿಂಗದೇವರಲ್ಲಿ ವಿದ್ಯಾಭ್ಯಾಸ ಕೊಡಿಸುತ್ತಿದ್ದಾರೆ. ಓಂಕಾರಶೆಟ್ಟಿಯ ಮನೆಯಲ್ಲಿ ಭಕ್ತಿ, ಪೂಜೆಯ ವಾತಾವರಣ ನವಿಲಿನಂತೆ ನರ್ತನ ಮಾಡುತ್ತಿದೆ. ಓಂಕಾರ ಶೆಟ್ಟಿಯು ಶಿವಪುರಾಣ, ಶಿವಾಗಮ, ಶಿವರಹಸ್ಯ ಓಂನಮಃಶಿವಾಯ ,

ಮಗಳು ಮಹಾದೇವಿಗೆ ಹೇಳಿಕೊಡುತ್ತಿದ್ದಾರೆ. ಬೆಳಿಗ್ಗೆ ಸಂಜೆಯ ಶಿವಪೂಜೆಯ ವೇಳೆಗೆ.ಅಪಾರವಾದ ಪ್ರೀತಿ ವಾತ್ಸಲ್ಯಗಳಿಂದ ಮಗಳನ್ನು ಸಾಕತೊಡಗಿದರು. ಅವಳೇ ಅವರಿಗೆ ಸರ್ವಸ್ವವಾದಳು. ಅವರಿಬ್ಬರ ಜೀವನವೂ ಮಗಳಲ್ಲೇ ಕೇಂದ್ರೀಕೃತವಾಯಿತು. ಮಗಳ ಯೋಗಕ್ಷೇಮದ ಹೊರತಾಗಿ ಅವರಿಗೆ ಬೇರೇನೂ ಕಾಣುತ್ತಿರಲಿಲ್ಲ. ಪ್ರತಿದಿನ, ಪ್ರತಿಕ್ಷಣ ಮಹಾದೇವಿ ಮಲ್ಲಿಕಾರ್ಜುನನ ವರಪ್ರಸಾದ ಎಂಬುದನ್ನು ಮರೆಯುತ್ತಿರಲಿಲ್ಲ. ಮಗಳ ಲಾಲನೆ ಪಾಲನೆಯ ಹೊರತಾಗಿ ಜೀವನದಲ್ಲಿ ಅವರಿಗೆ ಬೇರೆ ಯಾವುದೂ ಮುಖ್ಯವಾಗಲೇ ಇಲ್ಲ. ಬಾಲೆ ಮಹಾದೇವಿಯು ಅದ್ವಿತೀಯ ಅಲೌಕಿಕ ಕಾಂತಿಯನ್ನು ಹೊರಸೂಸುತ್ತ ದೈವಿಕ ಸೌಂದರ್ಯದಿಂದ ಕಣ್ಮನ ಸೆಳೆಯುತ್ತಿದ್ದುದರಿಂದ ಊರಿನ ಜನರೆಲ್ಲ ಬಂದು ಮಹಾದೇವಿನ್ನು ನೋಡಿ ಮುದ್ದಾಡುತ್ತಿದ್ದರು. ದಿನಗಳು ಕಳೆದಂತೆ ಮಹಾದೇವಿ ಬಿದಿಗೆ ಚಂದ್ರನಂತೆ ಬೆಳೆದರು. ದೈವಲೀಲೆಗಳನ್ನು ಪ್ರದರ್ಶಿಸುತ್ತ ಮಗಳು ಮಹಾದೇವಿ ಸುಂದರವಾದ ಮಗು! ತೇಜಸ್ವಿಯಾದ ಮಗು! ತನ್ನ ಮಲ್ಲಿಗೆಯಂಥ ನಗುವಿನಿಂದ, ಆಟಪಾಟಗಳಿಂದ ಆ ಮಗು ತಂದೆ ತಾಯಿಗಳ ಪಾಲಿಗೆ ಸಂತೋಷದ ಮಳೆಯನ್ನೇ ಸುರಿಸಿತು. ನಗುವಿನ ನಕ್ಷತ್ರಗಳ ಕಿರಣಗಳನ್ನು ಹೊಮ್ಮಿಸುವ ಆ ಮಗು ಅಳುವುದೇ ಕಡಿಮೆಯಾಗಿತ್ತು. ಅಕ್ಕಪಕ್ಕದವರಿರಲಿ, ಬೀದಿಯ ಜನರೆಲ್ಲ ಆ ಮಗುವನ್ನು ಎತ್ತಿಕೊಳ್ಳಲು, ಆಟವಾಡಿಸಲು ಹಾತೊರೆಯುತ್ತಿದ್ದರು. ಯಾರನ್ನು ಕಂಡರೂ ಆ ಮಗು ನಗುತ್ತ ಕೈ ಚಾಚುತ್ತಿತ್ತು. ಅದು ಆಪ್ಯಾಯಮಾನವಾಗಿ ನಕ್ಕರೆ ಎಂಥ ಕಲ್ಲು ಮನಸ್ಸೂ ಕರಗಿ ಹೋಗುತ್ತಿತ್ತು. ಎಲ್ಲರಿಗೂ ಈ ಮಗು ಎಲ್ಲ ಮಗುವಿನಂತಲ್ಲ, ಇದರಲ್ಲಿ ಏನೋ ವಿಶೇಷವಿದೆ ಎಂಬ ಭಾವನೆ ಬರುತ್ತಿತ್ತು.

ಬಾಲ್ಯದಿಂದಲೇ ಮಹಾದೇವಿಯ ಅಂತರಂಗದಲ್ಲಿ ಪಲ್ಲವಿಸುತ್ತಿದ್ದ ಭಕ್ತಿಯ ಬಳ್ಳಿ ದಿನಕ್ರಮೇಣ ಇನ್ನಷ್ಟು ಮತ್ತಷ್ಟು ವೃದ್ಧಿಯಾಗತೊಡಗಿತು. ಮಹಾದೇವಿ ತನುಮನವೆಲ್ಲ ಚೆನ್ನಮಲ್ಲಿಕಾರ್ಜುನನ ನಾಮಸ್ಮರಣೆ ಮಾಡತೊಡಗಿದವು. ನಿಂತಲ್ಲಿ ಕುಂತಲ್ಲಿ ನಿದ್ರೆ ಎಚ್ಚರದಲ್ಲಿ  ಚೆನ್ನಮಲ್ಲಿಕಾರ್ಜುನ ಕಾಣಿಸಿಕೊಳ್ಳುತ್ತಿದ್ದ. ಮಹಾದೇವಿ ಮೌನವಾಗಿಯೇ ಅವನೊಂದಿಗೆ ಮಾತನಾಡುತ್ತಿದ್ದರು ಮಹಾದೇವಗೆ ಸರ್ವವೂ ಚೆನ್ನಮಲ್ಲಿಕಾರ್ಜುನಮಯವಾಗಿ ಕಾಣಿಸುತ್ತಿತ್ತು.

ತಂದೆ ತಾಯಿಗೆ, ಗೆಳತಿಯರಿಗೆ, ಗುರುಗಳಿಗೆ, ಕುಟುಂಬದ ಆಪ್ತ ವಲಯದವರಿಗೆ, ಮಹಾದೇವಿಗೆ ಭಕ್ತಿಯ ಮರುಳು ಹಿಡಿದಿದೆಯೆಂಬ ಭಾವನೆ ಬರತೊಡಗಿತು. ಉಳಿದಂತೆ ಮಹಾದೇವಿ ಎಲ್ಲರೊಂದಿಗೆ ಆತ್ಮೀಯವಾಗಿ ಪ್ರೀತಿ ಸೌಜನ್ಯಗಳಿಂದ ನಡೆದುಕೊಳ್ಳುತ್ತಿದ್ದರು ಮಹಾದೇವಿಯ ಭಕ್ತಿಯ ಮರುಳನ್ನು ತಪ್ಪೆಂದು ಹೇಳುವಂತೆಯೂ ಇರಲಿಲ್ಲ. ಏಕೆಂದರೆ ಸ್ವತಃ ತಂದೆ ತಾಯಿ ಮಹಾಶಿವಭಕ್ತರೆಂಬುದು ಊರಿನ ಎಲ್ಲರಿಗೂ ಗೊತ್ತಿತ್ತು. ಅವರು ಒಂದು ರೀತಿಯಲ್ಲಿ ಮಗಳ ಭಕ್ತಿಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಪ್ರೋತ್ಸಾಹ ನೀಡಿದರೆಂದೇ ಹೇಳಬೇಕು.

ಐದು ವರ್ಷ ತುಂಬುವಷ್ಟರಲ್ಲಿ ತಂದೆ ತಾಯಿ ತಾನೇ ಮಹಾದೇವಿಗೆ ಅಕ್ಷರಾಭ್ಯಾ ಮಾಡಿಸಿ ನಿತ್ಯ ಕನ್ನಡ ಓದು ಬರಹವನ್ನು ಕಲಿಸತೊಡಗಿದರು. ಮಹಾದೇವಿ ಬೇಗ ಬೇಗ ಕಲಿಯುತ್ತಿದ್ದರು ಅವರ ಕನ್ನಡ ಅಕ್ಷರಗಳು ಮತ್ತು ಕಾಗುಣಿತವನ್ನು ಒಂದೆರಡು ತಿಂಗಳಲ್ಲೇ ಕಲಿತುಬಿಟ್ಟರು. ಸಾಮಾನ್ಯವಾದ ಬಾಯಿ ಲೆಕ್ಕವನ್ನು ಕಲಿತರು. “ಓಂ ನಮಃ ಶಿವಾಯ' ಎಂದು ಬರೆಯುವುದನ್ನು ಕಲಿತಾಗ ಮಹಾದೇವಿಯ ಸಂತೋಷವನ್ನು ವರ್ಣಿಸು ವಂತಿಲ್ಲ.

ಈ ವೇಳೆಗೆ ಮಹಾದೇವಿಯ ಅಂತರಂಗದ ಭಕ್ತಿಭಾವವೂ ಬೆಳೆಯುತ್ತಿತ್ತು. ಮನೆಯ ಪೂಜಾಮಂದಿರದಲ್ಲಿ ಮೈಮೇಲೆ ಪ್ರಜ್ಞೆಯಿಲ್ಲದಂತೆ ಬಹಳ ಹೊತ್ತು ಕುಳಿತುಬಿಡುತ್ತಿದ್ದರು.

ಅಂತರ್ಮುಖಿಯಾಗಿ ಮೈಮರೆತು ಕುಳಿತುಕೊಳ್ಳುತ್ತಿದ್ದರು. ಹೀಗೆ, ತನ್ನ ಮುಂದಿನ ಆಧ್ಯಾತ್ಮಿಕ ಮಾರ್ಗದ ಸಂಚಾರದಲ್ಲಿ ಸೋಲೇ ಬಾರದಂತೆ ಅಣಿಯಾಗುತ್ತಿದ್ದರು. ಅಲ್ಲದೆ, ಪಾಠ ಪ್ರವಚನಗಳಲ್ಲಿ ತಲ್ಲೀನಳಾಗಿ ಭಾಷಾ ಸೊಗಡನ್ನು ತನ್ನದಾಗಿಸಿಕೊಳ್ಳುತ್ತ ಗುರುಗಳು ಅಭಿಮಾನದಿಂದ ನೋಡುವ ವಿದ್ಯಾರ್ಥಿನಿಯಾಗಿ ಬೆಳೆಯತೊಡಗಿದರು.

ದೊಡ್ಡವಳಾಗುವುದನ್ನು ತಂದೆ-ತಾಯಿ ಇಬ್ಬರೂ ಕಣ್ತುಂಬ ನೋಡಿ ಆನಂದಿಸುತ್ತಿದ್ದರು. ಮಹಾದೇವಿ ಪುಟ್ಟ ಪುಟ್ಟ ಹೆಜ್ಜೆ ಹಾಕುತ್ತಾ ಮನೆ ಮನ ತುಂಬಿದರು. ಪ್ರತಿದಿನ ಬೆಳಗ್ಗೆ ಓಂಕಾರನು ಮಗಳಿಗೆ  ಹತ್ತನೆ ಶತಮಾನದ ಇದ್ದಂತಹ ವಚನಗಳನ್ನು ಕಲಿಸುತ್ತಿದ್ದರು. ಮಹಾದೇವಿ ತನ್ನ ತೊದಲ ನುಡಿಯಿಂದ ವಚನಗಳನ್ನು ಹೇಳುತ್ತಿದ್ದರು. ಶ್ರೀ ಗುರುಲಿಂಗ ದೇವರಿಂದ ಮಹಾದೇವಿಯ ಶಿಕ್ಷಣ ಆರಂಭವಾಯಿತು. ಗುರುಗಳು ಹೇಳಿದ್ದನ್ನೆಲ್ಲ ಮಹಾದೇವಿ ಗಮನವಿಟ್ಟು ಕಲಿತು ಜಾಣೆ ಎನಿಸಿಕೊಂಡರು. ತನು-ಮನ-ಆತ್ಮ ವಿಕಾಸವಾಗುವಂಥ ಶಿಕ್ಷಣವನ್ನು ಅವಳಿಗೆ ನೀಡಲಾಯಿತು. ಮಹಾದೇವಿ ಬಾಲ್ಯದಿಂದಲೂ ವಿಶೇಷವಾದ ಗುಣಗಳನ್ನು ಪ್ರದರ್ಶಿಸುತ್ತಿದ್ದರು. ಇತರೆ ಹೆಣ್ಣು ಮಕ್ಕಳಂತೆ ಆಟವಾಡದೆ ಮಠಕ್ಕೆ ಹೋಗಿ ಪ್ರವಚನಗಳನ್ನು ಕೇಳುತ್ತಿದ್ದರು. ತಾನೇ ಒಂದು ಗಿಡದ ಸಮೀಪ ಸ್ಥಾವರಲಿಂಗವನ್ನು ಇರಿಸಿ, ಭಾವತುಂಬಿ ಪೂಜಿಸುತ್ತಿದ್ದಳು. ಕೆಲವೊಮ್ಮೆ

ಮಗಳೆ ನೀನು ಯಾವಾಗಲು ಶಿವನ ಕಥೆಗಳನ್ನೆ, ಭಕ್ತಿಯ ವಿಚಾರವನ್ನೆ ಕೇಳುವೆ. ನಿನಗೆ ಗುರುಗಳಿಂದ ಲಿಂಗದೀಕ್ಷೆ ಮೂಲಕ ಶಿವನನ್ನೆ ನಿನ್ನ ಕರಸ್ಥಲಕ್ಕೆ ಕೊಡಿಸುತ್ತೇನೆ. ನೀನೆ ನಿನ್ನ ಮನ ಬಂದಷ್ಟು ಕಾಲ ಶಿವನನ್ನು ಪೂಜಿಸಿ ಒಲಿಸಿಕೊ. ನೀನು ಮಠಕ್ಕು ಹೋಗಬೇಕಿಲ್ಲ ದೇವಾಲಯಕ್ಕೂ ಹೋಗಬೇಕಿಲ್ಲ. ಶಿವನು ನಿನ್ನ ಕರಸ್ಥಲದಲ್ಲಿ, ನಿನ್ನ ಕೊರಳಲ್ಲಿ, ಎದೆಯಮೇಲೆ ಸದಾ ನೆಲೆಸಿರುತ್ತಾನೆ ಎಂದರು ತಂದೆ ತಾಯಿಗಳು .ಆಗಬಹುದೆ ಮಗಳೆ? ಓಂಕಾರ ಶೆಟ್ಟಿ ಕೇಳಿದ್ದಾರೆ. ಬೆಳೆದ ಸೌಂದರ್ಯದ ರಾಶಿ ಮಹಾದೇವಿಯವರನ್ನು ಹೊರಗೆ ಕಳುಹಿಸದೆ ಮನೆಯಲ್ಲಿಯೇ ನೆಮ್ಮದಿಯಾಗಿರಲಿ ಎಂದು ಆತ ಚಿಂತಿಸಿ ಹೇಳಿದ ವಿಚಾರ ಇದು. ಅದರಂತೆ ಗುರುಲಿಂಗದೇವರಿಂದ ಓಂಕಾರಶೆಟ್ಟಿಯ ಮನೆಯಲ್ಲಿ ದೀಕ್ಷಾ ಸಮಾರಂಭಕ್ಕೆ ಸಜ್ಜುಗೊಂಡಿದೆ. ಮಹಾದೇವಿ ಈಗ **12** ರ ವಯಸ್ಸಿನ ತರಳೆ. ದೀಕ್ಷೆ ಎಂದರೇನು? ಗುರುಗಳು ಇಷ್ಟಲಿಂಗವನ್ನು ಮೊದಲು ತಮ್ಮ ಕರಸ್ಥಲದಲ್ಲಿಪೂಜಿಸುತ್ತಾರೆ. ಶಿಲೆಯಾಗಿದ್ದುದನ್ನು ಪೂಜೆ, ಮಂತ್ರ, ಉಪಾಸನೆ, ಮಂತ್ರ, ಧ್ಯಾನದಿಂದ ಲಿಂಗ ಗೊಳಿಸುತ್ತಾರೆ. ಈ ಇಷ್ಟಲಿಂಗವನ್ನು ಇಂದಿನಿಂದ ನಿನ್ನ ಉಸಿರಿರುವ ತನಕ ಕೊರಳಲ್ಲಿ ಧರಿಸು. ನೀನು ಪ್ರಸಾದ ಸ್ವೀಕಾರ ಮಾಡುವ ಮೊದಲು ಇಷ್ಟಲಿಂಗ ಪೂಜೆಯನ್ನು ಪ್ರತಿ ದಿನ ಮೂರು ವೇಳೆ ಲಿಂಗ ಪೂಜೆ ಮಾಡಿಕೊಳ್ಳುವ ಪದ್ಧತಿಯನ್ನು ಹೇಳಿಕೊಟ್ಟು ಇಷ್ಟಲಿಂಗವನ್ನು ಕರಸ್ಥಲಕ್ಕೆ ಕೊಡುತ್ತಾರೆ. ಅದರಂತೆ ಓಂಕಾರಶೆಟ್ಟಿಯ ಮನೆಯಲ್ಲಿ ಮದುವೆಗೆ ವ್ಯವಸ್ಥೆಗೊಳ್ಳುವಂತೆ ದೀಕ್ಷಾ ಕಾರ್‍ಯಕ್ರಮ ವ್ಯವಸ್ಥೆಗೊಂಡಿದೆ. ತಿಳಿದು ನೋಡಿದರೆ ಇದೇ ನಿಜವಾದ ಜೀವಾತ್ಮನ ಮದುವೆ. ದೇಹಗತನಾದ ಆತ್ಮನೇ ಜೀವ. ಪರಮಾತ್ಮನೆ ಒಡೆಯ.ಜೀವಾತ್ಮ ಪರಮಾತ್ಮರ ಸಮ್ಮಿಲನವೆ ಇಷ್ಟಲಿಂಗದೀಕ್ಷಾ ಸಮಾರಂಭ. ಮಹಾದೇವಿಯವರಿಗೆ ಲಿಂಗದೀಕ್ಷೆಯ ಸಮಯದಲ್ಲಿ ಹೀಗೆ ಹೇಳುತ್ತಾರೆ ಮಹಾದೇವಿಯ ತಂದೆ ಮತ್ತು ಗುರುಗಳು, ಶರಣ ಸತಿ ಲಿಂಗಪತಿ ಎಂದು ಹೇಳುತ್ತಾರೆ. ಎಳೆಯಮನಸಿನ ಮಹಾದೇವಿ ಶರಣಸತಿ ಲಿಂಗಪತಿ  ಎಂದರರೇನು? ಎಂದು ತಂದೆಯನ್ನು ಕೇಳಿತ್ತರೆ ಅದಕ್ಕೆ ತಂದೆಯ ಉತ್ತರ ಶಿವನೆ ನಿನ್ನ ಗಂಡ ಎಂದು ಹೇಳುತ್ತಾರೆ. ಆಗಿನಿಂದ ಮಹಾದೇವಿಗೆ ನನ್ನ ಗಂಡ ಎಂದು ಮನಸಿನಲ್ಲಿ ಶಾಶ್ವತವಾಗಿ ಉಳಿಯುತ್ತದೆ.

ಗುರುಲಿಂಗದೇವರಿಂದ ದೀಕ್ಷೆ ಪಡೆದುಕೊಂಡ ಮಹಾದೇವಿಗೆ ಯುದ್ಧ ಗೆದ್ದ ಸಂಭ್ರಮವಾಗಿದೆ.ಶಿವನು ಇನ್ನು ಮುಂದೆ ನನ್ನ ಜೊತೆಯೇ ಇದ್ದಾನೆ. ನನ್ನನ್ನು ಲಗ್ನ ಮಾಡಿಕೊಳ್ಳುವಂತೆ ಕೇಳಬೇಕು. ಶಿವನನ್ನೆ ಒಲಿಸಿಕೊಳ್ಳಬೇಕು. ಈ ಭಾವ ದೃಢವಾಗಿದೆ. ಶಿವನು ಭಕ್ತಿ ಮಾಡಿದವರಿಗೆ ಒಲಿಯುವನೆ ಗುರುಗಳೆ ಮಹಾದೇವಿ ಕೇಳಿದ್ದಾಳೆ. ಹೌದು ತಾಯಿ. ದಕ್ಷನ ಮಗಳು ದಾಕ್ಷಾಯಿಣಿಗೆ ಒಲಿದ,  ಸಿರಿಯಾಳನಿಗೆ, ಸಿಂಧುಬಲ್ಲಾಳನಿಗೆ  ಒಲಿದ ತಾಯಿ. ಶಿವನು ಭಕ್ತರಿಗೆ ಅನುಗ್ರಹ ಮಾಡುವ ಮೊದಲು ಭಕ್ತರನ್ನು ವೇಷ ಮರೆಸಿ ಬಂದು ಪರೀಕ್ಷೆ ಮಾಡುತ್ತಾನೆ. ಗಿರಿಜೆಯು ಹಿಮಗಿರಿಯಲ್ಲಿ ತಪಸ್ಸು ಮಾಡುವಾಗ ಒಬ್ಬ ತಪಸ್ವಿಯ ವೇಷದಲ್ಲಿ ಬಂದು ಪರೀಕ್ಷೆ ಮಾಡಿದ. ನಂತರ ಪಾರ್ವತಿಯ ಇಚ್ಛೆಯಂತೆ ಪಾರ್ವತಿಯನ್ನು

ಲಗ್ನ ಮಾಡಿಕೊಂಡ. ಋಷಿಮುನಿಗಳೂ ತಪಸ್ಸು ಮಾಡಿ ವನನ್ನೊಲಿಸಿ ದ್ದಾರೆ.ಹಾಗಾದರೆ ನನಗೂ ಶಿವನೊಲಿಯುವನೆ ಗುರುಗಳೆ. ನಾನೂ ಶಿವನನ್ನೊಲಿಸಿಕೊಳ್ಳಬಹುದೆ? ಹೌದು ತಾಯಿ ಒಲಿಸಿ. ಕೊಳ್ಳಬಹುದು. ಅದಕ್ಕೆಂದೇ ಈಗ ನಿನ್ನ ಕರಸ್ಥಲಕ್ಕೆ ಇಷ್ಟಲಿಂಗವನ್ನು ಕೊಡಲಾಗಿದೆ. ನೀನು ತ್ರಿಕಾಲ ಪೂಜೆ ಮಾಡಿ ಒಲಿಸಿಕೊಳ್ಳಬಹುದು ತಾಯಿ. ಗುರುಲಿಂಗದೇವರು ಹೇಳಿದ್ದಾರೆ. ನನ್ನ ಕರಸ್ಥಲಕ್ಕೆ ದೊಡ್ಡವಸ್ತುವೆ ದೊರಕಿದೆ. ಇಷ್ಟಲಿಂಗವನ್ನು ಬೇಗ ಬೇಗ ಪೂಜಿಸಿ ನಾನು ಆದಷ್ಟು ಬೇಗ ಶಿವನನ್ನೊಲಿಸಿ ಅವನ ಜೊತೆಗೆ ನಾನೂ ಕೈಲಾಸಕ್ಕೆ ಹೋಗಬೇಕು ಎಂದು ಮಹಾದೇವಿ ನಿರ್ಧರಿಸಿದ್ದಾರೆ ದೀಕ್ಷೆ ನೀಡಿದ ಗುರುವನ್ನು ಕುರಿತು ಮಹಾದೇವಿಯರು ಭಕ್ತಿಯಿಂದ ಪ್ರಾರ್ಥಿಸಿದ್ದಾರೆ. ನರ ಜನ್ಮವ ತೊಡೆದು ಹರ ಜನ್ಮವ ಮಾಡಿದ ಗುರುವೆ ಭವಬಂಧನವ ಬಿಡಿಸಿ ಪರಮಸುಖವ ತೋರಿದ ಗುರುವೆ ಭವಿ ಎಂಬುದ ತೊಡೆದು ಭಕ್ತ ಎಂದೆನಿಸಿದ ಗುರುವೆ ಚೆನ್ನಮಲ್ಲಿಕಾರ್ಜುನನ ತಂದೆನ್ನ ಕರಸ್ಥಲಕ್ಕೆ ಕೊಟ್ಟ ಗುರುವೆ ಶರಣು ಶರಣಾರ್ಥಿ ಚೆನ್ನಮಲ್ಲಿಕಾರ್ಜುನ ಎಂಬುದು ಅಕ್ಕಮಹಾದೇವಿ ಯವರು ಬರೆದ ವಚನಗಳ ಅಂಕಿತ. ಮಲ್ಲಿಕಾರ್ಜುನ ಶ್ರೀಶೈಲದ ಅಧಿದೇವತೆ. ಈ ಚೆನ್ನಮಲ್ಲಿಕಾರ್ಜುನ ಓಂಕಾರಶೆಟ್ಟಿ ಮನೆತನದ ದೇವರು. ಈ ಶಿವನು ಮಹಾದೇವಿಗೆ ಇಷ್ಟವಾದುದರಿಂದ ಅವನೆ ಚೆನ್ನ ಎಂದೆನಿಸಿತು. ಮಲ್ಲಿಕಾರ್ಜುನ ಪದಕ್ಕೆ ಚೆನ್ನ ಸೇರಿಸಿ ಚೆನ್ನಮಲ್ಲಿಕಾರ್ಜುನ ಎಂದು ತಾವು ಬರೆದ ವಚನಗಳಿಗೆ ಅಂಕಿತ ಮಾಡಿಕೊಂಡರು.

ಆ ದಿನದ ಶಿವಾನುಭಾವದಲ್ಲಿ ಗುರುಲಿಂಗದೇವರು ಶಿವನ ಪಂಚವಿಂಶತಿ ಲೀಲೆಗಳನ್ನು ಹೇಳತೊಡಗಿದರು. ಅದರಲ್ಲಿ ತ್ರಿಪುರಸಂಹಾರದ ಕತೆಯನ್ನು ಸವಿಸ್ತಾರವಾಗಿ ಹೇಳಿದರು. ಮಹಾದೇವಿಯು ಬೆಳೆಯುತ್ತಾರೆ. ಸದಾಕಾಲ ಶಿವನಾಮಸ್ಮರಣೆ, ಶಿವಪೂಜೆಯಲ್ಲಿಯೇ. ಇವರ ಉಡುಗೆ ತೊಡಿಗೆ, ಕೊರಳಲ್ಲಿ ರುದ್ರಾಕ್ಷಿ, ಹಾಗೂ ಲಿಂಗ, ಮಸ್ತಕದ ಮೇಲೆ ವಿಜೃಂಭಿಸುವ ಭಸ್ಮ. ಗಂಧದ ಬೊಟ್ಟು ಕೊರಳಲ್ಲಿ ರುದ್ರಾಕ್ಷಿಗಳು ಮಹಾದೇವಿಯ ಅತ್ಯಂತ ಪ್ರೀತಿಯಿಂದ ಧರಿಸುತ್ತಿದ್ದ ಆಭರಣಗಳು.

ತನ್ನ ತಂದೆ-ತಾಯಿಯೊಡನೆ ಪ್ರತಿನಿತ್ಯ ಗುರುಲಿಂಗದೇವರ ಮಠಕ್ಕೆ ಪ್ರವಚನ ಕೇಳಲು ಹೋಗುವುದು ಹಾಗೂ ಊರ ಹತ್ತಿರ ಇರುವ (ಪರದೇಶಿ ಮಲ್ಲಯ್ಯನ) ಮಲ್ಲಿಕಾರ್ಜುನ ಗುಡಿಗೆ ಹೋಗಿ ಅಲ್ಲಿಯ ಲಿಂಗವನ್ನು ಪೂಜಿಸುವುದು ಮಹಾದೇವಿಯವರ ನಿತ್ಯದ ದಿನಚರಿಯಾಗಿತ್ತು. ಸಮೃದ್ಧವಾದ ನಿಸರ್ಗದ ಮಡಿಲಲ್ಲಿ ಮಹಾದೇವಿಯವರ ವ್ಯಕ್ತತ್ವ ರೂಪುಗೊಳ್ಳುತ್ತಲಿತ್ತು, ಮಹಾದೇವಿ ತುಂಬ ತಿಕ್ಷಣಮತಿ ಹಾಗೂ ಸೂಕ್ಷ್ಮವಾದ ದೃಷ್ಟಿಯವರಾದ ಮಹಾದೇವಿ ಪ್ರಕೃತಿ ಪ್ರೇಮವನ್ನು ಬೆಳೆಸಿಕೊಂಡಿದ್ದರು, ಬಾಲ್ಯದಲ್ಲಿ ನೋಡಿ ಆನಂದಿಸಿದ ಈ ಸಮೃದ್ಧವಾದ ನಿಸರ್ಗದ ಮಡಿಲಿನ ವನಸಿರಿ ಮಹಾದೇವಿಯವರ ಅನೇಕ ವಚನಗಳಲ್ಲಿ ಮೂಡಿ ಬಂದಿದೆ. ನಿಸರ್ಗದ ಆನೇಕ ಘಟಕಗಳು ಪಶು ಪಕ್ಷಿಗಳು ಮಹಾದೇವಿಯವರ ವಚನಗಳಲ್ಲಿ ಸಮಾವೇಶಗೊಂಡಿದೆ. ನಿಸರ್ಗ ಪ್ರೀಯರು ಹಾಗೂ ಆರಾಧಕರು ತನ್ನ ವಚನಗಳಲ್ಲಿ ಅದರ ವೈವಿಧ್ಯತೆಯನ್ನು ಹಾಗೂ ವಿಶೇಷತೆಯನ್ನು ಅತ್ಯಂತ

ಸುಂದಾರವಾಗಿ ವರ್ಣಿಸುತ್ತಾರೆ. ಮಹಾದೇವಿಯ ಪರಮಗುರು ಗುರುಲಿಂಗದೇವರು ಮೂಲತಃ ಶ್ರೀಶೈಲ ಖಾಸಾಮಠದವರು. ಅಂತೆಯೇ ಗುರುಲಿಂಗದೇವರು ಆಗಾಗ್ಗೆ ಉಡುತಡಿಯಿಂದ ಶ್ರೀ ಶೈಲಕ್ಕೆ ಪ್ರಯಾಣ ಬೆಳಸಿ ಅಲ್ಲಿಯ ಜ್ಯೋತಿರ್ಲಿಂಗವಾದ ಶ್ರೀಮಲ್ಲಿಕಾರ್ಜುನನ್ನು ದರ್ಶನ ಮಾಡಿ ಬರುತ್ತಿದ್ದವರು. ಅದು ತಿಳಿದ ಕ್ಷಣವೇ ಮಹಾದೇವಿಯು ಗುರುಲಿಂಗದೇವರ ಮಠಕ್ಕೆ ಹೋಗಿ ಶ್ರೀ ಶೈಲದರ್ಶನದ ಬಗ್ಗೆ ಹಲವಾರು ಪ್ರಶ್ನೆಗಳನ್ನು ಹಾಕಿ ಶ್ರೀ ಶೈಲದ ವಿವರಗಳನ್ನು ಪಡೆಯುತ್ತಿದ್ದರು. ಗುರುಗಳ ಅಮೃತವಾಣಿಯಿಂದ ಶ್ರೀ ಶೈಲಪರ್ವತದಲ್ಲಿ ಅಡಗಿರುವ ಸೃಷ್ಟಿಸೌಂದರ್ಯವನ್ನು ವರ್ಣಿಸುತ್ತ ಮುಗಿಲು ಮುಟ್ಟುವಂಥ ಗಿಡಮರಗಳು, ಜುಳುಜುಳು ಹರಿಯುವ ನದಿಗಳು. ಉಕ್ಕಿ ಹರಿಯುವ ಹಳ್ಳಗಳು. ರಭಸದಿಂದ ಹರಿಯುವ ಪಾತಾಳಗಂಗೆ ಅಲ್ಲೇ ಹತ್ತಿರ ಇರುವ ಶ್ರೀಶೈಲ ಪರ್ವತ, ಅನೇಕ ಮಠಗಳು, ಎಲ್ಲವುಗಳಿಗಿಂತಲೂ ವಿಶೇಷವಾಗಿ ಮಲ್ಲಿಕಾರ್ಜುನನ ಹಾಗೂ ಭ್ರಮರಾಂಬಿಕೆಯ ದೇವಾಲಯ ಇವೆಲ್ಲವುಗಳ ವರ್ಣನೆಯನ್ನು ಕೇಳಿದೊಡನೆ ಮಹಾದೇವಿಯ ಮನಸ್ಸು ಆ ಎಳೆ ವಯಸ್ಸಿನಲ್ಲಿಯೇ ತನ್ನ ಆರಾಧ್ಯ ಧೈವದ ಸ್ಥಳವಾದ ಶ್ರೀ ಶೈಲಕ್ಕೆ ಹೋಗಬೇಕೆಂಬ ಆಸೆಯ ಕುಡಿ ಚಿಗುರೊಡೆಯತೊಡಗಿದ್ವಿತು. ಮನದಲ್ಲಿ ಶ್ರೀ ಶೈಲಮಲ್ಲಿಕಾರ್ಜುನನ ದರ್ಶನದ ಆಸೆ ಬೆಳೆಯತೊಡಗಿತು. ಅಂತೆಯೇ ಮಹಾದೇವಿಯು ಗುರುಗಳಿಗೆ ತನ್ನನ್ನೂ ಜೊತೆಯಲ್ಲಿ ಕರೆದುಕೊಂಡು

ಶ್ರೀಶೈಲಕ್ಕೆ ಹೋಗಲು ಪ್ರಾರ್ಥಿಸುತ್ತಾರೆ. ಗುರುಗಳು ಮಹಾದೇವಿಗೆ ಅಲ್ಲಿಗೆ ಹೋಗಲು ಬಹಳ ನಡೆಯಬೇಕಾಗುವುದು, ಹೋಗುವುದು ಅಷ್ಟು ಸುಲಭದ ಮಾರ್ಗವಲ್ಲ, ನೀನು ದೊಡ್ಡವಳಾದ ಮೇಲೆ ಆ ಮಲ್ಲಿಕಾರ್ಜುನನೇ ನಿನ್ನನ್ನು ಬರಮಾಡಿಕೊಳ್ಳುವನು. ಅಲ್ಲಿಯವರೆಗೆ ನೀನು ಪೂಜಿಸುವ ಪರದೇಶಿ ಮಲ್ಲಯ್ಯನನ್ನೇ ಭಕ್ತಿಯಿಂದ ಪೂಜಿಸು. ಶ್ರೀ ಶೈಲದ ಮಲ್ಲಿಕಾರ್ಜುನ ಪ್ರತಿರೂಪವೇ ನೀನು ಪೂಜಿಸುವ ಈ ಮಲ್ಲಯ್ಯ ಎಂದು ಮಹಾದೇವಿಗೆ ಸಮಾಧಾನಪಡಿಸುತ್ತಿದ್ದರು. ಗುರುಗಳ ಅಪ್ಪಣೆಯಂತೆ ಮಹಾದೇವಿ ಪ್ರತಿನಿತ್ಯ ತಪ್ಪದೇ ಮಲ್ಲಯ್ಯನ ಪೂಜೆ ಮಾಡಿ ಎಲ್ಲ ಮಠಕ್ಕೆ ಹೋಗಿ ಗುರುಗಳ ದರ್ಶನ ಪಡೆಯುತ್ತಿದ್ದರು. ಚಿಕ್ಕ ವಯಸ್ಸಿನ ಮಹಾದೇವಿಯ ದಿನಚರಿ, ಸರ್ವೆಸಾಮಾನ್ಯವಾಗಿತ್ತು .ಮಹಾದೇವಿಯವರು ಎಲ್ಲಾ ಹುಡಿಗಿಯರ ತರಹ ಇರಲಿಲ್ಲ. ಚಿಕ್ಕ ವಯಸ್ಸಿನ ಹುಡುಗಿಯರ ಆಟ ಪಾಟ, ಹೊಸ ಹೊಸ ಬಟ್ಟೆಬರೆ ಧರಿಸಬೇಕು, ಸ್ವಚ್ಛಂದವಾಗಿ ಗೆಳತಿಯರ ಜೊತೆಯಲ್ಲಿ ತಿರುಗಾಡಬೇಕು, ಹರಟೆ ಹೊಡೆಯಬೇಕು. ಏನೆಲ್ಲಾ ಬೇಕೆಂಬ ಆಕಾಂಕ್ಷೆ ಇವೆಲ್ಲ ಸಾಮಾನ್ಯ ಹುಡುಗಿಯರ ಆಸೆಗಳು. ಆದರೆ ಮಹಾದೇವಿಯ ನಡವಳಿಕೆಯೇ ವಿಭಿನ್ನವಾಗಿತ್ತು. ಬೆಳಗಾಗೆದ್ದು ಸ್ನಾನಮಾಡಿ ಶುದ್ಧವಾಗಿ ದೇವರಪೂಜೆಗೆ ಪುಷ್ಪಗಳನ್ನು ತಂದು ಮನೆಯದೇವರ ಹಾಗೂ ತನ್ನ ಇಷ್ಟಲಿಂಗವನ್ನು ಪೂಜಿಸಿ, ನಂತರ ಪರದೇಶಿ ಮಲ್ಲಯ್ಯನಿಗೆ ತನ್ನ ಭಕ್ತಿಯ ಪುಷ್ಪಗಳನ್ನು ಸಮರ್ಪಿಸಿ ಹೀಗೆ ವಚನವನ್ನು ಹೇಳುತ್ತಿದ್ದರು.

ತನು ಕರಗದವರಲ್ಲಿ ಮಜ್ಜನವನೊಲ್ಲೆಯಯ್ಯಾ ನೀನು.
ಮನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯಾ ನೀನು.
ಹದುಳಿಗರಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯಾ ನೀನು.
ಅರಿವು ಕಣ್ದೆರೆಯದವರಲ್ಲಿ ಆರತಿಯನೊಲ್ಲೆಯಯ್ಯಾ ನೀನು.
ಭಾವಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯಾ ನೀನು.
ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯಾ ನೀನು.
ತ್ರಿಕರಣ ಶುದ್ಧವಿಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯಾ ನೀನು.
ಹೃದಯಕಮಲ ಅರಳದವರಲ್ಲಿ ಇರಲೊಲ್ಲೆಯಯ್ಯಾ ನೀನು.
ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ ಹೇಳಾ ಚೆನ್ನಮಲ್ಲಿಕಾರ್ಜುನಯ್ಯಾ

ಮೇಲಿನ ವಚನದಲ್ಲಿ ಮೂರು ಸಂಗತಿಗಳು ವ್ಯಕ್ತವಾಗುತ್ತವೆ. ದೇವನನ್ನು ಪೂಜಿಸಿ ಒಲಿಸಿಕೊಳ್ಳುವ ವಿಧಾನ, ಶಿವನು ಒಲಿಯಬೇಕಾದರೆ ಭಕ್ತನ ಆಚರಣೆ ಎಂತಿರಬೇಕುನಿಜವಾದ ಭಕ್ತನ ಗುಣಗಳೇನು? ಹೊರನೋಟಕ್ಕೆ ಶಿವನ ಪೂಜೆಯನ್ನು ಮಾಡುವವನೂ ತನ್ನನ್ನು ಭಕ್ತನೇ ಎಂದುಕೊಳ್ಳುತ್ತಾನೆ. ಆದರೆ ಆತನ ಅಂತರಂಗ ಶುದ್ಧವಿರುವದಿಲ್ಲ. ಅಂಥವರು ಯಾಂತ್ರಿಕವಾಗಿ ಕ್ರಿಯೆಯನ್ನು ಮಾಡುತ್ತಲೇ ಇರುತ್ತಾರೆ. ಅದಕ್ಕೆ ಯಾವ ಫಲವೂ ಸಿಗದಿರಲು ಶಿವನನ್ನು ದೂರುತ್ತಲೇ ಇರುತ್ತಾರೆ. ಭಕ್ತ ಅಂದರೆ ಮಹಾದೇವಿಯವರು ಹೇಳಿದಂತಿರಬೇಕು. ತನು ಕರಗಬೇಕು ಹೃದಯ ಅರಳಬೇಕು. ನಾನು ಎಂಬುದು ಅಳಿದು ದೃಷ್ಟಿ ವಿಶಾಲವಾಗಬೇಕು. ಸ್ವಾರ್ಥತೆ ಕಳೆದು ಜೀವದಯ ನೆಲೆಗೊಳ್ಳಬೇಕು. ಅಂದರೆ ಶಿವ ಒಪ್ಪಿಕೊಳ್ಳುತ್ತಾನೆ. ನಂತರ ಶಿವನಿಗೆ ಅಕ್ಕ ಪ್ರಶ್ನೆ ಮಾಡುತ್ತಾರೆ. ಎನ್ನಲ್ಲಿ ಏನುಂಟು? ನೀನು ನನ್ನ ಕರಸ್ಥಲದಲ್ಲಿ ಇರುವೆ. ಮಹಾದೇವಿಯಲ್ಲಿ ಎಲ್ಲ ಗುಣಗಳು ಇವೆ ಎಂದು ಚೆನ್ನಮಲ್ಲಿಕಾರ್ಜುನನಿಗೆ ಗೊತ್ತಿದೆ. ಅದಕ್ಕೇ ಆತ ಅಕ್ಕನ ಕರಸ್ಥಲದಲ್ಲಿ ನೆಲೆಸಿದ್ದಾನೆ. ಆತ ಅಪಾರ ಕರುಣಿಯಾಗಿದ್ದಾನೆ. ಈ ಎಲ್ಲ ಗುಣಗಳಿದ್ದರೂ ಮಹಾದೇವಿಯವರು ಅತ್ಯಂತ ವಿನೀತ ಭಾವದಿಂದ ಹೇಳುತ್ತಾರೆ ತನ್ನಲ್ಲಿ ಏನೂ ಇಲ್ಲವೆಂದು. ಮಹಾದೇವಿ ತನ್ನನ್ನು, ಅಂದರೆ ಅಹಂಕಾರವನ್ನು ಕಳೆದುಕೊಂಡಿದ್ದಾರೆ.

ಗುರುಲಿಂಗದೇವರ ಮಠಕ್ಕೆ ತನ್ನ ವಿದ್ಯಾಭ್ಯಾಸಕ್ಕೆ ಸಜ್ಜಾಗಿ ಹೋಗುತ್ತಿದ್ದರು. ಆ ಚಿಕ್ಕವಯಸ್ಸಿನಲ್ಲಿಯೇ ಮಹಾದೇವಿಯವರಿಗೆ ಅಧ್ಯಾತ್ಮವು ಅಂತರಂಗದಲ್ಲಿ ಚಿಗುರಲು ಪ್ರಾರಂಭವಾಗಿ ಗುರುಗಳಿಂದ ಕೇಳಿಕೊಂಡ ಪುರಾಣ ಪುಣ್ಯ ಕಥೆಗಳು ಚರಿತ್ರೆ, ಶಿವನ ಬಗ್ಗೆ ಯಾವ ಯಾವ ಕಥೆಗಳು ಇದ್ದರು ಎಲ್ಲವನ್ನು ಓದಿ ಕೇಳಿ ಮುಗಿಸುತ್ತಿದ್ದರು. ವೇಧ ಉಪನಿಷತ್ತುಗಳನ್ನು, ವೀರಶೈವ ಲಿಂಗಾಯತ ಧರ್ಮದ ಆಚರಣೆಗಳನ್ನು ತಿಳಿದು ಕೊಂಡರು. ಜ್ಯೋತಿಷ್ಯಶಾಸ್ತ್ರ, ಸಕಲ ವಿಧ್ಯಗಳನ್ನು ಕಲಿತರು. ವಚನಗಳನ್ನು

ರಚಿಸುವ ಜ್ಞಾನ ಗೋಚರವಾಗತೊಡಗಿದವು. ಮಹಾದೇವಿಗೆ ತನ್ನ ಎದುರಿಗೆ ಯಾರೇ ಬಂದರು ಅವರ ಮುಖ ನೋಡಿದರೆ ಸಾಕು, ಅವರ ಸ್ವಭಾವ ಗುಣ ಎಲ್ಲವನ್ನುಕಂಡುಹಿಡಿಯುವ ಶಕ್ತಿ ಮಹಾದೇವಿಯವರಲ್ಲಿ ಇತ್ತು. ಕೋಡಿಮಠದಲ್ಲಿ ಬೋಧನೆಗೊಳ್ಳುತ್ತಿದ್ದ ಪಠ್ಯಕ್ರಮವು ಬೆಣ್ಣೆಗೆರೆ ಶಾಸನದಲ್ಲಿ ದೊರೆಯುತ್ತದೆ. ಅದು ಇಂತಿದೆ. ನಾಲ್ಕು ವೇದಗಳು, ಕೌಮಾರ, ಪಾಣಿನಿ ಶಕಟಾಯನ, ಶಬ್ದಾನುಶಾಸನ, ವ್ಯಾಕರಣ, ವ್ಯಾಖ್ಯಾನ, ನ್ಯಾಯ ವೈಶೇಶಿಕ, ಮೀಮಾಂಸ, ಸಾಂಖ್ಯ, ಬೌದ್ಧಾದಿ ಷಡುದರುಷನ, ಲಾಕುಳ ಸಿದ್ಧಾಂತ, ಪಾತಂಜಲಿ, ಯೋಗಶಾಸ್ತ್ರ, ಅಷ್ಟಾದಶ ಪುರಾಣ, ಧರ್ಮಶಾಸ್ತ್ರ, ಸಕಲ ಕಾವ್ಯ ನಾಟಕ, ವಿವಿಧ ವಿದ್ಯೆಗಳು, ಕಥನ ಗಾಯನ, ವಾದಕ, ನರ್ತುಕ (ನರ್ತನ), ವೈತಾಳಿಕ. ಅಲ್ಲಿ ವಾಮದೇವರು ಗುರುಗಳಾಗಿದ್ದರು. ಹತ್ತನೇ ಶತಮಾನದಲ್ಲಿ ಶಿವಕೋಟ್ಯಾಚಾರ್ಯನಿಂದ ರಚಿಸಲ್ಪಟ್ಟ "ವಡ್ಡಾರಾಧನೆ" ಎಂಬ ಗದ್ಯ ಗ್ರಂಥದಲ್ಲಿಯೂ ಇಂಥ ಪಠ್ಯಕ್ರಮದ ಉಲ್ಲೇಖವಿದೆ. ಬಳ್ಳಿಗಾವಿಯು ಉಡುತಡಿಯಿಂದ ಸುಮಾರು ಎರಡು ಮೈಲು ದೂರದಲ್ಲಿದೆ. ಅಕ್ಕ ಉಡುತಡಿಯ ಗುರುವಾಡಿ ಮಠದ ಶಿಷ್ಯಳಾಗಿದ್ದರು . ಮಠದಿಂದ ಈ ಮಠಕ್ಕೆ ಶಿಕ್ಷಕರ ಹಾಗೂ ಪಠ್ಯ ವಿಷಯಗಳ ಆದಾನ ಪ್ರದಾನ ನಡೆದಿತ್ತು . ಅಕ್ಕನ ಗುರು ಗುರುಲಿಂಗದೇವರು ಗುರುವಾಡಿ ಮಠದ ಶಿಕ್ಷಕರಾಗಿದ್ದು, ಅಕ್ಕನ ಚುರುಕು ಬುದ್ಧಿ, ತೀವ್ರವಾದ ಆಸಕ್ತಿಗಳನ್ನು ಗಮನಿಸಿ ಮಹಾದೇವಿಯವರ

ಅಧ್ಯಯನದ ಉತ್ಸಾಹವನ್ನು ಪ್ರೋಷಿಸಿದ್ದಾರೆ. ಅಕ್ಕ, ಉಚ್ಚ ಶಿಕ್ಷಣಕ್ಕಾಗಿ ಕೋಡಿ ಮಠಕ್ಕೆ ಹೋಗಿದ್ದರೆ, ವಾಮದೇವರ ಹೆಸರಿನೊಂದಿಗೆ ಅಕ್ಕನ ಹೆಸರೂ ಶಾಸನಗಳಲ್ಲಿ ಉಲ್ಲೇಖಗೊಳ್ಳಬಹುದಿತ್ತು. ಸಮಾಜದ ನಿಯಮಗಳಿಗೆ ಬದ್ಧಳಾಗದ ಸ್ತ್ರೀ ಎಂಬ ಕಾರಣಕ್ಕಾಗಿ ಉಲ್ಲೇಖಗೊಳ್ಳದೆ ಹೋಗಿರಬಹುದೆ, ಎಂಬ ಅನುಮಾನಕ್ಕೆ ಆಸ್ಪದವಿದೆ, ಮಹಾದೇವಿ ಸಮಾಜದ ವಿರುದ್ಧ ಗತಿಯಲ್ಲಿ ಚಲಿಸಿದರೆಬುದಕ್ಕಾಗಿ ಇರಲೂಬಹುದು. ಅಕ್ಕನ ವಚನಗಳನ್ನು ಗಮನಿಸಿದರೆ, ಅವರ ಭಾಷೆಯ ಪ್ರೌಢಿಮೆ, ಉಪಯೋಗಿಸಿದ ಕಾವ್ಯಾಲಂಕಾರಗಳು, ಸಂಸ್ಕೃತದ ಸೂತ್ರಗಳು,ಸುಭಾಷಿತಗಳು ಎಲ್ಲವೂ ಮಹಾದೇವಿಯು ಕನ್ನಡ ಭಾಷೆಯಲ್ಲಿ ಪ್ರಭುತ್ವವನ್ನು ಹೊಂದಿದ್ದರೆಂದು ತಿಳಿಸುತ್ತವೆ. ಮಹಾದೇವಿಯವರಿಗೆ ಸಂಸ್ಕೃತದ ಜ್ಞಾನವೂ ಇತ್ತು. ವೇದಾಗಮಗಳು ಸಂಸ್ಕೃತದಲ್ಲಿ ಇದ್ದವು. ಕೋಡಿ ಮಠದಲ್ಲಿ ಬೋಧಿಸಲ್ಪಡುತ್ತಿದ್ದ ಹೆಚ್ಚಿನ ವಿಷಯಗಳನ್ನು ಅಕ್ಕ ಓದಿಕೊಂಡಿರುವ,ಅದರಂತೆ ಜೀವನದ ಅನುಭವ ಪುಸ್ತಕವನ್ನೂ ಅಕ್ಕ ಓದಿಕೊಂಡಿದ್ದರು. ವಚನಗಳಲ್ಲಿ ಇದಕ್ಕೆ ಆಧಾರವಿದೆ. ಆವ ವಿದ್ಯೆ ಕಲಿತಡೇನು ಸಾವ ವಿದ್ಯೆ ಬೆನ್ನ ಬಿಡದು ಅಂದರೆ ಅಕ್ಕ ಎಲ್ಲ ಪ್ರಕಾರದ ವಿದ್ಯೆಗಳನ್ನು ಕರಗತಮಾಡಿಕೊಂಡಿದ್ದರು. ಇವು ಅವರ ಅತ್ಮವಿಶ್ವಾಸ ಹಾಗೂ ಧೈರ್ಯದ ಪರಾಕಾಷ್ಠೆಗೆ ಕಾರಣೀಭೂತವಾಗಿವೆ. ಓದಿ ಓದಿ ವೇದ ವಾದಕ್ಕಿಕ್ಕಿತ್ತು / ಕೇಳಿ ಕೇಳಿ ಶಾಸ್ತ್ರ ಸಂದೇಹಕ್ಕಿಕ್ಕಿತ್ತು ಅರಿದಹೆ ಅರಿದಹೆನೆಂದು ಆಗಮ ಅರೆಯಾಗಿ ಹೋಯಿತ್ತು ಪೂರೈಸಿಹೆ ಪೂರೈಸಿಹೆನೆಂದು / ಪುರಾಣ ಪೂರ್ವದ ಬಟ್ಟೆಗೆ ಹೋಯಿತ್ತು ವೇದಶಾಸ್ತ್ರಾಗಮ ಪುರಾಣಂಗಳೆಂಬುವ / ಕೊಟ್ಟಣವ ಕುಟ್ಟುವ ನುಚ್ಚು ತೌಡು ಕಾಣಿ ಭೋ ಅವ ಕುಟ್ಟಲೇಕೆ ಕುಸುಕಲೇಕೆ. ಅಕ್ಕ ಇವೆಲ್ಲವುಗಳನ್ನು ಆಳವಾಗಿ ಅಧ್ಯಯನ ಮಾಡಿದ್ದಳೆನ್ನುವದನ್ನು ಸೂಚಿಸುತ್ತವೆ. ಅಂತಲೇ ಅಕ್ಕ ಅವುಗಳನ್ನು ಅರ್ಥವಿಲ್ಲದವುಗಳು ಎನ್ನುತ್ತಾರೆ. ಅಕ್ಕನ ವಚನಗಳು ವಿದ್ವತ್ತು ಹಾಗೂ ಅಧ್ಯಯನಕ್ಕೆ ಸಾಕ್ಷಿಯಾಗಿವೆ. ಸ್ಥಳೀಯ ಮಠವು ಅಕ್ಕನ ತೀಕ್ಷ್ಯ ಗ್ರಹಣ ಶಕ್ತಿಯನ್ನು, ಗಮನಿಸಿ ಹೆಚ್ಚಿನ ವ್ಯಾಸಂಗದ ವ್ಯವಸ್ಥೆಯನ್ನು ಮಾಡಿದರು. ಇದರಲ್ಲಿ ಕೋಡಿ ಮಠದ ಸಹಕಾರವೂ ಇದೆ. ಕೋಡಿ ಮಠದಲ್ಲಿ ವೇದಶಾಸ್ತ್ರಗಳ ಮೇಲೆ ವ್ಯಾಖ್ಯಾನಗಳೂ ಚರ್ಚೆಗಳೂ ನಡೆಯುತ್ತಿದ್ದವು. ಅನುಭವ ಮಂಟಪದಲ್ಲಿ ಶರಣ ಸಮುದಾಯದೆದುರು ಅಲ್ಲಮ ಪ್ರಭುಗಳೊಂದಿಗೆ ನಿರ್ಭೀತಿಯಿಂದ ಸಂವಾದ ಮಾಡಿದ ಅಕ್ಕನಿಗೆ ಇಂಥ ತರಬೇತಿ ಅಧ್ಯಯನದ ಸಮಯದಲ್ಲಿಯೇ ದೊರಕಿರಬಹುದಾದ ಸಾಧ್ಯತೆ ಇದೆ. ಅಕ್ಕ ಕೋಡಿಮಠಕ್ಕೆ ಹೋಗಿ ಚರ್ಚೆಯಲ್ಲಿ ಭಾಗವಹಿಸಿದ್ದಿರೆ. ಈ ಅನುಭವವು ಅಕ್ಕನನ್ನು ಒಂಟಿಯಾಗಿ ಶ್ರೀ ಶೈಲದವರೆಗೆ ಪಯಣಿಸುವ ಆತ್ಮ ವಿಶ್ವಾಸವನ್ನು ಕೊಟ್ಟಿದೆ.

ಸರಳ, ಜನಭಾಷೆಯಾದ ಕನ್ನಡವನ್ನು, ತಮ್ಮ ಅಭಿವ್ಯಕ್ತಿಗಾಗಿ ಬಳಸಿಕೊಂಡು ತಮ್ಮ ತತ್ವಗಳನ್ನು, ವಿಚಾರಗಳನ್ನು, ಸಮಾಜಕ್ಕೆ ತಲುಪಿಸಿದ. ಅಕ್ಕ ಕನ್ನಡ ಭಾಷೆಯನ್ನು ತನ್ನ ರಚನೆಗಳಲ್ಲಿ ಅತ್ಯಂತ ಸಮರ್ಥವಾಗಿ ದುಡಿಸಿಕೊಂಡಿದ್ದಾರೆ. ಮಹಾದೇವಿಯವರ ಅನವರತ ಧ್ಯಾನ, ಚಿಂತನ ಹಾಗೂ ಶಿವಯೋಗಗಳು ಅಕ್ಕನನ್ನು ಒಬ್ಬ ಶ್ರೇಷ್ಠ ಕವಯಿತ್ರಿಯನ್ನಾಗಿ ಮಾಡಿವೆ. ಅಕ್ಕನ ವಚನಗಳು ಎಲ್ಲ ಶರಣರಿಗಿಂತಲೂ ಉನ್ನತ ಮಟ್ಟದವು ಎಂಬುದನ್ನು ಹನ್ನೆರಡನೆ ಶತಮಾನದ ಮಹಾಜ್ಞಾನಿ ಚೆನ್ನಬಸವಣ್ಣನವರು ಹೇಳಿದ್ದಾರೆ. ನಿಸರ್ಗ ಪ್ರಿಯರಾದ ಅಕ್ಕ ತನ್ನ ವಚನಗಳಲ್ಲಿ ಅದರ

ವೈವಿಧ್ಯತೆಯನ್ನು ಹಾಗೂ ವಿಶಿಷ್ಟತೆಯನ್ನು ಅತ್ಯಂತ ಸುಂದರವಾಗಿ ವರ್ಣಿಸುತ್ತಾರೆ. ಅತ್ಯಂತ ವಿದ್ಯಾವಂತಿಯಾಗಿ, ರೂಪವಂತೆಯಾಗಿ ಗುಣವಂತೆಯಾಗಿ ಬೆಳೆದುನಿಂತ ಮಹಾದೇವಿ.

ಮಹಾದೇವಿಯವರ ತಂದೆ ತಾಯಿಯರು ಮುತ್ತು ರತ್ನ ವ್ಯಾಪಾರಿಗಳ ಆಗಿದ್ದರು. ತುಂಬಾ ಸಿರಿವಂತಿಕೆ. ಇದ್ದಕಾರಣ ಮೈತುಂಬಾ ರೇಷ್ಮೆ ಬಟ್ಟೆ, ಮೈತುಂಬಾ ಬಂಗಾರ, ಹಣೆಯಮೇಲೆ ವಿಭೂತಿ, ರೂಧ್ರಕ್ಷಿ, ನೋಡಿದರೆ. ಸಾಕ್ಷತ್ ಜಗನ್ಮಾತೆ ಪಾರ್ವತಿಯನ್ನು ನೋಡಿದ ರೀತಿಯಲ್ಲಿ ಕಂಗೊಳಿಸುತ್ತಿದ್ದರು. ಮಹಾದೇವಿ ಕೌಮಾರ್ಯವನ್ನು ದಾಟಿ ನವಯೌವನದ ಹೊಸಲಲ್ಲಿ ನಿಂತಿರುವ ಸುಂದರತರುಣಿ. ಮಹಾದೇವಿಯ ಅಂಗಸೌಷ್ಠವ, ಲಾವಣ್ಯರಸದಿಂದ ಆರ್ದ್ರವಾದ ಮೋಹಕವಾದ ಕಾಂತಿಯನ್ನು ಹೊರಹೊಮ್ಮಿಸುತ್ತಿತ್ತು. ಆದರೆ ಆಕರ್ಷಕವಾದ ದೇಹಸೌಂದರ್ಯದ ಆ ತೆರೆಯ ಹಿಂದೆ, ಸೌಂದರರೂಪಿಣಿಯಾದ ಜಗಜ್ಜನನಿಯ `ಅಪಾರವಾದ ಕಾರುಣ್ಯವೇ ಮೂರ್ತಿವೆತ್ತಂತೆ ಮಹಾದೇವಿಯ ಮಧುರಭಕ್ತಿ ರೂಪುಗೊಂಡಿತ್ತು. ಸೌಂದರ್ಯಕ್ಕೆ ಪವಿತ್ರತೆಯನ್ನು ತಂದುಕೊಟ್ಟಿತ್ತು. ಗುರುಲಿಂಗದೇವರ ನಿರೀಕ್ಷಣೆಗಿಂತಲೂ ಅಧಿಕವಾಗಿ ಅವರ ಆಧ್ಯಾತ್ಮಿಕ ಸಾಧನೆ ಮುಂದುವರಿದಿತ್ತು.

ಬಾಲಕಿಯಾದ ಮಹಾದೇವಿ ತರುಣಿಯಾದರು. ಲೋಕದ ಕಣ್ಣಿಗೆ ಮಹಾದೇವಿ ಮನೋಹರ ರೂಪಿನ ಸುಂದರಿಯಾಗಿ ಕಂಡರೆ, ಮಹಾದೇವಿಗೆ ಮಾತ್ರ ತನ್ನ ಮೋಹಕ ಸೌಂದಯ್ಯದ ಬಗ್ಗೆ ಕಿಂಚಿತ್ತೂ ಹೆಮ್ಮೆಯಿರಲಿಲ್ಲ. ಮಹಾದೇವಿ ಭಕ್ತಿ ಈಗ ಚೆನ್ನಮಲ್ಲಿಕಾರ್ಜುನನ ಮೇಲಿನ ಅಸೀಮ ಪ್ರೇಮವಾಗಿ ಬೆಳೆದಿತ್ತು.  ತನ್ನ ಸರ್ವಸ್ವವನ್ನೂ ಚೆನ್ನಮಲ್ಲಿ ಕಾರ್ಜುನನಿಗೆ ಅರ್ಪಿಸಿದ್ದೇನೆ ಎಂಬ ಭಕ್ತಿಯ ಪರಾಕಾಷ್ಠೆಯಲ್ಲಿ ಮೈಮರೆಯುತ್ತಿದ್ದರು ಮಹಾದೇವಿಗೆ ಯವೌನಕ್ಕೆ ಬರುತ್ತಿದ್ದಂತೆ ತಲೆಗೂದಲು ಇನ್ನೂ ಹೆಚ್ಚಾಯಿತು, ತಲೆಗೂದಲು ನೀ ಹೆಚ್ಚೊ ನಾ ಹೆಚ್ಚೊ ಎಂಬಂತೆ ಮಹಾದೇವಿಗಿಂತ ವೇಗವಾಗಿ ಬೆಳೆಯುತ್ತಿದೆ. ಮೊಣಕಾಲು ಮುಚ್ಚುವ ತನಕ ತಲೆಕೂದಲು ಬೆಳೆಯಲು ಪ್ರಾರಂಭವಾಯಿತು. ಮಹಾದೇವಿಯ ತಾಯಿ ಮಗಳ ಉದ್ದ ಕೂದಲನ್ನು  ಒಪ್ಪುವಾಗಿ ಬಾಚಿ, ಜಡೆ ಹೆಣೆದು ಸಿದ್ದಗೊಳಿಸುತ್ತಿದ್ದರು ಈಗ ಮಾತ್ರ, ಗೃಹಿಣಿಯಾಗಿ, ಸಂಸಾರಿಯಾಗಿ ಸುಖವಾಗಿರಬೇಕಾದ ಮಗಳು, ಭಕ್ತಿಯ ಹೆಸರಿನಲ್ಲಿ ಕಳೆದುಹೋಗಬಾರದು, ಎಂದು ಆ ತಂದೆತಾಯಿ ಬಯಸುತ್ತಿದ್ದರು. ಅದರಲ್ಲೂ ಒಂದು ಹೆಣ್ಣು ಭಕ್ತಿಯ ಹೆಸರಿನಲ್ಲಿ ಸಹಜವಾದ ಸಾಂಸಾರಿಕ ಜೀವನವನ್ನು ತ್ಯಾಗ ಮಾಡುವುದು ಅವರಿಗೆ ಅಸಹಜವಾದ, ಅಷ್ಟೇ ಅಸಾಧ್ಯವಾದ ಕಾರವಾಗಿತ್ತು. ಆದರೆ ಹಾಗೆಂದು ತಮ್ಮ ಜೀವದ ಜೀವವಾದ ಮಗಳನ್ನು ದಂಡಿಸಿ, ಕಠಿಣ ಮಾತು ಗಳಿಂದ ಆಕ್ಷೇಪಿಸುವುದು, ಹೀಗೇ ಮಾಡು, ಹೀಗೆ ಮಾಡಕೂಡದು ಎಂದು ಒತ್ತಾಯ ಮಾಡುವುದು ಅವರಿಂದ ಸಾಧ್ಯವಿರಲಿಲ್ಲ. ಈ ಸಂದಿಗ್ದದಲ್ಲಿ ತಂದೆತಾಯಿ ಇರುವಾಗಲೇ ಮಹಾದೇವಿಯೂ ಬೆಳೆದರು. ಮಹಾದೇವಿಯ ಭಕ್ತಿಯೂ ಬೆಳೆಯಿತು. ತಂದೆತಾಯಿಯ ಅಸಹಾಯಕತೆಯೂ ಬೆಳೆಯಿತು.

ಶಿವನಾಮ ಮನದಲ್ಲಿ ಹಗಲು ಇರುಳು ಬಿಡದೆ ಜಪಿಸುತ್ತಿದ್ದರು. ಚೆನ್ನಮಲ್ಲಿಕಾರ್ಜುನನ್ನು ಗಂಡನಾಗಿ ಪಡೆಯುವ ಹಂಬಲ ತುಂಬ ಹೆಚ್ಚಾಯಿತು ಕಾಲ ಉರುಳಿದಂತೆ ದಿನದಿಂದ ದಿನಕ್ಕೆ ಮಹಾದೇವಿಯ ರೀತಿ ನೀತಿಗಳು ವ್ಯಕ್ತಿತ್ವವೂ ಬೆಳೆಯಿತು. ಆಳವಾದ ಪಾಂಡಿತ್ಯವನ್ನು ಸಿದ್ದಿಸಿಕೊಂಡರು.  ಸದಾ ಹಸನ್ಮುಖಿ. ನಿಷ್ಕಲ್ಮಷ ಮನಸ್ಸು, ಪರರಿಗೆ ಉಪಕಾರ ಮಾಡುವ ಸದ್ಬುದ್ದಿ, ಬಡವರ ಬಗ್ಗೆ ಅನುಕಂಪ. ಅತ್ಯಂತ ಸರಳ ಜೀವನ. ಲೌಕಿಕ ಜಗತ್ತಿನ ಬಗ್ಗೆ ವಿಶೇಷ ಆಸ್ಥೆ ಇಲ್ಲ. ಮಹಾದೇವಿಯ ವಯಸ್ಸಿನ ಹುಡುಗಿಯರಲ್ಲಿದ್ದ ಆಸೆ, ಶೃಂಗಾರದ ಆಭರಣಗಳತ್ತಲಿನ ಆಕರ್ಷಣೆ, ಮಾತು-ಹರಟೆಗಳ ಕಾಲಕ್ಷೇಪ ಮಹಾದೇವಿಯಲ್ಲಿ ಇರಲಿಲ್ಲ. ಯಾಕೆಂದರೆ ಮಹಾದೇವಿಯ ಮನಸ್ಸನ್ನು ಸಂಪೂರ್ಣವಾಗಿ ಆವರಿಸಿದ್ದವನು ಚನ್ನಮಲ್ಲಿಕಾರ್ಜುನ. ಮಾತೂ ಕಡಿಮೆಯೇ. ತನ್ನಷ್ಟಕ್ಕೆ ತಾನು ಇರುತ್ತಿದ್ದ ಮಹಾದೇವಿ  ನಡೆ- ನುಡಿ ಗಮನಿಸಿದ ಲಿಂಗಮ್ಮನಿಗೆ ಆತಂಕ. ತನ್ನ ಮಗಳು ಇತರ ಹೆಣ್ಣುಮಕ್ಕಳಂತೆ ಇಲ್ಲವಲ್ಲ ಎಂದು ಚಿಂತಿಸುತ್ತಿದ್ದಳು. ಮದುವೆ ವಿಷಯ ಮಾತನಾಡಿದರೆ ಮಹಾದೇವಿ ಅಲ್ಲಿಂದ ಬೇರೆಡೆಗೆ ಹೊರಟುಹೋಗುತ್ತಿದ್ದರು. ಓಂಕಾರ ಶೆಟ್ಟಿಯೂ ಮಗಳ ಮದುವೆ ಬಗ್ಗೆ ಬಲವಂತ ಮಾಡಲಿಲ್ಲ. ಮಗಳಿಗೆ ದೇವರು, ಆಧ್ಯಾತ್ಮ, ಧ್ಯಾನ ಇವುಗಳ ಕುರಿತೇ ವಿಶೇಷ ಆಸಕ್ತಿ ಇದೆ ಎಂಬುದು ಅವನಿಗೆ ತಿಳಿದಿತ್ತು. ಹೀಗಿರುವಾಗ ಒಂದು ದಿನ ವೇಷಭೂಷಣಗಳಲ್ಲಿ ನಿರಾಸಕ್ತಳಾಗಿದ್ದ ಮಹಾದೇವಿ ಒಂದು ದಿನ ಇದ್ದಕ್ಕಿದ್ದಂತೆ ಹೊಸ ಬಟ್ಟೆ ಧರಿಸಿ, ಶೃಂಗರಿಸಿಕೊಂಡು ಮನೆಯ ಮಾಳಿಗೆಯ ಮೇಲೆ ಹೋಗಿ ಶುಭ್ರ ಬೆಳದಿಂಗಳಲ್ಲಿ ಆಕಾಶದತ್ತ ನೋಡುತ್ತಾ ಚನ್ನಮಲ್ಲಿಕಾರ್ಜುನನನ್ನು ಕೂಗಿ

ಕರೆಯುತ್ತಾರೆ "ನನ್ನ ಜೀವನವೇ ನಿನಗಾಗಿ ಮೀಸಲು' ಎನ್ನುತ್ತಾರೆ ಇದೇ ಸಮಯದಲ್ಲಿ ಮಾಳಿಗೆಯ ಮೇಲೆ ಬಂದ ಅವರ ತಾಯಿ ಲಿಂಗಮ್ಮ ಮಗಳ ಅಲಂಕಾರ ಕಂಡು ಸಂಭ್ರಾಂತಳಾಗುತ್ತಾರೆ. ನನ್ನ ಮಗಳು ಎಷ್ಟು ಸುಂದರವಾಗಿದ್ದಾಳೆ!' ಎನ್ನುತ್ತಾರೆ ಆದರೂ ಅವರಿಗೆ ಮಗಳ ವರ್ತನೆ ವಿಚಿತ್ರವಾಗಿ ತೋರುತ್ತದೆ. ಅವಳಿಗೇನಾದರೂ ಮತಿಭ್ರಾಂತಿಯಾಯಿತೋ ಎಂದು ಭಯವಾಗುತ್ತದೆ. ಬಾಯಿಬಿಟ್ಟು ಕೇಳುತ್ತಾರೆ. ಆಗ ಮಹಾದೇವಿ ತನಗೆ ಯಾವ ಲೌಕಿಕ ಹುಚ್ಚು ಹಿಡಿದಿಲ್ಲವೆಂದೂ ಬದಲಿಗೆ ದೇವರ ಹುಚ್ಚು ಹಿಡಿದಿದೆಯೆಂದೂ, ಲೌಕಿಕ ಜಗತ್ತಿನ ಹುಚ್ಚು ಹಿಡಿದವರಿಗೆ ಆಧ್ಯಾತ್ಮ ಜೀವಿಗಳು ಹುಚ್ಚರಂತೆ ಕಾಣುವುದು ಸಹಜ ಅಲ್ಲವೆ?' ಮಗಳ ಮಾತು ತಾಯಿಗೆ ಅರ್ಥವಾಗಲಿಲ್ಲ. 'ಆಯ್ತು ಬಿಡು, ನೀನು ಏನೇನೋ ಮಾತಾಡ್ತೀಯ. ಊಟ ಮಾಡು ಎಂದರು. ಮಹಾದೇವಿಯವರು ಈ ವಚನ ಹಾಡುತ್ತರೆ.

ಅರಿಸಿನವನೆ ಮಿಂದು, ಹೊಂದೊಡಿಗೆಯನೆ ತೊಟ್ಟು, ದೇವಾಂಗವನುಟ್ಟೆನೆಲೆ ಪುರುಷ ಬಾರಾ,
ಪುರುಷ ರತ್ನವೆ ಬಾರಾ. ನಿನ್ನ ಬರವೆನ್ನ ಅಸುವಿನ ಬರವಾದುದೀಗ,
ಬಾರಯ್ಯಾ ಚೆನ್ನಮಲ್ಲಿಕಾರ್ಜುನಯ್ಯಾ,
ನೀನು ಬಂದಹನೆಂದು ಬಟ್ಟೆಯ ನೋಡಿ ಬಾಯಾರುತಿರ್ದೆನು. ಅತ್ಯಂತ ರೂಪವತಿಯಾಗಿ ಬೆಳೆದುನಿಂತ ಮಗಳನ್ನು ಕಂಡ ತಂದೆ ತಾಯಿಗಳಿಗೆ, ಸಾಮಾನ್ಯವಾಗಿ ಮಗಳ ಮದುವೆಯ ಚಿಂತೆ ಪ್ರಾರಂಭವಾಗುವುದು ಸಹಜ ಆದರೆ ಮಹಾದೇವಿಗೆ ಮದುವೆಯ ಬಗ್ಗೆ ಆಸಕ್ತಿ ಇರಲಿಲ್ಲ. ಮಹಾದೇವಿಯವರು ತನ್ನ ತಾಯಿಗೆ ಹೀಗೆ ವಚನ ಹಾಡುತ್ತಾರೆ.
ಕಾಮಿಸಿ ಕಲ್ಪಿಸಿ ಕಂದಿ ಕುಂದಿದೆನವ್ವಾ. ಮೋಹಿಸಿ ಮುದ್ದಿಸಿ ಮರುಳಾದೆನವ್ವಾ.
ತೆರೆಯದೆ ತೊರೆಯದೆ ನಲಿದು ನಂಬಿದೆ ನಾನು.
ಎನ್ನ ದೇವ ಚೆನ್ನಮಲ್ಲಿಕಾರ್ಜುನನೆನ್ನನೊಲ್ಲದಡೆ ಆನೇವೆನವ್ವಾ?

ಒಂದು ದಿನ ಗೆಳತಿಯರ ಸಂಗಡ ಮಲ್ಲಯ್ಯನ ದೇವಸ್ಥಾನಕ್ಕೆ

ಹೋಗಿದ್ದಗ ಮಹಾದೇವಿ ತುಂಬ ಹೊತ್ತು ಮಾತನಾಡುತ್ತಾ ಕುಳಿತರು.

ಮಹಾದೇವಿಯರ ಗೆಳತಿಯರ ವರಸೆಯೇ ಬೇರೆ. ಮಹಾದೇವಿಯವರ ಅನುಭಾವ ಜೀವನದ ಆನಂದವೇ ಬೇರೆ. ಅವರಿಗೂ ದಿನಗಳು ಗಳಿಗೆಗಳಂತೆ ಕಳೆಯುತ್ತವೆ. ಮಹಾದೇವಿಯವರಿಗೂ ದಿನಗಳು ಚೆನ್ನಮಲ್ಲಿಕಾರ್ಜುನ ದೇವರ ಭಕ್ತಿಯಲ್ಲಿ ದಿನಗಳು ಕ್ಷಣಗಳಂತೆ 'ಕಳೆದುಹೋಗುತ್ತವೆ. ಗೆಳತಿಯರಿಗೆ ಲೌಕಿಕದ ಸೆಳೆತ. ಮಹಾದೇವಿಯವರಿಗೆ ಅಲೌಕಿಕದ ಸೆಳೆತ. ಮಹಾದೇವಿಯವರ ಚೆಲುವು, ಅಭಿರುಚಿ, ಭಕ್ತಿ, ಅಭ್ಯಾಸ ದಿನೇ ದಿನೇ ಶಿವಭಕ್ತಿಯಲ್ಲಿ ಅರಳುತ್ತಲೆ ಇದೆ. ಗೆಳತಿಯರ ಆಸಕ್ತಿಗಳು ಮದುವೆ, ಮನರಂಜನೆ, ಸಂಸಾರದ ಸೆಳೆತಗಳಲ್ಲಿ ಆಸಕ್ತಿ ಹೆಚ್ಚುತ್ತಲೆ ಇದೆ. ಗೆಳತಿಯರು ಮಹಾದೇವಿಯವರು ಪರಸ್ಪರರು ಕೂಡಿ ಮಾತನಾಡುವಾಗ ಅವರ ಆಸಕ್ತಿ, ಅಭಿಪ್ರಾಯಗಳು ಕವಲೊಡೆದಿವೆ. ಗೆಳತಿಯರ ವಿಚಾರಗಳು, ಅಭಿರುಚಿಗಳು ಮಹಾದೇವಿಯವರಿಗೆ ಅರುಚಿ ಉಂಟಾಗಿ ಅವರ ಜೊತೆ ಮಾತನಾಡುವಲ್ಲಿ ಉತ್ಸುಕತೆಯೇ ಹೋಗಿದೆ. ಆದರೆ ಮಹಾದೇವಿಯವರಿಗೆ ಗೆಳತಿಯರ ಜೊತೆ ತನ್ನ ಪ್ರಿಯಕರನಾಗುವ ಪತಿ ಪರಮಾತ್ಮ ಚೆನ್ನಮಲ್ಲಿಕಾರ್ಜುನನ ಕತೆಗಳನ್ನು ಹೇಳುವುದರಲ್ಲಿ ಸಂಭ್ರಮ, ಸಡಗರ. ಈ ಸಡಗರದ ದಿನಗಳಲ್ಲಿ ಅಕ್ಕ ಮಹಾದೇವಿಯವರು ಒಂದು ಕನಸು ಕಂಡಿದ್ದಾರೆ. ತಾವು ಕನಸು ಕಂಡ ವಿಚಾರವನ್ನು ತನ್ನ ಗೆಳತಿಯರ ಬಳಿ ಹೇಳಿಕೊಂಡಿದ್ದಾರೆ.

ಮಹಾದೇವಿ ನೀನು ಏನು ಕನಸು ಕಂಡೆ? ಹೇಳೆ? ಗೆಳತಿಯರು ಕೇಳಿದ್ದಾರೆ. ಮಹಾದೇವಿಯವರು ತಾವು ಕಂಡ ಕನಸನ್ನು ಗೆಳತಿಯರಿಗೆ ವಚನದಲ್ಲಿ ಹೇಳಿದ್ದಾರೆ.

ಅಕ್ಕ ಕೇಳವ್ವ ನಾನೊಂದ ಕನಸು ಕಂಡೆ. ಅಕ್ಕಿ ಅಡಕೆ ಎಲೆ ತೆಂಗಿನಕಾಯಿ ಕಂಡೆ. ಚಿಕ್ಕ ಚಿಕ್ಕ ಜಡೆಗಳ ಒಪ್ಪುವ ಸುಲಿಪಲ್ಲ ಗೊರವನು ಭಿಕ್ಷಕ್ಕೆ ಬಂದುದ ಕಂಡೆನವ್ವಾ,

ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈಹಿಡಿದೆನವ್ವಾ

ಚೆನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನವ್ವಾ,

ಮಹಾದೇವಿಯರ ಗೆಳತಿಯರಲ್ಲಿ ಕೆಲವರು ಹಿರಿಯ ತರಳೆಯರು ಗೆಳತಿಯರಿದ್ದಾರೆ. ಅವರಿಗೂ ಮಹಾದೇವಿಯ ಭಕ್ತಿಯಲ್ಲಿ ಆಸಕ್ತಿ. ಆದರೆ ಅವರಿಂದ ಮಹಾದೇವಿಯರಂತೆ ಭಕ್ತಿ ಮಾಡಲು ಬರುವುದಿಲ್ಲ. ಅವರು ಕೇಳಿ ಆನಂದಿಸುತ್ತಾರೆ. ಮಹಾದೇವಿಯವರ ಈ ಕನಸು ಏನು? ಗೆಳತಿಯರು ಕೇಳಿದ್ದಾರೆ. ಮಹಾದೇವಿಯವರು ವಿವರಿಸಿ ಹೇಳುತ್ತಿದ್ದಾರೆ.

ಅಕ್ಕ ಕೇಳು, ಅವ್ವಾ ನಾನು ಒಂದು ಕನಸು ಕಂಡೆ.ಏನು ಆ ಕನಸು. ಅಕ್ಕಿ ಕಂಡೆ, ಅಡಕೆ ಕಂಡೆ. ಎಲೆ ಕಂಡೆ.ತೆಂಗಿನ ಕಾಯಿ ಕಂಡೆ. ಇವೆಲ್ಲ ಮಂಗಳದ್ರವ್ಯಗಳು, ಹಬ್ಬ,ಮದುವೆ, ಉತ್ಸವ, ಜಾತ್ರೆ, ಶುಭ ಸಮಾರಂಭಗಳಲ್ಲಿ ಬಳಸುವ ಪೂಜಾವಸ್ತುಗಳು. ಸರಿ ಇದೆಲ್ಲ ಶುಭಸೂಚನೆ. ಆಮೇಲೆ ಏನು ಕನಸು ಕಂಡೆ. ಚಿಕ್ಕ ಚಿಕ್ಕ ಜಡೆ. ತರುಣ ಸುಂದರ, ಚೆಲುವನ ಎಳೆಯ ದಂತಪಂಕ್ತಿಗಳು. ಮಲ್ಲಿಗೆ ನಗೆ, ಬೆಳದಿಂಗಳು ಸೂಸುವ ದಂತಪಂಕ್ತಿಗಳು. ನಗುನಗುತ್ತ ದರ್ಶನ ಕೊಟ್ಟ ತಪಸ್ವಿ, ಯೋಗಿ ಶಿವನು ನನಗೆ ಕಂಡ. ಈ ಪರಶಿವನು ನನ್ನ ಮನೆಗೆ ಭಿಕ್ಷಕ್ಕೆ ಬಂದ.

ಮಹಾದೇವಿಯವರಿಗೆ ತರುಣ, ಚೆಲುವ, ನಗುನಗುವ ಸುಂದರ ಯುವಕ ಸನ್ಯಾಸಿಯ ವೇಷದಲ್ಲಿ ಶಿವನು ಮಹಾದೇವಿಯವರಿಗೆ ಕನಸಿನಲ್ಲಿ ದರ್ಶನ ಕೊಟ್ಟಿದ್ದಾನೆ. ಮಹಾದೇವಿಯವರು ಅದನ್ನು ವಿವರಿಸಿ ಹೇಳುತ್ತಾರೆ. ಆ ತರುಣ ತಪಸ್ವಿ ಯಾರು? ಚಂದ್ರ, ಗಂಗ, ಕಟ್ಟಿದ ಮುಡಿ, ತ್ರಿಶೂಲ, ಢಮರುಗ, ನಂದಿ, ಮೈತುಂಬ ಮೂರೆಳೆ ಭಸ್ಮಧಾರಣೆ, ಉಟ್ಟ ಕಾವಿಯ ವಲ್ಕಲದಲ್ಲಿ ಮಲ್ಲಿಗೆ ದಂತಪಂಕ್ತಿಯನಗೆಯ ಶಿವನು ಮಹಾದೇವಿಯವರಿಗೆ ದರ್ಶನ ಕೊಟ್ಟಿದ್ದಾನೆ.

ಮಹಾದೇವಿ ನೀನು ಅವನಿಗೆ ಏನು ಭಿಕ್ಷ ನೀಡಿದೆ. ಕುತೂಹಲಗೊಂಡು ಗೆಳತಿಯರು ಕೇಳಿದ್ದಾರೆ. ಅವನು ಪರಮಾತ್ಮ ಶಿವ. ಜಗತ್ತನ್ನೆ ಸೃಷ್ಟಿಸಿದವನು ಅವನು. ಜಗತ್ತೆಲ್ಲವೂ ಅವನದು. ಇಂತಹ ಶಿವನಿಗೆ ನಾನು ಏನು ಭಕ್ಷೆ ನೀಡಬಲ್ಲೆ? ಅವನಿಗೆ ಏನು ಕೊಟ್ಟರೂ ಕಡಿಮೆಯೆ. ಅದಕ್ಕೆ ನಾನು ನನ್ನನ್ನು ಕೊಟ್ಟುಕೊಳ್ಳಲು ನಿರ್ಧರಿಸಿದೆ. ಹಾಗೆ ಮುಂದಾದೆ. ಇದನ್ನು ತಿಳಿದ ಶಿವನು ನನ್ನಿಂದ

ತಪ್ಪಿಸಿಕೊಂಡು ಹೋಗಲು ಓಡತೊಡಗಿದ. ದರ್ಶನಕೊಡುವುದೇಕೆ? ಓಡಿಹೋಗುವುದೇಕೆ? ಅವನಿಗೆ ನಾನು ಅದೆಷ್ಟು ಕಾಲ ಹಂಬಲಿಸಿಲ್ಲ. ಈಗ ಓಡಿ ಹೋದರೆ ನಾನು ಬಿಡುವೆನೆ? ಅವನಿಗಿಂತಲೂ ವೇಗವಾಗಿ ಓಡಿದೆ. ಶಿವನು ಹಿಂದೆಮುಂದೆ ಕೈ ಬೀಸಿ ಓಡುತ್ತಿದ್ದ. ಅವನು ಹಿಂದಕ್ಕೆ ಬೀಸಿದ ಕೈ ಏನು ಹಿಂದೆ ಬಂತು. ಅದನ್ನು ನಾನು ಅವನಿಗಿಂತಲೂ ವೇಗವಾಗಿ ಓಡಿ ಆ ಕೈಯ್ಯನ್ನು ಜಗ್ಗಿ ಹಿಡಿದೆ. ಈ ರಭಸದಲ್ಲಿ ನನ್ನ ಕೈ ಹಿಡಿದವರು ಯಾರು?ಎಂದು ಶಿವನು ಹಿಂದೆ ತಿರುಗಿ ನೋಡಿದ. ಚೆನ್ನಮಲ್ಲಿಕಾರ್ಜುನನ ಮುಖದರ್ಶನ ನನಗಾಯಿತು. ಚೆನ್ನಮಲ್ಲಿಕಾರ್ಜುನ ದೇವರ ಕನಸನ್ನು ಕಂಡು ಎಚ್ಚರವಾಯಿತು.

ಮಹಾದೇವಿಯವರ ಕನಸು ಕೇಳಿ ಗೆಳತಿಯರು, , ಕೇಳಿ ಬೆರಗಾದರು. ಮಹಾದೇವಿಯ ಸಾಹಸ ನೋಡು. ಪರಮಾತ್ಮನ ಕನಸು ಕಂಡಿದ್ದಾಳೆ. ಅವನನ್ನೆ ಪಡೆಯುವೆ ಎನ್ನುತ್ತಾಳೆ. ಮಹಾದೇವಿಯನ್ನು ಈ ಪಥದಿಂದ ಬಿಡಿಸಿ ಬೇಗ ಒಬ್ಬ ಒಳ್ಳೆ ಮನೆತನದ ಹುಡುಗನನ್ನು ನೋಡಿ ಲಗ್ನ ಮಾಡಿಬಿಡಬೇಕು ಎಂದು ಗೆಳತಿಯರೆಲ್ಲ ವಿಚಾರ ಮಾಡಿದ್ದಾರೆ.

ಈ ರೀತಿಯ ಕನಸು ಕಂಡಿದ್ದನ್ನು ಮಹಾದೇವಿಯ ತಂದೆ ತಾಯಿಗೆ ತಿಳಿಸಿದ್ದರೆ ಗೆಳತಿಯರು.

ತಂದೆ,ತಾಯಿಗಳಿಗೆ ಬೆರಗು ತಂದಿದೆ. ಮಹಾದೇವಿಯವರ

ಚೆಲುವು ಬಿದಿಗೆ ಚಂದ್ರನಂತೆ ವರ್ಧಿಸತೊಡಗಿದೆ. ಮಹಾದೇವಿಯರ ರೂಪರಾಶಿ

ಮಹಾದೇವಿಯರ ಚೆಲುವು ರತಿಯನ್ನು ಮೀರಿಸುವಂಥದು. ಭಕ್ತಿ, ಶಕ್ತಿ, ತಪಸ್ಸಿನಲ್ಲಿ ಪಾರ್ವತಿ, ವಿದ್ಯೆಯಲ್ಲಿ ಸರಸ್ವತಿ, ಕಣ್ಣುಗಳಲ್ಲಿ ನಂದಾದೀಪದ ಬೆಳಗು. ಜಡೆಯೋ ಕಪರ್ದಿಯಜಟೆಯಂತೆ ಉದ್ದ ಇಳಿಬಿದ್ದ ನೀಳಗೂದಲು. ನಡೆದರೆ ಮರ್ತ್ಯದತ್ತ ಪರಮೇಶ್ವರನ ಅನುಗ್ರಹವೇ ಇಳಿದುಬಂದಂತೆ. ಭೂಲೋಕದ ಪುಣ್ಯವೇ ಮಹಾದೇವಿಯರಾಗಿ ಆಕಾರ ತಳದಿದೆಯೇನೋ ಎಂಬಂತೆ ಅವರು ಕಾಣಬರುತ್ತಾರೆ. ಮನಸ್ಸು, ಶಾಂತ, ನಿರ್ಮಲ, ಗಂಭೀರ, ಗುಣದಲ್ಲಿ ಸಾವಿತ್ರಿ, ಹಂಬಲದಲ್ಲಿ ಮಹಾಶ್ವೇತೆ. ಚಾರಿತ್ರ್ಯದಲ್ಲಿ ಗಂಗೆ, ಹಿಮಾಲಯದಂತೆ ವರ್ಚಸ್ಸು, ತೇಜಸ್ಸು ಓಂಕಾರಶೆಟ್ಟಿ, ಲಿಂಗಮ್ಮ ತಂದೆತಾಯಿಗಳಿಗೆ ಇಂತಹ ಸುಂದರ, ಚೆಂದದ, ಗುಣವಂತ, ಸದ್ಭಕ್ತಿಯ ಮಗಳನ್ನು ಪಡೆದುದಕ್ಕೆ ತಮ್ಮ ಬದುಕು ಧನ್ಯ ಎಂಬ ಭಾವನೆ ಉಂಟಾಯಿತು

ಭಕ್ತಿಯಲ್ಲಿ ದಿನ ಕಳೆಯುತ್ತಿರುವ ಮಹಾದೇವಿಯರನ್ನು ಗೆಳತಿಯರು ಲೌಕಿಕಕ್ಕೆ ಸೆಳೆಯಲು ಪ್ರಯತ್ನಿಸುತ್ತಾರೆ. ಉಣ್ಣುವ,ತಿನ್ನುವ ಮಾತು. ಉಡುವ, ತೊಡುವ ಮಾತು. ಅವರು ಹಾಗೆ.ಇವರು ಹೀಗೆ.ಮನೆಯ ಹಿಂದೆ ಅಡಕೆ ಸೋಗೆ. ಇಂತಹ ಅಲ್ಪಮಾತುಗಳ ಕಡೆಗೆ ಸೆಳೆಯರು ಗೆಳತಿಯರು ಪ್ರಯತ್ನಿಸುತ್ತಾರೆ. ಮಹಾದೇವಿಯರು ಇಂತಹ ಮಾತುಗಳನ್ನು ಒಲ್ಲರು. ಮೌನವಾಗುತ್ತಾರೆ. ಮಹಾದೇವಿಯರ ಮನೆಗೆ ಗೆಳತಿಯರ ದಂಡು ದಿನೇ ದಿನೇ ಹೆಚ್ಚುತ್ತದೆ. ಓಂಕಾರ ಶೆಟ್ಟಿ ಶ್ರೀಮಂತ, ಬಂಗಾರದ ವಣಿಕೆ.ಮನೆಯಲ್ಲಿ ಬಂದವರಿಗೆ ಊಟ, ತಿನಿಸಿನ ಉಪಚಾರದ ಆತಿಥ್ಯವೂ ಇದೆ. ಗೆಳತಿಯರ ಉದ್ದೇಶ ಒಂದೆ. ಇಂತಹ ಚೆಂದದ ಚೆಲುವೆ ಲಗ್ನವಾಗಲಿ. ಸುಖದ ಜೀವನ ಮಾಡಲಿ ಎಂಬುದು ಗೆಳತಿಯರ, ತಾಯಿಯ ಅಪೇಕ್ಷೆ.. ಹೀಗೆ ದಿನ ಕಳೆದಂತೆಲ್ಲ ಮಹಾದೇವಿಯವರಿಗೆ ಚೆನ್ನಮಲ್ಲಿಕಾರ್ಜುನ ಮೇಲಿನ ವ್ಯಾಮೋಹ ಹೆಚ್ಚಾಗತೊಡಗಿತು. ತನ್ನ ತಾಯಿಗೆ ಹೀಗೆ ವಚನವನ್ನು ಹೇಳುತ್ತಿದ್ದರು.ಕಾಣುತ್ತ ಕಾಣುತ್ತ ಕಂಗಳ ಮುಚ್ಚಿದೆ ನೋಡವ್ವಾ.
ಕೇಳುತ್ತ ಕೇಳುತ್ತ ಮೈಮರೆದೊರಗಿದೆ ನೋಡವ್ವಾ.
ಹಾಸಿದ ಹಾಸಿಗೆಯ ಹಂಗಿಲ್ಲದೆ ಹೋಯಿತ್ತು ಕೇಳವ್ವಾ.
ಚೆನ್ನಮಲ್ಲಿಕಾರ್ಜುನದೇವರದೇವನ ಕೂಡುವ ಕೂಟವ ನಾನೇನೆಂದರಿಯದೆ ಮರೆದೆ ಕಾಣವ್ವಾ. ತನ್ನ ತಾಯಿಗೆ ಮಹಾದೇವಿಯ ಈ ರೀತಿಯ ವರ್ತನೆಯನ್ನು ಕಂಡು ಗಾಬರಿಗೊಳ್ಳುತ್ತಿದ್ದರು, ಭಯವೂ ಇತ್ತು. ನನ್ನ ಮಗಳಿಗೆ ಪರಮಾತ್ಮನ ಹುಚ್ಚು ಹಿಡಿಹಿತೆ, ಶಿವ ಶಿವಾ ಎಂದು ಸುಮ್ಮನಾಗುತ್ತಿದ್ದರು. ಹಿಂದೆಯೂ ಇಂತಹ ಮಾತು ಎಷ್ಟೋ ಸಾರಿ ಬಂದಿತ್ತು. 'ಈಗಲೇ ಬೇಡ' 'ಅಷ್ಟೇನು ಅವಸರ?' 'ಆಲೋಚಿಸಿ ಹೇಳುತ್ತೇನೆ' ಎಂದು ಮುಂತಾಗಿ ತೇಲಿಸಿ ನುಡಿಯುತ್ತಿದ್ದ ಮಗಳ ಮೇಲಿನ ಮಮತೆಯಿಂದ ಲಿಂಗಮ್ಮನಾಗಲೀ ಓಂಕಾರನಾಗಲೀ ಹೆಚ್ಚು ಒತ್ತಾಯ ಮಾಡಿ ಮಹಾದೇವಿ ಮನಸ್ಸನ್ನು ನೋಯಿಸಲು ಇಚ್ಛಿಸಿರಲಿಲ್ಲ.

ಆದರೆ ಅವರ ಮನಸ್ಸಿನ ಕಾತರತೆ ಅವರಿಗೇ ಗೊತ್ತು. ಮಹಾದೇವಿಯ ರೂಪಸಂಪತ್ತು ದಿನದಿನಕ್ಕೆ ಹೊಸಲಾವಣ್ಯವನ್ನು ಪಡೆಯುತ್ತ ಕಾಂತಿಯುಕ್ತವಾಗು ತಿತ್ತು. ಅದು ತಂದೆತಾಯಿಗಳಿಗೆ ಹೆಮ್ಮೆಯ ವಿಚಾರವೇ ಆದರೂ, ಆತಂಕ ಕಾರಿಯೂ ಆಗಿತ್ತು. ಲಿಂಗಮ್ಮ ಮಹಾದೇವಿಯ ಸೌಂದಯ್ಯಕ್ಕೆ ದೃಷ್ಟಿಯನ್ನು ತೆಗೆದು ಕಾಹನ್ನು ಕಟ್ಟುತ್ತಿದ್ದಳು.

'ಜಗಜ್ಜನನೀ' ಈ ಸೌಂದರ್ಯವು ಪವಿತ್ರವಾಗಿ ಉಳಿಯುವಂತೆ ಅನುಗ್ರಹಿಸು. ಇವಳಿಗೆ ಯೋಗ್ಯನಾದ ವರನನ್ನು ನೀನೇ ಕರುಣಿಸು. ಇವಳ ಸೌಂದಯ್ಯಕ್ಕೆ ಸಾರ್ಥಕತೆಯನ್ನೂ ರಕ್ಷಣೆಯನ್ನೂ ದಯಪಾಲಿಸು' ಎಂದು ಮನಸ್ಸಿನಲ್ಲಿಯೇ ಬೇಡುತ್ತಿದ್ದರು.

ಆದರೆ ಮಗಳ ಮನೋಧರ್ಮ ಮದುವೆಯೆಂದರೆ ವಿಮುಖವಾಗುತ್ತಿತ್ತು. ಹಾಗೆಂದು ಅವರು ತಮ್ಮ ಕರ್ತವ್ಯವನ್ನು ಬಿಡುವಂತಿರಲಿಲ್ಲ. ಈಗ ಯಾವುದೋ ವರನನ್ನು ನೋಡಿ ನಿರ್ಧರಿಸಿದಂತಿತ್ತು. ಆದುದರಿಂದ ಲಿಂಗಮ್ಮ ಇಂದು ಅಷ್ಟು ಸುಲಭವಾಗಿ ಬಿಡುವ ಹಾಗಿರಲಿಲ್ಲ.

"ಇಲ್ಲ ಮಹಾದೇವಿ, ಈಗ ಹಾಗಾಗುವ ಹಾಗಿಲ್ಲ. ನೀನೇನೂ ಇನ್ನೂ ಸಣ್ಣ ವಳಲ್ಲ. ನಿನಗೇ ಗೊತ್ತಿದೆ. ನಾಲ್ಕು ಜನರಲ್ಲಿ ನಾವೀಗ ತಲೆಯೆತ್ತಿ ನಿಲ್ಲುವಂತಿಲ್ಲ. ಯಾವಾಗ ಕೇಳಿದರೂ ನೀನು ಹೀಗೇ ಹೇಳುತ್ತೀಯ. ಇಂದು ಸರಿಯಾದ ಉತ್ತರವನ್ನು ನೀನು ಕೊಡಲೇಬೇಕು" ನಿರ್ಧಾರದ ಧ್ವನಿಯಿತ್ತು ಲಿಂಗಮ್ಮನ ಮಾತಿನಲ್ಲಿ.

ಗುರುಲಿಂಗದೇವರು, ತಂದೆ ಓಂಕಾರಶೆಟ್ಟಿ,ತಾಯಿ ಲಿಂಗಮ್ಮ. ಅಜ್ಜಿ ಎಲ್ಲರೂ ಮನೆಯಲ್ಲಿ ಕುಳಿತು ಮಹಾದೇವಿಯರೊಂದಿಗೆ ಮಾತನಾಡಿದರು. ಮಹಾದೇವಿಯರು ನಾನು ಮನುಷ್ಯರರನ್ನು ಲಗ್ನವಾಗುವುದಿಲ್ಲ ಎಂದು ಖಡಾಖಂಡಿತವಾಗಿ ವಿರೋಧಿಸಿದರು. ನಾನು ಲಗ್ನವನ್ನೇ ಒಲ್ಲೆ. ನಾನು ದೇವರು ಚೆನ್ನಮಲ್ಲಿಕಾರ್ಜುನನ್ನೆ ಲಗ್ನವಾಗುತ್ತೇನೆ ಎಂದರು. ತಂದೆ, ಗುರುಗಳು ಹೌಹಾರಿದರು. ಮಗಳೆ ದೇವರನ್ನು ಲಗ್ನವಾಗುತ್ತೇನೆ ಎಂದರೆ ದೇವರು ಲಗ್ನಕ್ಕೆ ಸಿಗುವುದಿಲ್ಲ. ಇದು ಅವಿವೇಕದ ಮಾತು. ಲಗ್ನ ಮಾಡಿಕೊಂಡರೆ ಮರ್ಯಾದೆ, ಗೌರವ ಸಿಗುತ್ತದೆ. ನೀನು ದೇವರನ್ನು ಲಗ್ನ ಮಾಡಿಕೊಳ್ಳುತ್ತೇನೆ ಎಂದರೆ ನಿನಗೆ ಗೊತ್ತಿಲ್ಲವೇನೆ? ದಡ್ಡಿ ನಮ್ಮ ಊರಿನ ಅನೇಕ ದೇವದಾಸಿಯರೆಲ್ಲ ದೇವರನ್ನೆ ಲಗ್ನ ಮಾಡಿಕೊಂಡವರು. ದೇವರನ್ನ ಲಗ್ನ ಮಾಡಿಕೊಳ್ಳುವದು ಎಂದರೆ ಗುಡಿಗೆ ಹೋಗಿ ವಿಗ್ರಹಕ್ಕೆ ಲಗ್ನ ಮಾಡಿಕೊಳ್ಳುವುದು.ಪೂಜಾರಿ ತಾಳಿ ಕಟ್ಟುತ್ತಾನೆ. ಅಲ್ಲಿಯೇ ಗುಡಿಯಲ್ಲಿ ಮೂರುದಿನ ಪೂಜಾರಿಯ ಜೊತೆ ಮಲಗಬೇಕು. ನಂತರ ಶ್ರೀಮಂತನೊಬ್ಬನು ಹೆತ್ತವರಿಗೆ ಹಣ ಕೊಟ್ಟು ಮನೆ ಮಾಡಿ ಇರಿಸಿಕೊಳ್ಳುತ್ತಾನೆ. ಅವನ ಜೊತೆ ನೀನು ಅನೀತಿಯುತ ಜೀವನ ಮಾಡಬೇಕು.ಹುಚ್ಚು ಹುಡುಗಿ. ದೇವರನ್ನು ಲಗ್ನ ಮಾಡಿಕೊಳ್ಳುತ್ತಾಳಂತೆ ಅಜ್ಜಿ ಗೌರಮ್ಮ ಗದರಿತು. ಬೆಚ್ಚಿ ಬಿದ್ದ ಮಹಾದೇವಿ ಸಿಟ್ಟಿನಿಂದ ಕೇಳಿದರು. ನಾನು ಯಾವ ಗುಡಿಗೂ ಹೋಗುವುದಿಲ್ಲ. ನಾನು ಲಗ್ನವಾಗುವುದು ನನ್ನ ಕರಸ್ಥಲದಲ್ಲಿರುವ ಇಷ್ಟಲಿಂಗವನ್ನು ಲಗ್ನ ಮಾಡಿಕೊಂಡಿದ್ದೇನೆ. ಶಿವನೇ ಬಂದು ನನ್ನನ್ನು ಕೈಲಾಸಕ್ಕೆ ಕರೆದುಕೊಂಡು ಹೋಗುತ್ತಾನೆ ಎಂದು ಹೇಳಿದರು. ಇದೆಲ್ಲ ಹುಚ್ಚಾಟ ಬಿಡು.ದೇವರು ಮನುಷ್ಯರಿಗೆ ಸಿಗುವುದಿಲ್ಲ.ಅವನನ್ನು ನಾವು ಕಾಣಲು ಸಾಧ್ಯವಿಲ್ಲ.ನೀನು ಬೇಕಾದ ಹಾಗೆ ಪೂಜೆ ಮಾಡು. ಭಕ್ತಿ ಮಾಡು. ಆದರೆ ದೇವರು ಮಾತ್ರ ನಿನಗೆ ಕಾಣಸಿಗುವುದಿಲ್ಲ. ಅವನನ್ನು ಈ ವರೆಗೆ ಕಂಡವರು ಯಾರೂ ಇಲ್ಲ ಎಂದು ಅಜ್ಜಿ ಹೇಳಿತು. ಹೌದು ಮಗಳೆ, ದೇವರು ನಿನಗೆ ದೊರೆಯುವುದಿಲ್ಲ ಎಂದು ತಂದೆ ಓಂಕಾರ ಶೆಟ್ಟಿಯೂ ದನಿಗೂಡಿಸಿದನು. ಗುರುಗಳೆ ನೀವೇ ಹೇಳಿದಿರಲ್ಲ. ದೇವರು ಭಕ್ತಿಗೆ ಒಲಿಯುತ್ತಾನೆ ಎಂದು. ನಾನು ಆ ಭಕ್ತಿಯನ್ನು ಮಾಡುತ್ತೇನೆ ಗುರುಗಳ ಎಂದು ಮಹಾದೇವಿ ಹೇಳಿದರು. ಇಲ್ಲ ಮಹಾದೇವಿ. ನೀನು ಭಕ್ತಿ ಮಾಡುವೆ ನಿಜ.ಆದರೆ ದೇವರನ್ನು ಕಾಣಲಾಗುವುದಿಲ್ಲ . ಅವನು ಮನುಷ್ಯರಿಗೆ ಒಲಿಯುವುದಿಲ್ಲ, ಸಿಕ್ಕುವುದೂ ಇಲ್ಲ. ಈಗ ಮಹಾದೇವಿ ನಿರುತ್ತರಳಾದರು. ಏನಾದರಾಗಲಿ ನಾನು ಮನುಷ್ಯರು ಯಾರನ್ನೂ ಲಗ್ನವಾಗುವುದಿಲ್ಲ. ನಾನು ವಿವಾಹವಾಗುವುದಿದ್ದರೆ ಪರಮಾತ್ಮ ಚೆನ್ನಮಲ್ಲಿಕಾರ್ಜುನನ್ನು ಮಾತ್ರ ಇಲ್ಲದಿದ್ದರೆ ನಾನು ಮನೆಯಲ್ಲಿಯೇ ಇರುತ್ತೇನೆ ಎಂದು ಹೇಳಿದರು.

ಓಂಕಾರ ಶೆಟ್ಟರು ಪ್ರಾಣಸಂಕಟದಲ್ಲಿ ಸಿಕ್ಕಿಕೊಂಡಿದ್ದಾರೆ. ಮಹಾದೇವಿಯು ಸನ್ಯಾಸ ಜೀವನ ನಡೆಸಿ ಗುರುವಾಗಲು ಮುಂದಾಗಿದ್ದಾರೆ. ಶರಣಸತಿ, ಲಿಂಗಪತಿ ಎಂಬುದು ಶರಣರ ತತ್ವ ಈ ದಾರಿಯಲ್ಲಿ ಸಾಗಿ ಜೀವಾತ್ಮ ಸತಿಯಾಗಿ, ಪರಮಾತ್ಮ ಪತಿಯಾಗಿ ಬಾಳುವೆ ನಡೆಸುವ ಜೀವನಕ್ಕೆ ಮಹಾದೇವಿ ಮುಂದಾಗಿದ್ದಾರೆ. ಏನಾದರೂ ಸರಿ. ನಾನು ಲಗ್ನವನ್ನು ಒಲ್ಲೆ. ಸನ್ಯಾಸಜೀವನ ನನ್ನದು. ನನ್ನದೇನಿದ್ದರೂ ಪರಮಾತ್ಮನೊಂದಿಗೆ ಅಲೌಕಿಕ ಲಗ್ನ ಎಂದು ಮಹಾದೇವಿ ನಿರ್ಧಾರದ ಧ್ವನಿಯಲ್ಲಿ ತಿಳಿಸಿದ್ದಾರೆ. "ಅವ್ವಾ, ನಿಜ ಹೇಳಬೇಕೆಂದರೆ ನಾನು ಮದುವೆಯನ್ನೇ ಆಗುವುದಿಲ್ಲ. ಗುರುಗಳೇ ನನ್ನ ಮದುವೆಯನ್ನು ಮಾಡಿಬಿಟ್ಟಿದ್ದಾರೆ. ನನ್ನ ಪತಿ ಚೆನ್ನ ಮಲ್ಲಿಕಾರ್ಜುನನೊಬ್ಬನೇ. ಇನ್ನಾರನ್ನೂ ನಾನು ಕಣ್ಣೆತ್ತಿಯೂ ನೋಡಲಾರೆ." ನಮ್ರವಾದರೂ ನಿರ್ಧಾರದ ಧ್ವನಿಯಲ್ಲಿ ಹೇಳಿದರು ಮಹಾದೇವಿ. ಲಿಂಗಮ್ಮ ಅವಾಕ್ಕಾದರು. ಆದರೂ ಅದನ್ನು ತೋರ್ಪಡಿಸಕೊಳ್ಳದೆ: "ಈ ಮಾತನ್ನು ಯಾರಾದರೂ ಕೇಳಿದರೆ ಹುಚ್ಚಿ ಎಂದಾರು. ಚೆನ್ನ ಮಲ್ಲಿಕಾರ್ಜುನ ಪತಿ ಎಂಬುದು ತತ್ತ್ವ ದೃಷ್ಟಿಯಲ್ಲಿ. ಅವನು ಎಲ್ಲರ ಪತಿಯೆಂದು ಗುರುಗಳು ಹೇಳುವುದಿಲ್ಲವೇ? ಅವನ ಒಡೆತನದ ಸಾನ್ನಿಧ್ಯದಲ್ಲಿ, ನಮ್ಮ ಲೌಕಿಕ ವ್ಯವಹಾರವನ್ನು ಅವನಿಗೇ ಅರ್ಪಿಸಿ, ನಮ್ಮ ಕರ್ತವ್ಯವನ್ನು ನಿರ್ವಹಿಸಬೇಕು ಅಲ್ಲವೇ ಮಗಳೇ! ಆ ದೃಷ್ಟಿಯಿಂದ ನೀನು ಮದುವೆಯಾಗಲೇಬೇಕು. ನಿನಗೆ ಯೋಗ್ಯವಾದ ಕಡೆಯಲ್ಲಿಯೇ ನೋಡುತ್ತೇವೆ. ನಿನ್ನ ಮನೋಧರ್ಮಕ್ಕೆ ಹೊಂದುವಂತಹ ಭಕ್ತನಿಗೇ ಕೊಟ್ಟು ನಿನ್ನನ್ನು ಮದುವೆಮಾಡುತ್ತೇವೆ. ಬನವಾಸಿಯಲ್ಲಿ ಒಂದು ಒಳ್ಳೆಯ ಮನೆತನ ದಲ್ಲಿಯೇ ನೋಡಿದ್ದಾರೆ. ಹುಡುಗ ತುಂಬಾ ಗುಣಾಢ್ಯನಂತೆ, ರೂಪವಂತನಂತೆ. ಇನ್ನು ನಾಲ್ಕಾರು ದಿನಗಳಲ್ಲಿ ಆಷಾಢಮಾಸ ಮುಗಿಯುತ್ತದೆ. ಆಮೇಲೆ ನಿನ್ನನ್ನು ನೋಡಲು ಬರುತ್ತಾರೆ."ಎನ್ನಲು ಲಿಂಗಮ್ಮ. ಅಷ್ಟೇ ಅಸಹನೆಯಿಂದ ಹೇಳಿದರು ಮಹಾದೇವಿ ಯು ಇಹಕ್ಕೊಬ್ಬ ಗಂಡನೆ ಪರಕ್ಕೊಬ್ಬ ಗಂಡನೆ? ಲೌಕಿಕ್ಕೊಬ್ಬ ಗಂಡನೆ

ಪಾರಮಾರ್ಥಕ್ಕೊಬ್ಬ ಗಂಡನೆ? ಎನ್ನ ಗಂಡ ಚೆನ್ನಮಲ್ಲಿಕಾರ್ಜುನದೇವರಲ್ಲದೆ ಮಿಕ್ಕಿನ ಗಂಡರೆಲ್ಲ ಮುಗಿಲಮರೆಯ ಬೊಂಬೆಯಂತೆ. "ಇಲ್ಲ.... ಲೌಕಿಕಕ್ಕೆ ಒಬ್ಬ ಪತಿ, ಪಾರಮಾರ್ಥಕ್ಕೆ ಒಬ್ಬ ಪತಿ-ಇದು ನನ್ನ ಮನಸ್ಸಿಗೆ ಹಿಡಿಸದು. ನನ್ನ ಎಲ್ಲ ಪ್ರೇಮವನ್ನೂ ಒಬ್ಬ ಪತಿಗೇ ಧಾರೆಯೆರೆದಿದ್ದೇನೆ. ಇನ್ನಾರನ್ನೂ ನಾನು ಮದುವೆಯಾಗಲಾರೆ." "ಹಾಗೆಲ್ಲ ಹೇಳಬೇಡ. ನಿನ್ನ ಒಳ್ಳೆಯದಕ್ಕೆ ನಾವು ಹೇಳುವುದು. ನೀನಿನ್ನೂ ಲೋಕಾನುಭವವಿಲ್ಲದವಳು. ಈ ಭಾವನೆಯ ಆವೇಶದಿಂದಲೇ ಇಡೀ ಜೀವಮಾನವನ್ನೆಲ್ಲಾ ಸಾಗಿಸುವುದು ಸಾಧ್ಯವೇ? ಹೆಣ್ಣು ಮದುವೆಯಾಗದೇ ಇರುವುದುಂಟೇ? ಮದುವೆಯಾಗಿಯೂ ಸ್ತ್ರೀಯರು ಆದರ್ಶ ಭಕ್ತಿಯರಾಗಿ ಜೀವನದ ಸಾರ್ಥಕತೆಯನ್ನು ಪಡೆದಿಲ್ಲವೇ? ಗುರುಗಳನ್ನು ಬೇಕಾದರೆ ಕೇಳು." ಮಾತನ್ನೇನೂ ಆಡದೆ ಮಹಾದೇವಿ ಎದ್ದು ತನ್ನ ಕೋಣೆಯತ್ತ ನಡೆದರು.

• ಆತಂಕ ಉದ್ವೇಗಗಳಿಂದ ಮಹದೇವಿಯ ಮನಸ್ಸು ತಳಮಳಗೊಂಡಿತ್ತು. ಒಂದಲ್ಲ ಒಂದು ದಿನ ಇಂತಹ ಸನ್ನಿವೇಶವನ್ನು ಎದುರಿಸಬೇಕಾಗಬಹುದೆಂದು ನಿರೀಕ್ಷಿಸಿಯೇ ಇದ್ದರು. ಅದನ್ನು ಸಾಧ್ಯವಾದಷ್ಟು ಮುಂದೆ ತಳ್ಳುತ್ತಾ ಬಂದಿದ್ದರು. ಅದರಿಂದ ಪಾರಾಗುವುದು ಹೇಗೆಂಬುದು ಮಾತ್ರ ಮಹಾದೇವಿಗೆ ಬಗೆಹರಿಯದ ಸಮಸ್ಯೆ ಯಾಗಿತ್ತು. ಇಂದು ಆ ಸಮಸ್ಯೆ ಉತ್ಕಟ ಸ್ವರೂಪವನ್ನು ತಳೆದು ನಿಂತಿತ್ತು.

'ಈಗ ತಂದೆತಾಯಿಗಳು ದೃಢನಿರ್ಧಾರದಿಂದ ಹೊರಟಿದ್ದಾರೆ. ಅವರ ದೃಷ್ಟಿ ಯಿಂದ ಅದು ಸಹಜವಾದುದೂ ಹೌದು. ಜನಾಪವಾದವನ್ನು ಸಹಿಸಿಕೊಂಡು ಇಷ್ಟು ದಿನಗಳವರೆಗೂ ಅವರು ಸುಮ್ಮನಿದ್ದುದೇ ಹೆಚ್ಚು. ನನ್ನ ಮೇಲಿನ ಮಮತೆ ಅವರನ್ನು ಹಾಗೇ ನಿಲ್ಲಿಸಿತು. ಆದರೆ ಇಂದು ಮಮತೆಯನ್ನು ಮೀರಿದ ಕರ್ತವ್ಯದ ಕರೆ ಅವರಲ್ಲಿ ಜಾಗೃತವಾಗಿದೆ. ಅದರಲ್ಲಿ ನಾನು ತಪ್ಪನ್ನು ಎಣಿಸಲಾರೆ.... ಆದರೆ ಅದನ್ನು

ಒಪ್ಪಿಕೊಳುವುದು ಸಾಧ್ಯವೇ?

ಮಹಾದೇವಿಯ ತಂದೆ ತಾಯಿಗಳು ಗುರುಲಿಂಗದೇವರ ಬಳಿ ಬಂದು, ಹೀಗೆ ಹೇಳುತ್ತಾರೆ ಮಹಾದೇವಿ ಮದುವೆಗೆ ಒಪ್ಪುತ್ತಿಲ್ಲ,

ಆದಾವ ರೂಪದಲ್ಲಿ ಮಹಾದೇವಿಯನ್ನು ತನ್ನ ಉದ್ದೇಶಸಾಧನೆಯ ಕೈದುವನ್ನಾಗಿ ಮಾಡಿಕೊಳ್ಳುತ್ತದೆ ಬಲ್ಲವರಾರು? ನೀವು ಮಾಡುವ ಪ್ರಯತ್ನ ಮಾಡಿರಿ." ಮಹಾದೇವಿಯು ಕೂಡ ಒಂದೆರಡು ಸಂದರ್ಭಗಳಲ್ಲಿ ಈ ವಿಚಾರವನ್ನು ನನ್ನ ಬಳಿಯಲ್ಲಿ ತಿಳಿಸಿದ್ದರು. ಈ ವಿಷಯ ತಿಳಿದ ಮಹಾದೇವಿಯ ತಂದೆ ತಾಯಿ ಮನೆಗೆ ಹಿಂತಿರುಗಿದರು. ಮಹಾದೇವಿ ಗುರುಗಳ ಬಳಿ ಬಂದು

"ಗುರುಗಳೇ, ತಂದೆತಾಯಿಗಳು ನನ್ನ ಮದುವೆಯ ಪ್ರಯತ್ನದಲ್ಲಿದ್ದಾರೆ."

"ಹೌದಮ್ಮ. ಅದು ಅವರು ಮಾಡಬೇಕಾದ ಕರ್ತವ್ಯ. ಅದರಲ್ಲಿಯೂ ಹೆಣ್ಣು ಮಗಳ ಮದುವೆಯನ್ನು ಆದಷ್ಟು ಜಾಗ್ರತೆ ಮುಗಿಸಿಬಿಡಬೇಕೆಂದು ತಂದೆ ತಾಯಿಗಳು ಕಾತುರರಾಗಿರುವುದು ಸಹಜ. "ಲೌಕಿಕ ದೃಷ್ಟಿಯಿಂದ ಹೇಳಿದ್ದರು ಗುರುಲಿಂಗರು.

"ಅದೇಕೆ ಗುರುಗಳೇ, ಹೆಣ್ಣನ್ನು ಆ ಕಣ್ಣಿನಿಂದಲೇ ನೋಡುತ್ತದೆ ಈ ಜಗತ್ತು?" ಅಸಹನೆಯಿಂದ ಕೇಳಿದರು ಮಹಾದೇವಿ. "ಅದು ಗಂಡಿನ ಸಂಕುಚಿತ ದೃಷ್ಟಿಯಿದ್ದರೂ ಇರಬಹುದು. ಅಲ್ಲದೆ ಹೆಣ್ಣಿನ ದೌರ್ಬಲ್ಯವೂ ಕಾರಣವೆಂದು ನನಗನ್ನಿಸುತ್ತದೆ. ತನ್ನ ಅಲಂಕಾರ ಒನಪು ಒಯ್ಯಾರಗಳಿಂದ ಗಂಡಿನ ಮನವನ್ನು ಸೆಳೆಯುವುದೇ ತನ್ನ ಸೌಂದಯ್ಯದ ಸಾರ್ಥಕತೆ ಎಂದು ಹೆಣ್ಣು ತಿಳಿದಿರುವವರೆಗೂ ಅವಳಿಗೆ ಇದೇ ಸ್ಥಾನವೆಂದೇ ನನ್ನ ಭಾವನೆ."

"ಆ ಸೌಂದರ್ಯವೆಲ್ಲವನ್ನೂ ಮಲ್ಲಿ ಕಾರ್ಜುನನಿಗೆ ಮೀಸಲಾಗಿಟ್ಟು ನಡೆಯುವ

ಬ್ರಹ್ಮ ಚರದ ಸಾಧನೆ ಹೆಣ್ಣಿಗೆ ಸಾಧ್ಯವಿಲ್ಲವೇ ಗುರುಗಳೇ?' ತನ್ನ ಬಯಕೆಯನ್ನೇ ಪ್ರಶ್ನೆಯಾಗಿ ಕೇಳಿದ ಮಹಾದೇವಿ

"ಸಾಧ್ಯ!" ಗುರುಗಳು ಗಂಭೀರವಾಗಿ ಹೇಳಿದರು. "ಆದರೆ ಅಂತಹ ಸ್ಥಿತಿ ಇನ್ನೂ ಹುಟ್ಟಿಬರಬೇಕಾಗಿದೆ ತಾಯಿ. ಅದು ಬಹಳ ಕಠಿಣವಾದ ಮಾರ್ಗ, ಕೂದಲಿನ ಸೇತುವೆಯ ಮೇಲೆ ನಡೆದು ಬೆಂಕಿಯ ಪ್ರವಾಹವನ್ನು ದಾಟುವಂತಹ ಸಾಹಸ ಮಾರ್ಗ. ಆದರೆ ವಿವಾಹಿತ ಜೀವನದಲ್ಲಿದ್ದೂ ವಿಲಾಸಕ್ಕೆ ಒಳಗಾಗದೆ ಭಕ್ತಿಯನ್ನು ಸಾಧಿಸುವುದು, ಮನಸ್ಸು ಮಾಡಿದರೆ ಸಾಮಾನ್ಯ ಚೇತನಗಳಿಗೂ ನಿಲುಕಬಹುದಾದ ಮಾರ್ಗ."

ಗುರುಗಳೆ,

"ಆದರೆ ನನ್ನ ಮಾರ್ಗ ಅದಲ್ಲ ಎಂದೆನಿಸುತ್ತಿದೆ, ಗುರುಗಳೇ, ನನ್ನ ಅಂತರಂಗದಲ್ಲಿ ಯಾವುದೋ ಒಂದು ಕರೆ ಸದಾ ಮೊರೆಯುತ್ತಿದೆ. ನಾನು ಕಾಣದಿದ್ದರೂ ನಿಮ್ಮಿಂದ ಕೇಳಿ ಕಂಡಿರುವ ಶ್ರೀಶೈಲದ ಗಿರಿಶಿಖರಗಳು ಕೈಬೀಸಿ ಕರೆಯುತ್ತಿರುವಂತೆ ಭಾಸವಾಗುತ್ತಿದೆ. ಶ್ರೀಗಿರಿಯ ಸುತ್ತುತ್ತಾ ಬಂದ ಬೆಳಕೊಂದು ನನ್ನ ಹೃದಯದಲ್ಲಿ ಲೀನವಾಗಿ ಅತ್ತ ನನ್ನನ್ನು ಎಳೆದೊಯ್ಯುತ್ತಿರುವಂತೆ ತೋರುತ್ತದೆ. ಕಣ್ಣು ಮುಚ್ಚಿದರೆ ಸಾಕು, ಈ ಪ್ರಪಂಚವೆಲ್ಲಾ ಎತ್ತಲೋ ಜಾರಿ ನನಗೇನೋ ಹುಚ್ಚು ಹಿಡಿದಿದೆಯೋ ಅನ್ನಿಸುತ್ತದೆ ಒಮ್ಮೊಮ್ಮೆ." ತನ್ನ ಅಲೌಕಿಕ ಅನುಭವಗಳನ್ನು ಭಾವಾವೇಶದಿಂದ ಹೇಳಿದ ಮಹಾದೇವಿ.

"ನಿಜ ಮಗಳೇ; ಇದು ಒಂದು ಹುಚ್ಚು. ಎಲ್ಲರೂ ಹುಚ್ಚರಾಗಿರುವಾಗ ಎಚ್ಚರವಾಗಿರುವುದೇ ಒಂದು ಹುಚ್ಚಾಗಿ ತೋರುತ್ತದೆ. ಆದರೆ ಆ ಎಚ್ಚರದ ಕರೆಯನ್ನು ಮರೆಯಬೇಡ. ಅದಕ್ಕೆ 'ಓ'ಗೊಡು. ನಿನ್ನ ಮನೋಧರ್ಮವನ್ನು ನೀನು ಬಿಡಬೇಡ. ಸ್ವಧರ್ಮವೇ ಶ್ರೇಯಸ್ಕರ" ಎಂದು ಗುರುಲಿಂಗರು ಮಹಾದೇವಿಗೆ ಆಕಾಂಕ್ಷೆಗೆ ಪ್ರಚೋದನೆಯನ್ನಿತ್ತಿದ್ದರು.

ಮಹಾದೇವಿಯ ಮನಸ್ಸಿಗೆ ಈಗ ಗುರುಗಳ ಆ ಮಾತು ಸುಳಿಯಿತು. ಆಲೋಚನೆ ಮುಂದುವರೆಯಿತು:

"ನಿಜ, ಅದೇ ನನ್ನ ಸ್ವಧರ್ಮ. ಆದರೆ ಅದನ್ನು ಲೋಕಕ್ಕೆ ತಿಳಿಸುವುದು ಹೇಗೆ? ಲೋಕದ ಮಾತು ಹಾಗಿರಲಿ, ತಂದೆತಾಯಿಗಳಿಗೆ ಮನದಟ್ಟು ಮಾಡಿ ಕೊಡುವುದು ಹೇಗೆ? ಇರುವ ಒಬ್ಬಳೇ ಒಬ್ಬಳು ಮಗಳಿಂದ ಅವರು ಬಯಸಬಹುದಾದ ಸುಖದ ಕಲ್ಪನೆಯನ್ನು ನಾನು ಊಹಿಸಬಲ್ಲೆ. ಸಾಮಾನ್ಯಮಟ್ಟದ ಲೌಕಿಕ ವ್ಯವಹಾರಕ್ಕಿಂತ ಸ್ವಲ್ಪ ಹೆಚ್ಚಿನ ಎತ್ತರಕ್ಕೆ ಏರಬಲ್ಲ ಸಾಧನೆ ಅವರಿಗಿದೆ. ಆದರೆ ಈ ತ್ಯಾಗಕ್ಕೆ ಅವರು ಸಿದ್ದರಾಗುವರೆ? ಹೀಗೆ ಇರುವಾಗ ಒಂದು ದಿನ

ಒಂದು ದಿನ ಉಡುತಡಿ ಊರೆಲ್ಲ ಸುದ್ದಿಯಾಗಿದೆ.ನಮ್ಮ ಮಹಾರಾಜರು ವೈಹಾಳಿಗೆ ಬರುತ್ತಿದ್ದಾರೆ. ಕುದುರೆಗಳನ್ನು ದೇಶ ವಿದೇಶಗಳಿಂದ ತರಿಸಿದ್ದಾರೆ. ಕುದುರೆಗಳನ್ನು ಪಳಗಿಸುವ ವೈಹಾಳಿ ಉಡುತಡಿಯಲ್ಲಿಯೇ ನಡೆಯಲಿದೆಯಂತೆ. ಅನೇಕ ರಾಜಕುಮಾರರು, ಯುವಕರು, ಕುದುರೆ ಪಳಗಿಸಲು ಮೈದಾನಕ್ಕೆ ಇಳಿಯಲಿದ್ದಾರಂತೆ. ಮಹಾರಾಜರಿಗೆ ಪಟ್ಟದ ಕುದುರೆಯೊಂದನ್ನು ಇಲ್ಲಿ ಪಳಗಿಸಲಿದ್ದಾರಂತೆ. ಅದನ್ನು ಮಹಾರಾಜರೆ ಪಳಗಿಸುವ ಕಾವ್ಯ ಮಾಡಲಿದ್ದಾರಂತೆ. ರಾಜ್ಯದ ನಾನಾಕಡೆಗಳಿಂದ ಜನ ಸಾಗರವೇ ಈ ದೃಶ್ಯವನ್ನು ನೋಡಲು ಬರುತ್ತದೆ. ಮಹಾದೇವಿ ಬಾ ನಾವೂ ಹೋಗಿ ನೋಡಿಬರೋಣ. ಗೆಳತಿಯರು ಕೇಳಿದ್ದಾರೆ. ಮಹಾದೇವಿ ನಾನೊಲ್ಲೆ ಎಂದು ಒಂದೇ ಮಾತಿನಲ್ಲಿ ಹೇಳಿ ಈಚರ್ಚೆಯಿಂದ ದೂರ ಉಳಿದಿದ್ದಾರೆ. ಗೆಳತಿಯರಿಗೆ ನಿರಾಶೆಯಾಗಿದೆ.

ಪಟ್ಟದ ಕುದುರೆಯನ್ನು ಯಾರಿಂದಲೂ ಪಳಗಿಸಲು ಆಗಲಿಲ್ಲ. ಸ್ವತಃ ಮಹಾರಾಜನೇ ಮೈದಾನಕ್ಕಿಳಿದರೂ ಕುದುರೆಯನ್ನು ಪಳಗಿಸಲು ಆಗಲಿಲ್ಲ. ಕುದುರೆಯನ್ನು ಏರಬೇಕು ಎನ್ನುವಷ್ಟರಲ್ಲಿ ಕುದುರೆಯು ಮಹಾರಾಜನನ್ನು ಕೆಳಕ್ಕೆ ಕೆಡವಿ ಅಜೇಯವಾಗುಳಿಯಿತು. ಕೆಳಗೆ ಬಿದ್ದ

ಮಹಾರಾಜನಿಗೆ ಪೆಟ್ಟು ಬಿರುಸಾದುದರಿಂದ ವೈಹಾಳಿಯನ್ನೆ ಮುಕ್ತಾಯಗೊಳಿಸಿದರು. ಮಹಾರಾಜರು ಅರಮನೆಗೆ, ಬಳ್ಳಿಗಾವಿಯ ಕಡೆಗೆ ಅಂಬಾರಿಯಲ್ಲಿ ಹೊರಟಿದ್ದಾರೆ. ಮಹಾರಾಜರ ಪರಿವಾರದ ಜೊತೆಗೆ

ದೊಡ್ಡ ಉತ್ಸವವೇ ನಡೆದಿದೆ. ಮಾರ್ಗದಲ್ಲಿ ಉದ್ದಕ್ಕೂ ಪ್ರಜೆಗಳು, ಶ್ರೀಮಂತರು ದರ್ಶನ ಪಡೆದು ಕಾಣಿಕೆ ಸಲ್ಲಿಸುತ್ತಿದ್ದಾರೆ.

ಓಂಕಾರ ಶೆಟ್ಟಿಯೂ ಉಡುತಡಿಯ ಪ್ರಸಿದ್ಧ ಶ್ರೀಮಂತ ವಣಿಕ. ರಾಜಬೀದಿಯಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಮನೆಯ ಮುಂದೆ ನಿಂತು ಮಹಾರಾಜನಿಗೆ ಕಾಣಿಕೆಯನ್ನು ತಮ್ಮ ಶಕ್ತ್ಯಾನುಸಾರ ಸಲ್ಲಿಸುತ್ತಾರೆ. ಅದರಂತೆ ಓಂಕಾರಶೆಟ್ಟಿಯೂ ಧನ, ಕನಕವನ್ನು ತಟ್ಟೆಯಲ್ಲಿ ಹಿಡಿದು ಸಲ್ಲಿಸಲು ಮನೆ ಮುಂದೆ ನಿಂತಿದ್ದಾನೆ. ಮಹಾರಾಜನ ಅಂಬಾರಿಯ ಮೆರವಣಿಯಗೆಯ ಜೊತೆ ಅನೇಕರೀತಿಯ ಕಲಾಪ್ರದರ್ಶನ, ವಾದ್ಯ, ನೃತ್ಯ, ಗಾಯನ,ಜನಪದರ ಕುಣಿತ ವಾದ್ಯಗಳು, ರೂಪಕಗಳು ಮೆರವಣಿಗೆಯಲ್ಲಿ ಸಾಗಿವೆ. ಇವುಗಳನ್ನು ನೋಡಲು ಊರಿನ ಜನರೆಲ್ಲ ಬೀದಿಯಲ್ಲಿ ನೆರೆದಿದ್ದಾರೆ. ರಾಜನನ್ನು ರಾಜನ ಪರಿವಾರದವರನ್ನು, ಮಂತ್ರಿಮಂಡಳದವರನ್ನು ಸಾಮಾನ್ಯರಿಗೆ ನೋಡುವುದೇ ಒಂದು ಶುಭ ಸಂದರ್ಭ, ಹಿಗ್ಗು, ಅವರ ಕೃಪೆಗೆ ಪಾತ್ರರಾದರಂತೂ ಜೀವನದಲ್ಲಿ ಎಲ್ಲವೂ ಸಿಕ್ಕಿಯೇಬಿಟ್ಟಿತು ಎಂಬ ಕೃತಾರ್ಥತೆ.

ಸರ್ವಾಲಂಕಾರ ಭೂಷಿತೆಯರಾದ ಗೆಳತಿಯರು ಮಹಾದೇವಿಯರ ಮನೆಗೆ ಓಡೋಡಿ ಬಂದಿದ್ದಾರೆ.ಮಹಾದೇವಿ ಮಹಾದೇವಿ ಕೂಗಿಕೊಂಡೇ ಬಂದಿದ್ದಾರೆ. ಮಹಾದೇವಿಯು ಪೂಜಾಮನೆಯಲ್ಲಿ ಪೂಜೆ, ಧ್ಯಾನದಲ್ಲಿ ನಿರತಳಾಗಿದ್ದಾಳೆ. ಏನಮ್ಮ ಮಹಾದೇವಿ ಇನ್ನೊಂದು ನಿಮಿಷಕ್ಕೆ ಮಹಾರಾಜರು ನಿಮ್ಮ ಮನೆಯ ಮುಂದಕ್ಕೆ ಬರುತ್ತಾರೆ. ನೀನು ಇನ್ನೂ ಅಲಂಕಾರ ಗೊಂಡಿಯೆ ಇಲ್ಲ. ನಿನಗೆ ಚೆನ್ನಮಲ್ಲಿಕಾರ್ಜುನ ಬಿಟ್ಟು ಇನ್ನೊಂದು ವಿಷಯವಿಲ್ಲ.

ಬಾರೆ ಮಹಾದೇವಿ ಮಹಾರಾಜರ ಉತ್ಸವದ ಅಂಬಾರಿ ನಿಮ್ಮ ಮನೆಯ ಮುಂಬಾಗಿಲಿಗೇ ಬಂದು ಬಿಟ್ಟಿತು ಎಂದು ಕರೆದರು. ಇಲ್ಲ ನಾನೊಲ್ಲೆ ಎಂದಳು ಮಹಾದೇವಿ. ಹೋಗಲಿ ಮನೆಯ ಉಪ್ಪರಿಗೆಯಿಂದ

ಅಕ್ಕಮಹಾದೇವಿಯವರು

ನೋಡುವಿಯಂತೆ ಬಾ ಎಂದು ಮಹಾದೇವಿಯರನ್ನು ಗೆಳತಿಯರು ಕೈಹಿಡಿದು ಎಳೆದುಕೊಂಡೇ ಹೋದರು. ಮಹಾದೇವಿಯರು ತಮ್ಮ ಮನೆಯ ಉಪ್ಪರಿಗೆಯ ಮೇಲೆ ಗೆಳತಿಯರೊಂದಿಗೆ ನಿಂತಿದ್ದಾರೆ. ಆನೆ ಅಂಬಾರಿಯಲ್ಲಿ ಮಹಾರಾಜ ಬರುತ್ತಿದ್ದಾನೆ. ರಥ, ಕುದುರೆಯಲ್ಲಿರಾಜನ ಪರಿವಾರವೂ ಇದೆ. ಅಲ್ಲಿ ನೋಡು ಆನೆ ಅಂಬಾರಿ ಎಂದು ಗೆಳತಿಯರು ತೋರಿಸುತ್ತಿದ್ದಾರೆ. ಅನೇಕ ವೇಷದವರು, ವಾದ್ಯಮೇಳದವರ ಜೊತೆಗೆ ಕುಣಿಯುತ್ತಿದ್ದಾರೆ. ವಿಭೂತಿ ಧಾರಣೆಯ ಜೊತೆಗೆ ಬಿಳಿಯ ಸೀರೆ ಉಟ್ಟ ಮಹಾದೇವಿಯರು ಎಲೆಗಳ ನಡುವೆ ಕೆಂದಾವರೆಯಂತೆ, ಕೊಕ್ಕರೆಗಳ ನಡುವೆ ಹಂಸದಂತೆ, ಪಕ್ಷಿಗಳ ನಡುವೆ ಮಯೂರದಂತೆ, ತರಳೆಯರ ನಡುವೆ ಗಿರಿಜೆಯಂತೆ, ಗಿರಿಗಳ ನಡುವೆ ಹಿಮಾಲಯದಂತೆ ಕಂಗೊಳಿಸುತ್ತಿದ್ದಾರೆ.

ರಾಜನೂ ಮಾರ್ಗಾಯಾಸದ ದಣಿವನ್ನು ನೀಗಿಕೊಳ್ಳುತ್ತ ಪರಿವಾರದವರನ್ನು ಗಮನಿಸುತ್ತ, ಪ್ರಜೆಗಳು ನೀಡುವ ಕಾಣಿಕೆಯನ್ನು, ವಂದನೆಯನ್ನು ಸ್ವೀಕರಿಸುತ್ತ ಸಾಗಿದ್ದಾನೆ. ಪ್ರತಿಯೊಬ್ಬ ಪ್ರತಿಷ್ಠಿತರ ಮನೆಯ ಮುಂದೆ ಕೆಲ ಕ್ಷಣಗಳ ಕಾಲ ರಾಜನಿಗೆ ಆರತಿ ಮಾಡಿ ವಂದಿಸಿ ಕಾಣಿಕೆ ಸಲ್ಲಿಸುತ್ತಾರೆ. ಪ್ರಜೆಗಳ ಪದ್ಧತಿಯಂತೆ ಓಂಕಾರ ಶೆಟ್ಟಿ ತಾನೂ ಒಬ್ಬ ಪ್ರಜೆಯಾಗಿ, ವಣಿಕನಾಗಿ ತನ್ನ ಕರ್ತವ್ಯವನ್ನು ಪಾಲಿಸಿದ್ದಾನೆ. ಆ ಕಾಲಕ್ಕೆ ಆರತಿ, ವಂದನೆ, ಕಾಣಿಕೆ ಸ್ವೀಕಾರಕ್ಕೆ ದೃಷ್ಟಿಯಿರಿಸಿದ ರಾಜನು ಕ್ಷಣಕಾಲ

ಒಮ್ಮೆ ಉಪ್ಪರಿಗೆಯ ಮೇಲೆಗೆಳತಿಯರ ಜೊತೆಗೆ ನಿಂತಿದ್ದ ಕಡೆಗೆ ದೃಷ್ಟಿ ಹರಿಸಿದ್ದಾನೆ. ಮಹಾದೇವಿಯರು ತಮ್ಮ ತಂದೆ,ತಾಯಿಗಳು ವಂದಿಸುತ್ತಿದ್ದ ದೃಶ್ಯ ನೋಡುತ್ತಿದ್ದಂತೆ

ರಾಜನ ನೋಟ ಮಹಾದೇವಿಯರ ಮೇಲೆ ಬಿತ್ತು. ಕ್ಷಣ ಕಾಲ ಅಂಬಾರಿ ನೋಡುತ್ತಿದ್ದ ಮಹಾದೇವಿಯರು ರಾಜನ ದೃಷ್ಟಿ ತಮ್ಮ ಕಡೆಯೇ ಇರುವುದನ್ನು ಗಮನಿಸಿದರು. ರಾಜನು ಮೋಹಪರವಶ ನಾದನು. ನೋಟ ತನ್ನತ್ತ ಇದೆಯೆಂದರಿತ ಮಹಾದೇವಿಯರು ಉಪ್ಪರಿಗೆಯ ಮೇಲಿನಿಂದ ಹಿಂದೆಸರಿದರು

ಮತ್ತೆ ಎಲ್ಲ ಕಡೆ ಕಣ್ಣಾಡಿಸುತ್ತಿದ್ದ ಕೌಶಿಕನ ದೃಷ್ಟಿ, ಗೆಳತಿಯರೊಂದಿಗೆ ಮನೆಯ ಮಹಡಿಯ ಮೇಲೆ ನಿಂತಿದ್ದ ಮಹಾದೇವಿಯ ಮೇಲೆ ಬಿತ್ತು. ಕಣ್ಣು ಕೋರೈಸಿದಂತಾಯಿತು! ಅವನ ನೋಟ ಮಹಾದೇವಿಯ ಮೇಲೇ ನೆಟ್ಟಿತು! ಕ್ಷಣ ಮಾತ್ರದಲ್ಲಿ ಮಹಾದೇವಿಯ ಚೆಲುವು ಕೌಶಿಕನ ಮೇಲೆ ಮಿಂಚಿನಂತೆ ದಾಳಿ ನಡೆಸಿತು. 'ತಾನು ರಾಜ, ಬೀದಿಯಲ್ಲಿ ಮೆರವಣಿಗೆ ಹೊರಟಿದ್ದೇನೆ, ಜನರೆಲ್ಲ ನೋಡುತ್ತಿದ್ದಾರೆ. ಹೀಗೆ ಒಂದು ಹೆಣ್ಣನ್ನು ದಿಟ್ಟಿಸಿ ನೋಡುವುದು ಅಸಭ್ಯತೆ' ಎಂಬ ಪರಿವೆಯೇ ಇಲ್ಲದೆ ಅವನು ಮಹಾದೇವಿಯನ್ನೇ ನೋಡತೊಡಗಿದ. ಅದರ ಅರಿವಾಗಿ ಮಹಾದೇವಿ ಕಸಿವಿಸಿಗೊಂಳ್ಳುತ್ತರೆ. ಗೆಳತಿಯರಿಗೂ ಅದು ಸರಿಬರಲಿಲ್ಲ.

ಮಹಾರಾಜನು ಮಹಾದೇವಿಯನ್ನು ಕಂಡು ಮೋಹಪರವಶನಾಗುತ್ತಾನೆ. ಅಲ್ಲದೆ ಇಂತಹ ಸೌಂದರ್ಯವತಿ ಸ್ತ್ರೀಯನ್ನು ಮದುವೆಯಾದರೆ ಮಾತ್ರ ತಾನು ರಾಜನಾದುದಕ್ಕೆ ಸಾರ್ಥಕ. ಇಂತಹ ಅಪರೂಪದ ಸ್ತ್ರೀರತ್ನ ತನ್ನ ರಾಜ್ಯದಲ್ಲಿರುವುದೇ ಆಶ್ಚರ್ಯ!

ಕೌಶಿಕ ತನ್ನಲ್ಲೇ ಅಂದುಕೊಂಡ ಎಂಥ ಅಪೂರ್ವ ಲಾವಣ್ಯವತಿ ಇಂಥ ಚೆಲುವೆಯನ್ನು ನಾನು ಕಂಡವನೇ ಅಲ್ಲ. ಬೆಳದಿಂಗಳನ್ನು ಎರಕ ಹೊಯ್ದು ಮಾಡಿದಂಥ ಇಂಥ ಸುಂದರ ಪುತ್ಥಳಿ ನನ್ನ ರಾಜ್ಯದಲ್ಲೇ ಇದೆಯೆಂದು ಅಚ್ಚರಿಯಾಗುತ್ತಿದೆ! ಇವಳೇನು ಈ ಮಣ್ಣಿನವಳೇ, ಅಥವಾ ಸ್ವರ್ಗದಿಂದ ಇಳಿದು ಬಂದವಳೇ! ಅಥವಾ ದೇವಲೋಕದ ಅಪ್ಸರೆ ವಿಹಾರಕ್ಕಾಗಿ ಭೂಮಿಗೆ ಬಂದಿರುವಳೇ! ಕಂಡಕೂಡಲೇ ಮೋಹವುಕ್ಕಿಸುವ ಇಂಥ ಸುಂದರಿಯನ್ನು ಕಂಡು ಕಣ್ಣುಗಳು ಧನ್ಯವಾದವು! ಜನ್ಮ ಸಾರ್ಥಕವಾಯಿತೆಂಬ ಭಾವನೆ ಬರುತ್ತಿದೆ.' ಮಹಾದೇವಿಗೆ ಗೆಳತಿಯರು ನೋಡು ರಾಜ ನಿನ್ನನ್ನೇ ನೋಡುತ್ತಿದ್ದಾನೆ" ಎಂದು ಮಹೇಶ್ವರಿ ಮಹಾದೇವಿಯನ್ನು ಮೆಲ್ಲಗೆ ತಿವಿದಳು. ಹೌದು ಮಹಾದೇವಿ ಉಮ ಹೇಳಿದಳು, ಎಂದೂ ಹೆಣ್ಣನ್ನೇ ನೋಡಿಲ್ಲದವನಂತೆ ನಿನ್ನನ್ನೇ ತಿನ್ನುವಂತೆ ನೋಡುತ್ತಿದ್ದಾನೆ."ಛೇ!" ಮಹಾದೇವಿಯ ಮುಖದಲ್ಲಿ ಅಸಹ್ಯ ಕಾಣಿಸಿಕೊಂಡಿತು. "ಲಜ್ಜೆಯಿಲ್ಲದ ನಾಚಿಕೆ ಇಲ್ಲದ ಅನಾಗರಿಕ. ಸ್ವಲ್ಪವೂ ಗಾಂಭೀರವಿಲ್ಲದ ಇವನೆಂಥ ರಾಜ! ಅದಕ್ಕೇ ನಾನು ಬರುವುದಿಲ್ಲ ವೆಂದು ಹೇಳಿದ್ದು. ರಾಜನಿಗೆ ಮೊದಲೆ ಮದುವೆ ಹಾಗಿದೆ ಮಕ್ಕಳಿದ್ದರೂ ಈ ಚಾಪಲ್ಯ" ಎಂದು ಗೌರಿ ಪಿಸುಗುಟ್ಟಿದಳು.

"ಮದುವೆಯದವರೂ ಹೀಗೇ ಮಾಡುತ್ತಾರೇನು? ಅವನ ಚಾಪಲ್ಯ ಅವನಿಗೇ ಇರಲಿ, ನಾನು ಹೊರಟೆ" ಎಂದು ಮಹಾದೇವಿ ಸರನೆ ತಿರುಗಿ ಮನೆಯೊಳಗೆ ಹೊರಟುಬಿಟ್ಟರು ಗೆಳತಿಯರು ಹಿಂಬಾಲಿಸಿದರು. ಮಹಾದೇವಿಯ ಮನೆಯ ಬಾಗಿಲತ್ತಲೇ ಕಣ್ಣು ಕೀಲಿಸಿದ್ದ ಕೌಶಿಕನನ್ನು ಮಂತ್ರಿ ಎಚ್ಚರಿಸದಿದ್ದರೆ, ಅವನು ದಿನವೆಲ್ಲಾ ಅಲ್ಲೇ ನಿಲ್ಲುತ್ತಿದ್ದನೇನೋ! ಅಂತೂ ಮೆರವಣಿಗೆ ಮುಂದೆ ಸಾಗಿತು. ಕೌಶಿಕ ಮತ್ತೆ ಮತ್ತೆ ಮಹಾದೇವಿಯ ಕಡೆ ಹಿಂದಿರುಗಿ ನೋಡುತ್ತಲೇ ಹೋದ. ಬಹಳ ಜನ ಗಮನಿಸದಿದ್ದರೂ ಗಮನಿಸಿದವರಿಗೆ ಕೌಶಿಕ ಮಹಾದೇವಿಯನ್ನು ಹಾಗೆ ನೋಡಿದ್ದು ಸಭ್ಯತೆಯಲ್ಲ ಎಂಬ ಭಾವನೆ ಬಂತು.

ಈ ರೀತಿಯಲ್ಲಿ ಕೌಶಿಕ ರಾಜನು ನೋಡಿದ ನೋಟವನ್ನುಕಂಡು ಅಲ್ಲಿಂದ ಬೇಗನೆ ಮನೆಯವಳಗೆ ಸೇರಿಕೊಂಡರು ಮಹಾದೇವಿಯವರಿಗೆ ಭಯವೆ ಆವರಿಸಿತ್ತು, ಅಸಮಾಧಾನದಿಂದಲೇ ತನ್ನ ಕೋಣೆಗೆ ಬಂದ ಮಹಾದೇವಿ ದೊಪ್ಪನೆ ಕುಳಿತರು. ಗೆಳತಿಯರೂ ಬಂದು ಅವಳ ಎದುರಿಗೆ ಕುಳಿತರು. "ಇಂಥ ಲಜ್ಜೆಗೆಟ್ಟ ವ್ಯಕ್ತಿ ನಮ್ಮ ರಾಜನೆಂದರೆ ನಾವೆಲ್ಲ ನಾಚಿಕೆ ಪಡಬೇಕು. ಲಂಪಟನಂತೆ ಎಲ್ಲರೆದುರಿಗೆ ಹಾಗೆ ನೋಡುವುದು ಸಭ್ಯತೆಯೇ?" ಎಂದಳು ಮಹಾದೇವಿ ಅದೇ ಅಸಮಾಧಾನದಿಂದ.ಮಹಾದೇವಿ, ಇಷ್ಟೊಂದು ಅಸಮಾಧಾನವೇಕೆ? ಈಗ ಅಂಥದ್ದೇನಾಯಿತು?" ಎಂದಳು ಭ್ರಮರಾಂಭೆ ಏನಾಯಿತೆಂದು ಕೇಳುತ್ತೀಯ? ಅವನು ಹೇಗೆ ನೋಡುತ್ತಿದ್ದನೆಂದು ನಿನಗೆ ಕಾಣಲಿಲ್ಲವೆ?" ಮಹಾದೇವಿ

ಸಿಡುಕಿದಳು.ನೋಡಿದರೆ ನೋಡಿಕೊಳ್ಳುತ್ತಾನೆ. ನೀನು ತುಂಬಾ ಸುಂದರವಾಗಿ ಇದ್ದಿಯಾ ಅದಕ್ಕೆ ಮೆಚ್ಚಿಗೆಯಿಂದ ನೋಡಿದರೆ, ಅದರಲ್ಲಿ ತಪ್ಪು ಹುಡುಕುವುದೇಕೆ?" ಎಂದಳು ಉಮಾ

ಅಷ್ಟು ಜನರ ಎದುರಿಗೆ ನಿನ್ನನ್ನೇ ನೋಡುವಂತೆ ಮಾಡಿದ ನಿನ್ನ ಸೌಂದರ್ಯದ್ದೇ ತಪ್ಪು" ಎಂದು ಮಹೇಶ್ವರಿ ನಕ್ಕಳು.“ಯಾವ ಸೌಂದರ್ಯ!" ಮಹಾದೇವಿ ಗಂಭೀರವಾಗಿ ಹೇಳಿದರು, "ಇದೆಲ್ಲ ಶವದ ಸಿಂಗಾರವಲ್ಲವೆ ಮಹೇಶ್ವರಿ? ಒಂದಲ್ಲ ಒಂದು ದಿನ ಜೀವ ಕಳೆದುಕೊಂಡು ಹೆಣವಾಗುವ ಈ ದೇಹದ ಸೌಂದರ್ಯ ಶಾಶ್ವತವೆ? ಅಥವಾ ಹೆಚ್ಚು ಕಾಲ ಬದುಕಿದ್ದರೆ ಮುದಿಯಾಗಿ, ದೇಹ ನಿತ್ರಾಣವಾಗಿ, ಕಣ್ಣು ಮಂಜಾಗಿ, ಹಲ್ಲು ಉದುರಿ ಹೋಗಿ ವಿಕಾರವಾಗುವ ಈ ದೇಹದ ನಶ್ವರ ಚೆಲುವಿನ ಭ್ರಮೆಯಲ್ಲಿ ಮುಳುಗುವುದು ಎಷ್ಟು ಹಾಸ್ಯಾಸ್ಪದ!" ಮಹಾದೇವಿಯ ಮಾತುಗಳಿಂದ ವಿಚಲಿತರಾದ ಗೆಳತಿಯರು ಮುಖ ಮುಖ ನೋಡಿಕೊಂಡರು. ಇತ್ತೀಚೆಗೆ ಬದಲಾದ ಮಹಾದೇವಿಯ ವರ್ತನೆಯ ಮುಂದುವರಿದ ಭಾಗವಾಗಿ ಇದು ಕಂಡಿತು.

"ಈ ವಯಸ್ಸಿಗೆ ನೀನು ಇಂಥ ಯೋಚನೆ ಮಾಡಬಾರದು. ಎಲ್ಲ ನಿನ್ನ ಹಾಗೇ ಯೋಚನೆ ಮಾಡುತ್ತಿದ್ದರೆ ಯಾರೂ ಮದುವೆಯನ್ನೇ ಆಗಬಾರದು" ಎಂದಳು ಮಹೇಶ್ವರಿ

"ಜೀವನದ ನಗ್ನ ಸತ್ಯಗಳನ್ನು ಅರ್ಥ ಮಾಡಿಕೊಳ್ಳಲು ಯಾವ ವಯಸ್ಸಾದರೇನು ಮಹೇಶ್ವರಿ? ಭಗವಂತನಿಂದ ದೂರ ಮಾಡಿ ಅಲ್ಪ ಆಮಿಷಗಳಲ್ಲಿ ಮುಳುಗಿಸಿ ಜೀವನವನ್ನು ವ್ಯರ್ಥಗೊಳಿಸುವ ಮಾಯಾಮೋಹಗಳನ್ನು ಗೆಲ್ಲಬೇಕು. ಅದನ್ನು ಅರ್ಥ ಮಾಡಿ ಕೊಳ್ಳಲು ಯಾವ ವಯಸ್ಸಾದರೇನು?"

ಮಹಾದೇವಿಯ ದೃಢವಾದ ಮಾತುಗಳನ್ನು ಕೇಳಿ, ಏನು ಉತ್ತರ ಕೊಡಬೇಕೆಂದು ತೋಚದೆ ಗೆಳತಿಯರು ಸುಮ್ಮನಾದರು. ಏಕೆಂದರೆ ಮಹಾದೇವಿ ಮಾತನಾಡುವ ವಿಷಯಗಳು ಅವರ ಅಳತೆಗೆ ಮೀರಿದ್ದವು. ಅವಳಷ್ಟು ಓದು ಬರಹ ಮಾಡಿದವರಲ್ಲ ದಿದ್ದರೂ, ಅವಳಂತೆ ಆಲೋಚಿಸುವ ಶಕ್ತಿಯೂ ಅವರಲ್ಲಿರಲಿಲ್ಲ.

“ಹೀಗೇ ಆದರೆ ನಮ್ಮ ಮಹಾದೇವಿ ಹೆಂಗಸರ ಒಂದು ಮಠ ಕಟ್ಟುತ್ತಾಳೇನೋ!" ಎಂದಳು ಉಮಾ ಇಬ್ಬರೂ ನಕ್ಕರು.

ರಾತ್ರಿಯಾಗಿದೆ. ಅರಮನೆಯ ಶಯ್ಯಾಗೃಹದಲ್ಲಿ ಕೌಶಿಕ ಚಡಪಡಿಸುತ್ತಾ ಅತ್ತಿತ್ತ ಅಡ್ಡಾಡುತ್ತ, ಮತ್ತೆ ಬಂದು ಕೂಡುತ್ತ, ಮತ್ತೆ ಎದ್ದು ವಾತಾಯನದ ಬಳಿ ನಿಲ್ಲುತ್ತ, ಮತ್ತೆ ಬಂದು ಪಲ್ಲಂಗದ ಮೇಲೆ ಕೂಡುತ್ತ ತೀರ ಅಶಾಂತಿಯಿಂದ ತಳಮಳಿಸುತ್ತಿದ್ದ. ಅವನ ಅಶಾಂತಿಗೆ ಕಾರಣವಾದವರು ಮಹಾದೇವಿ! ಕಂಡ ಕ್ಷಣದಿಂದ ಕೌಶಿಕ

ಮೋಹಾಂಧಕಾರದಲ್ಲಿ ದಾರಿ ತಪ್ಪಿದ್ದ. ಮಹಾದೇವಿಯಲ್ಲದೆ ಅವನಿಗೆ ಬೇರೆ ಏನೂ, ಯಾರೂ ಕಾಣುತ್ತಿರಲಿಲ್ಲ. ಅವನು ಅದು ಹೇಗೆ ವೈಹಾಳಿಯನ್ನು ಮುಗಿಸಿದನೋ, ಹೇಗೆ ಅರಮನೆಗೆ ಬಂದನೋ, ಬಂದ ಕ್ಷಣದಿಂದಲೂ ಅವನು ಮಹಾದೇವಿಯನ್ನು ಕಂಡ ದೃಶ್ಯವನ್ನೇ ಮತ್ತೆ ಮತ್ತೆ ಕಣ್ಣ ಮುಂದೆ ತಂದುಕೊಂಡು ನಿಟ್ಟುಸಿರು ಬಿಡುತ್ತಿದ್ದ.

'ಛೇ, ಹೀಗೇ ಆದರೆ ರಾತ್ರಿಯೆಲ್ಲ ನಿದ್ರೆಯೇ ಬರುವುದಿಲ್ಲವೇನೋ! ಈ ದಿನ ಆಹಾರವೂ ರುಚಿಸಲಿಲ್ಲ. ಹಸಿವಿನ ಸುಳಿವೇ ಇಲ್ಲ. ಆದರೆ ಆ ಚೆಲುವೆಯನ್ನು ನೋಡು ತ್ತಲೇ ಇರಬೇಕೆಂಬ ಕಣ್ಣಿನ ಹಸಿವು ಅಗಾಧವಾಗಿದೆ! ಆ ಚೆಲುವೆಯನ್ನು ಕಂಡ ನನ್ನ ಮನಸ್ಸು ಅಲ್ಲೋಲ ಕಲ್ಲೋಲವಾಯಿತಲ್ಲ!

'ಅವಳಾರು? ಯಾರ ಮಗಳು? ಹೆಸರೇನು? ಅವಳಿಗೆ ಇನ್ನೂ ಮದುವೆ ಯಾಗಿಲ್ಲ ತಾನೆ? ಇರಲಾರದು. ಆಗಿಲ್ಲದಿರಲಿ ಎಂದು ಹಾರೈಸುತ್ತೇನೆ. ಜಿಂಕೆಯಂತೆ ಚಂಚಲವಾದ ಅವಳ ಕಣ್ಣುಗಳೇ ಸಾಕು, ಮನಸ್ಸನ್ನು ಮೋಹಗೊಳಿಸಲು! ಇಲ್ಲವಾದರೆ ನನ್ನಂಥವನೂ ಒಂದೇ ಕ್ಷಣದಲ್ಲಿ ಅವಳ ಮೋಹದ ಬಲೆಯಲ್ಲಿ ಬೀಳುತ್ತಿರಲಿಲ್ಲ. ಸೃಷ್ಟಿಕರ್ತ ಅವಳನ್ನು ವಿಶೇಷ ಗಮನಹರಿಸಿ ಸೃಷ್ಟಿ ಮಾಡಿರಬೇಕು.

'ಒಮ್ಮೆ ಕಂಡ ಮಾತ್ರಕ್ಕೇ ನನ್ನನ್ನು ವಿಚಲಿತಗೊಳಿಸಿದ ಅವಳನ್ನು ಪಡೆಯಬೇಕೆಂಬ ಆಸೆ ಪ್ರಬಲವಾಗುತ್ತಿದೆ. ಅವಳು ನನಗೋಸ್ಕರವೇ ಸೃಷ್ಟಿಯಾಗಿರಬೇಕು. ಹೌದು, ಅವಳನ್ನು ಪಡೆಯಲೇಬೇಕು. ಅದರಲ್ಲಿ ತಪ್ಪೇನು? ಅಮೂಲ್ಯವಾದ ಎಲ್ಲ ವಸ್ತುಗಳ ಮೇಲೂ ರಾಜನಾದವನಿಗೆ ಅಧಿಕಾರವಿದೆ. ಅಂದಮೇಲೆ ನನ್ನ ರಾಜ್ಯದ ಪ್ರಜೆಯೇ ಆಗಿರುವ ಅವಳ ಮೇಲೆ ನನ್ನ ಅಧಿಕಾರವಿದೆಯೆಂದೇ ಅರ್ಥ. ರಾಜನೇ ಬಯಸಿದನೆಂದು ತಿಳಿದರೆ ಅವಳು ಸಂತೋಷದಿಂದ ಕುಣಿಯುತ್ತ ಬಂದಾಳು! ಏನೇ ಆದರೂ ಅವಳನ್ನು ಪಡೆಯದೆ ಈ ಜನ್ಮ ವ್ಯರ್ಥ. ಅವಳು ನನ್ನವಳಾಗುವವರೆಗೂ ನನಗೆ ನೆಮ್ಮದಿಯಿಲ್ಲ. ಆಹಾರ ಬೇಕಿಲ್ಲ, ನಿದ್ರೆ ಬೇಕಿಲ್ಲ, ಬೇರೆ ಯಾವುದೂ ಬೇಕಾಗಿಲ್ಲ. ಈ ಮಂತ್ರಿ ಎಷ್ಟು ತಡ ಮಾಡುತ್ತಿದ್ದಾರೆ? ನನ್ನ ಆತುರ ಅವರಿಗೆ ಹೇಗೆ ಅರ್ಥವಾಗಬೇಕು?' ಎಂದು ಕೊಳ್ಳುತ್ತಿರುವಾಗಲೇ ಮಂತ್ರಿ

ಹೇ ಚೆನ್ನಮಲ್ಲಿಕಾರ್ಜುನನೆ, ಪರಮಾತ್ಮ ಎಂದು ಹೀಗೆ ವಚನ ಹಾಡುತ್ತರೆ.

ನೋಡೆನೆಂಬವರ ನೋಡಿಸುವೆ, ನುಡಿಯೆನೆಂಬವರ ನುಡಿಯಿಸುವೆ, ಒಲ್ಲೆನೆಂಬವರನೊಲಿಸುವೆ, ಒಲಿದೆನೆಂಬವರ ತೊಲಗಿಸುವೆ ನೋಡಯ್ಯಾ. ಚೆನ್ನಮಲ್ಲಿಕಾರ್ಜುನಯ್ಯಾ, ನೀನಲ್ಲದನ್ಯರ ಮುಖದ ನೋಡೆನೆಂದಡೆ ನೋಡುವಂತೆ ಮಾಡಿದೆಯಲ್ಲಾ ಲಿಂಗವೆ?

ಜೈನಧರ್ಮದ ಕೌಶಿಕನಿಗೆ, ಹೇಗಾದರೂ ಇವಳನ್ನು ವರಿಸಿ - ಲಗ್ನವಾಗಬೇಕೆಂದು ನಿರ್ಧರಿಸುತ್ತಾನೆ. ಮೋಹ ತಡೆಯಲಾರದೆ ತನ್ನ ಮಂತ್ರಿಯಾದ ವಸಂತನಿಗೆ ಹೇಳಿ ಮಹಾದೇವಿಯ ತಂದೆ ತಾಯಿಯರನ್ನು ಕರೆತರಲು ಕಳುಹಿಸುತ್ತಾನೆ.

ಮಹಾದೇವಿಯ ಗೆಳತಿ ಹೀಗೆ ಹೇಳುತ್ತಾ"ಆದರೆ.... ಮೊದಲೆ ರಾಜ, ಮೇಲಾಗಿ ಯುವಕ. ಹೇಳುವವರು, ಕೇಳುವವರು ಯಾರೂ ಇಲ್ಲ, ಸುಲಭವಾಗಿ ತನ್ನ ನಿರ್ಧಾರವನ್ನು ಬಿಡಲಾರ. ನಿನ್ನ ತಂದೆತಾಯಿ ಗಳನ್ನು ಹಿಂಸಿಸುತ್ತಾನೋ ಏನೋ. " ವ್ಯಥೆಯೇ ನನ್ನನ್ನು ದುಃಖದಿಂದ ಅಲುಗಿಸುತ್ತಿದೆ, ಗೆಳತಿ. ನನಗಾಗಿ “ಅದೇ ನನ್ನ ತಂದೆತಾಯಿಗಳು ಏನೆಲ್ಲ ಅನುಭವಿಸಬೇಕಾಗಿದೆಯೋ. ಇದರಿಂದ ಅವರನ್ನು ಹೇಗೆ ಪಾರುಮಾಡಲಿ ಎಂಬುದೇ ನನ್ನ ಯೋಚನೆ. ನನಗೆ ಬರುವಂತಹ ಸಂಕಟಗಳನ್ನು ನಾನು ಎದುರಿಸಬಲ್ಲೆ; ನನಗಾಗಿ ಅವರು ಸಂಕಟಪಡುವುದನ್ನು ನಾನು ನೋಡಲಾರೆ......ಆದರೆ ನಾನೇನನ್ನು ತಾನೇ ಮಾಡುವುದಕ್ಕೆ ಸಾಧ್ಯ? ಅದನ್ನೇ ಯೋಚಿಸುತ್ತಿದ್ದೇನೆ. ಗುರುಗಳು ಏನು ಹೇಳುತ್ತಾರೋ ಎಂದು ಮನಸ್ಸು ಹಾತೊರೆಯುತ್ತಿದೆ.

ಮಹಾದೇವಿ ಮಠದ ಕಡೆಗೆ ಹೋಗಿಬರುತ್ತೇನೆ ಅಮ್ಮ. ಮಹಾದೇವಿ ಮಠವನ್ನು ತಲುಪಿದಾಗ ಗುರುಗಳು ಅದೇ ತಾನೇ ಪೂಜೆಯನ್ನು ಮುಗಿಸಿ ತಪೋವನದ ತೋಟದಲ್ಲಿ ಹೂವಿನ ಗಿಡಗಳೊಡನೆ ಮಾತನಾಡುತ್ತಿದ್ದರು.

ಮಹಾದೇವಿಯನ್ನು ಕಂಡು: "ಸಾಮಾನ್ಯವಾಗಿ ಇಷ್ಟು ಹೊತ್ತಿನಲ್ಲಿ ಮಹಾದೇವಿಯನ್ನು ಅವರು ನಿರೀಕ್ಷಿಸುತ್ತಿರಲಿಲ್ಲ. ಮಹಾದೇವಿ ಬಳಿಗೆ ಬಂದರು. ಸದಾ ಪ್ರಶಾಂತವಾಗಿ ಜಗಜ್ಜನನಿಯ ಮಂದಹಾಸವೆಂಬಂತೆ ಮಿನುಗುತ್ತಿದ್ದಮಹಾದೇವಿಯ ಮುಖದಲ್ಲಿ ಇಂದು ಉದ್ವೇಗ, ಕಾತರತೆ, ಅಶಾಂತಿ, ತಳಮಳಗಳ ತಾಂಡವವನ್ನು ಕಂಡ ಗುರುಲಿಂಗರು ಚಕಿತರಾದರು. "ಇದೇನು ಮಗಳೇ

ಏಕೆ ಹೀಗಿದ್ದೀಯ? ಏನು ಸಮಾಚಾರ? ಕುಳಿತುಕೋ"

ಇಬ್ಬರೂ ಕುಳಿತುಕೊಂಡರು. ನೆನ್ನೆಯ ಉತ್ಸವ, ರಾಜನ ನೋಟ, ಅದರ ಫಲವಾಗಿ ಇಂದು ಬಂದ ರಾಜಗೆಳೆಯನ ರಾಯಭಾರ, ಅದಕ್ಕೆ ತಂದೆಯ ಉತ್ತರ, ಎಲ್ಲವನ್ನೂ ಮಹಾದೇವಿ ಸಂಕ್ಷಿಪ್ತವಾಗಿ ಹೇಳಿದರು ಮತ್ತು ಕೊನೆಯಲ್ಲಿ: "ಇದು ನನ್ನ ವಿಷಮಪರೀಕ್ಷೆಯ ಕಾಲವೆಂದೇ ತೋರುತ್ತಿದೆ, ಗುರುಗಳೇ. ಈಗ ನಾನೇನು ಮಾಡಬೇಕೆಂಬುದೇ ತೋಚದಂತಾಗಿದೆ. ರಾಜ ಸುಮ್ಮನೆ ಬಿಡಲಾರ. ನನ್ನ ತಂದೆತಾಯಿಗಳು ಎಂತಹ ವಿಪತ್ತನ್ನು ಎದುರಿಸಬೇಕಾಗಿದೆಯೋ" ಎಂದರು. ಗುರುಲಿಂಗರು ಕೇಳುತ್ತಾ ಕೇಳುತ್ತಾ ಗಂಭೀರರಾದರು. ಅವರ ಮನಸ್ಸು ಅಂತರ್ಮುಖವಾಯಿತು. ಕಣ್ಣು ಮುಚ್ಚಿದರು. ಕ್ಷಣಕಾಲ

ಮೌನವಾವರಿಸಿತು. ನಿಧಾನವಾಗಿ ಕಣ್ಣೆರೆದು ಹೇಳಿದರು: "ಹೌದು ಮಗಳೇ, ಇದು ನಿನ್ನ ವಿಷಮ ಪರೀಕ್ಷೆಯ ಕಾಲ. ಕ್ಷಣಕಾಲ ಮೌನ, ಮತ್ತೆ ಮಹಾದೇವಿಯೇ ಹೇಳಿದರು: "ನನ್ನ ರೂಪವೇ ನನಗೆ ಶತ್ರುವಾಗಿ ಕಾಡುತ್ತಿದೆಯಲ್ಲ, ಗುರುಗಳೇ. "

"ನಿನ್ನನ್ನು ಅದು ಕಾಡುತ್ತಿದೆ, ನಿಜ. ಆದರೆ ಅದು ನಿನ್ನ ಶತ್ರುವೋ, ಮಿತ್ರನೋ ಹೇಗೆ ಹೇಳಬಲ್ಲೆ, ತಾಯಿ? ದೈವಕೃಪೆ, ದುಃಖದ ರೂಪದಲ್ಲಿಯೂ ಬರಬಹುದೆಂದು ನಾನು ಹೇಳುತ್ತಿದ್ದುದನ್ನು ನೆನೆಸಿಕೋ. "ದೂರಾನ್ವಯವಾದ ಧ್ವನಿಯೊಂದು ಇದ್ದಂತೆ ತೋರಿತು ಗುರುಗಳ ಮಾತಿನಲ್ಲಿ. "ಅಂದರೆ.... ದೈವಕೃಪೆಯೇ ಈ ರೀತಿಯಲ್ಲಿ ಬಂದಿದೆಯೆಂದು ಭಾವಿಸಿಕೊಳ್ಳಬೇಕೆನ್ನುತ್ತೀರಾ ಗುರುಗಳೇ?" ಅಚ್ಚರಿಯಿಂದ ಕೇಳಿದರು. "ಅದನ್ನು ನಿರ್ಧರವಾಗಿ ಹೇಗೆ ಹೇಳಲಮ್ಮ? ಆದರೆ ಬಂದುದೆಲ್ಲವನ್ನೂ ಹಾಗೆ ಭಾವಿಸಿ ಎದುರಿಸುವುದೇ ಜೀವನದ ರಹಸ್ಯವೆಂಬುದಂತೂ ಸತ್ಯವಾದ ಮಾತು." "ಇದನ್ನು ನಾನು ಹೇಗೆ ಎದುರಿಸಬೇಕು, ಗುರುಗಳೇ. ನನಗಂತೂ ಏನೂ ತೋಚದಂತಾಗಿದೆ. ಮತ್ತೆ ಬರುತ್ತೇನೆಂದು ಹೇಳಿ ಹೋಗಿದ್ದಾನೆ ರಾಜನ ಗೆಳೆಯ. ಬಹುಶಃ ಇಂದೇ ಬಂದರೂ ಬರಬಹುದು. ಈಗಲೇನೋ ಅವನಿಗೆ ಛೀಮಾರಿಹಾಗಿ ಕಳುಹಿಸಿದ್ದೇವೆ. ಆದರೆ ಅದು ಅಷ್ಟರಲ್ಲಿಯೇ ಪರವಸಾನವಾಗಲಾರದು. ಅದರ ಫಲವನ್ನು ನನ್ನ ತಂದೆತಾಯಿಗಳು ಅನುಭವಿಸಬೇಕಾದೀತೆಂಬ ಸ್ಮರಣೆ ಬಂದಾಗಲಂತೂ ನಾನು ಮುಂಗಾಣದವಳಾಗುತ್ತೇನೆ. ಈ ಧರ್ಮಸಂಕಟದಿಂದ ನನ್ನನ್ನು ಪಾರುಮಾಡಿ, ಗುರುಗಳೇ"ದೈನ್ಯತೆಯೇ ಮುರ್ತಿವೆತ್ತಂತಿತ್ತು ಮಹಾದೇವಿಯ ಸ್ಥಿತಿ. ಇತ್ತ ವಸತಂಕ ಶೆಟ್ಟರೇ .......ನಿಮ್ಮ ಮಗಳ ಹಾಗೆ ನೀವೂ ದುಡುಕಬೇಡಿ. ನಮ್ಮ ರಾಜರು ಪೂರ್ವಾಪರಗಳನ್ನು ಆಲೋಚಿಸಿಯೇ ಈ ನಿರ್ಧಾರಕ್ಕೆ ಬಂದಿದ್ದಾರೆ. ಮಹಾದೇವಿ ಅವಿವಾಹಿತಳೆಂಬುದನ್ನೂ, ತಮ್ಮ ಮದುವೆಗೆ ಯೋಗ್ಯಳೆಂಬುದನ್ನೂ ಅರಿತೇ ಇದಕ್ಕೆ ಮನಸ್ಸು ಮಾಡಿದ್ದಾರೆ. ಇದುವರೆಗೆ ಮಹಾದೇವಿ ಅವಿವಾಹಿತರಾಗಿ ಉಳಿದಿರುವುದೂ ಒಂದು ದೈವಸಂಕೇತವೆಂದೇ ಭಾವಿಸಿಕೊಳ್ಳಿರಿ. ನಮ್ಮ ರಾಜರಿಗಾಗಿಯೇ ಮೀಸಲಾದವಳು ನಿಮ್ಮ ಮಗಳು. " ಓಂಕಾರನಿಗೆ ತಡೆಯಲಾಗಲಿಲ್ಲ:

"ಸಾಕು ಬಾಯಿ ಮುಚ್ಚಿರಿ. ಬಂದ ಅತಿಥಿಗಳೆಂದು ಗೌರವವನ್ನು ಕೊಟ್ಟರೆ ನಿಮ್ಮ ಮಾತು ಹದ್ದನ್ನು ಮೀರುತ್ತಿದೆ. "ಧ್ವನಿ ಗಡುಸಾಗಿತ್ತು. ವಸಂತಕನಿಗೂ ಸ್ವಲ್ಪ ಸಿಟ್ಟು ಬಂದಂತೆ ತೋರಿತು. ಅದಕ್ಕೆ ಸಂವಾದಿಯಾದ “ಧ್ವನಿಯಲ್ಲಿಯೇ ಆತನು ಹೇಳಿದ:

"ಇಲ್ಲಿ ಕೇಳಿ, ಶೆಟ್ಟರೇ......ನಾನು ಬಂದುದು ನಿಮ್ಮ ಮನೆಯ ಆತಿಥ್ಯವನ್ನು ಸ್ವೀಕರಿಸಲಿಕ್ಕಲ್ಲ. ರಾಜನ ಪ್ರತಿನಿಧಿಯಾಗಿ ನಿಮ್ಮ ಬಳಿಗೆ ಬಂದಿದ್ದೇನೆ. ಒಳ್ಳೆಯ ಮಾತಿನಿಂದ ನಿಮ್ಮ ಮಗಳನ್ನು ರಾಜರಿಗೆ ಕೊಡಲು ಒಪ್ಪಿದಿದರೆ

"ರಾಜರು ನಿಮಗೆ ಬುದ್ದಿ ಕಲಿಸುತ್ತಾರೆ!"ಮಾತನ್ನು ಮುಗಿಸಿದ ವಸಂತಕ. ಈ ಮಾತನ್ನು ಕೇಳಿ ವ್ಯಂಗ್ಯ ತಿರಸ್ಕಾರದಿಂದ ಹೇಳಿದ ಓಂಕಾರ:

"ಕಣ್ಣಿಗೆ ಬಿದ್ದ ಹೆಣ್ಣುಗಳೆಲ್ಲಾ ಬೇಕೆಂಬ ರಾಜ, ಅದಕ್ಕೆ ಮಧ್ಯಸ್ತಿಕೆ ವಹಿಸಿ ಹೊರಡುವ ನಿನ್ನಂತಹ ಗೆಳೆಯ, ಇವರಿಂದ ನಾನು ಬುದ್ದಿ ಕಲಿಯಬೇಕಾಗಿಲ್ಲ. ನಿನಗೆ ಬುಧ್ದಿಯೇನಾದರೂ ಇದ್ದರೆ ನಿನ್ನ ರಾಜನಿಗೆ ಹೇಳು ಹೋಗು. "

ವಸಂತಕನಿಗೆ ಮುಖದ ಮೇಲೆ ಹೊಡೆದಂತಾಯಿತು. ತಾನು ದುಡುಕಿದುದು ಒಳಿತಾಗಲಿಲ್ಲವೆಂದು ಅನ್ನಿಸಿತು. ಆದರೂ ಆಡಿದ ಮಾತಿನಿಂದ ಹಿಂದೆ ಹೋಗಲು ಇಚ್ಚಿಸದೆ ಮತ್ತೆ ಹೇಳಿದ:

"ನೋಡಿ, ಚೆನ್ನಾಗಿ ಆಲೋಚಿಸಿರಿ. ರಾಜನ ವೈರತ್ವವನ್ನು ಕಟ್ಟಿಕೊಳ್ಳುತ್ತಿದ್ದೀರಿ."

ಸೈನಿಕರೆ ಇವರನ್ನ ಬಂದಿಸಿರಿ ಎಂದು ಹೇಳಿದನು ಮಹಾದೇವಿಯ ತಂದೆ ತಾಯಿಯರನ್ನು ಬಂಧಿಸಿ ಅರಮನೆಗೆ ಕರೆತಂದರು. ಅವರನ್ನುಒಡೆಯಲು ಪ್ರಾರಂಭಿಸಿದರು. ಹಿಂಸೆ ಕೊಟ್ಟರು. ಇತ್ತ ಮಹಾದೇವಿಯ ಗೆಳತಿಯರು, ಗುರುಗಳ ಮಠದಲ್ಲಿ ಇದ್ದರು ಮಹಾದೇವಿಗೆ, ಎಲ್ಲಾ ವಿಷಯ ತಿಳಿಸಿದರು. ಮಹಾದೇವಿಗೆ ದಿಕ್ಕುತೊರದಾಗಿ ಒಡಿ ಒಡಿ ಬಂದರು ಮನೆಗೆ, ರಾಜಸೈನಿಕರು ಮಹಾದೇವಿಯ ಗುರುಗಳನ್ನು ಬಂದಿಸಿ. ಮಹಾದೇವಿ ಇದ್ದ ಮನೆಗೆ. ಕರೆತಂದರು. ನೀನು ಮದುವೆಗೆ

ಒಪ್ಪದಿದ್ದರೆ, ನಿನ್ನ ತಂದೆ ತಾಯಿ, ಗುರುಗಳನ್ನು ಸಾಯಿಸಿಬಿಡುತ್ತೇವೆ, ಎಂದು ಹೇಳಿದ ಮಂತ್ರಿ ವಸತಂಕ.

'ಕೌಶಿಕನನ್ನು ಹೇಗೆ ಎದುರಿಸುವುದು? ಮದುವೆಯಾಗದ ನಾನು ಅವನ ಅರಮನೆಯಲ್ಲಿರುವುದು ಸಾಧ್ಯವೇ? ನನ್ನ ನಿಯಮಗಳಿಗೆ ಅವನು ಒಪ್ಪಬಹುದೇ? ಒಪ್ಪಿದರೆ ಮದುವೆಯಾಗುವುದೇ ಆತನನ್ನು?' ಎಂದು. ಮಹಾದೇವಿಗೆ ಆಲೋಚನಾಸರಣಿ ಹರಿಯುವುದು

'ಛೇ......ನನ್ನ ನಿಯಮಗಳಿಗೆ ಅವನು ಒಪ್ಪುವುದಾದರೆ ಮದುವೆಯ ಅವಶ್ಯಕತೆಯೇ ಇಲ್ಲ. ಅಂತಹವು ನನ್ನ ನಿಯಮಗಳು. ಆದರೆ ಭಾವಾವೇಶದ ಆವೇಗದಲ್ಲಿ ಅವುಗಳನ್ನು ಅಷ್ಟಾಗಿ ವಿಚಾರಿಸದೆ, ಒಪ್ಪಿಗೆ ಕೊಡುವ ಸಂಭವವುಂಟು. ಆದರೆ ಮಾತುಕೊಟ್ಟನಂತರ ಅವುಗಳನ್ನು ಕೊನೆಯವರೆಗೂ ಉಳಿಸಿಕೊಳ್ಳುವನೇ? ಆದರೆ ದೈಹಿಕ ಸುಖವನ್ನು ಬಯಸುವುದನ್ನೇ ಬಿಡುವನೇ? ಅದು ಹೇಗೆ ಸಾಧ್ಯ? ದೈಹಿಕ ಸುಖಕ್ಕಾಗಿಯೇ ಅಲ್ಲವೇ ಆತ ನನ್ನನ್ನು ಬಯಸುತ್ತಿರುವುದು?

ಹಾಗಿದ್ದರೂ ಅವನ ಅರಮನೆಗೆ ಹೋಗಿ ಅದಕ್ಕೆ ಒಳಗಾಗದೆ ಇರಬಲ್ಲೆನೇ? ಯೋಚಿಸುತ್ತಾ ಹೋದಂತೆ ಯೋಚನೆಯ ದಿಕ್ಕು ಕೊನೆಯನ್ನು ಮುಟ್ಟಿ ಮುಂದೆ ಹೋಗಲಾರದೆ ನಿಲ್ಲುತ್ತಿತ್ತು.

'ಹಾಗಾದರೆ ಅರಮನೆಗೆ ಹೋಗುವುದು ಬೇಡವೇ?'ಎಂದು ಹೊರಟಲ್ಲಿಗೆ ಮತ್ತೆ ಬರುತ್ತಿತ್ತು. ಕೊನೆಗೆ ಒಂದು ನಿರ್ಧಾರಕ್ಕೆ ಬಂದದರು. 'ಯೋಚಿಸಿದಷ್ಟೂ ಸಮಸ್ಯೆಗಳೇ ಹೆಚ್ಚು. ಆಲೋಚನೆಯಿಂದ ಬಿಡಿಸಲಾಗದ ಸಮಸ್ಯೆಯಿದು. ಎದುರಿಸಿ ಮೆಟ್ಟಿಮೇಲೇರಿಯೇ ಬಿಡಿಸಿಕೊಳ್ಳಬೇಕಾದುದು. ಆದುದರಿಂದ ಈಗಂತೂ ಅರಮನೆಗೆ ಹೋಗುತ್ತೇನೆ. ಅಲ್ಲಿಯೂ ಬಹುಕಾಲ ಇರಲಾರನೆಂಬಂತೆ ತೋರುತ್ತದೆ. ಮುಂದೆ ನನ್ನ ಪತಿ ಚೆನ್ನಮಲ್ಲಿ ಕಾರ್ಜುನ ಹೇಗೆ ನಡೆಸುತ್ತಾನೋ ಹಾಗೆ ನಡೆಯುತ್ತೇನೆ. ನಾನು ಅನಾಥೆಯಲ್ಲ; ನನ್ನ ಪತಿ, ಬಳಿಯಲ್ಲಿಯೇ ಇರುವಾಗ ನನಗಾರ ಹೆದರಿಕೆ?'

ರಾಜಾಜ್ಞೆಯನ್ನು ಶಿರಬಾಗಿ ಮಹಾದೇವಿ ಮಂತ್ರಿ ವಸಂತನನ್ನು ಕುರಿತು ನಿಮ್ಮ ರಾಜ ನನ್ನ ಷರತ್ತುಗಳಿಗೆ ಒಪ್ಪುವುದಾದರೆ ಮುಂದೆ ನನ್ನ ಹಾಗೂ ರಾಜನ ಮದುವೆಯ ವಿಚಾರವನ್ನು ಆಲೋಚಿಸೋಣ ಎಂದು ತನ್ನ ಮದುವೆಯ ಹೊಣೆಯನ್ನು ತಾನೇ ತೆಗೆದುಕೊಳ್ಳುತ್ತಾರೆ. ತಂದೆ ತಾಯಿಗಳಿಗೆ ಮನದಲ್ಲಿ ನಮಸ್ಕರಿಸಿ, ಧೈರ್ಯತುಂಬಿ, 'ನನ್ನನ್ನು ನನ್ನ ದೇವರು ಚೆನ್ನಮಲ್ಲಿಕಾರ್ಜುನನೇ ಕಾಯುತ್ತಾನೆ. ' ಎಂದು ಮನದಲ್ಲಿ ನೆನದು. ಮಂತ್ರಿಯೊಡನೆ ಅರಮನೆಗೆ ತೆರಳುತ್ತಾರೆ. ತನ್ನ ಷರತ್ತುಗಳನ್ನು ನೆರವೇರಿಸಲು ಒಪ್ಪುವುದಾದರೆ ಮದುವೆಯ ವಿಚಾರವನ್ನು ಚರ್ಚಿಸಬಹುದೆಂದು ತಿಳಿಸುತ್ತಾರೆ ರಾಜ ಕೌಶಿಕನಿಗೆ ಸಿಟ್ಟು ನೆತ್ತಿಗೇರುತ್ತದೆ. ಕೇವಲ ಒಂದು ಹೆಣ್ಣು, ಆಳುವ ಅರಸನಾದ ತನಗೆ ಷರತ್ತುಗಳನ್ನು ಹಾಕುವುದೇ? ಇದು ಎಂತಹ ನ್ಯಾಯವೆಂದು ಸಿಡಿಮಿಡಿಗೊಳ್ಳುವನು. ಆದರೆ ಮಹಾದೇವಿಯ ಸೌಂದರ್ಯದ ಮುಂದೆ ಅವನ ಕೋಪವೆಲ್ಲ ಕರಗಿಹೋಗಿ ಅವರ, ಷರತ್ತುಗಳನ್ನು ಒಪ್ಪಿಕೊಳ್ಳಲು ಸಿದ್ದನಾಗುವನು. ಮಹಾದೇವಿಯನ್ನು ಕುರಿತು 'ನಾನು, ರಾಜ, ನಾನು ಮನಸ್ಸು ಮಾಡಿದ ಮೇಲೆ ಬದಲಾಯಿಸುವುದಿಲ್ಲ. ಹೇಳು ನಿನ್ನ ಷರತ್ತುಗಳಾವುವು?' ಎಂದು ಮಹಾದೇವಿಯನ್ನು ಪ್ರಶ್ನಿಸುತ್ತಾನೆ. ಆಗ ಮಹಾದೇವಿ 'ರಾಜನೇ, ನಾನು ನಿನ್ನನ್ನು ಮದುವೆಯಾಗಬೇಕಾದರೆ

ನಾನು ನಾಲ್ಕು ವಾರಗಳ ಕಾಲ ವ್ರತ ನನ್ನ ನಿತ್ಯ ಇಷ್ಟಲಿಂಗ ಪೂಜೆ ಹಾಗೂ ಧ್ಯಾನ ಮಾಡಲು ಅಡ್ಡಿ ಮಾಡದೆ ಅದಕ್ಕೆ ಅನುಕೂಲ ಮಾಡಿಕೊಡಬೇಕು ಮತ್ತು ಪ್ರತಿನಿತ್ಯ ಪೂಜೆಗೆ ಬರುವ ಜಂಗಮರಿಗೆ ದಾಸೋಹ ಮಾಡಲು ವ್ಯವಸ್ಥೆ ಮಾಡಬೇಕು. ಅಲ್ಲದೆ ಇನ್ನೊಂದು ಷರತ್ತನ್ನು ನಂತರ ತಿಳಿಸುವೆನು. ನೀನು ಯಾವ ಕಾರಣಕ್ಕೂ ನನ್ನನ್ನು ಬಲವಂತವಾಗಿ ನನ್ನ ಪೂಜಾ ಸಮಯದಲ್ಲಿ ಕಾಣಲು ಬರಬಾರದು. ನಿನ್ನ ಮನದಿಚ್ಛೆಯಂತೆ ನನ್ನನ್ನು ಬಲವಂತಪಡಿಸಬಾರದು. ಇದಕ್ಕೆ ಒಪ್ಪಿದರೆ ನಾನು ನಿನ್ನ ಅರಮನೆಯಲ್ಲಿಯೇ ಪ್ರತ್ಯೇಕವಾಗಿ ವಾಸಿಸಿ, ನನ್ನ ನಿತ್ಯ ಪೂಜಾವಿಧಿಗಳನ್ನು ಪೂರೈಸುತ್ತೇನೆ. ನನ್ನ ಈ ಷರತ್ತುಗಳನ್ನು ಒಪ್ಪುವುದಾದರೆ ಮುಂದೆ ಮದುವೆ ಒಪ್ಪಂದಕ್ಕೆ ಚಿಂತಿಸೋಣ' ಎಂದರು ಮಹಾದೇವಿ. ಈ ಷರತ್ತುಗಳ ಇತಿಮಿತಿಗಳನ್ನು ಚಿಂತಿಸದೆ ಮಹಾದೇವಿ ಹೇಳಿಕೆಗೆ ರಾಜ ಒಪ್ಪುತ್ತಾನೆ. ವ್ಯಾಮೋಹವು ಆವರಿಸಿದ್ದ ಕೌಶಿಕ ರಾಜನ ಅರಮನೆಯ ಆಡಂಬರದ ಸುಖದಲ್ಲಿ ಮಹಾದೇವಿ ಶರಣ ಸಂಪ್ರದಾಯದ ಪೂಜೆ ಪುನಸ್ಕಾರಗಳೆಲ್ಲವೂ ದಿನಕಳೆದಂತೆ ಅರಮನೆಯ ಸುಖದ ಸಾಗರದಲ್ಲಿ

ಕೊಚ್ಚಿಹೋಗಿ ತನ್ನಿಚ್ಛೆಗನುಗುಣವಾಗಿ ಸುಲಭವಾಗಿ ನಡೆದುಕೊಳ್ಳಬಹುದೆಂದು ಊಹಿಸಿ, ಮಹಾದೇವಿಯ ಷರತ್ತುಗಳಿಗೆ ಒಪ್ಪಿಮಹಾದೇವಿ ತಂದೆ ತಾಯಿಗೆ ಹೀಗೆ ಹೇಳುತ್ತಾರೆ. 'ಆ ಹುಟ್ಟಿದ ಮನೆಯನ್ನೂ, ವಾತ್ಸಲ್ಯಮಯರಾದ ತಂದೆತಾಯಿಗಳನ್ನೂ ಬಿಟ್ಟು ಮತ್ತೆ ಹೋಗುತ್ತೇನೋ ಇಲ್ಲವೋ." ಈ ಆಲೋಚನೆ ಮಹಾದೇವಿಯನ್ನು ಅಲುಗಿಸಿತು. 'ಮತ್ತೇಕೆ ಹೋಗುವುದಿಲ್ಲ! ಎಲ್ಲಿ ಹೋಗುತ್ತೀ?' ಅದಕ್ಕೆ ಅವರ ಬಳಿಯಲ್ಲಿ ಉತ್ತರವಿರಲಿಲ್ಲ. "ಏನೋ ಯಾವುದನ್ನೂ ನಾನು ಅರಿಯೆ. ನೀನೇ ಮಾರ್ಗದರ್ಶಕನಾಗು"ಎಂದು ತನ್ನ ಪತಿಯನ್ನೇ ಚೆನ್ನಮಲ್ಲಿಕಾರ್ಜುನ ಮರೆಹೊಕ್ಕು ಧ್ಯಾನಾಸಕ್ತರಾಗಿ ಕಣ್ಣು ಮುಚ್ಚಿದರು. ಮಹಾದೇವಿಗೆ ಬೇಕಾದ ಎಲ್ಲ ಆನುಕೂಲಗಳನ್ನು ಮಾಡಿಕೊಡಲು ಮಂತ್ರಿಗಳಿಗೆ ಆದೇಶಿಸುತ್ತಾನೆ. ಮಹಾದೇವಿ ಹೇಳಿದರು: "ಹಾಗೆಯೇ ಆಗಲಿ, ಕೊಟ್ಟ ಮಾತುಗಳೆಲ್ಲಾ ನೆನಪಿನಲ್ಲಿರಲಿ. ಈ ನಿಮ್ಮ ಗೆಳೆಯರೂ ಇದ್ದಾರೆ. ಅವರೂ ಇದಕ್ಕೆ ಸಾಕ್ಷಿಯಾಗಿರಲಿ." "ಹಾಗೆಯೇ ಆಗಲಿ, ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ನಮ್ಮ ಅಂತರಂಗವೇ ನಮಗೆ ಪರಮಸಾಕ್ಷಿ. "ಕೌಶಿಕ ಹೇಳಿದ.

ವಸಂತಕ ಹೊರಗೆ ಹೋಗಿ ಸೂಚನೆಯನ್ನು ಕೊಟ್ಟ. ಕ್ಷಣಮಾತ್ರದಲ್ಲಿ ದಾಸಿಯರು ಬಂದು ಮಹಾದೇವಿಯನ್ನು ಸುತ್ತುವರಿದು ಕರೆದೊಯ್ಯ ತೊಡಗಿದರು. ಮಹಾದೇವಿ ಅರಮನೆಗೆ ಒಳಗೆ ಹೊರಟುನಿಂತರು. ಓಂಕಾರಶೆಟ್ಟಿ-ಲಿಂಗಮ್ಮ (ಸುಮತಿ)ಮಗಳನ್ನು ಆಶೀರ್ವದಿಸಿದರು. ಸುತ್ತಲೂ ನೆರೆದಿದ್ದ ಗೆಳತಿಯರೆಲ್ಲ ಕಣ್ಣೀರು ಹಾಕುತ್ತಿದ್ದರು. ಮಹಾದೇವಿ ಎಲ್ಲರಿಗೂ ಸಮಾಧಾನ ಮಾಡಿದರು. ಅರಮನೆಯ ಪ್ರವೇಶ ದ್ವಾರದಲ್ಲಿ ಮಹಾದೇವಿಗೆ ಭವ್ಯ ಸ್ವಾಗತ. ನೀಡಲಾಯಿತು. ಮುತ್ತೈದೆಯರು ಮಹಾದೇವಿಗೆ ಆರತಿ ಬೆಳಗಿದರು. ಬೆಳಗೆ ಬರಮಾಡಿಕೊಳ್ಳುವ ಕಾರ್ಯಕ್ರಮವನ್ನು ಕೌಶಿಕ ರಾಜನೆ ವಿಶೇಷ ಆಸಕ್ತಿ ವಹಿಸಿ ವ್ಯವಸ್ಥೆ ಮಾಡಿಸಿದ್ದ. ಮಹಾದೇವಿಯ ಮನಸ್ಸು ಆಧ್ಯಾತ್ಮಿಕದ ಕಡೆಗೆ ಇರುವುದರಿಂದ ಅದನ್ನು ವಿಲಾಸಭಾವದತ್ತ ಆಕರ್ಷಿಸಲು, ಅವಳಲ್ಲಿ ಭಕ್ತಿ ಭಾವದ ಬದಲು ರಸಿಕಭಾವ ಮೂಡಿಸಲು ಅರಮನೆಯನ್ನು ಆಡಂಬರದಿಂದ ಅಲಂಕರಿಸುವಂತೆ ಆಜ್ಞೆಮಾಡಿ ಶೃಂಗಾರ ರಸ ಪ್ರಧಾನವಾದ ಹಾಡು ಹೇಳಲು ತಿಳಿಸಿದ್ದ. ಈ ಸಮಯದಲ್ಲಿ ಮಹಾದೇವಿ ಮತ್ತೊಮ್ಮೆ ಕೌಶಿಕನಿಗೆ ತನ್ನ ಕರಾರುಗಳನ್ನು ನೆನಪಿಸಿದರು. ಅವನು ಎಲ್ಲದಕ್ಕೂ ಆಗಲಿ ಎಂಬಂತೆ ತಲೆಯಾಡಿಸಿದ. ಮದುವೆಗೆ ಮುಂಚೆ ತನ್ನೊಡನೆ ಯಾವುದೇ ಬಗೆಯ ಸಲಿಗೆ ಬೆಳೆಸಿಕೊಳ್ಳಲು ಮುಂದಾಗಬಾರದು ಎಂದು ಮಹಾದೇವಿ ದೃಢವಾಗಿ ಹೇಳಿದಾಗ ಅದಕ್ಕೂ ಒಪ್ಪಿದ. ಮೊದಲು 'ಹೂಂ ಗುಟ್ಟಿದರಾಯಿತು. ನಂತರ ನೋಡುವ' ಎಂಬುದೇ ಅವನ ಅಂತರಂಗದ ಗುಟ್ಟಾಗಿತ್ತು. ದಾಸಿಯರ ಮಧ್ಯದಲ್ಲಿ ನಡೆಯುತ್ತಿದ್ದ ಮಹಾದೇವಿಯ ರೂಪಸಂಪತ್ತನ್ನು ನೋಡುತ್ತಾ ಕೌಶಿಕ, ತನ್ನ ಕಣ್ಣುಗಳು ಧನ್ಯವಾದುವೆಂದುಕೊಂಡ. ಆನಂದನೀಯವಾದ ಇಂತಹ ಸೌಂದರ್ಯದ ಸಾನ್ನಿಧ್ಯವೇ ತನಗೆ ಸಾರ್ಥಕತೆಯನ್ನು ತಂದುಕೊಟ್ಟಿತೆಂದು ಭಾವಿಸಿದ. ಒಂದಲ್ಲ ಒಂದು ದಿನ ಇದನ್ನು ಪಡೆದು ಆನಂದಿಸುವ ಭಾಗ್ಯ ಬಂದೇ ಬರುತ್ತದೆಂದು ಕನಸು ಕಟ್ಟಿದ. ಅರಮನೆಯಲ್ಲಿ ಮಹಾದೇವಿಯವರು ತನ್ನ ಮನದಲ್ಲಿ ಮೂಡಿದ ಸುಂದರ ಸಾಲುಗಳ ವಚನ ಇದು. ಉಳ್ಳುದೊಂದು ತನು, ಉಳ್ಳುದೊಂದು ಮನ ನಾನಿನ್ನಾವ ಮನದಲ್ಲಿ ಧ್ಯಾನವ ಮಾಡುವೆನಯ್ಯ ಸಂಸಾರವನಾವ ಮನದಲ್ಲಿ ತಲ್ಲೀಯವಹೆನಯ್ಯ ಅಕಟಕಟಾ ಕೆಟ್ಟೆ ಕಟ್ಟೆ ಸಂಸಾರಕ್ಕಲ್ಲಾ ಪರಮಾರ್ಥಕ್ಕಲ್ಲಾ ಎರಡಕ್ಕೆ ಬಿಟ್ಟ ಕರುವಿನಂತೆ ಬಿಲ್ವ ಬೆಳವಲಕಾಯನೊಂದಾಗಿ ಹಿಡಿಯಲು ಬಾರದು ಚೆನ್ನಮಲ್ಲಿಕಾರ್ಜುನ.

ಇಬ್ಬಂದಿ ಒತ್ತಡಕ್ಕೆ ಸಿಕ್ಕಿದ ಸಂದರ್ಭದ ವಚನ ಇದು. ಲಗ್ನವನ್ನು ಮಾಡಿಕೊ ಅನುಭಾವ ಜೀವನವನ್ನು ಮಾಡು ಎಂದು ಒತ್ತಾಯ ಮಾಡುತ್ತಿರುವ ಸಂದರ್ಭದ ವಚನ ಇದು. ಅಕ್ಕಮಹಾದೇವಿಯವರ ಪ್ರಕಾರ ಸಂಸಾರ, ಅನುಭಾವ ಎರಡನ್ನು ಒಟ್ಟಿಗೆ ನಡೆಸಲು ಅವರಿಗೆ ಆಗುವುದಿಲ್ಲ. ಅವರಿಗೆ ಸಂಸಾರ ಇಷ್ಟವೂ ಇಲ್ಲ. ಸಂಸಾರದಲ್ಲಿ. ಅನುಭಾವಕ್ಕೆ ಸಮಯವೂ ಇಲ್ಲ. ಮತ್ತು ಸಂಸಾರ ಮುಳುಗಿಸುತ್ತದೆ. ಉಳ್ಳುದೊಂದು ತನು, ಉಳ್ಳುದೊಂದು ಮನ. ನನಗೆ ಒಂದೇ ದೇಹವಿದೆ. ಒಂದೇ ಮನದಲ್ಲಿ ಹೇಗೆ ತಾನೆ ಎರಡು ವಿಷಯ ಧ್ಯಾನ ಮಾಡಲಿ? ಯಾವ ಮನಸ್ಸಿನಲ್ಲಿ ಸಂಸಾರ ಮಾಡಲಿ? ಯಾವ ಮನಸ್ಸಿನಲ್ಲಿ ಅನುಭಾವ ಮಾಡಲಿ? ಅಯ್ಯೋ, ಶಿವನೇ ಕೆಟ್ಟೆ ಕೆಟ್ಟೆ ಸಂಸಾರವೂ ಇಲ್ಲ. ಪರಮಾರ್ಥವೂ ಇಲ್ಲ. ಇದೇನು ನನ್ನ ಜೀವನ. ಅರಮನೆಯಲ್ಲಿ ಅಕ್ಕನವರು ಒತ್ತಾಯದ ಬಂಧನದಲ್ಲಿದ್ದರು ಎಂಬುದನ್ನು ಈ ವಚನ ಧ್ವನಿಸುತ್ತದೆ. ಎರಡಕ್ಕೆ ಬಿಟ್ಟ ಕರುವಿನಂತೆ ಎನ್ನುವ ರೂಪಕ ಅವರ ಮೇಲೆ ಇರುವ ಇಬ್ಬಂದಿ ಒತ್ತಡವನ್ನು ಹೇಳುತ್ತದೆ. ಆಯ್ಕೆ ಕರುವಿಗೆ

ಬಿಟ್ಟಿದ್ದು. ಯಾವ ಹಸುವಿನಲ್ಲಾದರೂ ಕುಡಿಯಬಹುದು. ಅಕ್ಕಮಹಾದೇವಿಯವರ ಆಯ್ಕೆ ಅನುಭಾವ ಜೀವನ. ಪರಮಾತ್ಮ ಎನ್ನುವ ತಾಯ ಅನುಗ್ರಹದ ಹಾಲು ಮಾತ್ರ ಬೇಕು. ವಚನದ ಮುಂದಿನ ಸಾಲಿನ ರೂಪಕ ಇನ್ನೂ ಅಮೋಘವಾಗಿದೆ. ಬಿಲ್ವ ಬೆಳವಲಕಾಯ ಒಂದಾಗಿ ಹಿಡಿಯಬಹುದೆ ? ಬಿಲ್ವಪತ್ರೆ ಕಾಯಿ, ಬೇಲದ ಕಾಯಿ ನೋಡಲು ಒಂದೇ ರೀತಿ ಕಾಣುತ್ತವೆ. ಇದು ಬಹಿರಂಗದ ತೋರಿಕೆ ಅಷ್ಟೆ. ಹೊರಗೆ ಗಾತ್ರದಲ್ಲಿ ಬಣ್ಣದಲ್ಲಿ ಅವು ಒಂದೇ ತೆರನಾಗಿವೆ. ಒಳಗೆ ಹೂರಣದಲ್ಲಿ ಬಿಲ್ವಪತ್ರೆ ಕಾಯಿ ಔಷಧಿಗೆ ಮತ್ತು ಪೂಜೆಗೆ ಪತ್ರ ಕೊಡುತ್ತದೆ. ಬೆಳವಲಕಾಯಿಯು ಪಾನಕಕ್ಕೆ ಮತ್ತು ಬೆಲ್ಲ ಹಾಕಿ ತಿನ್ನಲಿಕ್ಕೆ ಬರುತ್ತದೆ. ಲೌಕಿಕಕ್ಕೆ ಬೆಳವಲ. ಅಲೌಕಿಕಕ್ಕೆ ಬಿಲ್ವಪತ್ರೆ ಕಾಯಿ. ಅಕ್ಕನವರು ನೋಡಲು ಹೆಣ್ಣು ರೂಪು. ಅವರೊಳಗಿನ ಅಂತಸ್ಸತ್ವ ಮಾತ್ರ ಬೇರೆ. ಅವರು ಲೌಕಿಕಕ್ಕೆ ಬರುವವರಲ್ಲ. ಇಂತಹ ದೃಷ್ಟಾಂತದಿಂದ ಅಕ್ಕನವರ ಎತ್ತರ ತಿಳಿಯುತ್ತದೆ. ಭೋಗದ ಆಯ್ಕೆ ಕಣ್ಣ ಮುಂದೆ ಇದ್ದರೂ ಅದನ್ನು ಒಲ್ಲೆ ಎಂದು ಅಲೌಕಿಕವನ್ನೇ ಆಯ್ಕೆ ಮಾಡಿಕೊಂಡಿದ್ದಾರೆ. ಇಂತಹ ದಟ್ಟ ಜೀವನಾನುಭವದ ಅಭಿವ್ಯಕ್ತಿಯೇ ಅವರನ್ನು ಶ್ರೇಷ್ಠ ಕವಿಯಿತ್ರಿಯನ್ನಾಗಿಸಿದೆ. ಮಹಾದೇವಿ ಹೇಳಿದ ಮಾತು ಕೌಶಿಕನ ಮನಸಿನಲ್ಲಿ, 'ನನ್ನ ಸೌಂದಯ್ಯ ದೈಹಿಕ ಸುಖವನ್ನು ಕೊಡಲಾರದು; ಮತ್ತು ದೈಹಿಕ ಸುಖವನ್ನು ಪಡೆಯಲಾರದು' ಎಂಬ ಮಹಾದೇವಿಯ ಮಾತುಗಳು ಅವನ ಮುಂದೆ ಸುಳಿದವು. 'ರೂಪವತಿಯಾದ ತರುಣಿಯಿಂದ ಬಂದ ಮಾತುಗಳೇ ಇವು! ಸ್ತ್ರೀ ಇಂತಹ ಮಾತನ್ನಾಡುವುದು ಸಾಧ್ಯವೇ? ಪಾಪ! ಯಾವುದೋ ಭಾವುಕತೆಯಲ್ಲಿ ಆ ಮಾತುಗಳನ್ನು ಆಡಿದ್ದಾಳೆ. ಒಂದೆರಡು ದಿನದ ಅರಮನೆಯ ವಿಲಾಸ ಜೀವನ, ಅವಳಿಗೆ ಸರಿಯಾದ ಮಾರ್ಗವನ್ನು ತೋರಿಸುತ್ತದೆ' ಎಂದು ಮುಂತಾಗಿ ಕೌಶಿಕನ ಆಲೋಚನೆ ಹರಿಯಿತು. ಎರಡನೆ ರಾತ್ರಿಯಾಗಿದೆ. ಅರಮನೆಯ ಶಯ್ಯಾಗೃಹದಲ್ಲಿ ಕೌಶಿಕ ಚಡಪಡಿಸುತ್ತಾ ಅತ್ತಿತ್ತ ಅಡ್ಡಾಡುತ್ತ, ಮತ್ತೆ ಬಂದು ಕೂಡುತ್ತ, ಮತ್ತೆ ಎದ್ದು ನಿಲ್ಲುತ್ತ, ಮತ್ತೆ ಬಂದು ಪಲ್ಲಂಗದ ಮೇಲೆ ಕೂಡುತ್ತ ತೀರ ಅಶಾಂತಿಯಿಂದ ತಳಮಳಿಸುತ್ತಿದ್ದ. ಅವನ ಅಶಾಂತಿಗೆ ಕಾರಣವಾದ ಮಹಾದೇವಿ! ಅರಮನೆಗೆ ಬಂದ ಕ್ಷಣದಿಂದ ಕೌಶಿಕ ಮೋಹಾಂಧಕಾರದಲ್ಲಿ ದಾರಿ ತಪ್ಪಿದ್ದ. ಮಹಾದೇವಿಯಲ್ಲದೆ ಅವನಿಗೆ ಬೇರೆ ಏನೂ, ಯಾರೂ ಕಾಣುತ್ತಿರಲಿಲ್ಲ. ಅರಮನೆಗೆ , ಬಂದ ಕ್ಷಣದಿಂದಲೂ ಅವನು ಮಹಾದೇವಿಯ ದೃಶ್ಯವನ್ನೇ ಮತ್ತೆ ಮತ್ತೆ ಕಣ್ಣ ಮುಂದೆ ತಂದುಕೊಂಡು ನಿಟ್ಟುಸಿರು ಬಿಡುತ್ತಿದ್ದ.

'ಛೇ, ಹೀಗೇ ಆದರೆ ರಾತ್ರಿಯೆಲ್ಲ ನಿದ್ರೆಯೇ ಬರುವುದಿಲ್ಲವೇನೋ! ಈ ದಿನ ಆಹಾರವೂ ರುಚಿಸಲಿಲ್ಲ. ಹಸಿವಿನ ಸುಳಿವೇ ಇಲ್ಲ. ಆದರೆ ಈ ಚೆಲುವೆಯನ್ನು ನೋಡು ತ್ತಲೇ ಇರಬೇಕೆಂಬ ಕಣ್ಣಿನ ಹಸಿವು ಅಗಾಧವಾಗಿದೆ! ಕೇವಲ ಒಂದು ಹುಡುಗಿಯನ್ನು ಕಂಡು ನನ್ನ ಮನಸ್ಸು ಅಲ್ಲೋಲ ಕಲ್ಲೋಲವಾಯಿತಲ್ಲ! ನಾನು ಅಷ್ಟು ದುರ್ಬಲನೇ? ಇಲ್ಲ ಇಲ್ಲ, ನಾನು ದುರ್ಬಲನಲ್ಲ. ಅದರ ಬದಲಾಗಿ ಈ ಮಹಾದೇವಿಯ ಆಕರ್ಷಣೆಯೇ ಪ್ರಬಲ! ನಾನು ಇಲ್ಲಿಯವರೆಗೂ ಎಷ್ಟೋ ಸ್ತ್ರೀಯರು ನನ್ನ ಶಯ್ಯಾನಗೃಹದಲ್ಲಿ, ಬಂದು ಹೋಗಿದ್ದರೆ. ನನಗೆ ಮದುವೆಯಾಗಿ ಮಕ್ಕಳಿದ್ದರು ಸಹ . ಮಹಾದೇವಿ ಗೋಸ್ಕರ ನನ್ನ ಮನಸ್ಸು ಕಾಯುತ್ತಿತೆ. ಜಿಂಕೆಯಂತೆ ಚಂಚಲವಾದ ಅವಳ ಕಣ್ಣುಗಳೇ ಸಾಕು, ಮನಸ್ಸನ್ನು ಮೋಹಗೊಳಿಸಲು! ಇಲ್ಲವಾದರೆ ನನ್ನಂಥವನೂ ಒಂದೇ ಕ್ಷಣದಲ್ಲಿ ಮಹಾದೇವಿಯ ಮೋಹದ ಬಲೆಯಲ್ಲಿ ಬೀಳುತ್ತಿರಲಿಲ್ಲ. ಸೃಷ್ಟಿಕರ್ತ ಮಹಾದೇವಿಯನ್ನು ವಿಶೇಷ ಗಮನಹರಿಸಿ ಸೃಷ್ಟಿ ಮಾಡಿರಬೇಕು.

'ಒಮ್ಮೆ ಕಂಡ ಮಾತ್ರಕ್ಕೇ ನನ್ನನ್ನು ವಿಚಲಿತಗೊಳಿಸಿದ ಮಹಾದೇವಿಯನ್ನು ಪಡೆಯಬೇಕೆಂಬ ಆಸೆ ಪ್ರಬಲವಾಗುತ್ತಿದೆ. ಅವಳು ನನಗೋಸ್ಕರವೇ ಸೃಷ್ಟಿಯಾಗಿರಬೇಕು. ಹೌದು, ಅವಳನ್ನು ಪಡೆಯಲೇಬೇಕು. ಅದರಲ್ಲಿ ತಪ್ಪೇನು? ಅಮೂಲ್ಯವಾದ ಎಲ್ಲ ವಸ್ತುಗಳ ಮೇಲೂ ರಾಜನಾದವನಿಗೆ ಅಧಿಕಾರವಿದೆ. ಅಂದಮೇಲೆ ನನ್ನ ರಾಜ್ಯದ ಪ್ರಜೆಯೇ ಆಗಿರುವ ಮಹಾದೇವಿಯ ಮೇಲೆ ನನ್ನ ಅಧಿಕಾರವಿದೆಯೆಂದೇ ಅರ್ಥ. ಏನೇ ಆದರೂ ಮಹಾದೇವಿಯನ್ನು ಪಡೆಯದೆ ಈ ಜನ್ಮ ವ್ಯರ್ಥ. ಅವಳು ನನ್ನವಳಾಗುವವರೆಗೂ ನನಗೆ ನೆಮ್ಮದಿಯಿಲ್ಲ. ಆಹಾರ ಬೇಕಿಲ್ಲ, ನಿದ್ರೆ ಬೇಕಿಲ್ಲ, ಬೇರೆ ಯಾವುದೂ ಬೇಕಾಗಿಲ್ಲ. ಮಹಾದೇವಿಗೆ ನನ್ನ ಆತುರ ಹೇಗೆ ಅರ್ಥವಾಗಬೇಕು?' ಮೂರುವಾರಗಳ ನಂತರ ಮಹಾದೇವಿ ನನ್ನ ಕೈವಶವಾಗುವಳು, ಅಲ್ಲಿಯವರಿಗೆ ಹೇಗೆ ಮಹಾದೇವಿಯನ್ನು

ಬಿಟ್ಟಿರುವುದು, ಹೇಗೆ ಕಾಲ ಕಳೆಯುವದು .? ಇತ್ತ ಮಹಾದೇವಿ ಪೂಜೆಯಲ್ಲಿ ನಿರತರಾಗಿದ್ದರೂ ಅವರ ಮನಸ್ಸು ಗಾಳಿಗೊಡ್ಡಿದ ದೀಪದಂತೆ ಹರಿದಾಡುತ್ತಿತ್ತು. ಇದು ತಾನು ಕೈಗೊಂಡಿರುವ ನಿರ್ಧಾರದ ಆಗುಹೋಗುಗಳನ್ನು, ಮನಸ್ಸು ಬೇಡವೆಂದರೂ ಮತ್ತೆ ಆಲೋಚಿಸುತ್ತಿತ್ತು. 'ಅರಮನೆಯ ಅಗ್ನಿಪರೀಕ್ಷೆಗೆ ನಾನು ಗುರಿಯಾಗುತ್ತಿದ್ದೇನೆ. ನನ್ನ ಸೌಂದರವನ್ನೇ ಬಯಸಿ ಬಂದ ಕೌಶಿಕನ ಬಳಿಗೆ, ಹೀಗೆ ನಾನು ಹೋಗಿರುವ ಲೋಕದ ಕಣ್ಣಿಗೆ ಹೇಗೆ ಕಾಣಬಹುದು! ಮದುವೆಯಾಗದ ನಾನು ಅವನ ಅರಮನೆಗೆ ಹೇಗೆ ವರ್ತಿಸುವುದು?' 'ಈ ಸಂಸಾರ ಬೇಡಬೇಡವೆಂದರೂ ಇದು ಮತ್ತೆ ಮತ್ತೆ ನನ್ನನ್ನು ಬೆನ್ನಟ್ಟಿ ಬಂದು ಕಾಡುತ್ತಿದೆ. ನನ್ನ ಒಡೆಯ ಚೆನ್ನಮಲ್ಲಿಕಾರ್ಜುನನನ್ನು ದೂರ ಮಾಡುತ್ತಿದೆ: ಮಹಾದೇವಿಯವರು ಒಂದು ವಚನ ಹೀಗೆ ಹೇಳುತ್ತಾರೆ

ಸಂಸಾರವೆಂಬ ಹಗೆಯಯ್ಯೆ ಎನ್ನ ತಂದೆ!

ಎನ್ನ ವಂಶವಂಶದಪ್ಪದೆ ಅರಸಿಕೊಂಡು ಬರುತ್ತಿದೆಯಯಯ್ಯಾ!

ಎನ್ನು ವನರಸಿಯರಸಿ ಹಿಡಿದು ಕೊಲ್ಲುತ್ತಿದೆಯಯ್ಯಾ!

ನಿನ್ನ ನಾ ಮರೆವೊಕ್ಕೆ ಕಾಯಯ್ಯ! ಎನ್ನ ಬಿನ್ನಪವನವಧರಿಸಾ ಚೆನ್ನಮಲ್ಲಿಕಾರ್ಜುನಾ.

'ನನ್ನನ್ನು ಸಂಪೂರ್ಣವಾಗಿ ನಿನಗೆ ಒಪ್ಪಿಸಿಕೊಂಡಿದ್ದೇನೆ. ನನ್ನನ್ನು ಕೊಲ್ಲು ಅಥವಾ ಕಾಯಿ, ಹೊಣೆ ನನ್ನ ಪತಿಯಾದ ನಿನ್ನದು. "ಅದನ್ನು ನಂಬಿ ಲೋಕ ವಿರುದ್ಧವಾದ ಈ ವರ್ತನೆಯಲ್ಲಿ ತೊಡಗಿದ್ದೇನೆ. ಇದರಿಂದ ನನ್ನನ್ನು ಪಾರುಮಾಡು, ದೇವ' ಹಿಂಡನಗಲಿ ಹಿಡಿವಡೆದ ಕುಂಜರ ತನ್ನ ವಿಂಧ್ಯವ ನೆನೆವಂತೆ ನೆನೆವೆನಯ್ಯ ಬಂಧನಕ್ಕೆ ಬಂದ ಗಿಳಿಯು ತನ್ನ ಬಂಧುವ ನೆನೆವಂತೆ ನೆನೆವೆನಯ್ಯ ಕಂದ ನೀನಿತ್ತ ಬಾರೆಂದು ನೀವು ನಿಮ್ಮಂದವ ತೋರಯ್ಯ, ಚೆನ್ನಮಲ್ಲಿಕಾರ್ಜುನ. ಇದೊಂದು ಮಹೋನ್ನತವಾದ ವಚನ, ಅವರ ಜೀವನಾನುಭಾವದ ದರ್ಶನದಿಂದ ಹೊಮ್ಮಿದ ಶ್ರೇಷ್ಠ ವಚನ. ಉನ್ನತ ತತ್ವವನ್ನು ಇಂಬಿಟ್ಟು ಕೊಂಡಿರುವ ಧ್ವನಿಪೂರ್ಣ ವಚನ. ಈ ಚೆಂದ ವಚನ ತನ್ನೊಳಗೆ ಇರಿಸಿಕೊಂಡಿರುವ ಅಪಾರ ನಿಧಿಯನ್ನು ಇಲ್ಲಿ ವಿವರಿಸುತ್ತೇವೆ. ಹಿಂಡಿನಿಂದ ಹಿಡಿದು ತರಲಾದ ಆನೆಯು ತನ್ನ ಕಾಡಿನ ಬಂಧುಗಳನ್ನು ನೆನೆಯುವಂತೆ ಪರಮಾತ್ಮಚೆನ್ನಮಲ್ಲಿಕಾರ್ಜುನನೇ ನಾನು ನಿನ್ನನ್ನು ನೆನೆಯುತ್ತಿದ್ದೇನೆ. ಬಂಧನದಲ್ಲಿ ಸಿಕ್ಕಿಬಿದ್ದ ಗಿಳಿಯು ತನ್ನ ಬಂಧುಗಳನ್ನು ನೆನೆವಂತೆ ನಾನು ನಿನ್ನನ್ನು ನೆನೆಯುತ್ತಿದ್ದೇನೆ. ಮಗುವೇ ನೀನು ಬಹಳ ದುಃಖ ಪಟ್ಟಿಯಲ್ಲ ಬಾ ಎಂದು ಕರುಣೆಯಿಂದ ನನ್ನ ಹಿಡಿದೆತ್ತಿ ನಿನ್ನ ದರ್ಶನವನ್ನು ತೋರಯ್ಯ ಚೆನ್ನಮಲ್ಲಿಕಾರ್ಜುನ ಎಂದು ಪರಮಾತ್ಮನನ್ನು ಬೇಡಿದ್ದಾರೆ. ಈ ವಚನದಲ್ಲಿ ಎರಡು ದೃಷ್ಟಾಂತ ಕಥೆಗಳಿವೆ. ೧. ಆನೆಯರೂಪಕ, ೨. ಗಿಳಿಯ ರೂಪಕ, ಆನೆಯ ಕಥೆ ಏನು ? ಅನೆಯು ಕಾಡಿನಲ್ಲಿ ತನ್ನ ಬಂಧುಗಳೊಂದಿಗೆ ಸಹಜವಾಗಿ ಆನಂದದಲ್ಲಿತ್ತು. ಇಂತಹ ಆನೆಯನ್ನು ಕಾಡಿನಿಂದ ನಾಡಿಗೆ ಹಿಡಿಡು ತರಲಾಗಿದೆ. ಆನೆಯ ಕಾಲಿಗೆ ಸರಪಳಿ, ಅದರ ಮುಂದೆ ಯಥೇಚ್ಛ ವಾಗಿ ಕಬ್ಬು, ಬೆಲ್ಲ ಇತರ ಆಹಾರ ಇಡಲಾಗಿದೆ. ಏನೆಲ್ಲ ಇಟ್ಟಿದ್ದರೂ ಅದು ಆಹಾರ ಸ್ವೀಕರಿಸದೆ ಕಣ್ಣೀರು ಹಾಕುತ್ತಿದೆ. ಮೌನವಾಗಿ ರೋದಿಸುತ್ತಿದೆ. ಆಹಾರ ಮುಟ್ಟದೆ. ಉಪವಾಸ ಆರಂಭಿಸಿದೆ. ನನಗೆ ನನ್ನ ಕಾಡುಬೇಕು, ನನ್ನ ಬಂಧುಗಳು ಬೇಕು. ನನಗೆ ಸ್ವಾತಂತ್ರ್ಯ ಬೇಕು ಎಂದು ಉಪವಾಸ ಮಾಡುತ್ತಿದೆ. ಇದು ಆನೆಯ ಕಥೆ. ೨. ಗಿಳಿಯ ಕಥೆ. ಇದು ತನ್ನ ಬಂಧು ಬಳಗಗಳೊಂದಿಗೆ ಸಹಜವಾಗಿ ನಿಸರ್ಗದಲ್ಲಿ ಹಾರಾಡಿಕೊಂಡಿತ್ತು. ಇದನ್ನು ಹಿಡಿದು ತಂದು ಪಂಜರದಲ್ಲಿ ಇಡಲಾಗಿದೆ. ಗಿಳಿಯ ಮುಂದೆ ಹಣ್ಣು, ಸಿಹಿ, ಇತರೆ ತಿನಿಸುಗಳನ್ನು ಯಥೇಚ್ಛವಾಗಿ ಇಡಲಾಗಿದೆ. ಆದರೆ ಗಿಳಿ ತಿನ್ನುತ್ತಿಲ್ಲ. ಅದು ಉಪವಾಸ ಮಾಡುತ್ತಿದೆ. ನನ್ನ ಬಂಧುಗಳು ಬೇಕು ಎಂದು ಕಣ್ಣೀರು ಹಾಕುತ್ತಿದೆ. ಮೌನದಲ್ಲಿ ಮಿಡಿಯುತ್ತಿದೆ. ಈ ಆನೆ, ಗಿಳಿಗಳಲ್ಲಿ ಅಕ್ಕಮಹಾದೇವಿ ಯವರು ಒಂದು ದರ್ಶನ ಪಡೆದರು. ಆ ಫಲವಾಗಿ ಈ ವಚನ ಸೃಷ್ಟಿಯಾಯಿತು. ಆನೆ, ಗಿಳಿಗಳನ್ನು ಎಳೆ ತರಿಸಿದಂತೆ, ರಾಜ ಕೌಶಿಕ ಅಕ್ಕಮಹಾದೇವಿಯವನ್ನು ಹಿಡಿದು ತರಿಸಿದ್ದಾನೆ. ಆನೆ, ಗಿಳಿಗಳಿಂದ ಮೋಜು ತೆಗೆದುಕೊಳ್ಳುವಂತೆ ಮಹಾದೇವಿಯಕ್ಕನವರಿಂದ ವಿಲಾಸ ಭೋಗ ಪಡೆಯುವುದು. ಅವನ ಗುರಿ. ಆನೆ, ಗಿಳಿಗಳಿಗೆ ಆಮಿಷ ತೋರಿಸಿ ಅವುಗಳ ಸ್ವಾತಂತ್ರ್ಯ ಹರಣ ಮಾಡಿ ಅವುಗಳನ್ನು ಅರಮನೆಯ ಪರಿವಾರದ ಮೋಜಿಗೆ ಬಳಿಸಿ ಕೊಳ್ಳುತ್ತಿದ್ದಾನೆ. ಹಾಗೆ ಅಕ್ಕ ಮಹಾದೇವಿಯವರಿಗೂ ಅರಮನೆಯ ಭೋಗ ವೈಭವದ ಆಶೆ ತೋರಿಸಿ. ತನ್ನ ಭೋಗ ವಿಲಾಸಗಳಿಗೆ ದಾಳವಾಗಿ ಬಳಸಿ ಕೊಳ್ಳುವ ಮನಸ್ಸು

ಆತನದು. ಅದಕ್ಕಾಗಿ ಅರಮನೆಯ ಸಖಿಯರು ಬಂದಿದ್ದಾರೆ. ಚೆಂದ ಮಾತನಾಡುತ್ತಿದ್ದಾರೆ. ನೀವು ರಾಣಿಯಾಗಿ ಮೆರೆಯಬಹುದು. ಮಹಾರಾಜರು ಏನೆಲ್ಲ ಸುಖಭೋಗ ಕೊಡುತ್ತಾರೆ.

ಸಖಿಯರು ಬಣ್ಣದ ಮಾತನಾಡಿ ಮರುಳು ಮಾಡುತ್ತಿದ್ದಾರೆ. ರಮಿಸ ತೊಡಗಿದ್ದಾರೆ. ಕಡು ಶೋಕದಲ್ಲಿರುವ ಅಕ್ಕನವರನ್ನು ರಮಿಸುತ್ತ ಅರಮನೆಯ ವಿಸ್ತಾರ, ವೈಭೋಗಗಳನ್ನು ಪರಿಚಯಿಸಲು ಉದ್ಯಾನವನಕ್ಕೆ ಕರೆತಂದಿದ್ದಾರೆ. ಅರಮನೆಯನ್ನೆಲ್ಲ ಪರಿಚಯಿಸುತ್ತ ನಡೆದಿರುವಾಗ ಆನೆಯನ್ನು ಹಿಡಿದು ತಂದು ಕಟ್ಟಿ ಹಾಕಿರುವುದನ್ನು ಅವರು ಹೆಮ್ಮೆಯಿಂದ ಹೇಳ ತೊಡಗಿದ್ದಾರೆ. ಅವರ ಮಾತುಗಳನ್ನು ತಡೆದು ಅದು ಯಾಕೆ ಕಣ್ಣೀರು ಹಾಕಿದೆ ? ಮಹಾದೇವಿಯವರು ಕೇಳಿದ್ದಾರೆ. ಅದು ತನ್ನ ಬಂಧುಗಳು ಬೇಕು ಕಾಡುಬೇಕು ಎಂದು ಉಪವಾಸ ಮಾಡುತ್ತಿದೆ. ಸಖೀಯರು ಹೇಳಿದರು. ಒಂದು ಆನೆ ಕೂಡ ರಾಜನ ದೌರ್ಜನ್ಯವನ್ನು ವಿರೋಧಿಸುತ್ತಿದೆ. ಅಕ್ಕನವರು ಮನಸ್ಸಿನಲ್ಲಿ ಅಂದು ಕೊಂಡರು. ಹಾಗೆ ಮುಂದುವರಿದಾಗ ಅನೇಕ ಗಿಳಿಗಳನ್ನು ಹಿಡಿದು ತಂದು ಪಂಜರದಲ್ಲಿಟ್ಟಿರುವ ದೃಶ್ಯ ಎದುರಾಯಿತು. ನೋಡಿ ನಿಮ್ಮನ್ನು ಸಂತೋಷಪಡಿಸಲು ಮಹಾರಾಜರು ಗಿಳಿಗಳನ್ನು ಹಿಡಿದು ತರಿಸಿದ್ದಾರೆ ಎಂದು ವಿವರಿಸ ತೊಡಗಿದ್ದಾರೆ. ಗಿಳಿಗಳು ಕೂಡ ಏನನ್ನೂ ಮುಟ್ಟದೆ ಮೌನ ಮಿಡಿಯುತ್ತಿವೆ. ಅರಮನೆಯ ಹೆಂಗಳೆಯರ ಮೋಜಿಗೆ ಹಿಡಿದು ತರಲಾದ ಈ ಮೂಕ ಜೀವಿಗಳ ಶೋಕದಲ್ಲಿ ಅಕ್ಕಮಹಾ ದೇವಿಯವರು ತಮ್ಮನ್ನು ಗುರುತಿಸಿಕೊಂಡರು. ಆನೆ, ಗಿಳಿಗಳಿಗೆ ಒಂದೊಗಿದ ದುಃಖ ತನಗೂ ಬಂದೊದಗಿದೆ. ರಾಜನ ಅಂಕೆಯಿಂದ ಜೀವನ ಪರ್ಯಂತ ಇನ್ನು ಬಿಡುಗಡೆಯೇ ಇಲ್ಲ. ಇವನ ಹೆಂಗಳೆಯರ ಮೋಜಿಗೆ ಬಳಕೆಯಾಗಿ ಕೊನೆಗೆ ಇಲ್ಲಿ ಕೊನೆಯುಸಿರಳೆಯಬೇಕು. ನನಗೂ ಇವುಗಳ ಗತಿಯೇ ಬಂದೊದಗಿದೆ. ಇವುಗಳಂತೆ ಕೇವಲ ಉಪವಾಸ ಮಾಡಿದರೆ ಕಣ್ಣೀರು ಹಾಕಿದರೆ, ನನಗೆ ಬಿಡುಗಡೆ ಇದೆಯೇ ? ಹಾಗಾದರೆ ನಾನು ಏನು ಮಾಡಬೇಕು.

ಆನೆ, ಗಿಳಿಗಳಿಗೆ ಮಾತು ಬರುವುದಿಲ್ಲ. ಆದರು ಅವು ಉಪವಾಸ ಮಾಡುವ ಮೂಲಕ ಪ್ರತಿಭಟಿಸಿವೆ. ನಾನು ಇವನಿಂದ ಬಿಡುಗಡೆ ಪಡೆಯಬೇಕು. ಚಿಂತಿಸಿದ್ದಾರೆ. ಈ ಗಿಳಿ, ಆನೆಗಳು ಅನ್ನ ಬೇಕೊ? ಎಂದರೆ ನಮಗೆ ಅನ್ನ ಬೇಡ, ಬಂಧನ ಬೇಡ. ಬಿಡುಗಡೆ ಬೇಕು. ಸ್ವಾತಂತ್ರ್ಯ ಬೇಕು ಎಂದು ಶೋಕಿಸುತ್ತಿವೆ.ನನಗೂ ಅನ್ನಬೇಡ. ಬಿಡುಗಡೆ ಬೇಕು. ಸ್ವಾತಂತ್ರ್ಯ ಬೇಕು ಅಕ್ಕನವರು ವಚನ ಹಾಡಿಕೊಂಡರು. ಅನೆ,ಗಿಳಿಗಳಿಗೆ ಹೇಗೆ ಸ್ವಾತಂತ್ರ್ಯ ಇಲ್ಲವೋ ಹಾಗೆ ನನಗೂ ಸ್ವಾತಂತ್ರ್ಯ ಇಲ್ಲ. ಆನೆ, ಗಿಳಿಗಳಿಗೆ ಒಂದು ಮನಸ್ಸಿದೆ ಅವುಗಳಿಗೆ ಅವುಗಳದೇ ಆದ ಜೀವಿತ ಇದೆ. ಅದರಂತೆ ನನಗೂ ಒಂದು ಮನಸ್ಸಿದೆ. ವ್ಯಕ್ತಿತ್ವ ಇದೆ. ಅವು ನನ್ನ ಸ್ವತ್ತಲ್ಲ ಎಂಬುದು. ಈ

ರಾಜನ ಕಲ್ಪನೆಗೂ ಬರದು. ಇದು ಅವನ ನಿರ್ಲಕ್ಷ್ಯದ ಪರಮಾವಧಿ. ಇಷ್ಟೊಂದು ದುಷ್ಟನಾದ ರಾಜನನ್ನು ನಾನು ಹದಿನೆಂಟು ಹತ್ತೊಂಬತ್ತು ವರ್ಷದ ತರುಣಿ ಎದುರಿಸುವುದಾದರೂ ಹೇಗೆ ? ಈ ಅನೆ, ಗಿಳಿಗಳಿಗೆ ಮಾತು ಬರುವುದಿಲ. ಆದರೂ ಅವು ಪ್ರತಿಭಟಿಸುತ್ತಿವೆ. ಹೇಗೆ ? ಮೌನ, ಉಪವಾಸ, ಅಸಹಕಾರದ ಮೂಲಕ, ಕಣ್ಣೀರು ಅವುಗಳ ಪ್ರತಿಭಟನೆ ಅವುಗಳ ಬೇಡಿಕೆ ಏನು ? ಬಂಧನದಿಂದ ಬಿಡುಗಡೆ. ಸ್ವಾತಂತ್ರ್ಯ ಬೇಕು. ನಮ್ಮ ಬಂಧನವನ್ನು ಬಿಡಿಸಿ ಇದು ಅವುಗಳ ಬೇಡಿಕೆ. ಹಾಗೆ ನಾನೂ ಬಂಧನಕ್ಕೊಳಗಾಗಿದ್ದೇನೆ. ನನಗು ಬಿಡುಗಡೆ ಬೇಕು ಸ್ವಾತಂತ್ರ್ಯ ಬೇಕು. ನನಗೊಂದು ಮನಸ್ಸಿದೆ. ವ್ಯಕ್ತಿತ್ವ ಇದೆ. ಗುರಿ ಇದೆ. ಮೌಲ್ಯಗಳಿವೆ. ನಿನಗೆ ನಿನ್ನ ಮನಸ್ಸು ಗುರಿಗಳಿದ್ದಂತೆ ನನಗು ಇದೆ. ರಾಜ ಪ್ರತ್ಯಕ್ಷ ದೇವತಾಃ ಯಾರಿಗೆ? ನಿನ್ನ ಬಾಲ ಬಡುಕರಿಗೆ, ಪತಿಯೇ ಪ್ರತ್ಯಕ್ಷ ದೇವರು. ಹೌದು. ನನ್ನ ಪತಿ ಚೆನ್ನಮಲ್ಲಿಕಾರ್ಜುನ. ಈ ಸಾವ ಕೆಡುವ ರಾಜ ನನ್ನ ಗಂಡನಲ್ಲ. ಅರಿವು ಮನಸ್ಸಿರುವ ನಾನು ಬಿಡುಗಡೆ ಗೊಳ್ಳಲೇಬೇಕು. ನನಗೆ ಬಲ ಇಲ್ಲ. ಇವನನ್ನು ಬಲದಿಂದ ಗೆಲ್ಲಲಾರೆ. ಈ ದೇಹ ಅವನನ್ನು ಮೋಹಗೊಳ್ಳುವಂತೆ ಮಾಡಿದೆ. ಮೊದಲು ದೇಹವನ್ನು ದಂಡಿಸುತ್ತೇನೆ. ಆನೆ, ಗಿಳಿ ಉಪವಾಸ ಮಾಡಿದಂತೆ ನಾನೂ ಉಪವಾಸ ಮಾಡುತ್ತೇನೆ. ಮಾತು ಬಿಟ್ಟು ಮೌನ ಹಿಡಿಯುತ್ತೇನೆ. ಅಕ್ಕಮಹಾದೇವಿಯವರು ನಿರ್ಧಾರ ಮಾಡಿದ್ದಾರೆ. ನಾನು ಕೇವಲ ಕಣ್ಣಿರು ಹಾಕಿದರೆ ಸ್ವಾತಂತ್ರ್ಯ ಪಡೆಯಲಾರೆ. ನನ್ನ ಗುರಿ ಬಿಡುಗಡೆ, ಸ್ವಾತಂತ್ರ್ಯ. ನನಗೆ ಪರಮಾತ್ಮ ಬೇಕು. ನನ್ನ ಗುರಿ ಸಾಧನೆ ಮುಖ್ಯ. ಪುರುಷನಿಗೆ ಅಶೆಗಳಿದ್ದಂತೆ ಮಹಿಳೆಗು ಇವೆ. ಉಪವಾಸ ಆರಂಭಿಸಿದ್ದಾರೆ.

ಈ ಉಪವಾಸ ಆರಂಭಿಸಲು ಅವರು ಆನೆ ಮತ್ತು ಗಿಳಿಯಿಂದ ಸ್ಫೂರ್ತಿ ಪಡೆದರು. ಆನೆ, ಗಿಳಿಗಳು ಎಷ್ಟು ಕಾಲ ಉಪವಾಸ ಇರಬಲ್ಲವು, ಹಸಿವು ಕಾಡಿದಾಗ ತಿನ್ನಬೇಕಾಗುತ್ತದೆ. ಆಗ ರುಚಿ ವಿಷಯಗಳು ನಮ್ಮನ್ನು ಯಾಮಾರಿಸಿ ಬಿಡುತ್ತವೆ. ಮೇಲಿನ ವಚನ ಅಕ್ಕಮಹಾದೇವಿಯವರ ಜೀವನಾನುಭವದಿಂದ ಪ್ರಕಟವಾದ ದಾರ್ಶನಿಕ ವಚನ. ಈ ವಚನದಲ್ಲಿ ಪ್ರಕೃತಿ ಕೊಡ ಮಾಡಿರುವ ಕೆಲವು ಸೂತ್ರಗಳಿವೆ. ಸಿದ್ಧಾಂತಗಳಿವೆ. ಅನ್ನ ಬೇಕೊ ? ಸ್ವಾತಂತ್ರ್ಯ ಬೇಕೋ? ಉಪವಾಸ, ಮೌನ, ಅಸಹಕಾರ, ಸತ್ಯದ ಗುರಿ. ಅದರ ದರ್ಶನ, ಅಹಿಂಸೆ. ಈ ಕೆಲವು ಮೌಲ್ಯಗಳು ಈ ವಚನದಲ್ಲಿ ಅಡಕವಾಗಿವೆ. ಎಂದು ತನ್ನ ಪತಿಗೆ ಸಂಪೂರ್ಣವಾಗಿ ಶರಣಾಗತರಾದರ ಶರಣಸತಿ ಮಹಾದೇವಿ ಅದರಂತೆ ಮಹಾದೇವಿಯ ಪ್ರತಿದಿನ ಶಿವಪೂಜೆ ಹಾಗೂ ಶರಣಭಕ್ತರಿಗೆ ದಾಸೋಹ ನಡೆಯುತ್ತದೆ. ನಿತ್ಯ ತನ್ನ ಇಷ್ಟದೇವರಾದ ಚೆನ್ನಮಲ್ಲಿಕಾರ್ಜುನನನ್ನು ನೆನೆಯುತ್ತಾ ದಾನ ಧರ್ಮಗಳನ್ನು ಮಾಡುತ್ತಾ ತಲ್ಲೀನಳಾಗಿ ಬಿಡುತ್ತಾರೆ. ಹೀಗೆ ದಿನದಿಂದ ದಿನಕ್ಕೆ ಪ್ರತಿದಿನವೂ ನಡೆಯುವ ಈ ಶರಣ ಸಂಪ್ರದಾಯದ ಪೂಜಾ ಕೈಂಕರ್ಯವನ್ನು ಕಂಡು ಅರಸೊತ್ತಿಗೆಯ ಕೆಲವು ಮಂತ್ರಿಗಳು ಈ ರೀತಿ ಭಂಡಾರದ ಸಂಪತ್ತು, ಶರಣರ ಭಕ್ತರ ದಾಸೋಹದ ನೆಪದಲ್ಲಿ ಸೋರಿಹೋಗುವುದನ್ನು ಹಾಗೂ ಅರಮನೆಗೆ ಪ್ರತಿನಿತ್ಯ ಬರುವ ಜಂಗಮ ಸಮೂಹ ಮಹಾದೇವಿಯನ್ನು ಹಾಡಿ-ಹೊಗಳುವುದನ್ನು ಅರಸನ ಗಮನಕ್ಕೆ ತಂದು 'ಮಹಾರಾಜ, ನೀವು ಮೆಚ್ಚಿ, ವರಿಸಿಬೇಕಾದ ಮಹಾದೇವಿಯು ನಿಮ್ಮ ರಾಜಭಂಡಾರವನ್ನೆಲ್ಲಾ ದಾಸೋಹದ ಹೆಸರಿನಲ್ಲಿ ಕರಗಿಸುತ್ತಿರುವಳು. ಅದಲ್ಲದೆ, ಮಹಾದೇವಿಯು ಪುರಜನರ ನಾಲಿಗೆಯಲ್ಲಿ ಮಹಾಶರಣೆಯಾಗಿ ಜನಪ್ರಿಯಳಾಗುತ್ತಿದ್ದಾರೆ. ಇದು ಯಾವ ನ್ಯಾಯ? ಆಕೆ ಇನ್ನೂ ಈ ರಾಜ್ಯದ ಮಹಾರಾಣಿಯೂ ಆಗಿಲ್ಲ. ನಿಮ್ಮ ಮನದರಸಿಯೂ ಆಗಿಲ್ಲ. ಅವರ ಈ ವರ್ತನೆಯನ್ನು ನೀವು ಎಲ್ಲಿಯವರೆಗೆ ಸಹಿಸುವಿರಿ? ತಾವು ಬೇಗನೆ ಒಂದು ನಿರ್ಧಾರಕ್ಕೆ ಬರುವುದು ಒಳ್ಳೆಯದೆಂದು ನಮ್ಮೆಲ್ಲರ ಅಭಿಪ್ರಾಯ' ಎಂದು ತಿಳಿಸುತ್ತಾರೆ.

ಕೆಲವು ದಿನಗಳು ಕಳೆದವು. ಕೌಶಿಕನು ಮಹಾದೇವಿಯೊಡನೆ ಗಂಭೀರವಾಗಿಯೇ ವರ್ತಿಸುತ್ತಿದ್ದ. ಆದರೆ, ಮನಸ್ಸಿನಲ್ಲಿ ಮಾತ್ರ ಚಡಪಡಿಸುತ್ತಿದ್ದ. ಆದರೆ ಏನೂ ಮಾಡುವಂತಿರಲಿಲ್ಲ.

ಅರಮನೆಯಲ್ಲಿ ಮಹಾದೇವಿಯ ದಿನಚರಿ ಶುರುವಾಯಿತು. ಸ್ನಾನ, ಪೂಜೆ, ಧ್ಯಾನ, ಸಖಿಯರೊಡನೆ ಮಾತುಕತೆ, ಊಟ, ಅಧ್ಯಾತ್ಮಿಕ ಚಿಂತನೆ ಮುಂತಾದವುಗಳಲ್ಲಿ ತನ್ನನ್ನು ತೊಡಗಿಸಿಕೊಂಡರು. ಹಾಗೆ ನೋಡಿದರೆ, ಮಹಾದೇವಿ ಸುಖವಾಗಿಯೇ ನೆಮ್ಮದಿಯಿಂದ ಬದುಕಲು ಆಗುತ್ತಿರಲಿಲ್ಲ .

ಕೌಶಿಕನು ಯಾವಾಗ ಏನು ಅನಾಹುತ ಮಾಡುವನೋ ಎಂಬ ಭಯ ಬೇರೇ ಚಿಂತೆ . ಏಕೆಂದರೆ ಅವನು ಮಹಾದೇವಿಯನ್ನು ಕಾಮುಕ ಕಣ್ಣುಗಳಿಂದಲೇ ನೋಡುತ್ತಿದ್ದ. ಹೀಗಾಗಿ ಕೆಲವೊಮ್ಮೆ ಈ ಬಂಗಾರದ ಪಂಜರದಿಂದ

ಹೊರಹೋಗಬೇಕೆಂದೆನಿಸುತ್ತಿತ್ತು. ಕೌಶಿಕ ರಾಜನ ಅಂತರಂಗ ಚಡಪಡಿಸತೊಡಗಿತು. ಎಷ್ಟು ದಿನ ಕಳೆದರೂ ಮಹಾದೇವಿ ತನ್ನತ್ತ ಒಲಿಯಲಿಲ್ಲವಲ್ಲ ಎಂಬ ಕೊರಗು ಅವನನ್ನು ಪೀಡಿಸತೊಡಗಿತು. ಎಂದು ಮಹಾದೇವಿಯ ಸಂಗವು ದೊರೆಯುವುದೋ ಎಂದು ಕಾತರಿಸತೊಡಗಿದ. ವಾಸ್ತವವಾಗಿ, ತಾನು ಬಯಸಿದ್ದನ್ನು ಆ ಕೂಡಲೇ ಪಡೆಯುತ್ತಿದ್ದ ಅವನು ಇಷ್ಟು ದಿನ ಕಾದದ್ದೇ ಅಚ್ಚರಿಯ ಸಂಗತಿ. ಎಷ್ಟೋ ಬಾರಿ ಅವನ ಮನಸ್ಸು ಜಾರುತ್ತಿತ್ತು; ಆದರೂ ಸಂಯಮ ಕಳೆದುಕೊಳ್ಳಲಿಲ್ಲ.

ಮಹಾಶಿವಶರಣೆ ಮಹಾದೇವಿ ಅರಮನೆಯಲ್ಲಿ ಜಂಗಮ ಆರಾಧನೆಯನ್ನು ನಿರಂತರವಾಗಿ ನಡೆಸಿಕೊಂಡು ಹೋದರು. ಆದರೆ ಕೌಶಿಕನಿಗೆ ಇದು ದಿನೇ ದಿನೇ ಅಪಥ್ಯವಾಗತೊಡಗಿತು. ಮಹಾದೇವಿಯ ಒಲವನ್ನು ಲೌಕಿಕ ಲೋಕದತ್ತ ತಿರುಗಿಸಲು ಪಟ್ಟ ಪ್ರಯತ್ನಗಳೆಲ್ಲ ವಿಫಲವಾದವು. ಅಷ್ಟೇ ಅಲ್ಲ, ಮಹಾದೇವಿ ಅರಮನೆಯನ್ನು ಆಧ್ಯಾತ್ಮಿಕ ಮನೆಯನ್ನಾಗಿ ಪರಿವರ್ತನೆ ಮಾಡುತ್ತಿರುವುದನ್ನು ನೋಡಿ ಕಂಗಾಲಾದ. ಮಹಾದೇವಿ ಹೀಗೆ ಪೂಜೆ, ಧ್ಯಾನ ಕಾರ್ಯಗಳನ್ನು ನಿರಂತರ ಮುಂದುವರಿಸಿದರೆ ಶಿವಾನುಭವ ಗೋಷ್ಠಿಯ ಕಾರ್ಯಕ್ರಮ ಬೆಳೆದು, ತನ್ನ ಬಯಕೆಗಳೆಲ್ಲ ಭಸ್ಮವಾಗುವುದೆಂದು ಚಿಂತಿಸಿದ. ಹೇಗಾದರೂ ಮಾಡಿ ಜಂಗಮರು ಅರಮನೆಗೆ ಬರುವುದನ್ನು ತಡೆಗಟ್ಟಬೇಕೆಂದು ಆಲೋಚಿಸಿದ.

ಇದೇ ಸಮಯದಲ್ಲಿ ನಾಲ್ಕಾರು ಜನ ಜಂಗಮರು ಅರಮನೆಗೆ ಬಂದೇ ಬಿಟ್ಟರು. ಎಂದಿನಂತೆ ಅವರು ಒಳಗೆ ಪ್ರವೇಶಿಸುತ್ತಿದ್ದಂತೆ ದ್ವಾರಪಾಲಕರು “ನಿಮ್ಮನ್ನು ಒಳಗೆ ಬಿಡಬಾರದೆಂದು ರಾಜರ ಅಪ್ಪಣೆಯಾಗಿದೆ' ಎಂದರು. ನೇರವಾಗಿ ರಾಜನು ಬಂದು ಜಂಗಮರಿಗೆ ತುಂಬ ಅವಮಾನ ಮಾಡಿದ ಬಾಯಿಗೆ ಬಂದಂತೆ ಬೈದು, ಕತ್ತುಹಿಡಿದು ತಳ್ಳುತ್ತನೆ. ಜಂಗಮರಿಗೆ ಅವಮಾನವಾಯಿತು. ಅವರು ನೊಂದು ಹೊರಟುಹೋದರು. ಕೌಶಿಕನು ಉದ್ದೇಶಪೂರ್ವಕವಾಗಿ ಜಂಗಮರನ್ನು ಅಪಮಾನಿಸಿದ್ದಕ್ಕಾಗಿ ಮಹಾದೇವಿಗೆ ವಿಪರೀತ ಸಿಟ್ಟುಬಂದಿತು. ನಾಲಿಗೆ ಮೇಲೆ ಕಡಿವಾಣ, ಮನಸ್ಸಿನ ಮೇಲೆ ನಿಯಂತ್ರಣ ಇರಬೇಕು ಎಂದು ರಾಜನ ಮೇಲೆ ರೇಗಿದ ಮಹಾದೇವಿ. ಕೌಶಿಕನಿಗೆ ಸಿಟ್ಟು, ಬೇಸರ ಎರಡೂ ಉಂಟಾದವು. 'ನೀನು ಅರಮನೆಗೆ ಬಂದು ಎಷ್ಟು ದಿನಗಳಾದವು? ಒಮ್ಮೆಯಾದರೂ ನನ್ನತ್ತ ತಿರುಗಿ ನೋಡಿರುವೆಯಾ? ನಿನಗೆ ಜಂಗಮರ ಸೇವೆಯೇ ಮಹಾಕಾರ್ಯವೆನಿಸಿದೆ. ನನ್ನ ಸೇವೆ ಯಾವಾಗ? ಇನ್ನು ಸಾಕು ಮಾಡು ಈ ಪೂಜೆ, ಧ್ಯಾನ, ಜಂಗಮರ ಸೇವೆ. ಮಹಾದೇವಿ ನೆನಪಿರಲಿ, ನಾನು ನಿನ್ನ ಗಂಡನಾಗುವವನು. ಗಂಡನ ಇಚ್ಛೆಯಂತೆ ನಡೆಯುವುದು ಹೆಂಡತಿಯ ಧರ್ಮ.'

'ದಯವಿಟ್ಟು ಕ್ಷಮಿಸಿ. ಜಂಗಮರ ಸೇವೆಗೆ ಅಡ್ಡಿಮಾಡಿ ನೀವು ನನ್ನ ಒಂದು ಷರತ್ತನ್ನು ಮುರಿದಿದ್ದೀರಾ. ಮುಂದೆ ಎಚ್ಚರವಿರಲಿ. ಮಹಾದೇವಿಯವರು ಒಂದು ವಚನ ರಾಜನಿಗೆ ಹೇಳುತ್ತಾರೆ.

ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ ?

ಧನವಿದ್ದು ಫಲವೇನು ದಯವಿಲ್ಲದನ್ನಕ್ಕ ?

ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ ?

ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ ?

ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ ?

ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನಾ ?

ಕೌಶಿಕನು ಎಚ್ಚೆತ್ತುಕೊಂಡ. ತನ್ನ ಮನಸ್ಸನ್ನು ನಿಯಂತ್ರಿಸಲು ಪ್ರಯತ್ನಿಸಿದ. ಆವೇಶವನ್ನು ಹತ್ತಿಕ್ಕಿದ. ತನ್ನ ತಪ್ಪಿನ ಅರಿವಾಯಿತು. ಕ್ಷಮೆ ಕೇಳಬೇಕೆಂದು ಅನಿಸಿತು. ಈಗ ಕೂಡದು, ಮಹಾದೇವಿಯ ಮನಸ್ಸು ಸರಿಯಿರುವುದಿಲ್ಲ ಎಂದು

ಸುಮ್ಮನಾಗಿಬಿಟ್ಟ. ಅರಮನೆಯಲ್ಲಿ ಮಹಾದೇವಿ ಸೇವಕಿಯಾಗಿ ರಸವಂತಿಇದ್ದಳು. ಹೀಗೆ ಹೇಳುತ್ತಾರೆ ಮಹಾದೇವಿ"ನನ್ನ ಗೆಳತಿಯಾಗಿ ಬಾ. ಸೇವಕಿಯಾಗಿ ಅಲ್ಲ"ರಸವಂತಿ, ಒಂದು ಮಾತು ಕೇಳುತ್ತೇನೆ. ನಿಜ ಹೇಳುತ್ತೀಯಾ?" "ಕೇಳಿ ಒಡತಿ."

"ಆ ಮಾತನ್ನು ಬಿಡು, ನೀನು ನನ್ನ ಗೆಳತಿ, ಬಾ ಹತ್ತಿರಕ್ಕೆ" ಎಂದು ಕೈ ಹಿಡಿದು ಅವಳನ್ನು ಹತ್ತಿರಕ್ಕೆ ಎಳೆದುಕೊಂಡಲು. ರಸವಂತಿ ಸ್ವಲ್ಪಸಂಕೋಚದಿಂದಲೇ ಹತ್ತಿರಕ್ಕೆ ಬಂದರೂ ಕ್ರಮೇಣ ಅವಳ ಸಂಕೋಚ ಮರೆಯಾಯಿತು. ಮಹಾದೇವಿಯ ವಾತ್ಸಲ್ಯಕ್ಕೆ ಅವಳ ಮನಸ್ಸು ಮಾರುಹೋಗಿತ್ತು. ಅವಳಲ್ಲಿ ಒಡತಿಗಿಂದ ಹೆಚ್ಚಾಗಿ ಗೆಳತಿಯನ್ನೇ ಕಂಡುಕೊಂಡಳು ರಸವಂತಿ. ಕೌಶಿಕನಿಗೂ ಮಂತ್ರಿಗಳ ಮಾತು ಸರಿಯೆನಿಸಿ, ತಾನು ರಾಜನಾಗಿ ಒಂದು ಹೆಣ್ಣಿನ ಅಡಿಯಾಳಾಗಿ ವರ್ತಿಸುವುದಕ್ಕಿಂತ ಅವಳನ್ನು ತನ್ನ ವಶಕ್ಕೆ ಕೂಡಲೇ ತೆಗೆದುಕೊಳ್ಳಬೇಕೆಂದು ನಿರ್ಧರಿಸಿ, ಮಹಾದೇವಿಯ ಬಳಿಗೆ ಬಂದು ಅವಳನ್ನು ಮದುವೆಯಾಗಲು ತೀವ್ರವಾಗಿ ಬಲವಂತಪಡಿಸುತ್ತಾನೆ. ಅದಕ್ಕೆ ಮಹಾದೇವಿ ಎಲುವಿಲ್ಲದ ನಾಲಗೆ ಹೊದಕುಳಿಗೊಂಡಾಡುದು,

ಎಲೆ ಕಾಲಂಗೆ ಗುರಿಯಾದ ಕರ್ಮಿ

ಉಲಿಯದಿರು, ಉಲಿಯದಿರು ಭವಭಾರಿ ನೀನು.

ಹಲವು ಕಾಲದ ಹುಲುಮನುಜಂಗೆ

ಹುಲುಮನುಜ ಹೆಂಡತಿ ಇವರಿದ್ದರೆ ಅದಕ್ಕದು ಸರಿ.

ಚೆನ್ನಮಲ್ಲಿಕಾರ್ಜುನನೆ ಗಂಡನೆನಗೆ ಲೋಕದೊಳಗೊಂಡಿರುಂಟಾದರೆ ಮಾಡಿಕೊ, ಎನ್ನ ಬಿಡು ಮರುಳೆ.

ಎಂದು ಆಗ ಮಹಾದೇವಿಯು 'ಅರಸನೇ, ನೀನು ನನ್ನ ಎರಡು ಷರತ್ತುಗಳನ್ನು ಧಿಕ್ಕರಿಸಿರುವೆ. ನನ್ನ ಮೂರನೇ ಷರತ್ತು; ನೀನು ನನ್ನ ಧರ್ಮವನ್ನು ಸ್ವೀಕಾರಮಾಡಬೇಕು. ಇದು ನನ್ನ ಮೂರನೇ ಷರತ್ತು. ಅಂದರೆ ಮಾತ್ರ ನನ್ನ ನಿನ್ನ ಮದುವೆ. ನಾನಂತೂ ಧರ್ಮವನ್ನು ತೊರೆದು ಬರಲಾರೆ. ಇದಕ್ಕೆ ನಿನ್ನ ಸಮ್ಮತಿ ಇದ್ದರೆ ಮಾತ್ರ ಮದುವೆಯ ವಿಚಾರವನ್ನು ಪರಿಶೀಲಿಸಬಹುದು ಎಂದು ಹೇಳುತ್ತಾರೆ. ಇದನ್ನು ಕೇಳಿದ ಕೌಶಿಕನಿಗೆ ನೆಲವೇ ಕುಸಿದಂತಾಗುತ್ತದೆ. ಕೇವಲ ಒಂದು ಹೆಣ್ಣು ನಾನು ರಾಜನೆಂದು ತಿಳಿದೂ ಸಹ ನನ್ನ ಆಚರಣೆಯಲ್ಲಿರುವ ಧರ್ಮವನ್ನು ತೊರೆದು ಅನ್ಯಧರ್ಮವನ್ನು ಸ್ವೀಕರಿಸಲು ಹೇಳುತ್ತಿರುವಳಲ್ಲ! ಇದು ಮಹಾದೇವಿಯ ಉದ್ಧಟತನವೇ ಸರಿ ಎಂದು ಕೋಪಿಸಿಕೊಂಡು ಕೌಶಿಕನು, 'ಎಲೆ ಮಹಾದೇವಿ, ನಾನು ಪವಿತ್ರವಾದ ಜೈನಧರ್ಮದವನು, ನಾನು ನನ್ನ ಧರ್ಮವನ್ನು ಯಾವ ಕಾರಣಕ್ಕೂ ತೊರೆಯುವುದಿಲ್ಲ. ಅಲ್ಲದೆ ನಿನ್ನನ್ನು ಬಿಡುವುದೂ ಇಲ್ಲ. 'ರಾಜಾ ಪ್ರತ್ಯಕ್ಷ ದೇವತಾ' ಎಂಬ ನುಡಿಯನ್ನು ಕೇಳಿಲ್ಲವೆ? ತನಗೆ ಬೇಕಾದುದನ್ನು ಪಡೆಯುವ ಹಕ್ಕು ರಾಜನಿಗೆ ಸರ್ವದಾ ಇದ್ದೇ ಇದೆ. ಇದು ನಿನಗೆ ತಿಳಿದಿರಬೇಕಲ್ಲವೇ?' ಎಂದು ಎಚ್ಚರಿಸುತ್ತಾನೆ. ಮಹಾದೇವಿಗೆ ಅರಮನೆಯಲ್ಲಿ ಯಾರು ಸಹಾಯಕ್ಕೆ ಬರುವುದಿಲ್ಲ, ಆಗ ಮಹಾದೇವಿ ಹೀಗೆ ವಚನವನ್ನು ಹೇಳುತ್ತರೆ,

ಎರೆಯಂತೆ ಕರಕರಗಿ, ಮಳಲಂತೆ ಜರಿಜರಿದು,

ಕನಸಿನಲ್ಲಿ ಕಳವಳಿಸಿ, ಆನು ಬೆರಗಾದೆ.

ಆವಿಗೆಯ ಕಿಚ್ಚಿನಂತೆ ಸುಳಿಸುಳಿದು ಬೆಂದೆ

ಆಪತ್ತಿಗೆ ಸಖಿಯರನಾರನೂ ಕಾಣೆ.

ಅರಸಿ ಕಾಣದ ತನುವ, ಬೆರಸಿ ಕೂಡದ ಸುಖವ, ಎನಗೆ ನೀ ಕರುಣಿಸಾ, ಚೆನ್ನಮಲ್ಲಿಕಾರ್ಜುನಾ.

ಈ ವಚನದಲ್ಲಿ ನಾದ, ಲಯ, ಗಾನ ಭಕ್ತಿ, ವಿರಹ ಭಾವ, ಭಾವಗೀತೆಯಾಗಿ ಹೊರಹೊಮ್ಮಿದೆ. ಅವರು ಕೊಡುವ ದೃಷ್ಟಾಂತಗಳನ್ನು ಗಮನಿಸಿದರೆ ಅವರು ಎಷ್ಟೊಂದು ಸಮಕಾಲೀನ ವಿವರಗಳನ್ನು ಗ್ರಹಿಸಿದ್ದರು ಎಂದು ಆಶ್ಚರ್ಯವಾಗುತ್ತದೆ. ಪುಟ್ಟ ಪುಟ್ಟ ಸಂಗತಿಗಳನ್ನು ಉದಾಹರಿಸಿ ಚಿತ್ರವತ್ತಾದ ಪರಿಣಾಮಕಾರಿ ದೃಶ್ಯ ನೀಡುತ್ತಾರೆ. ಪರಮಾತ್ಮನ ಹಂಬಲದ ವಿರಹದ ವಚನಗಳು, ಅಕ್ಕಮಹಾದೇವಿಯರಲ್ಲಿ ಅಮೋಘ. ಆ ಎಳೆಯ ಯೌವನದ ಮನಸ್ಸು ಗೌರಿಗೆ ಶಂಕರನು ಸಿಕ್ಕಿದಂತೆ ನನಗೂ ಸಿಕ್ಕಿಬಿಡುತ್ತಾನೆ ಎಂಬ ಮುಗ್ಧ ಭಕ್ತಿಯಲ್ಲಿ ಅದೆಷ್ಟು ಪೂಜೆ ಮಾಡಿದ್ದಾರೆ. ಅದೆಷ್ಟು ಹಂಬಲಿಸಿದ್ದಾರೆ. ಅವರ ಕಂಬನಿ ಕನವರಿಕೆ ಅಕಾಶವನ್ನೆಲ್ಲ ವ್ಯಾಪಿಸುವಂಥದು. ಸಮುದ್ರವನ್ನೆಲ್ಲ ತುಂಬುವಂಥದು. ಭಾವತೀವ್ರತೆಯಿಂದಾಗಿ ಅವರ ಒಂದೊಂದು.

ವಚನವೂ ಭಾವಗೀತೆಯಾಗಿ, ಕಾವ್ಯಗಂಗೆಯಾಗಿ ಹರಿದಿದೆ. ಹೆಣ್ಣಾಗಿ ಹುಟ್ಟಿದ್ದರೂ, ಆವರು ಕಾಣುವ ಜಗತ್ತಿನಲ್ಲೆಲ್ಲ ವಿಶೇಷವಾದುದನ್ನು ಕಾಣುತ್ತಾರೆ. ರವಿಕಾಣದುದನ್ನು ಕವಿಯಾಗಿ ಕಾಣುತ್ತಾರೆ. ಇತರರು ಗ್ರಹಿಸಲಾರದುದನ್ನು ಗ್ರಹಿಸುತ್ತಾರೆ. ಅವರ ಭಾವಕೋಶದಲ್ಲಿ ಇವು ದೃಷ್ಟಾಂತಗಳಿಗೆ ಉಪಮೆಗಳಾಗಿ ಪ್ರಕಟವಾಗುತ್ತವೆ. ಎರೆಯಂತೆ ಕರಕರಗಿ ಮಳಲಂತೆ, ಜರಿಜರಿದು, ಕನಸಿನಲಿ ಕಳವಳಿಸಿ ನಾನು ಬೆರೆಗಾದೆ. ಎರ ಮಣ್ಣು ನೀರಿನಲ್ಲಿ ಕರಗಿ ಹೋಗುವಂತೆ, ಹೊಳೆಯ ನೀರಿನಲ್ಲಿ ಮಳಲು ನೀರಿನಲ್ಲಿ ಸರಿದು ಹೋಗುವಂತೆ ನಾನು ಕನಸಿನಲ್ಲಿ ಸದಾ ನಿನ್ನನ್ನೆ ಕಾಣುತ್ತ ಕರಗಿ ಹೋಗುತ್ತಿದ್ದೇನೆ ಮರಳು, ಎರೆ, ಎರಡೂ ಸುಂದರ ದೃಷ್ಟಾಂತಗಳು. ಬಾಲ್ಯಕಾಲದಲ್ಲಿ ಮಳೆಬಿದ್ದಾಗ ನೀರಿನಲ್ಲಿ ಆಟವಾಡಿದ್ದರು ಆಗ ಮಳೆನೀರಿನಲ್ಲಿ ಮರಳು ಕೊಚ್ಚಿ ಹೋಗುವುದನ್ನು ಗಮನಿಸಿದ್ದರು. ಅಂತೆಯೆ ಹೊಲಗದ್ದೆಗಳಲ್ಲಿ ಎರೆಮಣ್ಣು ಕರಗುವುದನ್ನು ಕಂಡಿದ್ದರು. ಆ ದೃಶ್ಯಗಳನ್ನು ಇಲ್ಲಿ ರೂಪಕಗಳಾಗಿ ಬಳಸಿಕೊಂಡಿದ್ದಾರೆ. ಅಕ್ಕನವರು ಈಗ ಪರಮಾತ್ಮನ ಪ್ರೀತಿಯಲ್ಲಿ ಕರಗಿಹೋಗುತ್ತಿದ್ದಾರೆ. ಆ ಪ್ರೀತಿ ನನ್ನನ್ನು ದಿನೆ ದಿನೆ

ಕರಗಿಸುತ್ತಿದೆ. ಪರಮಾತ್ಮನನ್ನು ಪತಿಯಾಗಿ ಪಡೆಯುವ ಪ್ರೀತಿ, ಅಕ್ಕವನರಲ್ಲಿ ಹುಟ್ಟಿದ್ದು ಅವರಿಗೂ ಒಂದು ಬೆರೆಗು. ಈ ಪ್ರೀತಿ ಸಾಧ್ಯವೆ ? ನನಗೆ ಅವನು ದೊರೆಯುವನೆ? ಆವಿಗೆಯ ಕಿಚ್ಚಿನಂತೆ ಸುಳಿಸುಳಿದು ಬೆಂದೆ. ಆವಿಗೆ ಎಂದರೆ ಮಡಕೆ, ಸುಣ್ಣ, ಇಟ್ಟಿಗೆ ಇವುಗಳನ್ನು ಭಟ್ಟಿ ಒಲೆಯಲ್ಲಿ ಸುಡುವ ಒಂದು ವಿಧಾನ. ಈ ಒಲೆಯ ಸುಡು ಝಳ ಎಷ್ಟಿರುತ್ತದೆ ಎಂದರೆ ಅಪರಿಮಿತವಾದುದು. ಹೊರಗೆ ಬೆಂಕಿ, ಹೊಗೆ ಒಂದಿಷ್ಟೂ ಕಾಣುವುದಿಲ್ಲ. ಆದರೆ ಅದರ ಸುಡು ಝಳ ಮಾತ್ರ ಹೇಳಲಸದಳವಾದುದು. ಒಳಗೆ ಬೇಯಿಸಿ ಸುಟ್ಟು ಬಿಡುತ್ತದೆ. ಆ ಭಟ್ಟಿ ಒಲೆಯನ್ನು ಕಿತ್ತು ನೋಡಿದಾಗ ಮಾತ್ರ ಗೊತ್ತಾಗುತ್ತದೆ. ಈ ಒಲೆ ಎಷ್ಟೊಂದು ಒಳಗೇ ಬೇಯಿಸಿದೆ ಎಂದು. ಹಾಗೇ ಅಕ್ಕಮಹಾದೇವಿಯವರು ಪರಮಾತ್ಮನ ಪ್ರೀತಿಯ ವಿರಹದಲ್ಲಿ ಒಳಗೆ ಬೆಂದು ಹೋಗಿದ್ದಾರೆ. ಯಾರಿಗೂ ಹೇಳಿಕೊಳ್ಳುವಂತಿಲ್ಲ. ಹೇಳಿಯೂ ಪ್ರಯೋಜನವಿಲ್ಲ. ಇದರಿಂದ ಉಪಹಾಸ್ಯ, ನಗೆಚಟಾಕಿ ಸಿಗುತ್ತದೆ. ಆ ಪ್ರೀತಿ ದಿನೆ ದಿನೆ ಅಧಿಕವಾಗುತ್ತ ಹೋಗುತ್ತಿದೆ. ಮಾಡಬೇಕೇನು? ಆ ಪ್ರೀತಿ ಒಂದಿಷ್ಟು ಕಡಿಮೆಯಾಗುತ್ತಲೆ ಇಲ್ಲ ಎಷ್ಟು ತಡೆದರು ಪ್ರೀತಿ ಅಧಿಕಗೊಳ್ಳುತ್ತಲೆ ಇದೆ. ಪರಮಾತ್ಮನ ಪ್ರೀತಿಯ ಸುಡು ವಿರಹ ಒಳಗೆ ಅಕ್ಕನವರನ್ನು ಸುಡುತ್ತಲೆ ಇದೆ. ಅವನನ್ನುಳಿದು ಅವರಿಗೆ ಬೇರೇನೂ ಬೇಡ. ಜೀವನದಲ್ಲಿ ಅವನನ್ನುಳಿದು ಬೇರೇನೂ ರುಚಿಸದು. ಈಗ ಅವರಿಗೆ ಪರಮಾತ್ಮ ಕೂಡಲೆ ಬೇಕು. ಅವನನ್ನು ನೋಡುವ ಮಾತಾಡುವ ಜೊತೆಯಲ್ಲಿಯೆ ಇರುವ ಅಮೋದ ಪ್ರಮೋದಗಳು ಬೇಕು. ಅವನಿಗೆ ತಮ್ಮನ್ನೆ ಅರ್ಪಣ ಮಾಡಿಕೊಳ್ಳಲು ಅವರು ಸಿದ್ದರಿದ್ದಾರೆ. ಆದರೆ ಈಗ ಪರಮಾತ್ಮ ನೋಡಲು ಸಿಗುತ್ತಿಲ್ಲ. ಈ ಪ್ರೀತಿ, ವಿರಹ, ಯಾರಲ್ಲಿ ಹೇಳಿಕೊಳ್ಳಲಿ ಮಹಾದೇವಿಯವರ ಕಣ್ಣೀರಿಗೆ ಅಲ್ಲಿ ಬೆಲೆ ಇರಲ್ಲ ಆಗ ಮಹಾದೇವಿಯು 'ನಿನಗೆ ನಿನ್ನ ಧರ್ಮದ ಮೇಲೆ ಅಭಿಮಾನವಿರುವಂತೆ ನನಗೂ ನನ್ನ ಧರ್ಮ - ಸಿದ್ಧಾಂತದ ಮೇಲೆ ಅಭಿಮಾನವಿದೆ. ನಾನೇಕೆ ನನ್ನ ಧರ್ಮವನ್ನು ತ್ಯಜಿಸಿ ನಿನ್ನನ್ನು ವರಿಸಬೇಕು? ನಾನು ಸ್ತ್ರೀ ಎಂದೊಡನೆ ನನ್ನ ಧರ್ಮವನ್ನು ತ್ಯಜಿಸಬೇಕೆ?' ಎಂದು ಸ್ತ್ರೀಯ ಧರ್ಮಸ್ವಾತಂತ್ರ್ಯದ ಕಹಳೆಯನ್ನು ಮೊಳಗಿಸುತ್ತಾರೆ. ಅಲ್ಲದೆ ಪುನಃ ರಾಜನಿಗೆ 'ರಾಜ, ರಾಜನಾದವನು ತನ್ನ ಪ್ರಜೆಗಳನ್ನು ಮಕ್ಕಳಂತೆ ರಕ್ಷಿಸಬೇಕಲ್ಲವೆ? ಅಂದರೆ ಮಾತ್ರ ರಾಜ ಪ್ರತ್ಯಕ್ಷ ದೇವತೆಯೆಂದು ಹೇಳಬಹುದು. ಆದರೆ ಅದೇ ರಾಜನು ಪ್ರಜೆಗಳಿಗೆ ತನ್ನ ಸ್ವಾರ್ಥ ಅಭಿಲಾಶೆಯನ್ನು ತೀರಿಸಿಕೊಳ್ಳಲು ಪ್ರಜೆಗಳ ಮನಸ್ಸಿನ ವಿರುದ್ಧ ನಡೆದುಕೊಂಡರೆ "ರಾಜಾ ಪ್ರತ್ಯಕ್ಷ ರಾಕ್ಷಸ" ಎನ್ನಬೇಕಾಗುತ್ತದೆ. ರಾಜನಾದವನು ಪ್ರಜೆಗಳನ್ನು ರಕ್ಷಿಸಬೇಕು. ಪ್ರಜಾಕಂಟಕನಾಗಬಾರದು. ಇದು ರಾಜಧರ್ಮ' ಎಂದು ಪ್ರತಿಪಾದಿಸುತ್ತಾರೆ. ಮಹಾದೇವಿಯ ಈ ಮಾತುಗಳನ್ನು ಕೇಳಿದ ಕೌಶಿಕನಿಗೆ ತಡೆಯಲಾರದಷ್ಟು ಕೋಪ ಬಂದು 'ನೀನು ಒಳ್ಳೆಯ ಮಾತಿನಿಂದ ಒಪ್ಪಿಕೊಂಡರೆ, ನಿನ್ನನ್ನು ಮಹಾರಾಣಿಯನ್ನಾಗಿ ಮಾಡುತ್ತೇನೆ. ಇಲ್ಲದಿದ್ದರೆ ಇಲ್ಲಿಯೇ ಈ ಕ್ಷಣ ನಿನ್ನನ್ನು ಬಲತ್ಕಾರವಾಗಿ ಪಡೆಯುತ್ತೇನೆ' ಎನ್ನುತ್ತಾನೆ. ಅದಕ್ಕೆ ಮಹಾದೇವಿಯು ವಿಚಲಿತಳಾಗದೆ 'ರಾಜನೆ, ನೀನು ನನ್ನನ್ನು ಬಲಾತ್ಕರಿಸಲು ಸಾಧ್ಯವಿಲ್ಲ. ಒಂದು ಹೆಣ್ಣಿನ ಮಾನ, ರಕ್ಷಣೆ ಮಾಡಬೇಕಾದದ್ದು ರಾಜಧರ್ಮ ಹಾಗೂ ಪ್ರತಿಯೊಬ್ಬ ಸಾಮಾನ್ಯ ಪುರುಷನ ಪ್ರಥಮ ಕರ್ತವ್ಯ. ಇದನ್ನರಿಯದೆ ನೀನು ಕಾಮಾಂಧನಾಗಿ ಹೀಗೆ ವರ್ತಿಸಬಹುದೇ? ನಿನ್ನಂತಹವನನ್ನು ಮದುವೆಯಾಗುವುದು ಸಾಧ್ಯವೇ ಇಲ್ಲ. ಈ ದೇಹದ ಸೌಂದರ್ಯವನ್ನು ಕಂಡು ನನ್ನನ್ನು ಆಸೆ ಪಟ್ಟಿರುವೆ? ಅದು ಕೇವಲ ರಕ್ತಮಾಂಸಗಳಿಂದ ತುಂಬಿದ ಎಲುಬಿನ ಹಂದರ ಮಾತ್ರ, ಎಲ್ಲ ಸ್ತ್ರೀಯರಲ್ಲಿಯೂ ಇರುವುದು ಅದೇ ದೇಹವಲ್ಲವೇ? ಮತ್ತೊಬ್ಬರ ಮನಸ್ಸನ್ನು ಕೆಡಿಸುವ ಈ ದೇಹದ ಮೇಲೆ ನನಗೆ ಯಾವ ಮೋಹವೂ ಇಲ್ಲ. ಈ ದೇಹದ ರಚನೆಯನ್ನು ಕಂಡಿರುವೆಯಾ? ಕೇಳು.

'ಅಮೇಧ್ಯದ ಮಡಿಕೆ, ಮೂತ್ರದ ಕುಡಿಕೆ ಎಲುಬಿನ ತಡಿಕೆ,

ಕೀವಿನ ಹಡಿಕೆ ಸುಡಲೀ ದೇಹವ, ಒಡಲವಿಡಿದು ಕೆಡದಿರು

ಚೆನ್ನಮಲ್ಲಿಕಾರ್ಜುನನರಿಯದ ಮರುಳೆ'

ಎಂದು ರಾಜನಿಗೆ ತಿಳುವಳಿಕೆ ಹೇಳಲು ಪ್ರಯತ್ನಿಸಿದರು. ಆದರೆ ಕಾಮುಕಮುಷ್ಟಿಯ ಹಿಡಿತದಲ್ಲಿದ್ದ ಕೌಶಿಕನು, ಅಕ್ಕನನ್ನು ಬಲಾತ್ಕರಿಸಿ ಸೀರೆಯ ಸೆರಗನ್ನು ಹಿಡಿದು ಎಳೆಯಲು ಪ್ರಯತ್ನಿಸಿದ

'ಎಮ್ಮೆಗೊಂದು ಚಿಂತೆ, ಸಮ್ಮಗಾರದೊಂದು ಚಿಂತೆ

ಧರ್ಮಿಗೊಂದು ಚಿಂತೆ, ಕರ್ಮಿಗೊಂದು ಚಿಂತೆ,

ಎನಗೆ ಎನ್ನ ಚಿಂತೆ, ತನಗೆ ತನ್ನ ಕಾಮದ ಚಿಂತೆ,

ಒಲ್ಲೆ ಹೋಗು, ಸೆರಗು ಬಿಡು ಮರುಳೆ.

ಎನಗೆ ಚೆನ್ನಮಲ್ಲಿಕಾರ್ಜುನದೇವರು ಒಲಿವರೊ ಒಲಿಯರೋ ಎಂಬ ಚಿಂತೆ'

ಎಂದು ನುಡಿಯುತ್ತಾರೆ. ಮಹಾದೇವಿಯವರು ಅರಮನೆಗೆ ಬಂದಾಗಿನಿಂದಲು ಊಟ ದಿನದಿಂದ ದಿನಕ್ಕೆ ಬಿಡುತ್ತ ಬಂದಿದ್ದರು, ದೇಹವು ತುಂಬ ಬಳಲಿತ್ತು. ನಿಸಹಯಕರಾಗಿದ್ದರು, ಮಹಾದೇವಿ ಎಷ್ಟು ಪ್ರತಿಭಟಿಸಿದರೂ ಬಿಡದ ಕೌಶಿಕ ರಾಜನು ಮುಗ್ಧಮನಸಿನ ಮಹಾದೇವಿಗೆ ತನ್ನ ಮನಸಿನ ಮೇಲೆ ಆಘಾತ ಬೀಳತೊಡಗಿತು ಏನು ಮಾಡಬೇಕೆಂದು ತಿಳಿಯದಾಯಿತು

ಕೌಶಿಕನ ಸ್ಥಿತಿ ಮಾತ್ರ ಶೋಚನೀಯವಾಗಿತ್ತು. ಅವನ ಮೋಹ ಎಷ್ಟು ಪ್ರಬಲ ವಾಗಿತ್ತೋ, ಅಷ್ಟೇ ಅವನ ಅಹಂಕಾರ ಮತ್ತು ದುರಭಿಮಾನ ಮಿಗಿಲಾಗಿತ್ತು. ಅರಮನೆಗೆ ಬಂದ ನಂತರ ಮಹಾದೇವಿ ಶರಣಾಗದೆ ಏನು ಮಾಡುತ್ತಾಳೆ ಎಂಬ ಉದಾಸೀನ ಧೋರಣೆಯಿಂದಲೇ, ಈ ಮೊದಲು ಅವನು ಮಹಾದೇವಿಯ ನಿಬಂಧನೆಗಳಿಗೆ ಒಪ್ಪಿಕೊಂಡಿದ್ದ. ಆದರೆ ಮಹಾದೇವಿ ಅಷ್ಟು ಸುಲಭವಲ್ಲ ಎಂಬುದು ಅರಿವಿಗೆ ಬರ ತೊಡಗಿದಂತೆ ಅವನಿಗೆ ಪಶ್ಚಾತ್ತಾಪವುಂಟಾಗಲು ಆರಂಭವಾಗಿತ್ತು.

'ಎಂಥ ಅವಿವೇಕ ಮಾಡಿಕೊಂಡೆ ನಾನು! ಮಹಾದೇವಯ ನಿಬಂಧನೆಗಳನ್ನು ಪುರಪ್ರಮುಖರ ಎದುರಿನಲ್ಲಿ ಒಪ್ಪಿ ದೊಡ್ಡ ತಪ್ಪು ಮಾಡಿದೆ. ಅದೇ ಈಗ ನನ್ನ ಕೈಗಳನ್ನು ಕಟ್ಟಿ ಹಾಕಿದೆ. ನನ್ನ ಅಧಿಕಾರವನ್ನು ಬಳಸಿ ಅವಳನ್ನು ಬಲವಂತವಾಗಿ ವಶಪಡಿಸಿಕೊಳ್ಳಲು ಅದು ಅಡ್ಡಿಯಾಗಿದೆ. ಯಂಥ ದುಡುಕಿನ ನಿರ್ಧಾರ ಮಾಡಿದರೆ ಪ್ರಜೆಗಳೆಲ್ಲ 'ಛೀ! ಥ!' ಎಂದು ನಿಂದಿಸುತ್ತಾರೆ. ಮೋಹಕ್ಕೆ ವಶನಾಗಿ ನಾನು ದೊಡ್ಡ ತಪ್ಪು ಮಾಡಿದೆ. ಇಷ್ಟರ ಮೇಲೂ ಮಹಾದೇವಿ ನನ್ನ ವಶವಾಗದಿದ್ದರೆ ಎಲ್ಲ ವ್ಯರ್ಥವಾಗಿಬಿಡುತ್ತದೆ. ನಾನು ಮೂರು ತಿಂಗಳು ಮುಗಿಯುವವರೆಗಾದರೂ ಪ್ರಚೋದನೆಗೆ ಒಳಗಾಗದೆ ಶಾಂತವಾಗಿರಲು ಪ್ರಯತ್ನಿಸಬೇಕು. ಇನ್ನೊಂದು ತಪ್ಪು ಮಾಡದಂತೆ ಎಚ್ಚರವಹಿಸಬೇಕು. ಅದೇ ನೆಪ ಮಾಡಿಕೊಂಡು ಮಹಾದೇವಿ ಅರಮನೆಯನ್ನು ಬಿಟ್ಟು ಹೋಗದಂತೆ ಎಚ್ಚರವಹಿಸಬೇಕು' ಇತ್ಯಾದಿ ಕೌಶಿಕ ಯೋಚಿಸುತ್ತಿದ್ದ.

ಆದರೆ ಮಹಾದೇವಿ ಸದಾ ಎಚ್ಚರವಾಗಿಯೇ ಇದ್ದರು. ಒಂದು ಕ್ಷಣವೂ ತನ್ನ ಸಹನೆಯನ್ನು ಕಳೆದುಕೊಳ್ಳಲಿಲ್ಲ. ಬಹಳ ಎಚ್ಚರಿಕೆಯಿಂದ ತನ್ನ ಅವಕಾಶ ವನ್ನು ತಾನೇ ಸೃಷ್ಟಿಸಿಕೊಂಡಳು. ತನಗೆ ಮೋಹಿತನಾದರೂ, ಶಿವಸ್ತುತಿ, ಶಿವಪೂಜೆ, ಶಿವಭಕ್ತರನ್ನು ಕಂಡರೆ ತನಗೆ ಆಗುವುದಿಲ್ಲವೆಂಬುದನ್ನು ಕೌಶಿಕ ಬೇಗನೇ ತೋರಿಸಿಕೊಂಡ. ಆ ದೌರ್ಬಲ್ಯವನ್ನೇ ಮಹಾದೇವಿ ಎರಡನೇ ಸಲ ಬಳಸಿಕೊಂಡು ಯಶಸ್ವಿಯಾದಳು. ಈಗ ಮೂರನೇ ಸಲವೂ ಅದೇ ದೌರ್ಬಲ್ಯವನ್ನು ಬಳಸಿಕೊಂಡು ಅರಮನೆಯ ಸಂಕೋಲೆಯಿಂದ ಬಿಡಿಸಿಕೊಳ್ಳಬೇಕೆಂದು ನಿರ್ಧರಿಸಿಕೊಂಡರು. ಮಾರನೆಯ ದಿನ ಬೆಳಿಗ್ಗೆ ಮಹಾದೇವಿ ಸ್ನಾನ ಮಾಡಿ ಬೇಳಿಗ್ಗೆ ಬ್ರಾಹ್ಮಿ ಸಮಾಯದಲ್ಲಿ ಶಿವ ಪೂಜೆ ಧ್ಯಾನದಲ್ಲಿ ಕುಳಿತಿದ್ದರು. ಮಹಾದೇವಿಯ ಕೂದಲು ಬೆನ್ನ ಮೇಲೆ ಹರಡಿದ್ದವು. ಮೈತುಂಬಾ ಸೆರಗು ಹೊದ್ದಿದ್ದರೂ ಅವರ ಸೌಂದರ್ಯ ರಾಜನ ಮನಸ್ಸನ್ನು ಕೆಣಕಿತು. ಅವನು ನಿಯಂತ್ರಣ ಕಳೆದುಕೊಂಡ.

ಮಹಾದೇವಯ ಹಿಂದೆ ಬಂದು ನಿಂತವನೆ ಮೆಲ್ಲನೆ ಅವಳ ಭುಜದ ಮೇಲೆ ಕೈಯಿಟ್ಟ. ಮಹಾದೇವಿಯು ಶಿವಪೂಜೆ ಧ್ಯಾನದಿಂದ ಕಣ್ಣುಗಳನ್ನು ಬಿಟ್ಟು,ಬೆಚ್ಚಿದರು. ಮೈಮೇಲೆ ಹಾವು ಹರಿದಂತಾಯ್ತು. ಸರಕ್ಕನೆ ಹಿಂದಿರುಗಿ 'ನಿಲ್ಲು' ಎಂದು ಕೂಗಿದರು. 'ಇಲ್ಲ, ಸಾಧ್ಯವೇ ಇಲ್ಲ. ನನ್ನ ತಾಳ್ಮೆ,ಸಹನೆಗೂ ಒಂದು ಮಿತಿ ಇದೆ. ನಾನು ನಿನ್ನನ್ನು ವಿವಾಹವಾಗುವವನು. ಹೀಗಾಗಿ ನಿನ್ನನ್ನು ಪಡೆಯುವ ಹಕ್ಕು ನನಗಿದೆ. ಇದು ಮಾತಾಡುವ ಸಮಯವಲ್ಲ. ನಿನ್ನನ್ನು ಪಡೆಯಲು ಹಂಬಲಿಸುತ್ತಿರುವ ನನ್ನನ್ನು ನಿನ್ನು ತಡೆಯಲು ಸಾಧ್ಯವಿಲ್ಲ ಎನ್ನುತ್ತಾ ಮಹಾದೇವಿಯನ್ನು ತಬ್ಬಿಕೊಳ್ಳಲು ಹೋದ. ಮಹಾದೇವಿಯ ಕಣ್ಣುಗಳು ಬೆಂಕಿಯ ಉಂಡೆಗಳಾಂತಾದವು. 'ನೀನು ತಪ್ಪು ಮಾಡಿಬಿಟ್ಟೆ ರಾಜ. ತಪ್ಪು ಮಾಡಿಬಿಟ್ಟೆ. ನನ್ನ ಷರತ್ತುಗಳಿಗೆ ಬೆಲೆ ನೀಡಲಿಲ್ಲ. ಅಂದರೆ ನೀನು ನನಗೆ ಗೌರವ ಕೊಡದವನಾದೆ.

ನನ್ನ ಬಗ್ಗೆ  ಕಿಂಚಿತ್ತೂ ಗೌರವವಿಲ್ಲದ ವ್ಯಕ್ತಿಯೊಡನೆ ನಾನು ಬಾಳು ಸವೆಸಲಾರೆ. ಚನ್ನಮಲ್ಲಿಕಾರ್ಜುನನಿಗೆ ಮೀಸಲಾಗಿದ್ದ ಈ ದೇಹವು ನಿನ್ನದಾಗುವು ಮುಂಚೆಯೇ ಸುಟ್ಟುಹೋಗಲಿ.' ಮಹಾದೇವಿಯ ಮಾತುಗಳನ್ನು ಕೇಳಿದ ಕೌಶಿಕನಿಗೆ ಸಿಟ್ಟು, ಬೇಸರ, ನಿರಾಸೆ ಎಲ್ಲವೂ ಏಕಕಾಲದಲ್ಲೇ ಉಂಟಾದವು. 'ಎಲ್ಲಿದ್ದಾನೆ ನಿನ್ನ ಮಲ್ಲಿಕಾರ್ಜುನ? ನಿನ್ನ ಮುಂದೆ ನಿಂತಿರುವ ನನ್ನ ಮೇಲೆ ಇಲ್ಲದ ಮೋಹ ಆ ಕಣ್ಣಿಗೆ ಕಾಣದವನ ಮೇಲೆ ಏಕೆ?' ಮಹಾದೇವಿಯು ಅವನ ಪ್ರಶ್ನೆಗಳಿಗೆ ಉತ್ತರವನ್ನೇನೋ ನೀಡಿದರು. ಆದರೆ ಅದನ್ನು ಕೇಳಿಸಿಕೊಳ್ಳುವಷ್ಟು ಸಹನೆ, ತಾಳ್ಮೆ ಅವನಲ್ಲಿ ಇರಲಿಲ್ಲ. ಮಹಾದೇವಯ ಸೀರೆಯನ್ನು ಎಳೆಯಲು ಪ್ರಯತ್ನಿಸಿದ. ಅವನ ಕಾಮಜ್ವರವನ್ನಳಿಸಿ ಸರಿಯಾದ ಪಾಠ ಕಲಿಸಿ ಹೋಗಬೇಕೆಂದು ನಿರ್ಧರಿಸಿದ ಮಹಾದೇವಿ, 'ಮೂರ್ಖ,. ಒಮ್ಮೆಲೆ ಮಹಾದೇವಿಯವರು ರಾಜನಿಗೆ ಹೀಗೆ ಹೇಳುತ್ತಾರೆ.

ಹೇ ಮಹಾರಾಜ ನನ್ನ ಮುರು ಷರತ್ತುಗಳಿಗೆ ನೀನು ಒಪ್ಪಿಕೊಂಡೆ, ಆ ಷರತ್ತುಗಳನ್ನು ಇಂದು ನೀನು ಮುರಿದೆ. ನಾನೀನ್ನು ಅರಮನೆಯಿಂದ ತೆರಳುತ್ತೇನೆ ಎಂದು ಮಹಾದೇವಿ ಹೊರಡುತ್ತಾರೆ, ಆಗ ಕೌಶಿಕ ಮಹಾರಾಜ ಹೀಗೆ ಹೇಳುತ್ತಾನೆ, ಹೇ ಮಹಾದೇವಿ ನೀನು ಹುಟ್ಟಿರುವ ಸೀರೆ ನನ್ನದು ನೀನು ತೊಟ್ಟಿರು ಆಭರಣಗಳು ನನ್ನವು ಎಲ್ಲವನ್ನು ಕಳಚಿ ಬೇಕಾದರೆ ಹೋಗು ನೀನು ಎಂದು ಘರ್ಜಿಸುತ್ತ ಮುರ್ಖ ಕಾಮುಕ ರಾಜ, ಮಹಾದೇವಿಯ ಸೀರೆಯನ್ನು ಹಿಡಿದು ಏಳೆಯುತ್ತನೆ, ಬಟ್ಟೆಯನ್ನು ಕೀಳಲು ಪ್ರಾರಂಭಿಸಿದನು, ಆಗ ಮಹಾದೇವಿಗೆ ಆಕಾಶವೆ ತನ್ನಮೇಲೆ ಬಿದ್ದಂತಾಯಿತ್ತು. ಕಣ್ಣುಮುಚ್ಚಿ ಒಂದು ಬಾರಿ ಮನಸ್ಸಿನ ಒಳನೋಟ ನೋಡಿದ ಮಹಾದೇವಿಗೆ ಒಮ್ಮೆಲೆ ಕುಂಡಲಿನಿ ಶಕ್ತಿ ಒಮ್ಮೆಲೆ ನೇತ್ರಿಯ ಮೇಲೆರಿತ್ತು, ಬಹು ಚಿಕ್ಕ ವಯಸ್ಸಿನ ಮಹಾದೇವಿಗೆ ಆ ಶಕ್ತಿ ಒಮ್ಮೆಲೆ ಬಂದಾಗ ತನ್ನ ಬಗ್ಗ ಪರಿವೆಯೇ ಇಲ್ಲದೆ ಆ ಶಕ್ತಿಗೆ ತಲೇಬಾಗಿ ನಿಂತರು. ಕೌಶಿಕ ಸೀರೆಯ ಸೆರಗು ಹಿಡಿದು ಎಳೆಯುವಾಗ ಮಹಾದೇವಿ ಮೈ ಮೇಲೆ ಅರ್ಧಕ್ಕೆ ಬಟ್ಟೆ ಎಳೆದಿದ್ದ ರಾಜ. ಅಷ್ಟರಲ್ಲಿ ಮಹಾದೇವಿ ಹೀಗೆ ಹೇಳುತ್ತಾರೆ ಕೌಶಿಕನಿಗೆ.

ಕೈಸಿರಿಯ ದಂಡವ ಕೊಳಬಹುದಲ್ಲದೆ, ಮೈಸಿರಿಯ ದಂಡವ ಕೊಳಲುಂಟೆ?

ಉಟ್ಟಂತಹ ಉಡಿಗೆ ತೊಡಿಗೆಯನೆಲ್ಲ ಸಳೆದುಕೊಳ್ಳಬಹುದಲ್ಲದೆ,

ಮುಚ್ಚಿರ್ದ ಮುಸುಕಿರ್ದ ನಿರ್ವಾಣವ ಸೆಳೆದುಕೊಳ್ಳಬಹುದೆ?

ಚೆನ್ನಮಲ್ಲಿಕಾರ್ಜುನದೇವರ ಬೆಳಗನುಟ್ಟು

ಲಜ್ಜೆಗೆಟ್ಟವಳಿಗೆ ಉಡುಗೆ ತೊಡುಗೆಯ ಹಂಗೇಕೋ ಮರುಳೆ?

ಉಟ್ಟಿರುವ ಸೀರೆಯನ್ನು ಎಳೆಯಬಹುದು. ಆದರೆ ಶರೀರವನ್ನು ಮುಚ್ಚಿದ ನಿರ್ವಾಣವನ್ನು ಎಳೆಯಬಲ್ಲೆಯಾ? ಚನ್ನಮಲ್ಲಿಕಾರ್ಜುನನ ಕಾರುಣ್ಯದ ಸೀರೆಯನ್ನುಟ್ಟ ನನಗೆ ಬೇರೆ ಸೀರೆಯ ಹಂಗಿಲ್ಲ' ಎಂದು ನುಡಿಯುತ್ತಾ ಉಟ್ಟಿದ ಸೀರೆಯನ್ನು ಸರನೆ ಬಿಚ್ಚಿ ಅವನ ಮುಖದ ಮೇಲೆ ಎಸೆದಳು. 'ನೋಡು ರಾಜ, ನೋಡು. ಈ ದೇಹದಲ್ಲಿ ಏನಿದೆ? ಕೇವಲ ಮೂಳೆ, ಮಾಂಸ ಅಷ್ಟೇ. ಇದನ್ನು ನೋಡಲು ಯಾಕೆ ನೀನು ಹುಚ್ಚನಂತಾಗಿದ್ದೀಯಾ? ಮಣ್ಣಲ್ಲಿ ಮಣ್ಣಾಗುವ ಈ ದೇಹದ ಮೇಲೆ ಏಕೆ ನಿನಗಿಷ್ಟು ಮೋಹ? ಇದಕ್ಕಾಗಿ ಬುದ್ದಿ ಕಳೆದುಕೊಂಡು ಎಷ್ಟು ಹೆಣ್ಣು ಮಕ್ಕಳ ಜೀವನವನ್ನು ಹಾಳುಮಾಡಿದೆ. ಈ ಮನುಷ್ಯನ ದೇಹವು ಕೇವಲ ಸಂಸಾರದ ಸುಖವನ್ನು ಅನುಭವಿಸುವುದಕ್ಕಾಗಿ ಸೀಮಿತವಲ್ಲ. ಅದರ ಸಾರ್ಥಕತೆ ಮುಕ್ತಿ ಪಡೆಯುವುದರಲ್ಲಿದೆ. ಅಜ್ಞಾನವನ್ನು ಕಿತ್ತೆಸದರೆ ಮಾತ್ರ ಮುಕ್ತಿ ದಕ್ಕುವುದು. ಸಂಸಾರವೆಂಬ ಚಕ್ರವ್ಯೂಹದಿಂದ ಹೊರಬಂದರೆ ಮಾತ್ರ ಅದೆಲ್ಲ ಸಾಧ್ಯ. ಮೃಗವಾಗಿರುವ ನೀನು ಮೊದಲು ಮನುಷ್ಯನಾಗು. ನನ್ನ ನಿನ್ನ ಸಂಬಂಧ ಇಲ್ಲಿಗೆ ಮುಗಿಯಿತು. ನಾನು ಸ್ವತಂತ್ರಳು. ನನಗಿನ್ನು ಯಾವ ಮೋಹ, ಬಂಧನವಿಲ್ಲ. ಹೆಣ್ಣನ್ನು ಗೌರವಿಸುವುದನ್ನು ಕಲಿತಿಕೊ. ಎಲ್ಲರನ್ನೂ ಕಾಮದ ದೃಷ್ಟಿಯಿಂದ ನೋಡಬೇಡ. ನಾನಿನ್ನು ಹೊರಟೆ.' ಮಹಾದೇವಿ ತನ್ನ ಕೇಶರಾಶಿಯಿಂದ ದೇಹವನ್ನು ಸಾಧ್ಯವಾದಷ್ಟು ಮುಚ್ಚಿಕೊಂಡು ಅರಮನೆಯಿಂದ ಹೊರಬಂದರು. ಸೆರಗನ್ನು ಎಳೆದಾಗ ತಾನುಟ್ಟ ಸೀರೆಯನ್ನು ಕಳಚಿ ತನ್ನ ಸೌಂದರ್ಯದ ಪ್ರತೀಕವಾದ ನೀಳಕೇಶರಾಶಿಯಿಂದ ಶರೀರವನ್ನು ಮುಚ್ಚಿಕೊಂಡು, ಸಿಡಿದೆದ್ದು ಅರಮನೆಯಿಂದ ಹೊರಡಲು

ಸಿದ್ಧರಾಗುತ್ತಾರೆ. ಮಹಾದೇವಿಯವರಿಗೆ ಎಷ್ಟರಮಟ್ಟಿಗೆ ಕುಂಡಲಿನಿ ಶಕ್ತಿ ನೆತ್ತಿಗೆ ಏರಿತ್ತು, ಅಂದರೆ ಹೇಳಲು ಬರುವುದಿಲ್ಲ.

ಅಂತೆಯೇ ಪ್ರಪಂಚದಲ್ಲಿಯೇ ನಿರ್ವಾಣವಾಗಿ ನಿಂತ ಪ್ರಥಮ ಮಹಿಳೆಯಾದ ಮಹಾದೇವಿಯನ್ನು ಕಂಡು ಕೌಶಿಕನಿಗೆ ದಿಕ್ಕು ತೋಚದಂತಾಗುತ್ತದೆ. ಸಹಸ್ರ ಗುಡುಗು ಸಿಡಿಲುಗಳು ಒಂದೇ ಸಲ ಬಡಿದಂತಾಗಿ ಪ್ರಪಂಚವೇ ಅಲ್ಲೋಲ ಕಲ್ಲೋಲವಾದಂತಾಗುತ್ತದೆ. ಜೈನಧರ್ಮದ ದಿಗಂಬರ ಪಂಥದವನಾದ ಕೌಶಿಕನಿಗೆ ದಿಗಂಬರೆಯಾಗಿ ನಿಂತ ಮಹಾದೇವಿಯನ್ನು ಕಂಡು ಅವನಿಗೆ ಜ್ಞಾನೋದಯವಾಗಿ ತನ್ನ ಪಾಪದ ಅರಿವಾಗುತ್ತದೆ. ದಿಗಂಬರತ್ವವನ್ನು ಕೇವಲ ಜೈನ ತೀರ್ಥಂಕರರಲ್ಲಿ ಕಂಡ ಕೌಶಿಕನಿಗೆ ಅಕ್ಕಮಹಾದೇವಿಯ ದಿಗಂಬರತ್ವವನ್ನು ಕಂಡು ಅವನ ಮನಸ್ಸು ಅಲ್ಲೋಲ ಕಲ್ಲೋಲವಾಗುತ್ತದೆ. ಅಲ್ಲದೆ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳನ್ನು ಮೀರಿನಿಂತ ಪ್ರಭುವೇ ದಿಗಂಬರತ್ವವೆಂದು, ಅದನ್ನೇ ಪರಮಧರ್ಮವೆಂದು ಅವಲಂಬಿಸಿ, ದಿಗಂಬರತ್ವವೇ ಧೈವ ಸಾಕ್ಷಾತ್ಕಾರವೆಂದು ನಂಬಿ ಆ ಧೈವವನ್ನು ತೊರೆಯಲಾರೆನೆಂದು ಹೇಳಿದ್ದ ಕೌಶಿಕನಿಗೆ ಅದೇ ದಿಗಂಬರತ್ವವನ್ನು ಮಹಾದೇವಿಯಲ್ಲಿ ಕಂಡು ತನ್ನ ತಪ್ಪಿನ ಅರಿವಾಗುತ್ತದೆ. ತನ್ನ ಅಜ್ಞಾನದ ವರ್ತನೆಯನ್ನು ಅರಿತು, ಸ್ತ್ರೀತನದ ಮಹತ್ವವನ್ನರಿಯದೆ ಕೇವಲ ಕೀಳುಮನಸ್ಸಿನ ಭಾವನೆಗಳಿಗೆ ಶರಣಾಗಿ, ಕೀಳು ಅಭಿರುಚಿಯಿಂದ ಹೆಣ್ಣು ಯಾರಾದರೇನಂತೆ, ಅವಳು ಕೇವಲ ತನ್ನ ಭೋಗದ ವಸ್ತುವೆಂದು ಭಾವಿಸಿದ್ದ ಅವನಿಗೆ ಕಣ್ಣು ಮಂಕಾಗುತ್ತದೆ. ಮಹಾದೇವಿ ಅರಮನೆ ತೊರೆದು ದಿಗಂಬರೆಯಾಗಿ ನೀಳಕೇಶಾಂಬರದಿಂದ ತನ್ನ ದೇಹವನ್ನು ಮರೆಮಾಡಿಕೊಂಡು ಹೊರಬೀಳುತ್ತಾರೆ.ಮಹಾದೇವಿ ಅರಮನೆ ತೊರೆದು ಜನರೆಲ್ಲ ಮಹಾದೇವಿಯು ಕಾಳಿಅವಾತರ ಎಂದು ಕೈಮುಗಿದು ನೋಡುತ್ತಾ ಗರಬಡಿದವರಂತೆ ನಿಂತರು. ದಿಗಂಬರರಾಗಿ ಹೊರ ಬಂದಾಗ ಉಡುತಡಿಯ ಸಮಗ್ರ ಜನಸಮೂಹ ಮೂಕವಿಸ್ಮಯದಿಂದ ತಮ್ಮತಮ್ಮ ಮನೆಯ ಹೊರಗೆ ಬಂದು ನಿಂತು ನೋಡುವರು. ಈ ಸಮಾಚಾರ ಮಹಾದೇವಿಯ ತಂದೆ ತಾಯಿಗಳಿಗೆ ತಿಳಿದಾಕ್ಷಣ ಅವರೂ ಓಡಿ ಬಂದು ಮಹಾದೇವಿ 'ಅಯ್ಯೋ ಮಗಳೆ, ಇದೇನು ನಿನ್ನ ಅವಸ್ಥೆ. ನಡೆ ಮನೆಗೆ, ಉಡುಗೆ ತೊಡುಗೆ ಕಳಚಿ ಈ ಯೌವನದಲ್ಲಿ ಎಲ್ಲಿಗೆ ಹೋಗುವೆ? ನಿನ್ನ ಗತಿಯೇನು? ಕೌಶಿಕ ರಾಜನು ನಮ್ಮನ್ನು ಸುಮ್ಮನೆ ಬಿಡುವನೇ? ನಡೆ ಮಗಳೆ ಮನೆಗೆ' ಎಂದು ಹೃದಯತುಂಬಿ ಪರಿಪರಿಯಿಂದ ಕೇಳಿಕೊಳ್ಳುವರು. ಆದರೆ ಮಹಾದೇವಿ 'ಅಯ್ಯಾ, ನನ್ನನ್ನು ತಡೆಯಬೇಡಿರಿ. ಮಹಾರಾಜ ನಿಮ್ಮನ್ನು ಏನೂ ಮಾಡಲರ. ನೀವು ನಿಶ್ಚಿಂತೆಯಿಂದ ಇರಿ.

"ಈ ಲೀಲೆ ಇನ್ನು ಸಾಕು. ತೆಗೆದುಕೊ ನಾರುಮಡಿಯನ್ನು "ಅದನ್ನು ಕೊಡ ಹೋದರು ಗುರುಲಿಂಗರು.

"ಇಲ್ಲ, ಗುರುಗಳೇ. ಹೆಣ್ಣಿನ ದೇಹವನ್ನು ಕಾಮದ ದೃಷ್ಟಿಯಿಂದ ನೋಡುವ ಕಣ್ಣುಗಳು ಈ ಲೋಕದಲ್ಲಿ ಇರುವವರೆಗೂ ನಾನು ಬಟ್ಟೆಯನ್ನು ಧರಿಸುವುದಿಲ್ಲ" ಹೇಳಿದರು ಮಹಾದೇವಿ."ಈ ಹುಚ್ಚು ಮಾತನ್ನು ಬಿಡು, ಮಹಾದೇವಿ. ಮೋಹದ ಕಣ್ಣುಗಳು ಇದ್ದರೆ ತಾನೇ, ಮೋಹವನ್ನು ಮೀರಿ ಮೇಲೇರುವ ಸಾಧನೆಗೆ ಬೆಲೆ ಇರುವುದು? ಅದು ಜಗತ್ತಿನ ನಿಯಮ. ಆ ಮಾತನ್ನು ಬಿಡು. ಜಗತ್ತು ಕಲ್ಪನೆಯಿಂದಲೂ ಕಾಣಲಾಗದ ಮಟ್ಟಕ್ಕೆ ಏರಿದೆ ನಿನ್ನ ವೈರಾಗ್ಯ, ಈ ಘಟನೆ, ನಿನ್ನ ಸಾಧನೆಯ ಜೀವನದಲ್ಲಿ ಒಂದು ಪರಿವರ್ತನೆಯ ಘಟ್ಟವಾಯಿತು. ಮುಂದೆ ನಿನ್ನ ವೈರಾಗ್ಯದ ವ್ಯಕ್ತಿತ್ವವನ್ನು ಚಿತ್ರಿಸಬೇಕಾದವರು ಈ ನಗ್ನರೂಪದ ಸಂಕೇತದಿಂದಲೇ ಚಿತ್ರಿಸಬೇಕಾಗುತ್ತದೆ. ಆದರೆ ಇಲ್ಲಿಗೆ ಅದು ಮುಗಿಯಬೇಕು. ಇನ್ನು ಈ ನಿನ್ನ ವೈರಾಗ್ಯ ಸಾಂಕೇತಿಕವಾಗಬೇಕು. ಲೌಕಿಕ ಋತಕ್ಕೆ ಒಳಪಟ್ಟು ಅದನ್ನು ಮೀರಿದಂತಿರಬೇಕು. ಆದುದರಿಂದ ತೆಗೆದುಕೋ ಈ ಬಟ್ಟೆಯನ್ನು. "

"ಇಲ್ಲ ಗುರುಗಳೇ.... ಒಮ್ಮೆ ಬಿಟ್ಟ ಈ ಮೋಹಪಾಶವನ್ನು ಮತ್ತೊಮ್ಮೆ ಕಟ್ಟಿಕೊಳ್ಳಲಾರೆ."

ಗುರುಗಳು ನಕ್ಕರು.

'ಇದೇಕೆ ಮಗಳೇ, ಮತ್ತೆ ನಿನಗೆ ಈ ಮರುವೆ? ಈ ಒಂದು ತುಂಡುಬಟ್ಟೆ ನಿನಗೆ ಮೋಹಪಾಶವಾಗುವುದಾದರೆ ಈ ಜಗತ್ತಿನ ಮಹಾಮೋಹವನ್ನು ಹೇಗೆ ಗೆಲ್ಲ ಬಲ್ಲೆ?" ಹೇಳುತ್ತಾ ಹೇಳುತ್ತಾ ಗುರುಗಳ ಧ್ವನಿ ಇನ್ನೂ ಗಂಭೀರವಾಯಿತು.

"ಆದುದರಿಂದ, ಕೇಳು.... ನಿನಗೆ ಯಾವುದೂ ಮೋಹವಾಗಬಾರದು. ಬಟ್ಟೆಯ ಮೋಹ ನಿನಗಿಲ್ಲ, ನಿಜ. ಆದರೆ.... ನಿನಗಾಗಿ ಬೇಡ, ಲೋಕಕ್ಕಾಗಿ ಧರಿಸು. ಈಗ ಈ ಕೂದಲನ್ನು ಏತಕ್ಕಾಗಿ ದೇಹಕ್ಕೆ ಮರೆಮಾಡಿಕೊಂಡಿರುವೆಯೋ, ಅದೇ ಕಾರಣಕ್ಕಾಗಿ, ಕೂದಲಿನಂತೆ ಇರುವ ಈ ತುಂಡುಬಟ್ಟೆಯನ್ನು ಮರೆಮಾಡಿಕೊ....'ನಾನು ಎಲ್ಲವನ್ನು ತ್ಯಜಿಸಿದವಳು' –ಎಂಬ ತ್ಯಾಗವೇ ಒಂದು ಮಾಯೆಯಾಗಿ ಕಾಡೀತು ಅದಕ್ಕೆ ಆಸ್ಪದ ಕೊಡಬೇಡಮ್ಮ "

ಮಹಾದೇವಿಯವರು ಹೀಗೆ ಹೇಳುತ್ತಾರೆ

ವಚನದಲ್ಲಿ -

'ಬೆಟ್ಟದ ಮೇಲೊಂದು ಮನೆಯ ಮಾಡಿ, ಮೃಗಗಳಿಗಂಜಿದಡೆಂತಯ್ಯಾ?

ಸಮುದ್ರದ ತಡಿಯಲೊಂದು ಮನೆಯ ಮಾಡಿ, ನೆರೆ ತೆರೆಗಳಿಗಂಜಿದಡೆಂತಯ್ಯಾ?

ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಡೆಂತಯ್ಯಾ?

ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ?

ಲೋಕದೊಳಗೆ ಹುಟ್ಟಿದ್ದ ಬಳಿಕ ಸ್ತುತಿ ನಿಂದೆಗಳು ಬಂದಡೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು' ಬೆಟ್ಟದ ಮೇಲೆ ಮನೆ ಮಾಡಿ ಕಾಡು ಪ್ರಾಣಿಗಳಿಗೆ ಹೆದರಿದರೆ ಹೇಗೆ? ಸಮುದ್ರದ ದಡದಲ್ಲಿ ಮನೆಯ ಮಾಡಿ ನೊರೆತೆರೆಗಳಿಗಂಜಿದಡೆಂತಯ್ಯ? ಸಮುದ್ರ ದಂಡೆಯಲ್ಲಿ ಮನೆ ಕಟ್ಟಲಾಗಿದೆ. ಈಗ ಅಲೆ ಅಬ್ಬರ ನೊರೆ ತೆರೆ ಎಂದರೆ ಹೇಗೆ? ಸಂತೆಯೊಳಗೊಂದು ಮನೆಯಮಾಡಿ ಶಬ್ದಕ್ಕೆ ನಾಚಿದಡೆಂತಯ್ಯ?ಸಂತೆಯಲ್ಲಿ ಮನೆ ಮಾಡಿ ಆಯಿತು. ಈಗ ಗದ್ದಲ ಬಹಳ ಎಂದರೆ ಹೇಗೆ? ಚೆನ್ನಮಲ್ಲಿಕಾರ್ಜುನ ದೇವ ಕೇಳಯ್ಯ ಲೋಕದಲಿ ಹುಟ್ಟಿದ್ದ ಬಳಿಕ ಸ್ತುತಿ ನಿಂದೆಗಳು ಬಂದಡೆ ಸಮಾಧಾನಿಯಾಗಿರಬೇಕು. ಈ ಭೂಮಿಯಲ್ಲಿ ಹುಟ್ಟಿ ಬಂದಾಯಿತು. ಹುಟ್ಟುವುದು ಬಿಡುವುದು ನಮ್ಮಕೈಲಿರಲಿಲ್ಲ. ಈಗ ಹುಟ್ಟಿದ ಮೇಲೆ ಸಮಾಧಾನಿಯಾಗಿ ಜೀವನ ಮಾಡುವುದನ್ನು ಕಲಿಯಬೇಕು. ಇಲ್ಲಿ ಹೊಗಳಿಕೆ ತೆಗಳಿಕೆ ಎಲ್ಲ ಇದ್ದದ್ದೆ.  ಪರಮಾತ್ಮನ ಪ್ರೀತಿಯಿಂದಾಗಿ ಅಕ್ಕನವರ ಜೀವನ ಬೀದಿ ಮಾತಾಯಿತು. ಗೃಹ ಜೀವನದ ಬದುಕಿನಿಂದ ಅನುಭಾವ ಜೀವನಕ್ಕೆ ಅವರು ಕಾಲಿರಿಸಿದರು. ಇದರಿಂದ ಅಕ್ಕನವರ ಜೀವನ ಲೋಕದ ಜನರ ಸಾವಿರ, ಸಾವಿರ ಮಾತುಗಳಿಗೆ ವಿಷಯವಾಯಿತು. ಈ ಲೋಕದ ಜನರಿಂದ ಸ್ತುತಿಗಳೂ ಬಂದವು. ನಿಂದೆಗಳೂ ಬಂದವು. ಅನುಭಾವ ಜೀವನವನ್ನು ಆದರಿಸುವವರೂ ಇದ್ದಾರೆ. ನಿಂದಿಸುವವರೂ ಇದ್ದಾರೆ. ಇದರಿಂದ ಈ ಲೋಕದ ಮಾತುಗಳಿಗೆ ಹಿಗ್ಗುವುದಾಗಲಿ, ಕುಗ್ಗುವುದಾಗಲಿ ಬೇಡ. ಸಮಚಿತ್ತದ ನೆಲೆಯಲ್ಲಿ ಲೋಕದ ಮಾತುಗಳನ್ನು ಸ್ವೀಕರಿಸುವ ಸ್ಥಿತಪ್ರಜ್ಞಮನಸ್ಸನ್ನು ಅವರು ಸಾಧಿಸಿಕೊಂಡರು. ತಮ್ಮನ್ನು ತಾವು ಸಮಾಧಾನಿಸಿಕೊಂಡಿರುವ ಈ ವಚನವು ಎಲ್ಲ ಜಗದ ಜೀವಿಗಳಿಗೂ ಸಾಂತ್ವನ ಹೇಳುತ್ತದೆ. ಲೋಕದ ಬಾಳು ಎಂಥದು ಎಂಬುದನ್ನು ೩ ದೃಷ್ಟಾಂತದ ಮೂಲಕ ವಿಶ್ಲೇಷಿಸಿದ್ದಾರೆ.

೧. ಮನೆ ಕಟ್ಟಿರುವುದು ಬೆಟ್ಟದಮೇಲೆ. ಬೆಟ್ಟ ಎಂದ ಮೇಲೆ ಕಾಡು, ಬೆಟ್ಟಗುಡ್ಡ, ಕ್ರೂರಮೃಗ, ವಿಷಜಂತು ಇವೆಲ್ಲ ಇದ್ದದ್ದೆ. ಅಂದಮೇಲೆ ಮೃಗಗಳಿಗೆ ಹೆದರುವುದರಲ್ಲಿ ಅರ್ಥವಿಲ್ಲ. ಮನೆ ಕಟ್ಟಲು ನಿರ್ಧರಿಸಿದಾಗಲೆ ವಿಚಾರ ಮಡಬೇಕಾಗಿತ್ತು. ಈಗ ಇಲ್ಲಿ ಬದುಕುವುದು ಅನಿವಾರ್ಯ. ಮನೆಕಟ್ಟಿದ್ದು ಸಮುದ್ರದ ದಡದಲ್ಲಿ. ಇಲ್ಲಿ ನೊರೆಗಳು. ಅಲೆಗಳಬ್ಬರ ಇದೆ ಎಂದರೆ ಹೇಗೆ? ಇವುಗಳಿಗೆ ಹೆದರುವುದು ಅರ್ಥವಿಲ್ಲದ್ದು. ಮನೆಕಟ್ಟಿದ್ದು ಸಂತೆಯಲ್ಲಿ. ಇಲ್ಲಿ ಗದ್ದಲ ಬಹಳ, ಶಬ್ದ ಬಹಳ ಎಂದರೆ ಹೇಗೆ? ಅವೆಲ್ಲ ಇಲ್ಲಿ ಇದ್ದದ್ದೆ. ಇವನ್ನು ಎದುರಿಸಿ ಬಾಳುವುದೆ ಜೀವನ. ಈ ಜೀವನವೂ ಒಂದು ಸಂತೆ, ಸಮುದ್ರ, ಒಂದು ಬೆಟ್ಟ, ಸಂತೆ ಏರ್ಪಡುವುದೆ ವ್ಯಾಪಾರಕ್ಕೆ ವ್ಯಾಪಾರ ಎಂದರೆ ಮಾತು, ಗದ್ದಲ, ಧೂಳು, ಕಸ, ಇವೆಲ್ಲ ಇದ್ದದ್ದೆ, ಸರಕು, ಸಾಗಾಣಿಕೆ ಮೌನದಲ್ಲಿ ನಡೆಯುವುದಿಲ್ಲ. ಈ ಲೋಕದಲ್ಲಿ ಜನಿಸಿ ಬಂದುದಾಯಿತು. ಈ ಜೀವನ ಹೇಡಿಗಳಿಗಲ್ಲ. ಪಲಾಯನವಾದಿಗಳಿಗೂ ಅಲ್ಲ. ಇರುವುದನ್ನು ಒಪ್ಪಿಕೊಂಡು ಬುದ್ಧಿವಂತಿಕೆಯಿಂದ ಬಾಳುವುದೆ ಸಾಧನೆ. ಹೊಗಳಿಕೆ, ತೆಗಳಿಕೆ ಜೀವನದಲ್ಲಿವೆ. ಸುಖ,

ದು:ಖ ಎರಡೂ ಇವೆ. ಹೊಂದಿ ಬಾಳುವುದೆ ಬುದ್ಧಿವಂತಿಕೆ. ಎಲ್ಲವನ್ನೂ ಸಮಾಧಾನದಿಂದ ಸ್ವೀಕರಿಸಬೇಕು. ತಮ್ಮನ್ನು ಸಂತೈಸಿಕೊಂಡಿದ್ದಾರೆ.ಎಂದು ಹೇಳಿ ಎಲ್ಲ ಪುರಜನರಿಗೂ ತಂದೆ ತಾಯಿಗೆ. ನಾರು ಬಟ್ಟೆಯನ್ನದರು ಹಾಕು, ಗುರುಲಿಂಗದೇವರ ಮಾತು,ಮಹಾದೇವಿಯ ಅಂತರಂಗವನ್ನು ಆ ಮಾತು ಚುಚ್ಚಿ ಎಚ್ಚರಿಸಿತು. ಮರು ಮಾತಾಡದೆ ಗುರುಗಳು ಕೊಟ್ಟ ಚಿಕ್ಕನಾರುಬಟ್ಟೆಯನ್ನು ತೆಗೆದುಕೊಂಡು ಸೊಂಟದಭಾಗಕ್ಕೆ ಸುತ್ತಿಕೊಂಡರು. ಮೇಲಿನ ದೇಹದ ಭಾಗಕ್ಕೆ ಕೂದಲಿನಿಂದ ಮುಚ್ಚಿದ್ದರು, ಮಹಾದೇವಿಯವರಿಗೆ, ವೈಭವದ ಬಟ್ಟೆ ಸೀರೆಗಳು ಆಭರಣಾ, ಎಲ್ಲವೋ ಇಲ್ಲೆ ಉಡುತಡಿಯಲ್ಲಿ ಮುಗಿಯಿತ್ತು. ಚಿಕ್ಕ ನಾರುಬಟ್ಟೆ, ಬಿಟ್ಟರೆ ಮಹಾದೇವಿಯವರ ಮೈಮೇಲೆ ಯಾವ ಬಟ್ಟೆಯು ಇಲ್ಲ.

ನಾನು ಬಹಳ ದಿನಗಳಿಂದ ಗುರುಗಳಾದ ಗುರುಲಿಂಗ ದೇವರು ವರ್ಣಿಸಿದ ಶ್ರೀಶೈಲ. ಶ್ರೀ ಶೈಲಕ್ಕೆ ಹೋಗಬೇಕೆಂಬ ಹಂಬಲಕ್ಕೆ ಇಂದು ನಾಂದಿಯಾಗಿದೆ. ನಾನು ಮನೆ ಬಿಟ್ಟಾಯಿತು. ಅರಮನೆಯನ್ನು ತ್ಯಜಿಸಿಯಾಯಿತು. ಇನ್ನು ನನಗೆ ಯಾರ ಭಯವೂ ಇಲ್ಲ. ಬಂಧನವೂ ಇಲ್ಲ. ಭವ ಬಂಧನಗಳನ್ನು ನನ್ನ ಶರೀರದ ಮೇಲಿನ ವಸ್ತ್ರಗಳ ಜೊತೆಗೆ ಕಳಚಿ ಹಾಕಿ ಹೊರಟಿರುವೆನು. ನನ್ನನ್ನು ತಡೆಯಬೇಡಿರಿ' ಎಂದು ಹೇಳುತ್ತಾರೆ. ತಂದೆ ತಾಯಿಗಳು ಅಂತಃಕರಣ ತುಂಬಿ 'ಮಗಳೇ. ನೀನು ಒಂಟಿಯಾಗಿ ಈ ಯೌವ್ವನದಲ್ಲಿ ಹೇಗೆ ಪಯಣಿಸುವೆ? ನಿನ್ನ ಊಟ, ಉಪಚಾರಗಳ ವ್ಯವಸ್ಥೆಯನ್ನಾರು ಮಾಡುವರು, ವಸತಿ ಸೌಕರ್ಯಗಳ ಪಾಡೇನು?' ಎಂದು ಪ್ರಶ್ನಿಸುವರು. ಆಗ ಮಹಾದೇವಿ,

'ಹಸಿವಾದಡೆ ಊರೊಳಗೆ ಭಿಕ್ಷಾನ್ನಗಳುಂಟು

ತೃಷೆಯಾದಡೆ ಕೆರೆ ಹಳ್ಳ ಬಾವಿಗಳುಂಟು

ಅಂಗಶೀತಕ್ಕೆ ಬೀಸಾಟ ಅರಿವೆಗಳುಂಟು.

ಶಯನಕ್ಕೆ ಹಾಳು ದೇಗುಲಗಳುಂಟು

ಚೆನ್ನಮಲ್ಲಿಕಾರ್ಜುನಯ್ಯಾ ಆತ್ಮಸಂಗಾತಕ್ಕೆ

ನೀನೆನಗುಂಟು' ಎಂದು ನುಡಿಯುತ್ತಾರೆ,

ರಾಜನಿಗೆ ಅಪರಾಧಿ ಸ್ಥಾನ ಮತ್ತು ಏಕಾಂತ, ಏನಾಗಿಹೋಯಿತು?! ಇಷ್ಟುಮುಂದೆ ಹೋಗುವುದೆಂದು ತನಗೆ ತಿಳಿಯಲೇ ಇಲ್ಲವಲ್ಲ, ಅದ್ಯಾವ ಮದ ಆವರಿಸಿತ್ತು? ನನಗೆ ಭಯ, ಅಸಹಾಯಕತೆ, ದುಃಖ, . ಊರ ಜನರಿಗೆ ಏನು ಹೇಳುವುದು? ಮುನಿವರ್ಯರು ಬಂದರೆ ಏನೆಂದು ಹೇಳುವುದು? ಬಂಧುಬಳಗಕ್ಕೆ ಏನೆನ್ನುವುದು? ತನ್ನ ಶತ್ರುಗಳಿಗೆಲ್ಲ ಸಿಹಿಯೂಟ ಉಂಡಷ್ಟು ಖುಷಿಯಾಗಬಹುದು. ನನ್ನ ಲೆಕ್ಕ ಅದೆಲ್ಲಿ ತಪ್ಪಿ ಹೋಯಿತು? ನನ್ನ ಕೆಟ್ಟನೇಡತೆಯೇ ಕಾರಣ

ಅದೇಕೆ ಹಾಗೆ ದುಡುಕಿ ನಡೆದುಕೊಂಡೆ? ಕೊನೆಮೊದಲಿರದ ಪ್ರಶ್ನೆಗಳಲ್ಲಿ ಮುಳುಗಿದ ಕೌಶಿಕ ತನ್ನ ಮಹಾದೇವಿ ನಡೆದು ಹೋದ ದಿಕ್ಕಿಗೆ ನೋಡುವುದೂ ಸಾಧ್ಯವಾಗದೇ ಕುಕ್ಕರಿಸಿ, ಕುಸಿದು ಕುಳಿತ. ಮಹಾದೇವಿಯ ಭಯಂಕರವಾಗಿ ರಾಕ್ಷಸಿಯಂತೆ ಮಹಾಕಾಳಿಯಂತೆ ತೋರಿದುದರಿಂದ ರಾಜ ಮಹಾದೇವಿ ಯಿಂದ ಹಿಂದೆ ಸರಿದ ಕೌಶಿಕನಿಂದ ಬಿಡಿಸಿಕೊಂಡು ಅಕ್ಕ ಶ್ರೀ ಶೈಲ ದೆಡೆಗೆ ಹೋಗಬೇಕಾದರೆ ಮಹಾದೇವಿಯನ್ನು ಬೆನ್ನಟ್ಟದಂಥ ಒಂದು ಘಟನೆ ಅಲ್ಲಿ ನಡೆಯಿತು. ಮಹಾದೇವಿಯ ಹಿಂದೇ ಬರುವ ಜನರ ಸಂಖ್ಯೆ ಏರತೊಡಗಿತು. ಸುದ್ದಿ ಕಾಳಿಚ್ಚಿನಂತೆ ಹಬ್ಬಿ ಊರಿಗೂರೇ ಮಹಾದೇವಯ ಹಿಂದೆ ಹೆಜ್ಜೆ ಹಾಕಿತು. ನಡೆಯುತ್ತ ಕೆರೆ ಏರಿ ಮೇಲೊಮ್ಮೆ ನಿಂತರು. ನೆತ್ತಿ ಸುಡುವಂತಹ ಬಿಸಿಲು. ತಾನು ಆಡಿದ. ನಲಿದ, ಬೆಳೆದ. ಮಿಂದ ಕೆರೆ. ಉಡುತಡಿಗೆ ಹೆಸರು ತಂದ ಕೆರೆ. ಕೆರೆಯ ಗೌರವವನ್ನು ಮನದಲ್ಲೇ ಶರಣೆಂದರು. ಕೆರೆ ದಾಟಿದ ಮೇಲೆ ಆ ಕಡೆ ಅಲ್ಲಿ ಗುಡ್ಡದ ಬುಡದ ಬಯಲಲ್ಲಿ ದನಗಳು ಮೇಯುತ್ತಿದ್ದವು.ಎಲ್ಲಾಕ್ಕೂ ಶರಣೆಂದು. ಕೇಶಬರಿಯಾಗಿ ನಡೆದು ಹೋದ ಮಹಾದೇವಿಯವರಿಗೆ ದೈವಾಂಶಸಂಭೂತರೆ ಇರಬೇಕು. ಮಹಾದೇವಿ, ಶಕ್ತಿ. ಕುಂಡಲಿನೀ ದೇವಿ' ಎಂದು ಮನದಲ್ಲೇ ಭಯಭಕ್ತಿಯಿಂದ ಮಹಾದೇವಿ ನಡೆಯುತ್ತಿದ್ದ ದಿಕ್ಕು ನೋಡಿ ನಮಸ್ಕರಿಸಿದರು ಜನರು ಮಹಾದೇವಿಯವರು ನಡೆಯುತ್ತಿದ್ದಾರೆ. ಹಿಂದೆಯೇ ಮದುವೆಯ ಮೆರವಣಿಗೆಯಂತೆ ಜನ

ಹೋಗುತ್ತಿದ್ದಾರೆ. ಉಡುತಡಿಯನ್ನು ಹಾಯ್ದು ಹೋಗುವಾಗ ಬಾಗಿಲ ಬಳಿ ಮಿಂಯಾಂವ್ ಎಂಬ ಸದ್ದು ಕೇಳಿತು. ದಿನವೂ ಮಹಾದೇವಿ ನೋಡುವ ಕರಿಯ ಬೀಳಿಯ ಬೆಕ್ಕು. ನಿರ್ಲಿಪ್ತಿಯೋ, ವಿಷಾದವೋ, ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದೆ. ಒಂದಷ್ಟು ನಾಯಿಗಳು ಕುಂಯ್ ಕುಂಯ್ಗುಡ್ತ ಅನ್ನುತ್ತ ಮಹಾದೇವಿ ಹಿಂದೆ ಬಂದು ಎಂದೋ ಹಾಕಿದ್ದ ಎರಡು ತುತ್ತು ಅನ್ನದ ನೆನಪಿಗೆ ಕೃತಜ್ಞತೆ ಸಲ್ಲಿಸುತ್ತಿವೆ ಊರಗಡಿ ಬಂದಿತು. ಅದೆಷ್ಟು ಜನ ಬರುತ್ತಿದ್ದಾರೆ ತನ್ನ ಹಿಂದೆ?! ಮದುವೆ ದಿಬ್ಬಣವೋ, ಮನೆ ಮಗಳನ್ನು ಗಂಡನ ಮನೆಗೆ ಕಳಿಸಿಕೊಡುವ ದುಃಖಕರ ಸನ್ನಿವೇಶವೋ, ಮಸಣದತ್ತ ಪಯಣವೋ ಎನ್ನುವಂತಿದೆ. ಆ ಜನಜಂಗುಳಿಯಲ್ಲಿ ಹುಡುಗರು, ಮುದುಕರು, ಕೋಲೂರಿ ನಡೆವ ಅಜ್ಜಿಯರು, ಅವ್ವಂದಿರು, ಅಕ್ಕಂದಿರು, ಬೇಡುವವರು, ಹೆಳವರು, ದನ ಮೇಸುತ್ತ ಬಂದವರು, ಕೈಯಲ್ಲಿ ಕಾಮಿ ಹಿಡಿದು ಬಂದವರು, ಅಂಗಿ ತೊಟ್ಟ ಮಕ್ಕಳು, ಕೇಶಂಬರಿಯಾಗಿ ನಡೆವ ಮಹಾದೇವಿಯನ್ನು ನೋಡುತ್ತ ನಿಂತವರು, ಎದೆ ಬಡಿದುಕೊಳ್ಳುವವರು, ಗುಸುಪಿಸು ಎನ್ನುವವರು. ಅಳುವವರು, ಅನುಮಾನ ಪರಿಹರಿಸಿಕೊಳ್ಳುತ್ತ ಇಣುಕುವವರು ಮುಂತಾಗಿ ನಾನಾ ಮನೋಭಾವಗಳ, ನಾನಾ ಉದ್ದೇಶ ಹೊತ್ತ ಜನಸಮೂಹ ನಡೆದು ಬರುತ್ತಿದೆ. ಬಂದವರಿಗೆಲ್ಲ ಹಿಂದೆ ತಿರುಗಿ ನಿಂತು ಒಮ್ಮೆ ಕೈಮುಗಿದ ಮಹಾದೇವಿ. ಕಟ್ಟೆ ಏರಿ ನಿಂತು ಎಲ್ಲರಿಗೂ ನಮಸ್ಕರಿಸಿ, 'ಆದುದೆಲ್ಲ ಶಿವನಿಚ್ಛೆ. ಆದುದೆಲ್ಲ ಒಳಿತಿಗಾಗಿಯೇ, ಉಡುತಡಿಯೇ, ಮಹಾಜನರೇ, ಹೆತ್ತ ತಾಯ್ತಂದೆಯರೇ, ಸಲಹಿದ ಜೀವಾದಿಜೀವಗಳೇ, ಶರಣು, ರಕ್ತಮಾಂಸಗಳ ಈ ಹೆಣ್ಣನ್ನು ಸಲಹಿದ ನಿಮಗೆಲ್ಲರಿಗೆ ಶರಣು ಶರಣಾರ್ಥಿ. ನಿಮಗಾರಿಗೂ ಕೆಟ್ಟ ಹೆಸರು ತರಲಾರೆ. ಹುಟ್ಟಿದ ಮನೆಗೆ ಹೂವಲ್ಲದೆ ಹುಲ್ಲ ತರಲಾರೆ. ಇಷ್ಟದೈವ ನನ್ನನ್ನು ನೋಡಿಕೊಳ್ಳುವುದು, ನಿಮ್ಮಾಣೆ, ಹಿಂಬಾಲಿಸದಿರಿ. ಹರಸಿ' ಎಂದು ಕಟ್ಟೆಯಿಳಿದು ಹಿಂತಿರುಗಿ ನೋಡದೆ ನಡೆದೇ ಬಿಟ್ಟರು. ಉತ್ತರ ದಿಕ್ಕಿನತ್ತ ನಡೆದರು.

ಮಹಾದೇವಿ ನಡೆದ ಮೇಲೆ ಕೆಲವರು ಬಿಕ್ಕುತ್ತ. ಕೆಲವರು ಎದೆಎದೆ ಚಚ್ಚಿಕೊಳ್ಳುತ್ತ, ಒಬ್ಬಳೇ ಹೆಣ್ಣೆಂಗ್ಸು ಏನು ಮಾಡುವಳೋ ಅಂದುಕೊಳ್ಳುತ್ತ ಅಲ್ಲೇ ನಿಂತರು. 'ಯಾಕ ಈಕಿ ಇದ್ದ ಬಟ್ಟೆ ಎಲ್ಲ ಬಿಚ್ಚಿ ಬಂಗಾರಬೆಳ್ಳಿ ಹುಚ್ಚಿ ಹಿಂಗ್ ಕಂಬಳಿ ಉಟ್ಟು ಹೊಂಟಳು' ಎಂದು ಅಚ್ಚರಿಪಡುತ್ತ, ಜೈನ-ಶೈವ ಸಂಬಂಧವಾದ ಬಗೆಗೆ ತಲೆಗೊಂದು ವಿಚಾರ ಮಾಡುತ್ತ ತಿರುಗಿ ಹೊರಟರು. ಅಕಸ್ಮಾತ್ ರಾಜನ ಗೂಢಚಾರರು ತಮ್ಮ ನಡುವೆ ಇದ್ದು, ಆಡಿದ ಮಾತುಗಳ ವರದಿ ಒಪ್ಪಿಸಿ ಛಡಿಯೇಟು, ದಂಡದ ಶಿಕ್ಷೆಗೆ ಒಳಗಾದೇವು ಎಂದು ಹೆದರಿ ಹೆಚ್ಚು ಮಾತನಾಡದೆ ಹಲವರು ತಂತಮ್ಮ ಮನೆಗಳಿಗೆ ಹಿಂದಿರುಗಿದರು. ಇದ್ದಕ್ಕಿದ್ದಂತೆ ಗ್ರಹಣ ಬಂದೆರಗಿ, ಹಗಲು ಕಪ್ಪಾದರೆ ಹೇಗೆ ಜೀವಾದಿ ಜೀವಗಳೂ ತಳಮಳಗೊಳ್ಳುವವೋ ಹಾಗೆ ಅರಮನೆ ಬಿಟ್ಟು, ಮನೆ ಬಿಟ್ಟು, ಊರನ್ನೇ ಬಿಟ್ಟು ಹೋಗಿದ್ದು, ಅದೂ ಬಟ್ಟೆಬರೆ ಕಿತ್ತೆಸೆದು ದಿಗಂಬರಿಯಾಗಿ ಹಿಂತಿರುಗಿ ನೋಡದೇ ಹೋಗೇಬಿಟ್ಟದ್ದು ಊರ ಜನರಿಗೆ ಅರಗಿಸಿಕೊಳ್ಳಲು ಕಷ್ಟದ ಸಂಗತಿಯಾಯಿತು. ಸುತ್ತಲ ಊರುಗಳಿಗೂ ಸುದ್ದಿ ತಲುಪಿ ಎಲ್ಲರ ಬಾಯಲ್ಲೂ ಅದೇ ಮಾತು. ಎಲ್ಲರ ಬಾಯಲ್ಲೂ ಒಂದೇ ಮಾತು: ಮನೆಬಿಟ್ಟು, ಅರಮನೆ ಬಿಟ್ಟು, 'ಯಾಕ ಹ್ವಾದಳೋ?

ಈಮಾತನೆಲ್ಲ ಕೇಳಿದ ನೋಡಿದ ಮಹಾದೇವಿಯ ತಾಯಿ ತಂದೆಯು ಪ್ರಜ್ಞೆಯನ್ನೂ ತಪ್ಪಿ ನೆಲಕ್ಕೆ ಬಿದ್ದರು. ಮಹಾದೇವಿ ಮಾತ್ರ ತನ್ನ ಬೆನ್ನ ಹಿಂದೆ ಏನೇನು ನಡೆದಿದೆ ಎಂಬ ಯೋಚನೆಯೇ ಇಲ್ಲದವಳಾಗಿ ಸೀದಾ ದಾರಿ ಹಿಡಿದು ನಡೆದುಬಿಟ್ಟರು. ಮಹಾದೇವಿಯ ಗೆಳತಿ ಮಹೇಶ್ವರಿ ಇವಳು ಮಾತ್ರ ಹಾದಿ ಬಿಟ್ಟು ಕೆಳಗಿಳಿದು, ಓಣಿ, ಬೀದಿಯ ಪಕ್ಕದ ಹಾದಿಗಳಲ್ಲಿ, ಬೇಲಿ ಸಾಲಿನಲ್ಲಿ, ಪೊದೆಗಳ ಹಿಂಡಿನಲ್ಲಿ ನಡೆದು ಗೊತ್ತಿಲ್ಲದಂತೆ ಮಹಾದೇವಿಯನ್ನು ಹಿಂಬಾಲಿಸಿದಳು. ಒಂದಷ್ಟು ದೂರದತನಕ ನಂತರ ಕಣ್ಣೀರು ಸುರಿಸುತ್ತಾ ಮನೆ ಬಂದಳು. ಊರ ಗಡಿ ಕಳೆದದ್ದೇ ಬಯಲು ಬಂತು. ರಣರಣ ಎನ್ನುವ ಬಿಸಿಯ ಬಯಲು. ಹೊಲದ ಬೆಳೆಗಳೆಲ್ಲ ಕೊಯ್ದಾಗಿ ಮುಂಗಾರು ಮಳೆಯಿನ್ನೂ ಶುರುವಾಗಿರದ ಕಾಲ. ಉಕ್ಕೆಯಾಗದ ನಿರ್ಜನ ಹೊಲಗಳು. ಹೊಲದ ಬದುವಿನ ಮೇಲೆ ಮಹಾದೇವಿ ಒಂದೇಸಮ ನಡೆಯುತ್ತಿದ್ದಾರೆ. ಹಿಂತಿರುಗಿ ನೋಡದೆ, ಅವಸರಿಸದೆ, ಭಯಪಡದೆ. ಅಕ್ಕನು ದಿಗಂಬರಿಯಾಗಿ ನಡೆದುಕೊಂಡು ಹೋಗುತ್ತಿರುವಾಗ ಮಹಾದೇವಿಯ ಮೈಮೇಲೆ ಕೂದಲು ಬೆಳೆಯಿತು ಮಹಾದೇವಿಗೆ ನೈಸರ್ಗಿಕ ರಕ್ಷಣೆಯನ್ನು ಒದಗಿಸಿತು. ಇದು ಒಂದು ಪವಾಡವೇ ಆಯಿತು . ಉಡುತಡಿಯಿಂದ ಹೊರಡುವಾಗ ಮಹಾದೇವಿ ತಾನು ದಿನನಿತ್ಯ ಪೂಜಿಸುತ್ತಿದ್ದ ಮಲ್ಲಪ್ಪನ ಗುಡಿಯ ಎದುರಿಗೆ ನಿಂತುಕೊಂಡು, ನೀನೀಗ ಪರದೇಶಿಯಾದೆ ನಿನ್ನನ್ನು ಯಾರು ಪೂಜಿಸುತ್ತಾರೆ ಎಂದು ಹೇಳಿ ಹೋದ

ಮಹಾದೇವಿ ಅದಕ್ಕೆ ಅದು ಈಗ ಪರದೇಶೀ ಮಲ್ಲಪ್ಪನ ಗುಡಿಯಾಗಿದೆ. ಉಡುತಡಿಯಲ್ಲಿ. ಆದರೂ ತಾಯಿತಂದೆಯರು ಮಗಳಿಗೆ ಪರಿಪರಿಯಾಗಿ ಹೇಳಿ, ಮಹಾದೇವಿಯ ಭವಿಷ್ಯದ ಬಗ್ಗೆ ಚಿಂತಾಕ್ರಾಂತರಾಗಿ ಮಗಳನ್ನು ಬಿಟ್ಟು ಇರುವುದು ಹೇಗೆ? ಮಗಳು ಹೀಗೆ ಒಂಟಿಯಾಗಿ ಹೊರಟರೆ ಲೋಕದ ಜನರು ಸುಮ್ಮನೆ ಬಿಡುವರೆ? ಜನರು ಪರಿಪರಿಯಿಂದ ಮಹಾದೇವಿಯನ್ನ ನಿಂದಿಸುವುದಿಲ್ಲವೆ? ಎಂದು. ಅಕ್ಕಮಹಾದೇವಿಯವರು ತ್ಯಾಗಮಯಿ. ಚನ್ನ ಮಲ್ಲಿಕಾರ್ಜುನನಿಗಾಗಿ ಸರ್ವಸ್ವವನ್ನೂ ಬಿಟ್ಟುಕೊಟ್ಟವರು. ಅವರದು ಸ್ನೇಹಮಯ ವ್ಯಕ್ತಿತ್ವ. ತನ್ನ ಗೆಳತಿಯರ ಬಗ್ಗೆ ಅಪಾರ ಕಾಳಜಿ ವಹಿಸುತ್ತಿದ್ದ ಮಹಾದೇವಿ,. ಅಸೂಯೆ, ಸಿಟ್ಟು, ಮೋಹ ಇವಾವೂ ಮಹಾದೇವಯ ಅತ್ತಿರ ಸುಳಿಯಲಿಲ್ಲ. ವಿಶಾಲ ಮನೋಭಾವದ ಅಕ್ಕಮಹಾದೇವಿ ನೆರೆಹೊರೆಯವರ ನಡುವೆ ಆಕರ್ಷಣೆಯ ಕೇಂದ್ರಬಿಂದು ವಾಗಿದ್ದರು. ಅವರನ್ನು ಕಂಡರೆ ಎಲ್ಲರಿಗೂ ಪ್ರೀತಿ. ಅದಕ್ಕೆ ಕಾರಣ ಅವರ ಮಂದಹಾಸ,

ನಯ, ವಿನಯ, ವಿವೇಕ, ಸಹಾಯ ಹಸ್ತ ಮಾಡುವ ಮನೋಭಾವ, ಬಡವರ ಬಗ್ಗೆ ಕನಿಕರ, ದೈವಭಕ್ತಿ, ಗುರು-ಹಿರಿಯರ ಬಗ್ಗೆ ಗೌರವ ಮೊದಲಾದ ಸದ್ಗುಣಗಳು. ಇವೆಲ್ಲದರ ಜತೆಗೆ ಸಾಹಿತ್ಯದ ನಂಟು. ಪ್ರೌಢಾವಸ್ಥೆಗೆ ಬಂದ ನಂತರ ಅವರು ರಚಿಸಿದ ನೂರಾರು ವಚನಗಳು ಇಂದಿಗೂ ಜನಮಾನಸದ ಅರಿವನ್ನು ಶ್ರೀಮಂತಗೊಳಿಸುತ್ತಿವೆ.ಇತ್ತ, ಕೌಶಿಕ ಮಹಾರಾಜನ ಮೇಲೆ ಜನರು ದಂಗೆ ಎದ್ದರು ಇದನ್ನು ತಿಳಿದ ಬಿಜ್ಜಳಮಹಾರಾಜ ಒಂದು ಚಿಕ್ಕ ಸೈನ್ಯವನ್ನುಬನವಾಸಿಯ ದಂಡನಾಯಕನಾದ ಬೊಮ್ಮರಸನಿಂದ ಉಡುತಡಿಗೆ ಸೈನ್ಯವು ಕಳಿಸಿಕೊಟ್ಟನು. ಸೇನೆಯೊಂದಿಗೆ ಬಂದ ಬೊಮ್ಮರಸ ದಂಡನಾಯಕ, ಕೌಶಿಕರಾಜನನ್ನು ಸೆರೆಹಿಡಿದು ಬಂದಿಸಿದನು. ಬಿಜ್ಜಳ ಮಹಾರಾಜನ ಸುಚನೆಯಮೆರೆಗೆ ಬೊಮ್ಮರಸ ಉಡುತಡಿಯ ರಾಜನಾಗುತ್ತನೆ. ಪ್ರಜೆಗಳಿಗೆ ಕಂಟಕನಾಗಿ ನೆಡೆದುಕೊಳ್ಳತಕ್ಕಹ ರಾಜನಿಗೆ ಇದೆ ತಕ್ಕ ಶಿಕ್ಷೆ ಎಂಬೂದಾಗಿ ಪ್ರಜೇಗಳೆಲ್ಲರೂ ಸಂತೋಷ ಗೊಂಡಿದ್ದರು. ದಿವ್ಯಯೋಗಿನಿ ಮಹಾಶಿವಶರಣೆ ಮಹಾದೇವಿಯನ್ನು ಉಡುತಡಿಯಲ್ಲಿ ಉಳಿಸಿಕೊಳ್ಳಬೇಕು ಎಂಬುದಾಗಿ ಮಹಾದೇವಿಯ ಹಿಂದೆ ಪ್ರಜೇಗಳು ಭಕ್ತರು ಬಂಧುಗಳು ತಂದೆ ತಾಯಿ ಗುರುಗಳು ಎಲ್ಲರು ಹೊರಟ್ಟಿದ್ದಾರೆ, ಅಕ್ಕಮಹಾದೇವಿ ಉಡುತಡಿಯ ಭಾಗ್ಯ ಎಂದು, ಮಹಾದೇವಿಯವರು ಯಾರ ಮಾತು ಕೇಳುವ ಪರಿಸ್ಥಿತಿಯಲ್ಲಿ ಅವರು ಇರಲಿಲ್ಲ, ಇತ್ತ ಇದಾವುದೆ ಪರಿವೆ ಇಲ್ಲದೆ ಮಹಾದೇವಿಯವರು ಉಡುತಡಿ ಬಿಟ್ಟು ಹೊರಟಗಿಯಿತ್ತು.

ಇತ್ತ ಲಿಂಗಮ್ಮನ ಪರಿಸ್ಥಿತಿ ತಲೆ ಕೆದರಿತ್ತು. . ಸೆರಗು ನೆಲದ ಮೇಲೆ ಅಸ್ತವ್ಯಸ್ತವಾಗಿ ಬಿದ್ದಿತ್ತು. ತುರುಬಿನಲ್ಲಿ ಬಾಡಿ ಒಣಗಿದ ದುಂಡುಮಲ್ಲಿಗೆಯ ದಂಡೆ. ಉಸಿರಾಟ ಬಿಟ್ಟರೆ, ನಡುನಡುವೆ ಬಿಕ್ಕುವುದು ಬಿಟ್ಟರೆ ಮತ್ಯಾವುದೇ ಚಲನೆಯಿಲ್ಲದಂತೆ ಕೊರಡಾಗಿ ಬಿದ್ದ ತಾಯಿ.

ಲಿಂಗಮ್ಮದು ನಿದ್ರೆಯಲ್ಲ. ಮನವೇ ಖಾಲಿಯಾಗಿ, ಸ್ಮಶಾನವಾದಂತಹ ಸ್ಥಿತಿ. ಆಘಾತ ತಡೆಯಲಾಗದೇ ಎಚ್ಚರದಪ್ಪಿದಂತೆ ಮಲಗಿದ್ದರು. ತನ್ನ ಒಡಲ ಕುಡಿ, ಬೆಳೆಸಿದ್ದ ಏಕೈಕ ಮಗು, ಜಾಣೆ, ಮಹಾದೇವಿಯು ಏಕಾಏಕಿ ಅರಮನೆ . ಊರು ಎಲ್ಲವನ್ನೂ ತೊರೆದು ಹೋಗಿದ್ದರು. ಅದೂ ಹೇಗೆ? ಬೆತ್ತಲಾಗಿ. ತಾನಿನ್ನು ಈ ಊರಿಗೆ ಬರುವುದಿಲ್ಲ, ಯಾರೂ ಬರಬೇಡಿಯೆಂದು ಭಾಷೆ ತೆಗೆದುಕೊಂಡಿದ್ದಾರೆ! ಮಹಾದೇವಿ ಗೇನಂಥ ಕಷ್ಟವಾಗಿತ್ತೋ ಏನೋ, ತಮಗೊಂದು ಸಣ್ಣ ಸುಳಿವೂ ಸಿಗಲಿಲ್ಲ. ಏನು ನೋವನುಭವಿಸಿತೋ ಕೂಸು, ತನಗೇನೂ ಅರಿವಾಗಲಿಲ್ಲ. ತಮಗೊಂದು ಮಾತೂ ಹೇಳದೇ, ಕೇಳದೇ ಹೋದಳಲ್ಲ? ಮಹಾದೇವಿ ಕಷ್ಟಕಾಲದಲ್ಲಿ ಅಮ್ಮನ ಮನೆ ನೆನಪಾಗಲಿಲ್ಲ? ಕಾಣದ ಊರುಗಳಲ್ಲಿ ಒಬ್ಬಳೇ ಹೇಗೆ ಬದುಕನ್ನು ನಿಭಾಯಿಸಿಯಾಳು? ಮೈಗೆ ಬಟ್ಟೆಯಿಲ್ಲದೆ ಚಳಿಮಳೆಬಿಸಿಲುಗಳನ್ನು, ಪಶುಕ್ರಿಮಿಕೀಟಗಳನ್ನು, ಕಾಮುಕರನ್ನು, ನಿಂದಿಸುವವರನ್ನು ಹೇಗೆ ತಡೆದುಕೊಂಡಾಳು? ಇನ್ನಾವಾಗ ಮಹಾದೇವಿ ನೋಡುವುದು? ಇನ್ನು ಬರುವುದೇ ಇಲ್ಲವೇ ಅಮ್ಮನ ಮನೆಗೆ ? ಅಯ್ಯೋ, ಮಹಾದೇವಿ ಕೂಸೇ, ಮಹಾದೇವಿ. ಆಡಿ ಆಡಿ, ಬಿಕ್ಕಿ ಬಿಕ್ಕಿ, ಕರೆದು ಕರೆದು, ತಲೆ ಜಪ್ಪಿಜಪ್ಪಿ, ಎದೆಎದೆ ಬಡಿದುಕೊಂಡಿದ್ದಳು. ಮಹಾದೇವಿಯ ಹಿಂದೆ ಕರೆಯುತ್ತ ಹೋದ

ಲಿಂಗಮ್ಮ ಊರ ಗಡಿ ದಾಟುವುದರಲ್ಲಿ ಕಣ್ಣು ಕತ್ತಲಿಟ್ಟು ಬಿದ್ದಿದ್ದಳು.ಲಿಂಗಮ್ಮನನ್ನು ಓಂಕಾರಶೆಟ್ಟರು. ಹೊತ್ತು ತಂದು, ನೀರು ತಟ್ಟಿ ಎಚ್ಚರಿಸಲೆತ್ನಿಸುವುದರಲ್ಲಿ ಮಹಾದೇವಿ ದೂರ ಸಾಗಿಬಿಟ್ಟಿದ್ದರು. ಮಗಳ ಹಿಂದೆ ಹೋಗಿ ಹಿಂತಿರುಗುತ್ತಿದ್ದವರು ಓಂಕಾರಶೆಟ್ಟರಿಗೆ ಸಿಕ್ಕರು.

ಏನು ಹೇಳುವುದು ಸೆಟ್ಟರು ಊರವರಿಗೆ? ಏನು ಹೇಳುವುದು ಅವರು ತಮ್ಮ ಮನೆಯ ಜನರಿಗೆ? ಏನೆಂದು ಹೇಳಿ ಸಂತೈಸುವುದು ಮಹಾದೇವಿಯ ಹೆತ್ತವಳಿಗೆ? ಏನೆಂದು ಸಂತೈಸಿಕೊಳ್ಳುವುದು ತಮ್ಮನ್ನು ತಾವೇ? ದಿಕ್ಕೆಟ್ಟು ಕುಳಿತ ಶೆಟ್ಟರ

ಮನೆಯ ಜಗಲಿಯಲ್ಲಿ ಶಂಕರಮ್ಮ ದೀಪ ಹೊತ್ತಿಸಿ ಇಟ್ಟಳು. ಮನೆಯಲ್ಲಿ ಒಂದೇಒಂದು ಮಾತಿನ ಸದ್ದಿಲ್ಲ. ಸ್ಮಶಾನ ಮೌನವೆಂದರೆ ಏನೆಂದು ತಿಳಿಯಬೇಕಿದ್ದರೆ ಇಲ್ಲಿ ಬನ್ನಿ ಎಂದು ದುಃಖವು ಹಾದಿಹೋಕರನ್ನು ಕಣ್ಣನ್ನೆಯಲ್ಲಿ ಕರೆಯುತ್ತಿದ್ದಿತು. ಓಂಕಾರಶೆಟ್ಟರ, ಲಿಂಗಮ್ಮನ, ಉಳಿದವರ ಕಣ್ಣೆದುರು ಮಹಾದೇವಿಯ ಚಿತ್ರಗಳು ಒಂದಾದಮೇಲೊಂದು ಹಾದುಹೋಗುತ್ತಿದ್ದವು.

ಸಣ್ಣಲ್ಲಿಂದಲೂ ಅಷ್ಟೆ, ಅರೆಮನಸಿನಿಂದ ಏನನ್ನೂ ಮಾಡಲಾರಳು. ಚಿಕ್ಕ ಹುಡುಗಿಯ ಕೈಗೆ ತಿನ್ನು ಎಂದು ಬೊಗಸೆ ಕಡಲೆಕಾಯಿ ಕೊಟ್ಟರೆ ಒಂದು ಕಡೆ ಕೂತು ಒಂದೊಂದೇ ಕಡಲೆ ಸುಲಿದು, ಮೊದಲ ಕಾಳನ್ನು ನೆಲಕ್ಕೆ ಚೆಲ್ಲಬೇಕೆಂಬ ಅಪ್ಪಯ್ಯನ ಪಾಠ ನೆನಪಿಸಿಕೊಂಡು, ಒಂದಲ್ಲ ಹತ್ತು ಕಾಳು ನೆಲಕ್ಕೆ ಬಿಟ್ಟು, ನಂತರ ನಿಧಾನ ಒಂದೊಂದನ್ನೇ ಬಿಡಿಸಿ ಬಿಡಿಸಿ ತಿನ್ನುವ ಮಹಾದೇವಿ ಎಲ್ಲದರಲ್ಲೂ ಮಗ್ನತೆ. ಅವಸರವಿಲ್ಲ. ಬೆನ್ನು ನೋಯುವುದೆಂದು ಹ್ಯಾಂ ಎಂದರೆ ಸಾಕು, ಏಣಿ ಹತ್ತಿ ನಾಗಂದಿಗೆಯ ಮೇಲಿರುವ ಪಿಂಡ ತೈಲ ತಂದು, ಬೆನ್ನು ನೀವುವ. ಅವ್ವಯ್ಯ ಹಿತದಲ್ಲಿ ಹಾ, ಹೂ ಅನ್ನುತ್ತ ಸಾಕು ಕಣೆ ಮಹಾದೇವಿ ಅನ್ನಬೇಕು, ಅಲ್ಲಿಯತನಕ ತನ್ನ ಪುಟ್ಟ ಕೈಗಳಲ್ಲಿ ಬೇಸರವಿಲ್ಲದೆ ತಿಕ್ಕುತ್ತಿದ್ದಳು.

ದೆವ್ವ, ಭೂತ, ಕಳ್ಳಕಾಕರ ಹೆಸರಲ್ಲಿ ಅವಳನ್ನು ಹೆದರಿಸಲು ಸಾಧ್ಯವಿಲ್ಲ. ಹೊಡೆತದ ಹೆದರಿಕೆಯೂ ಇಲ್ಲ. ದೆವ್ವ ಎಂದರೆ ಯಾರು, ಅದೆಲ್ಲಿ ಇರುವುದೆಂದು ಕೇಳುವಳು. ಧೈರ್ಯವೇ ಮಹಾದೇವಿಗೆ ಗಟ್ಟಿ ಮನಸ್ಸನ್ನೂ ಕೊಟ್ಟಿರಬೇಕು. ಹೌದು ಎಂದರೆ ಹೌದು. ಇಲ್ಲವಾದರೆ ಇಲ್ಲ, ಅಷ್ಟೆ, ಮನದಲ್ಲಿ . ಹಠವಿಲ್ಲದಿದ್ದರೂ ತನಗೆ ಇಷ್ಟವಾದರಷ್ಟೇ, ಸರಿ ಕಂಡರಷ್ಟೇ ಅದರಂತೆ ನಡೆಯುವ.

ಈ ನೆನಪುಗಳ ಬೆನ್ನಲ್ಲೇ ಮಹಾದೇವಿ ಯಾರಿಗೂ ಕಾಣದಂತೆ ಅಟ್ಟ ಹತ್ತಿ ಮಾಡುತ್ತಿದ್ದ ಅಂಗಸಾಧನೆಯ ಚಿತ್ರ, ತಾನೇ ತಾನಾಗಿ ಹಾಡು ಕಟ್ಟುತ್ತ ಹಾಡಿಕೊಳ್ಳುತ್ತಿದ್ದ ದೃಶ್ಯ ಕಣ್ಮುಂದೆ ಬರುವುದು. ಎಷ್ಟು ಸುಮಧುರ ದನಿಯ ಕೂಸು. ಅಯ್ಯೋ ಮಹಾದೇವಿ, ಯಾರೂ ಹಿಂದೆ ಬರಬಾರದಂತ ಆಣೆ ಹಾಕಿದೆಯಂತಲ್ಲ, ಯಾಕೆ ಕೂಸೆ?

ಲಿಂಗಮ್ಮನಿಗೆ ಹಿಂದಿನ ನೆನಪುಗಳು ಮತ್ತೆಮತ್ತೆ ಬಂದು ಕಾಡುತ್ತ ತಾನು ಭ್ರಮೆಯ ಲೋಕದಲ್ಲಿರುವನೋ, ಸ್ವಪ್ನ ಕಾಣುತ್ತಿರುವನೋ, ನಿಜವಾಗಿಯೂ ಏನಾದರೂ ನಡೆಯಿತೋ ಇಲ್ಲವೋ ಒಂದೂ ತಿಳಿಯದಂತಾಗಿದ್ದಳು. ನಡೆದದ್ದು ಸ್ವಪ್ನವೇ ಆಗಿರಲಿ ಎಂದು ಹಾರೈಸುತ್ತ ಮಲಗಿದವಳು ಏಳದೇ ಇದ್ದಳು.

ಲಿಂಗಮ್ಮನನ್ನು ನೋಡಿ ಮಾತು ಸತ್ತು, ತಾವೂ ಕೊರಡಂತೆ ಆದಹಾಗೆನಿಸುತ್ತಿರಲು, ತಾವು ಇಲ್ಲಿ ನಿಂತಷ್ಟೂ ಅವಳ ದುಃಖ ಹೆಚ್ಚಬಹುದೇ ಹೊರತು ಸಮಾಧಾನವಾಗುವುದಿಲ್ಲ ಎಂದು ಗಟ್ಟಿಯಾಯಿತು. 'ಲಿಂಗಮ್ಮ, ಅಂಜಬ್ಯಾಡ. ಮಹಾದೇವಿ ನಂಬಿದ ಶಿವಾ, ನಾವು ನಂಬಿದ ಜಿನ ಎರಡೂ ಕಡೆಯಿಂದ ರಕ್ಷಣೆ ಸಿಗತದೆ. ಅಂಜಬ್ಯಾಡ. ತಾಯಿಗೆ ಹೇಗೆ ಅನಿಸುತ್ತೋ ಮಕ್ಕಳಿಗೆ ಹಾಗೇ ಆಗೂದು. ನೀವಿಲ್ಲಿ ಸೌಖ್ಯ ಇದ್ದರೆ ಅಲ್ಲವಳೂ ಸೌಖ್ಯ ಇದ್ದಾಳು. ಮಹಾದೇವಿ ಹುಡುಕಲಿಕ್ಕೆ ಕಳಿಸತೀವಿ. ಏಳವ್ವಾ' ಎಂದರು. ಶಂಕರಮ್ಮ ಅವರು ಹುಡುಕಿಸುವ ಮಾತು ಹೇಳಿದ್ದೇ ಲಿಂಗಮ್ಮ ಕೈ ಮೇಲೆತ್ತಿ ಬೇಡ ಎನ್ನುವಂತೆ ಆಡಿಸುತ್ತ, ತಲೆ ಅಲ್ಲಾಡಿಸುತ್ತಾ ಭೋರಾಡತೊಡಗಿದಳು. ಮಹಾದೇವಿಯನ್ನು

ಹುಡುಕಿಸಿ ತರುವುದು ಬೇಡ ಎನ್ನುತ್ತಿರುವಳೋ, ಸಂಕಟ ಪಡುತ್ತಿರುವಳೋ ತಿಳಿಯದೇ ಅವ್ವಾವರು, 'ಮಹಾದೇವಿ ಅಂತಿಂಥಾವಳಲ್ಲ. ನಿಮಗೆ ಒಳ್ಳೆ ಹೆಸರನೇ ತರತಾಳೆ. ಏಳವ್ವಾ, ನಿನ್ನ ಹೊಟ್ಟೆ ಎಷ್ಟು ಉರೀತಿದೆ ಅಂತ ನಮಗೆ ಅರ್ಥ ಆಗತದೆ ತಾಯಿ. ಇರಲಿ' ಎಂದು ತಮ್ಮನ್ನೇ ಸಮಾಧಾನಿಸಿಕೊಳ್ಳುವವರಂತೆ ಲಿಂಗಮ್ಮನನ್ನು ಸಮಾಧಾನಿಸಿ ಎದ್ದರು.

ಓಂಕಾಶೆಟ್ಟರು ಒಂದೇಸಮ ಮಗಳ ನೆನಪಿನ ಮಳೆಯಲ್ಲಿ ತೋಯ್ದು ಒದ್ದೆಯಾಗಿದ್ದರು. ಮಹಾದೇವಿಯ ಬಾಲ್ಯದ ನೆನಪುಗಳೆಲ್ಲ ಕಣ್ಮುಂದೆ ಸುಳಿದುಹೋಗುತ್ತಿದ್ದವು. ಮಠದಲ್ಲಿ ಕಲಿತಳು. ಗುರುಗಳ, ಸಾಧಕರ ಬಳಿಯೆಲ್ಲಾ ಚರ್ಚೆ ನಡೆಸಿ ಜಾಣೆಯೆನಿಸಿಕೊಂಡ. ಊರಗವುಂಡನೇ ಬಯಸಿ ಕೈಹಿಡಿಯುವಂತಹ ಜಾಣೆಯೂ, ಚೆಲುವಿಯೂ ಆಗಿದ್ದಳು. ತನ್ನಿಷ್ಟದಂತೆಯೇ ನಡೆವ ನಿರ್ಭೀತಿಯವ. ಮಹಾದೇವಿ ಸಸಿಯಲ್ಲ. ಸತ್ಯಯುತ ಗಂಧ. ಅದನ್ನು ಒಂದು ಕಡೆ ಬಂಧಿಸಿಡಲು ಸಾಧ್ಯವೇ ಇಲ್ಲ.

ಪಶ್ಚಾತ್ತಾಪ ಎದೆ ತುಂಬಿಕೊಂಡಿತು. ಆದದ್ದನ್ನು ಅಳಿಸುವುದು ಅಸಾಧ್ಯದ ಮಾತು. ಏನು ಮಾಡುವುದು? ಹೇಗೆ ಬದುಕುವುದು? ಮುಂತಾಗಿ ಯೋಚಿಸುತ್ತ ಪಂಚೆಯ ಚುಂಗಿನಿಂದ ಒಂದೇಸಮ ಕಣ್ಣೊರೆಸಿಕೊಳ್ಳುತ್ತಿದ್ದಾರೆ. ಎರಡೂ ಕೈ ಮೇಲೆತ್ತಿ ಶಿವಾ, ಶಿವನಿಚ್ಛೆ, ಮಲ್ಲಯ್ಯ

ಮಗಳನ್ನು ಹುಡುಕಿಸಿ, ಕರೆತರಲು ಜನರನ್ನು ಕಳಿಸುವುದು ಬೇಡವೇ ಬೇಡ

ಎಂದುಬಿಟ್ಟರು. ತಮ್ಮ ಮಗಳು ಒಮ್ಮೆ ನಿರ್ಧಾರ ಮಾಡಿದರೆ ಮುಗಿಯಿತು. ಮತ್ತೆ ಬದಲಿಸುವವಳಲ್ಲ. ಮಹಾದೇವಿಯ ಹಿಂದೆ ಜನರನ್ನು ಬಿಡುವುದು ಬೇಡ ಎಂದು ಕೈ ಮುಗಿದು ಗದ್ಗದರಾದರು.

ಮಹಾದೇವಿಯವರು ಎಂದು ಬರಿಗಾಲಲ್ಲಿ ನಡೆದವರು ಅಲ್ಲ, ಹೊಟ್ಟೆತುಂಬ ಊಟ, ಬೆಚ್ಚಗಿನ ಮನೆ ತಂದೆ ತಾಯಿಯ ಮುದ್ದಿನ ಮಗಳಾಗಿ ಇದ್ದ ಮಹಾದೇವಿಯವರಿಗೆ ದೇಗುಲವುಂಟು ಚೆನ್ನಮಲ್ಲಿಕಾರ್ಜುನಯ್ಯ ಆತ್ಮಸಂಗಾತಕ್ಕೆ ನೀನೆನಗುಂಟು.' 'ನಿಜ ಈ ಮಾತನ್ನು ನಾನೆ ಹೇಳಿದ್ದೆ. ಇಂದು ಅದನ್ನು ಸಾಧಿಸಿ ತೋರಿಸಬೇಕಾಗಿದೆ ಎಂದುಕೊಂಡರು. ಆದರೆ ಹೇಳುವಷ್ಟು ಸುಲಭವಲ್ಲ ಸಾಧಿಸಿ ತೋರಿಸುವುದು; ಎಂಬ ಅನುಭವ ಮಹಾದೇವಿಗೆ ಇಂದು ಬರತೊಡಗಿತ್ತು. ಕಷ್ಟದ ಕಲ್ಪನೆಯನ್ನೇ ಕಂಡರಿಯದೆ, ತಂದೆತಾಯಿಗಳ ಮುದ್ದು ಮಗಳಾಗಿ ಬೆಳೆದ ಮಹಾದೇವಿಗೆ ಇಂತಹ ಅನುಭವ ತೀರಾ ಹೊಸದು. ಆದರೂ ಅದೆಲ್ಲವನ್ನೂ ಎದುರಿಸಲು ಸಿದ್ಧವಾಗಿಯೇ ಬಂದಿದ್ದರು. ಊರಿನ ಪ್ರಮುಖ ಬೀದಿಯಲ್ಲಿ ನಿಧಾನವಾಗಿ ನಡೆದುಹೋಗುತ್ತಿದ್ದರು. ಊರೇನೂ ಅಷ್ಟು ದೊಡ್ಡದಾಗಿರದಿದ್ದರೂ ತೀರಾ ಚಿಕ್ಕ ಹಳ್ಳಿಯೂ ಅಲ್ಲ ಎಂಬುದನ್ನು ಕಂಡುಕೊಂಡರು. ಬೀದಿಯ ಅಕ್ಕಪಕ್ಕಗಳಲ್ಲಿದ್ದ ದೀಪಗಳು ಮಂದ ಪ್ರಕಾಶವನ್ನು ಬೀದಿಯ ಮೇಲೆ ಬೀರುತ್ತಿದ್ದವು. ಆ ಬೀದಿ ಊರಿನ ಇನ್ನೊಂದು ಕೊನೆಗೆ ತಂದು ಬಿಟ್ಟಿತು ಮಹಾದೇವಿಯನ್ನು. ಊರಿನ ಪಶ್ಚಿಮ ಭಾಗವನ್ನು ಬಳಸಿಕೊಂಡು ಬಂದ ಕೆರೆ ಅಲ್ಲಿ ಕೊನೆಗೊಳ್ಳುತ್ತಿತ್ತು. ಆ ಕೆರೆಯ ಏರಿಯ ಮೇಲೆ ಒಂದು ದೇವಾಲಯ ಕಾಣುತ್ತಿತ್ತು. ಆ ದೇಗುಲ ಇಂದು ತನ್ನ ಆಶ್ರಯಸ್ಥಾನವಾಗಬಹುದೆಂದು ಆಲೋಚಿಸಿ ಮಹಾದೇವಿ ಅತ್ತ ನಡೆದರು. ದೇವಾಲಯದ ಗರ್ಭಗೃಹ ಚಿಕ್ಕದಾಗಿದ್ದರೂ ಅದರ ಮುಂದಿದ್ದ ವಿಸ್ತಾರವಾದ ಕಟ್ಟಡ, ಅನಿರೀಕ್ಷಿತವಾಗಿ ಬಂದ ಪ್ರವಾಸಿಗರ ಅನುಕೂಲಕ್ಕಾಗಿಯೇ ನಿರ್ಮಿತವಾದಂತೆ ತೋರುತ್ತಿತ್ತು. ಇಂದಿನ ರಾತ್ರಿಯನ್ನು ಇಲ್ಲಿ ಕಳೆಯಬಹುದೆಂಬ ತೃಪ್ತಿಯಿಂದ ಮಹಾದೇವಿ ಅಲ್ಲಿ ಹೋಗಿ ಕುಳಿತುಕೊಂಡರು. ಆಯಾಸಗೊಂಡಿದ್ದ ಕಾಲುಗಳಿಗೆ ಆ ವಿಶ್ರಾಂತಿ ಹಿತಕರವಾಗಿತ್ತು. ಆದರೆ ಬರಿದಾಗಿದ್ದ ಹೊಟ್ಟೆ ಮಾತ್ರ, ಆಕ್ರೋಶವನ್ನು ಪ್ರಾರಂಭಿಸಿತು.

ಹಸಿವು ನಿಧಾನವಾಗಿ ಅವರಿಸಿ ಕೈಕಾಲು ನಿತ್ರಾಣವಾಗತೊಡಗಿತು. ಕತ್ತಲಾಗುವ ವೇಳೆಗೆ

'ಛೇ, ಎಲ್ಲವನ್ನೂ ಗೆಲ್ಲುತ್ತೇನೆಂದುಕೊಂಡರೆ, ಈ ಹಾಳು ಹಸಿವನ್ನೇ ಗೆಲ್ಲಲಾಗು ತಿಲ್ಲವಲ್ಲ. ನಾನು ಸೋಲುತ್ತಿದ್ದೇನೆಯೆ? ದೇಹ ಪೋಷಣೆಯ ಹಿಡಿ ಅನ್ನಕ್ಕಾಗಿ ನಾನು ಲೌಕಿಕಕ್ಕೆ ಶರಣಾಗಬೇಕೆ?' ಎಂದು ಯೋಚಿಸಿದ ಮಹಾದೇವಿ.ಆದರೆ ಆತ್ಮ ದೇಹದಲ್ಲಿರುವವರೆಗೂ ದೇಹವನ್ನು ಕಾಪಾಡಬೇಕಲ್ಲವೆ? ದೇಹ ನಶ್ವರವೆಂದು ಎಷ್ಟು ಹೇಳಿದರೂ, ಇರುವವರೆಗೂ ಅದರ ಪೋಷಣೆ ಅನಿವಾರವಲ್ಲವೆ? ದೇಹವೇ ಬಿದ್ದು ಹೋದರೆ ಆತ್ಮಕ್ಕೆ ನೆಲೆಯೆಲ್ಲಿ? ಆತ್ಮ ಪರಮಾತ್ಮನಲ್ಲಿ ಸೇರುವವರೆಗೂ ಈ ದೇಹ ಬೇಕೇ ಬೇಕಲ್ಲವೆ?' ಇತ್ಯಾದಿ ಮಹಾದೇವಿಯ ಯೋಚನಾಲಹರಿ ಸಾಗಿತ್ತು.

ಆದರೆ ಆ ಸಮಯದಲ್ಲಿ ಊರೊಳಗೆ ಹೋಗಿ ಯಾರದೋ ಮನೆ ಬಾಗಿಲಲ್ಲಿ ಕೈಚಾಚಿ ನಿಲ್ಲಲು ಇಷ್ಟವಾಗಲಿಲ್ಲ. 'ಒಂದು ದಿನ ಅನ್ನವಿಲ್ಲದಿದ್ದರೆ ಸಾವು ಬಂದು ಬಿಡುತ್ತದೆಯೆ? ಬಂದರೆ ಬರಲಿ, ನಾನು ಸೋಲುವುದಿಲ್ಲ, ಹಸಿವನ್ನು ಗೆಲ್ಲಲೇಬೇಕು.

ತಪಸ್ವಿಗಳು ಬರೀ ಗಾಳಿ ಕುಡಿದು ಸಾಧನೆ ಮಾಡುತ್ತಾರೆಂದು ಕೇಳಿದ್ದೇನೆ. ನಾನು ಗೆಲ್ಲುತ್ತೇನೆ. ಚೆನ್ನಮಲ್ಲಿಕಾರ್ಜುನ, ನೀನು ಎಂಥ ಕಠಿಣ ಪರೀಕ್ಷೆಯನ್ನು ಒಡ್ಡಿದರೂ ನಾನು ಗೆದ್ದೇ ಗೆಲ್ಲುತ್ತೇನೆ. ಈ ಅಲ್ಪ ಹಸಿವಿಗಾಗಿ ನಾನು ಸೋಲುತ್ತೇನೆಯೆ? ಇಲ್ಲ, ಎಂದಿಗೂ ಇಲ್ಲ.

"ಹೋಗು, ಈ ಊರಿನಲ್ಲಿ ನಿನ್ನ ಹೊಟ್ಟೆಗೆ ಒಂದು ಹಿಡಿ ಅನ್ನ ಸಿಕ್ಕಲಾರದೆ?" ಎಂದಿತು ಒಂದು ಮನಸ್ಸು. "ಆದರೆ ಭಿಕ್ಷೆಯನ್ನು ಬೇಡುವುದು ಹೇಗೆ?" "ಹೇಗೆ! ಹೇಗೆ ಎನ್ನುತ್ತೀಯ? ಹೆತ್ತ ತಂದೆತಾಯಿಗಳನ್ನು ನಿಷ್ಠುರದಿಂದ ಬಿಟ್ಟು ಬರುವಷ್ಟು ಕಲ್ಲು ಮನಸ್ಸಿನವಳಾದ ನಿನಗೆ, ಭಿಕ್ಷೆಯನ್ನು ಬೇಡಬಾರದೆಂಬ ಅಭಿಮಾನ ಕಾಡುತ್ತಿದೆಯೆ? ಇದೇ ಅಭಿಮಾನ ನಿನಗಿದ್ದರೆ ಶ್ರೀ ಶೈಲದವರೆಗೂ ಹೇಗೆ ನಡೆಯ ಬಲ್ಲೆ? ಹೊಟ್ಟೆ ತುಂಬಬೇಕಾದರೆ ಭಿಕ್ಷೆ ಬೇಡಲೇ ಬೇಕು" ಎಂದು ಹೊರಟರು "ಆದರೆ ಭಿಕ್ಷೆ ದೊರಕದೆ ಅವಮಾನವಾದರೆ?" ಅಭಿಮಾನ ಶಂಕಿಸಿತು. "ಹೌದು. ಅಹಂಕಾರ ಅಳಿಯಲೇಬೇಕು. ಶ್ರೀ ಶೈಲ ಕಡೆಗೆ ಹೋಗಲು ಈ ದೇಹ ಬದುಕಬೇಕು. ಆದರೆ ಈ ದೇಹದ ಅಭಿಮಾನ ಸಾಯಬೇಕು. ಚೆನ್ನಮಲ್ಲಿ ಕಾರ್ಜುನಾ, ನನ್ನ ಅಹಂಕಾರ ಬೆಳೆಯುವುದಕ್ಕೆ ಅವಕಾಶವಾಗದಂತೆ, ಪರಿಪರಿಯ ಕಷ್ಟಗಳನ್ನು ಕೊಟ್ಟು ನನ್ನನ್ನು ಪರೀಕ್ಷಿಸು.

ಮನೆ ಮನೆ ತಪ್ಪದೆ ಕೈಯೊಡ್ಡಿ ಬೇಡುವಂತೆ ಮಾಡಯ್ಯ,

ಬೇಡಿದೊಡೆ ನೆಲಕ್ಕೆ ಬೀಳುವಂತೆ ಮಾಡಯ್ಯ,

ನೆಲಕ್ಕೆ ಬಿದ್ದೊಡನೆ ನಾನೆತ್ತಿಕೊಂಬುದಕ್ಕೆ ಮುನ್ನವೆ

ಶುನಿ ಎತ್ತಿಕೊಂಬಂತೆ ಮಾಡಯ್ಯ ಚೆನ್ನಮಲ್ಲಿಕಾರ್ಜುನಯ್ಯ.

ಎಂದು ಆತ್ಮದ ಅಹಂಕಾರವಳಿಯುವುದಕ್ಕೆ ಸಾಂಕೇತಿಕವಾದ ವಚನವನ್ನು ಹೇಳಿ ಕೊಳ್ಳುತ್ತಾ ದೇವಾಲಯದಿಂದ ಎದ್ದು ಊರ ಕಡೆ ನಡೆಯತೊಡಗಿದರು. 'ಬೇಡಿದೊಡೆ ಇಕ್ಕದಂತೆ ಮಾಡಯ್ಯ' ಎಂದುಕೊಂಡು ಹೋಗಿದ್ದರೂ ಬೇಡುವದಕ್ಕೆ ಮೊದಲನೆಯ ಆ ಮನೆಯ ಒಡತಿ ಸಾಕಷ್ಟು ಆಹಾರ ಮಹಾದೇವಿಗೆ ಕೊಟ್ಟರು. ಒಂದು ಎಲೆಯಲ್ಲಿ ಹಾಕಿಕೊಟ್ಟ ಅದನ್ನು ತೆಗೆದುಕೊಂಡು ಕೆರೆಯ ದಂಡೆಯ ಕಡೆಗೆ ನಡೆದರು. ಅಲ್ಲಿ ಮುಖವನ್ನು ತೊಳೆದುಕೊಂಡು, ಮಲ್ಲಿಕಾರ್ಜುನನನ್ನು ಸ್ಮರಿಸಿ ಅವನಿಗೆ ಅದನ್ನು ನೈವೇದ್ಯಮಾಡಿ, ಆ ಪ್ರಸಾದವನ್ನು ಭುಜಿಸಿದರು. ಹೊಟ್ಟೆಯ ಕರೆ ತಾತ್ಕಾಲಿಕವಾಗಿ ಶಾಂತವಾಯಿತು. ಅನ್ನದೇವರ ಮಹತ್ವವನ್ನು ನೆನೆಯುತ್ತಾ ಮೆಟ್ಟಲುಗಳನ್ನೇರಿ ಬಂದು, ಕೊನೆಯ ಮೆಟ್ಟಲಿನ ಕಲ್ಲು ಪೀಠದ ಮೇಲೆ ಕುಳಿತರು ಮಹಾದೇವಿ. ಹಸಿವು ಅಡಗಿ ಮನಸ್ಸು ಸ್ವಲ್ಪ ನೆಮ್ಮದಿಯಾಗಿತ್ತು. ತಲೆಯೆತ್ತಿ ನೋಡಿದರು. ಲಕ್ಷಾಂತರ ನಕ್ಷತ್ರಗಳು ಕಿಕ್ಕಿರಿದು ಮಿನುಗುತ್ತಿದ್ದುವು. ಅವುಗಳ ಮಂದ ಪ್ರಕಾಶದಲ್ಲಿ ಕೆರೆಯ ನೀರು ಹೊಗೆ ಹತ್ತಿದ ದರ್ಪಣದಂತೆ ಮಬ್ಬುಮಬ್ಬಾಗಿ ಹೊಳೆಯುತ್ತ ನಕ್ಷತ್ರ ಗಳನ್ನು ಪ್ರತಿಬಿಂಬಿಸಲು ಪ್ರಯತ್ನಿಸುತ್ತಿತ್ತು. ಮಧ್ಯಾಹ್ನದ ಉರಿಬಿಸಿಲು ಪರಿಹಾರ ವಾದುದನ್ನು ಕಂಡು ಭೂದೇವಿಯು ಸಮಾಧಾನದ ನಿಟ್ಟುಸಿರು ಬಿಡುವಂತೆ ಗಾಳಿ ಮೆಲ್ಲಮೆಲ್ಲನೆ ಬೀಸುತ್ತಿತ್ತು. ಮಹಾದೇವಿ ಸ್ವಲ್ಪ ಹೊತ್ತು ಅಲ್ಲಿಯೇ ಕುಳಿತಿದ್ದರು. ಈ ಒಂದೆರಡು ದಿನಗಳು ಘಟನೆಗಳೆಲ್ಲಾ ಮಹಾದೇವಿಯ ಮನಸ್ಸಿನ ಮುಂದೆ ಸುಳಿಸುಳಿದು ಸುತ್ತಿ ಮಾಯವಾದವು. ಇನ್ನು ತನ್ನ ಮುಂದಿರುವ ಮಹತ್ತರವಾದ ಮಾರ್ಗವನ್ನು ನೆನೆದು 'ಅದೆಲ್ಲವನ್ನೂ ಎದುರಿಸಿ ಗುರಿಯನ್ನು ಮುಟ್ಟಲು ಶಕ್ತಿಯನ್ನು ಕೊಡು' ಎಂದು ತನ್ನ ಪತಿಯ ಮೊರೆಹೊಕ್ಕು ಮೇಲೆದ್ದರು. ಊರಿನಲ್ಲೆಲ್ಲಾ ಆಗಲೆ ಸದ್ದು ಅಡಗುತ್ತಿತ್ತು. ಮೌನ ವ್ಯಾಪಿಸುತ್ತಿತ್ತು. ಮಹಾದೇವಿ ಎದ್ದು ದೇವಾಲಯದ ಕಡೆಗೆ ನಡೆಯತೊಡಗಿದರು. ದೇವಾಲಯದ ಗರ್ಭಗೃಹದಲ್ಲಿದ್ದ ನಂದಾದೀಪ ತನ್ನ ಮಂದವಾದ ಬೆಳಕನ್ನು ಹೊರಗೆ ಚೆಲ್ಲುತ್ತಿತ್ತು. ಅದರ ಬೆಳಕಿನಲ್ಲಿ ಮಹಾದೇವಿ ಅಲ್ಲಿ ಯಾರೋ ಮಲಗಿರುವುದನ್ನು

ಗಮನಿಸಿದರು. ತಾನು ಮೊದಲು ಬಂದಾಗ ಅವರು ಇಲ್ಲಿ ಇರಲಿಲ್ಲ. ಯಾರೋ ಪ್ರಯಾಣಿಕರಿರಬಹುದೆಂದು ಭಾವಿಸಿ ಮಹಾದೇವಿ ಇನ್ನೊಂದು ಮೂಲೆಯ ಕಡೆಗೆ ಹೋಗಿ ಅಲ್ಲಿ ಮಲಗುವ ಏರ್ಪಾಡನ್ನು ಮಾಡತೊಡಗಿದರು.ಎಲ್ಲಿ ತಲೆಯಿಟ್ಟರೋ ಅದೇ ತಲೆದಿಂಬಾಯಿತು. ಎಲ್ಲಿ ಮೈಯಿಟ್ಟರೋ ಅದೇ ಹಾಸುಗೆಯಾಯಿತು. ಆದರೆ ಅಲ್ಲಿ ನೆಲ ತುಂಬಾ ಒರಟಾಗಿ ಉಬ್ಬು ತಗ್ಗುಗಳಿಂದ ಕೂಡಿದ್ದನ್ನು ಕಂಡು ಮೇಲೆದ್ದು ಸ್ವಲ್ಪ ಸಮಮಟ್ಟದ ನೆಲವನ್ನು ಹುಡುಕಲು ಹವಣಿಸುತ್ತಿದ್ದರು ಮಹಾದೇವಿ. ಅಷ್ಟರಲ್ಲಿ ಅಲ್ಲಿ ಮಲಗಿದ್ದ ವ್ಯಕ್ತಿ ಅಲುಗಾಡಿದಂತೆ ತೋರಿತು. ಮಹಾದೇವಿಯನ್ನೇ ನೋಡುತ್ತಿದ್ದ ಆತ ಎದ್ದು ಕುಳಿತ. ಬಳಿಗೆ ಬಂದು ದಿಟ್ಟಿಸಿ ನೋಡಿದ. ಮಹಾದೇವಿಯೂ ನೋಡಿದರು. ಬಹುಶಃ ಮಧ್ಯವಯಸ್ಸನ್ನು ಸಮೀಪಿಸುತ್ತಿದ್ದ ಆತ ಕಾವಿಯನ್ನು ಹಾಕಿದ್ದ. ಕೈಯಲ್ಲಿ ಯೋಗದಂಡವೂ ಇತ್ತು. ಆತನೇ ಕೇಳಿದ: "ಯಾರಮ್ಮ ನೀನು?" "ನಾನೊಬ್ಬ ಪ್ರಯಾಣಿಕಳು, ಸ್ವಾಮಿ. ಈ ರಾತ್ರಿ ಇಲ್ಲಿ ಉಳಿದು ಮುಂದೆ ಪ್ರಯಾಣ ಮಾಡಬೇಕಾಗಿದೆ. ತಾವು...." "ಹೌದು, ನಾನೂ ಹಾಗೆಯೇ ಒಬ್ಬ ಪ್ರಯಾಣಿಕ" ಎನ್ನುತ್ತಾ ಮಹಾದೇವಿಯನ್ನೇ ದಿಟ್ಟಿಸಿ ನೋಡತೊಡಗಿದ. "ಅಲ್ಲಿ ನೆಲ ತುಂಬ ಹಾಳಾಗಿದೆ. ಈ ಕಡೆ ಬಾ. ಹಾಸಿಕೊಳ್ಳುವುದಕ್ಕೆ ಏನೂ ಇಲ್ಲವೇ? ನನ್ನ ಬಳಿ ಒಂದು ವಸ್ತ್ರ ಇದೆ ಕೊಡಲೇ?" ಉಪಚರಿಸಿದ ಕರುಣೆಯಿಂದ ಎನ್ನುವಂತೆ. "ಬೇಡಿ ಸ್ವಾಮಿ. ಏನೂ ಬೇಡಿ. " ಮಹಾದೇವಿ ಕೃತಜ್ಞತೆ ವ್ಯಕ್ತಪಡಿಸಿದರು. " ಪಾಪ! ನಿನಗೆ ಇದೆಲ್ಲಾ ಅಭ್ಯಾಸವಿದ್ದಂತಿಲ್ಲ. ಕೋಮಲವಾದ ದೇಹ ಬರೀ ನೆಲದ ಮೇಲೆ ಹೇಗೆ ಮಲಗುತ್ತದೆ?" ಎಂದು ನಕ್ಕ. "ಸಾಧಕ ಅದನ್ನೆಲ್ಲಾ ಸಹಿಸಿಕೊಳ್ಳಬೇಕಾಗುತ್ತದೆಯಲ್ಲವೆ, ಸ್ವಾಮಿ" ಮುಗ್ಧವಾಗಿ ಹೇಳಿದ ಮಹಾದೇವಿ

ನಿಧಾನವಾಗಿ ತನ್ನ ಸ್ಥಳಕ್ಕೆ ಹೋದ ಆತ. ಮಹಾದೇವಿ ಕುಳಿತೇ ಇದ್ದರು. ಗರ್ಭಗೃಹದ ನಂದಾದೀಪ ಕ್ರಮೇಣ ನಂದತೊಡಗಿತು. ಇದ್ದ ಸ್ವಲ್ಪ ಬೆಳಕು ಮರೆಯಾಯಿತು. ಎಣ್ಣೆಯ ಕಮಟುವಾಸನೆ ಕ್ಷಣಕಾಲ ಆ ಸ್ಥಳವನ್ನು ಆಕ್ರಮಿಸಿತು. ನಕ್ಷತ್ರಗಳ ಮಬ್ಬು ಬೆಳಕಿನ ಹೊರತಾಗಿ ಸುತ್ತಲೂ ಕತ್ತಲು ಆವರಿಸಿತು. ಆಯಾಸದಿಂದ ದಣಿದ ಮಹಾದೇವಿ ಹಾಗೆಯೇ ಮಗ್ಗುಲಾದರು. ಒರಟು ನೆಲ ಒತ್ತುತ್ತಿತ್ತು. ಎಂದೂ ಇಂತಹದನ್ನು ಕಂಡರಿಯದ ದೇಹ, ಇದಕ್ಕೆ ಒಗ್ಗಿಕೊಳ್ಳಲು ತುಂಬಾ ಕಷ್ಟಪಡುತ್ತಿತ್ತು. ಅತ್ತ ಇತ್ತ ಹೊರಳುತ್ತ ನಿದ್ದೆ ಮಾಡಲು ಪ್ರಯತ್ನಿಸುತ್ತಿದ್ದರು. ಅಷ್ಟರಲ್ಲಿ ಇನ್ನೊಬ್ಬ ವ್ಯಕ್ತಿ ದೇವಾಲಯದ ಕಟ್ಟೆಯನ್ನು ಏರಿಬಂದಂತಾಯಿತು. ಮಹಾದೇವಿ ಮಲಗಿಕೊಂಡೇ ನೋಡಿದರು. ಬಂದ ವ್ಯಕ್ತಿ ಸುತ್ತಲೂ ನೋಡಿ ದೇವಾಲಯದ ಮೆಟ್ಟಲುಗಳ ಬಳಿಯಲ್ಲಿಯೇ ಬಂದು ಒಂದು ಮೂಲೆಯಲ್ಲಿ ಆಶ್ರಯವನ್ನು ಪಡೆದು ಮಲಗಿದಂತೆ ತೋರಿತು. ಸುತ್ತಲೂ ಮೌನ ತಾನೇತಾನಾಗಿ ಆವರಿಸಿತ್ತು. ಆಗೊಮ್ಮೆ ಈಗೊಮ್ಮೆ ಬೊಗಳುತ್ತಿದ್ದ ನಾಯಿಗಳು ಮೌನವನ್ನು ಮಥಿಸುತ್ತಿದ್ದವು. ದಿನವೆಲ್ಲಾ ನಡೆದ ಆಯಾಸದ ಪರಿಣಾಮವಾಗಿ ಈ ಸ್ಥಿತಿಯಲ್ಲಿಯೂ ಮಹಾದೇವಿಗೆ ನಿದ್ರಾದೇವಿ ಪ್ರಸನ್ನಳಾಗುತ್ತಿರುವಂತೆ ತೋರುತ್ತಿತ್ತು. ಹಾಗೆಯೇ ಜೊಂಪುಹತ್ತಿತು. ಅಷ್ಟರಲ್ಲಿ ಮಹಾದೇವಿಯ ಕಿವಿಯ ಬಳಿಯಲ್ಲಿ ಯಾರೋ ಪಿಸುಗುಟ್ಟಿದಂತಾಯಿತು. "ನಿದ್ದೆ ಬಂತೆ ?"

"ಯಾರದು?" ಎಂದು ಕುಳಿತರು.

"ನಾನು"

ವೇಷಧಾರಿ ಸನ್ಯಾಸಿ ಉನ್ಮತ್ತನಂತೆ ಮಹಾದೇವಿಯ ಕೈಹಿಡಿಯಲು ಹೋದ.

ಮಹಾದೇವಿ ನೆಗೆದು ಹಿಂದಕ್ಕೆ ಸರಿಯುತ್ತಾ: "ಸರಿ ಹಿಂದಕ್ಕೆ. ಮೈ ಮೇಲೆ ಎಚ್ಚರ ವಿರಲಿ ಮುಂದೆ ಬರಬೇಡ. ನೀನು ತೊಟ್ಟಿರುವ ವೇಷಕ್ಕಾದರೂ ಬೆಲೆ ಕೊಡು."

ವೇಷಧಾರಿ ಒಮ್ಮೆ ನಕ್ಕ,

"ಛೇ ನಾಚಿಕೆಯಾಗುವುದಿಲ್ಲವೇ ನಿನಗೆ?" ಎನ್ನುತ್ತಿದ್ದಂತೆಯೇ ಆತ ಇನ್ನೂ ಮುಂದುವರಿಯುತ್ತಾ:

ಮಹಾದೇವಿ ಹಿಂದೆ ಹಿಂದೆ ಸರಿಯುತ್ತಾ:

"ಎಚ್ಚರ, ಒಂದು ಹೆಜ್ಜೆಮುಂದೆ ಇಟ್ಟೀಯ,

"ಓಹೋ! ಹೆದರಿಸುತ್ತಿದ್ದೀಯೋ, ಇಟ್ಟರೆ ಏನು?" ಎಂದು ಕೇಳುವುದಕ್ಕೋ ಅವನ ತಲೆಯ ಮೇಲೆ ಬಲವಾದ ಒಂದು ಏಟು ಬೀಳುವುದಕ್ಕೂ ಸರಿಹೋಯಿತು. "ಇಟ್ಟರೆ.... ಇದೇ" ಎನ್ನುತ್ತಾ ಹಿಂದಿನಿಂದ ಬಂದ ವ್ಯಕ್ತಿ ಇನ್ನೊಂದೆರಡು ಏಟುಗಳನ್ನು ಕೊಟ್ಟಿತು. ಸ್ವಲ್ಪ ಹೊತ್ತಿನ ಹಿಂದೆ ಬಂದು ಮಲಗಿದ ವ್ಯಕ್ತಿಯೇ ಅವರೆಂದು, ಮಹಾದೇವಿ. ಅನಿರೀಕ್ಷಿತವಾದ ಆಘಾತದಿಂದ ತತ್ತರಿಸಿದ ವೇಷಧಾರಿ. ಆತನ ಕಾಮದ ಪಿತ್ತ ವೆಲ್ಲಾ ಒಂದೇ ಏಟಿಗೆ ಇಳಿದುಹೋಗಿತ್ತು. ಮತ್ತೂ ಎರಡು ಏಟುಗಳು ಬಿದ್ದುವು. ಅಪರಾಧದ ಹೊರೆಯನ್ನು ಹೊತ್ತು ಕಳೆಗುಂದಿದ ಆತ, ಈ ಸತ್ವಶಕ್ತಿಯ ಏಟನ್ನು ತಾಳಲಾರದೆ, ಬೆಂಕಿಯಲ್ಲಿ ಬಿದ್ದು ಮೈ ಸುಟ್ಟುಕೊಂಡ ನರಿಯಂತಾಗಿದ್ದ. ಅಲ್ಲಿದ್ದ ತನ್ನ ಸಾಮಗ್ರಿಗಳನ್ನೆಲ್ಲಾ ಬಾಚಿಕೊಂಡು ಓಡಿದ ದೇವಾಲಯದಿಂದ.

ಅನಿರೀಕ್ಷಿತವಾಗಿ ಬಂದ ವಿಪತ್ತಿನ ಹಿಂದೆ, ಅಷ್ಟೇ ಅನಿರೀಕ್ಷಿತವಾಗಿ ಬಂದ ಸಹಾಯಹಸ್ತವನ್ನು ಕಂಡು ಮಹಾದೇವಿ ಬೆರಗಾಗಿ ನಿಂತಿದ್ದರು. ಕೊನೆಗೆ ಹೇಳಿದರು: "ತಮ್ಮ ಉಪಕಾರಕ್ಕೆ ತುಂಬಾ ಕೃತಜ್ಞಳಾಗಿದ್ದೇನೆ, ಸ್ವಾಮಿ. ತಾವು ಬಂದು ನನ್ನನ್ನು ಕಾಪಾಡಿದಿರಿ."

"ಇಲ್ಲ ಮಗಳೇ, ನಿನ್ನ ಸತೀಶಕ್ತಿಯೇ ನಿನ್ನನ್ನು ಕಾಪಾಡುತ್ತಿತ್ತು. ಅದಕ್ಕೆ ನಾನು ನೆಪಮಾತ್ರವಾದೆ, ಮಹಾದೇವಿ. "

ಬಂದವರ ಧ್ವನಿಯಿಂದ ಮತ್ತು ಅವರು ತನ್ನನ್ನು ಗುರುತು ಕರೆದ ರೀತಿಯಿಂದ ಮಹಾದೇವಿಯ ಮೈ ರೋಮಾಂಚನಗೊಂಡಿತು.

ಆಂ!!ತಾವು...

"ಹೌದು.... ನಾನು ಮೊನ್ನೆಯ ದಿನ ಅರಮನೆಯಲ್ಲಿ ನಿನ್ನಿಂದ ಉಪಚಾರವನ್ನು ಪಡೆದ ಜಂಗಮ.... ಸಾನ್ಯಸಿ.

ಮಹಾದೇವಿಗೆ ಸಂತೋಷವೋ, ದುಃಖವೋ, ಉದ್ವೇಗವೋ ಯಾವುದೂ ಅರಿಯದ ಭಾವನೆ ಉಕ್ಕಿಬಂದಿತು. "ಸ್ವಾಮಿ, ಸಾಕ್ಷಾತ್ ಗುರುಲಿಂಗದೇವರೇ ಬಂದಂತಾಯಿತು.... " ಎಂದು ಅವರ ಕಾಲಮೇಲೆ ಕುಸಿದುಬಿದ್ದರು. ಅವರು ಮಹಾದೇವಿಯನ್ನು ಮೇಲೆತ್ತಿದರು. ಕಣ್ಣಿಂದ ನೀರು ಸುರಿಯುತ್ತಿರುವುದನ್ನು ಆ ಮೊಬ್ಬು ಬೆಳಕಿನಲ್ಲಿಯೂ ಗಮನಿಸಿದರು. ಅವರ ತಲೆಯನ್ನು ನೇವರಿಸುತ್ತಾ "ದುಃಖಿಸಬೇಡ, ಮಗಳೇ. ಪ್ರಪಂಚದ ಕಟುವಾದ ಅನುಭವವನ್ನು ಪಡೆಯು ವುದಕ್ಕಾಗಿಯೇ ಹೊರಬಿದ್ದಿರುವ ನೀನು ಇದನ್ನೆಲ್ಲಾ ಎದುರಿಸಬೇಕಾಗುತ್ತದೆ. " "ಹೀಗೂ ಉಂಟೇ, ಗುರುಗಳೇ? ಹಾಕಿರುವ ವೇಷಕ್ಕೂ ಆಚರಿಸುವ ವರ್ತನೆಗೂ ಸಂಬಂಧವೇ ಬೇಡವೇ?" "ಪ್ರಪಂಚ ನೀನು ತಿಳಿದಿರುವಷ್ಟು ಸರಳವಾಗಿಲ್ಲಮ್ಮ. ಇದೊಂದು ಅನೇಕ ವೈಪರೀತ್ಯಗಳ ವಿಷಮಸಂಗಮ. ಒಂದು ಕಡೆಯಲ್ಲಿ ಮಾನವತೆ ಏರಬಹುದಾದ ಔನ್ನತ್ಯವನ್ನು ಕಂಡು ವಿಸ್ಮಯಮೂಕರಾಗುತ್ತೇವೆ. ಇನ್ನೊಂದು ಕಡೆಯಲ್ಲಿ ಅದು ನಮ್ಮ ಊಹೆಗೂ ನಿಲುಕಲಾರದಷ್ಟು ಕ್ಷುದ್ರತೆಯ ಪಾತಾಳಕ್ಕೆ ಇಳಿಯುವುದನ್ನು ಕಂಡು ವೇದನೆಗೊಳ್ಳುತ್ತೇವೆ. ಇದು ಅಂತಹ ಒಂದು ಘಟನೆಯೆಂದು ಭಾವಿಸಿ ಧೈರವನ್ನುತಾಳು. ನಿನ್ನ ನಿಷ್ಠೆಯೇ ನಿನ್ನನ್ನು ಕಾಯುತ್ತದೆ. "-ಹೇಳಿದರು ಆ ಸನ್ಯಾಸಿ. "ನಿಜ, ಗುರುಗಳೇ. ಇಷ್ಟೊಂದು ಅನಿರೀಕ್ಷಿತವಾದ ರೀತಿಯಲ್ಲಿ ನೀವು ಇಲ್ಲಿಗೆ ಬಂದು ನನ್ನನ್ನು ಕಾಪಾಡಿದುದೇ ಅದಕ್ಕೆ ಸಾಕ್ಷಿ "ಮಹಾದೇವಿಯ ಧ್ವನಿಯಲ್ಲಿ ಕೃತಜ್ಞತೆ ತುಂಬಿ ತುಳುಕುತ್ತಿತ್ತು. "ನನ್ನ ರೂಪದಿಂದಲ್ಲದಿದ್ದರೆ, ಇನ್ನಾವ ರೂಪದಿಂದಲೋ, ಇನ್ನಾವ ಶಕ್ತಿ ಯಿಂದಲೋ ನಿನ್ನ ಪತಿ ನಿನ್ನನ್ನು ಕಾಪಾಡುತ್ತಿದ್ದ, ಮಗಳೆ, ಆ ಜಗತ್ಪತಿಯನ್ನೇ ನಂಬಿ ಅವನಿಗೆ ಸಾಕ್ಷಾತ್ ಸತಿಯಾಗಿರುವ ನಿನ್ನ ಸತೀತ್ವದ ತೇಜಸ್ಸು, ತನ್ನನ್ನು ತಾನು ರಕ್ಷಿಸಿಕೊಳ್ಳಬಹುದು. ಅದಕ್ಕೆ ಒಂದು ನೆಪ ಮಾತ್ರವೆಂಬಂತೆ ಬಂದೆ, ಅಷ್ಟೇ. " "ತಾವು ಇಲ್ಲಿಗೆ ಬಂದುದು ಹೇಗೆ, ಗುರುಗಳೇ!" ಮಹಾದೇವಿ ಕುತೂಹಲದಿಂದ ಕೇಳಿದರು. "ಅದು ಗುರುಲಿಂಗದೇವರ ಕರುಣೆಯಮ್ಮ" ಎಂದು ಪ್ರಾರಂಭಿಸಿ ನಡೆದುದನ್ನೆಲ್ಲಾ ಸಂಕ್ಷೇಪವಾಗಿ ಹೇಳಿದರು: ಅಲ್ಲಿಂದ ಮಹಾದೇವಿಯ ಊರು, ಪಟ್ಟಣ, ಮುಂದೆ ಸಾಗಿದರು. ಮಹಾದೇವಿಯ ದಾರಿಯಲ್ಲಿ ಕಂಡು ಬರುವ ಹೊಳೆಹಳ್ಳಗಳಲ್ಲಿ ಮಿಂದು ವಿಭೂತಿ ಧರಿಸಿಕೊಂಡು ಲಿಂಗಕ್ಕೆ ಅಡವಿಯಲ್ಲಿಯ ಹೂವು ಪತ್ರೆಗಳನ್ನು ಧರಿಸಿ ಪೂಜೆ ಮಾಡುತ್ತಿದ್ದರು. ಗಿಡಮರಗಳಲ್ಲಿ ದೊರೆಯುವ ಹಣ್ಣುಗಳನ್ನೇ ಇಷ್ಟಲಿಂಗಕ್ಕೆ ನೈವೇದ್ಯ ಹಿಡಿದು, ಆ ಪ್ರಸಾದವನ್ನೇ ತಾನು ಸೇವಿಸುತ್ತಿದ್ದರು. ಒಂದು ಸಮಯ ಆಹಾರಕ್ಕೆ ಏನೂ ಸಿಕ್ಕದಿದ್ದರೆ

ಉಪವಾಸ ಆರೋಗ್ಯಕ್ಕೆ ಒಳ್ಳೆಯದೆಂದು ಇರುತ್ತಿದ್ದರು ಹಾಗೂ ಮಿತ ಆಹಾರದ ಬಗ್ಗೆ ಒಂದು ವಚನ ಇದೆ.

'ಆಹಾರವ ಕಿರಿದು ಮಾಡಿರಣ್ಣಾ ಆಹಾರವ ಕಿರಿದು ಮಾಡಿ,

ಆಹಾರದಿಂ ವ್ಯಾಧಿ ಹಬ್ಬಿ ಬಲಿವುದಯ್ಯಾ,

ಆಹಾರದಿಂ ನಿದ್ರೆ, ನಿದ್ರೆಯಿಂ ತಾಮಸ, ಅಜ್ಞಾನ ಮೈಮರಹು,

ಅಜ್ಞಾನದಿಂ ಕಾಮವಿಕಾರ ಹೆಚ್ಚಿ ಕಾಯವಿಕಾರ,

ಮನೋವಿಕಾರ, ಇಂದ್ರಿಯವಿಕಾರ ಭಾವವಿಕಾರ,

ವಾಯುವಿಕಾರವನುಂಟುಮಾಡಿ ಸೃಷ್ಟಿಗೆ ತಹುದಾದ ಕಾರಣ,

ಕಾಯದ ಅತಿಪೋಷಣೆ ಬೇಡ ಅತಿ

ಪೋಷಣೆ ಮೃತ್ಯುವೆಂದುದು ಜಪ, ತಪ, ಧ್ಯಾನ ಧಾರಣ, ಪೂಜೆಗೆ ಸೂಕ್ಷ್ಮದಿಂ ತನು ಮಾತ್ರವಿದ್ದರೆ ಸಾಲದೆ?

ತನುವ ಪೋಷಿಸುವ ಆಸೆ ಯತಿತ್ವಕ್ಕೆ ವಿಘ್ನವೆಂದುದು

ತನು ಪೋಷಣೆಯಿಂದ ತಾಮಸ ಹೆಚ್ಚಿ ಅಜ್ಞಾನದಿಂ

ವಿರಕ್ತಿ ಹಾನಿ ಅರಿವು ನಷ್ಟ ಪರವು ದೂರ, ನಿರಕೆ ನಿಲವಿಲ್ಲದ ಕಾರಣ

ಚೆನ್ನಮಲ್ಲಿಕಾರ್ಜುನನೊಲಿಸಬಂದ ಕಾಯವ ಕೆಡಿಸದೆ ಉಳಿಸಿಕೊಳ್ಳಿರಯ್ಯಾ.

ಮಹಾದೇವಿಯವರ ಈ ವಚನ ಕೇವಲ ಇತರರಿಗೆ ಉಪದೇಶ ಮಾಡುವುದೇ ಆಗಿರಲಿಲ್ಲ ಈ ವಚನದಲ್ಲಿಯ ಎಲ್ಲಾ ಅರ್ಥವೂ ಮಹಾದೇವಿಯ ಮುಂದಿನ ಜೀವನದ ಸಿದ್ದತ ಈ ವಚನದಂತೆ ತ್ಯಾಗಮಯಿಯಾಗಿ ಶರೀರವನ್ನು ಎಲ್ಲ ಹಂತದಲ್ಲಿ ಪಡೆದುಕೊಂಡು ದಾರಿ ಸವೆಸಿದರೆಂದು ಅರಿಯಬಹುದಾಗಿದೆ. ಉಡುತಡಿ ಯಿಂದ ಶ್ರೀಶೈಲ ದಾರಿ  ತುಂಬ ದೂರ, ಈ ಎರಡರ ಮಧ್ಯದಲ್ಲಿ ಮಹಾದೇವಿಯವರು ದಾರಿ ಉದ್ದಕ್ಕೂ ಅನುಭವಿಸಿದ ಕಷ್ಟಕಾರ್ಪಣ್ಯಗಳು ಅಪಾರ,

ಮುಡಿ ಬಿಟ್ಟು ಮೊಗ ಬಾಡಿ ತನು ಕರಗಿದವಳ ಎನ್ನನೇಕೆ ನುಡಿಸುವಿರಿ ಎಲೆ ಅಣ್ಣಗಳಿರಾ? ಎನ್ನನೇಕ ನುಡಿಸುವಿರಿ ಎಲೆ ತಾಯಿಗಳಿರಾ? ಬಲುಹಳಿದು ಭವಗೆಟ್ಟು ಛಲವಳಿದು ಭಕ್ತಯಾಗಿ ಚೆನ್ನಮಲ್ಲಿಕಾರ್ಜುನನ ಕೂಡಿ ಕುಲವಳಿದವಳ ಮುಡಿಬಿಟ್ಟು ಮೊಗಬಾಡಿ ತನುಕರಗಿದವಳ, ಎನ್ನ ನೇಕೆ ನುಡಿಸುವಿರಿ ಎಲೆ ಅಣ್ಣಗಳಿರಾ ಬಾಚದೆ, ಹೆಣೆಯದೆ ತಲೆಗೂದಲು, ಬಿಟ್ಟಿದ್ದೇನೆ. ಮುಖಬಾಡಿದೆ ತನುಸೊರಗಿದೆ. ನೋಡಿದರೆ ತಿಳಿಯುವುದಿಲ್ಲವೆ ? ನಾನು ಪರಮಾತ್ಮ ಚೆನ್ನಮಲ್ಲಿಕಾರ್ಜುನನ ಪ್ರೇಮದಲ್ಲಿದ್ದೇನೆ. ನನ್ನನ್ನು ಯಾಕೆ ಮತನಾಡಿಸುವಿರಿ? ನನ್ನ ಪಾಡಿಗೆ ನನ್ನ ಬಿಡಿ. ಎನ್ನ ನೇಕೆ ನುಡಿಸುವಿರಿ ಎಲೆ ತಾಯಿಗಳಿರಾ ನಿಮಗೆ ತಿಳಿಯುವುದಿಲ್ಲವೆ ತಾಯಂದಿರೆ. ನಾನು ಚೆನ್ನಮಲ್ಲಿಕಾರ್ಜುನನ ಪ್ರೀತಿಯಲ್ಲಿದ್ದೇನೆ. ನನ್ನನ್ನು ಮಾತನಾಡಿಸಬೇಡಿರಿ. ನನ್ನ ಪಾಡಿಗೆ ನನ್ನ ಬಿಡಿ. ಬಲುಹಳಿದು ಭವಗೆಟ್ಟು ಛಲವಳಿದು ಭಕ್ತಿಯಾಗಿ ಚೆನ್ನಮಲ್ಲಿಕಾರ್ಜುನನ ಕೂಡಿ ಕುಲವಳಿದವಳ. ನಾನು ಈಗ ಬಲುಹನ್ನು ಕಳೆದುಕೊಂಡಿದ್ದೇನೆ. ನನ್ನಲ್ಲಿ ಈಗ ಯಾವ ಛಲಗಳು ಉಳಿದಿಲ್ಲ. ಭಕ್ತಿಯಾಗಿದ್ದೇನೆ. ಚೆನ್ನಮಲ್ಲಿಕಾರ್ಜುನನ್ನು ಕೂಡಿ ಕುಲವನ್ನು ಕಳೆದುಕೊಂಡಿದ್ದೇನೆ. ಪರಮಾತ್ಮ ಚೆನ್ನಮಲ್ಲಿಕಾರ್ಜುನನ ಹಂಬಲದಲ್ಲಿ ಹೊರಜಗತ್ತಿಗೆ ಬಂದ ಅಕ್ಕಮಹದೇವಿಯವರನ್ನು ಲೋಕದ ಜನರು ಹಲವು ಪ್ರಶ್ನೆ ಕೇಳಿದ್ದಾರೆ. ಭಕ್ತಿ ಜ್ಞಾನ, ವೈರಾಗ್ಯ ಎಲ್ಲರಿಗೆ ಅರ್ಥವಾಗುವುದಿಲ್ಲ. ಇಂತಹ ಚೆಂದದ ಮಗಳು ಕಾಡುಪಾಲಾದಳು. ಲಗ್ನಮಾಡಿಕೊಂಡು ಹಾಯಾಗಿ ಇರುಬಹುದಿತ್ತಲ್ಲ. ಎಂದು ಪ್ರಶ್ನೆ ಮಾಡಿದ್ದಾರೆ. ಈ ಹುಚ್ಚು ಹುಡುಗಿಗೆ ಯಾರೂ ಸರಿ ಬುದ್ದಿ ಹೇಳಿಲಿಲ್ಲವೆ ? ದೇವರನ್ನು ಎಲ್ಲಿ ಲಗ್ನ ಮಾಡಿಕೊಳ್ಳಲು ಸಾಧ್ಯ ? ಕರುಣೆ ತೋರಿಸುವಂತೆ ಬಂದು ಮಾತನಾಡುವ ಜನರಿಗೆ ಉತ್ತರ ಈ ವಚನ. ಮುಡಿ ಬಿಟ್ಟಿದ್ದೇನೆ. ಮುಖ ಬಾಡಿದೆ, ನನ್ನ ತನು ಸೊರಗಿದೆ. ನನ್ನ ಗಂಡ ಚೆನ್ನಮಲ್ಲಿಕಾರ್ಜುನ. ನನ್ನ

ಹತ್ತಿರ ಇಲ್ಲ. ನನಗೆ ಅವನು ಬೇಕು. ಅವನ ಸುಡು ಪ್ರೇಮದಲ್ಲಿ ಬಸವಳಿದಿದ್ದೇನೆ. ನನ್ನನ್ನು ಏಕೆ ಮಾತನಾಡಿ ಸುವಿರಿ ? ಅಣ್ಣಾಗಳ ನನಗೆ ನಿಮ್ಮ ಕರುಣೆ ಬೇಡ. ನನ್ನನ್ನು ನೀವು ಏಕೆ ಮಾತನಾಡಿಸುವಿರಿ ಎಲೆ ತಾಯಿಗಳಾ ? ನನ್ನ ಶಕ್ತಿಯೆಲ್ಲ ಉಡುಗಿದೆ. ಇಂದ್ರಿಯ ವಿಕಾರಗಳು ಹೋಗಿವೆ. ನನಗೆ ಈಗ ಲೌಕಿಕರಲ್ಲಿರುವಂತೆ ಯಾವ ಛಲ. ಅಭಿಮಾನಗಳೂ ಇಲ್ಲ. ಶುದ್ಧಭಕ್ತಗಳಾಗಿದ್ದೇನೆ. ದುಃಖವೆ ಬಾಯಿಗೆ ಬಂದಂತೆ ಮಾತನಾಡಿದ್ದಾರೆ. ಜೀವನದಲ್ಲಿ ಅಪಾರ ಕಹಿಗಳನ್ನುಂಡ ಅಕ್ಕನವರು ಎದುರಿಸುತ್ತಿರುವ ಎಡರುಗಳು ಒಂದೆ ಎರಡೆ ? ಅನುಭಾವ ಜೀವನ ಏನು ಎಂದು ತಿಳಿಯದೆ, ಚೆಂದ ಕಥೆಗಳಿಗೆ ಮಾರು ಹೋಗಿ ಪಡಬಾರದ ಬವಣೆಗಳನ್ನೆಲ್ಲ ಅವರು ಅನುಭವಿಸಿದರು. ಪರಮಾತ್ಮನಿಗಾಗಿ ಅವರು ಹಾಕಿದ ಕಣ್ಣೀರು ಸಾಗರದಷ್ಟು. ಅನುಭವಿಸಿದ ದುಃಖಗಳಿಗೆ ಕೊನೆ ಮೊದಲಿಲ್ಲ. ಆದರೂ ಆ ಜೀವ ಈ ಭವಸಾಗರವನ್ನು ಈಜಿ ದಡ ಸೇರಿರು. ಮನೆತನದ, ಶ್ರೀಮಂತರ, ಗುಣವಂತರಮನೆಯ ಹೆಣ್ಣುಮಗಳು. ತುಂಬು ತಾರುಣ್ಯದಲ್ಲಿ ಲೋಕೋತ್ತರವಾದ ಚೆಲುವೆಯಾಗಿದ್ದೂ ಬೀದಿಯ ವಿಷಯವಾಗಿರುವುದು. ಬಾಳಿನಲ್ಲಿ ಬಂದೊದಗಿದ ವಿಷಮ ಪ್ರಸಂಗವನ್ನು ಹೇಳುತ್ತದೆ. ಅಂತಹ ವಿಪರೀತದ ಘಟನೆ ಅವರ ಬಾಳಿನಲ್ಲಿ ನಡೆದುಹೋಗಿದೆ. ಅದಕ್ಕಾಗಿ ಅವರು ಮುಡಿಬಿಟ್ಟಿದ್ದಾರೆ. ಮೊಗ ಬಾಡಿದೆ ತನು ಕರಗಿದೆ. ಈಗ ಅವರಲ್ಲಿ ಯಾವ ಉತ್ಸಾಹವೂ ಉಳಿದಿಲ್ಲ. ಅವರು ಯಾರಿಗಾಗಿ ಆನಂದವಾಗಿರಬೇಕು. ತನಗಾಗಿಯೂ ಆನಂದವಾಗಿರಲಾರದ ಬದುಕು ಅವರದು. ಇದು ಜಗದ ಜನರಿಗೂ ನೋವಿನ ಘಟನೆ. ನಕ್ಕು ನಲಿಯಬೇಕಾದ ವಯಸ್ಸಿನಲ್ಲಿ ಈ ಹೆಣ್ಣುಮಗಳು ಇದೇನು ಹುಚ್ಚು ಹಚ್ಚಿಕೊಂಡಿತಲ್ಲ ಎಂದು ನೋಡಿದವರಿಗೂ ಸಂಕಟವೇ ಆಗಿದೆ. ಯಾವ ಹೆಣ್ಣುಮಗಳು ಆರೈಕೆ. ಪೋಷಣೆ, ರಕ್ಷಣೆ ಪಡೆದು, ಸುಖದಲ್ಲಿ ಬದುಕಬೇಕಾಗಿತ್ತೋ ಅಂತಹ ಹೆಣ್ಣು ಮಗಳು ಈ ವಯಸ್ಸಿನಲ್ಲಿ ತಪಸ್ಸು ನಡೆಸಬೇಕಾಗಿತ್ತೆ ?

ಸರ್ವಸಾಧಾರಣವಾದ ಈ ಪ್ರಪಂಚದ ಸುಖಗಳಿಗೆ ತಿಲಾಂಜಲಿಯನ್ನಿತ್ತು ತುಂಬು ಯೌವನದಲ್ಲಿ ಏಕಾಂಗಿಯಾಗಿ ತನ್ನತನವನ್ನು ಉಳಿಸಿಕೊಂಡು ತನ್ನ ಆರಾಧ್ಯ ದೇವರಾದ ಚೆನ್ನಮಲ್ಲಿಕಾರ್ಜುನನನ್ನೇ ಪತಿಯಾಗಿ ಸ್ವೀಕರಿಸಿ ಅವನನ್ನು ಹುಡುಕುತ್ತ ನಡೆಯುವುದೊಂದು ಅಸಾಮಾನ್ಯ ರೀತಿ. ಅದ್ಭುತ ಧೈರ್ಯಶಕ್ತಿ ಮಹಾದೇವಿಯನ್ನ ನಡೆಸಿಕೊಂಡು ಹೋಗಿರಬಹುದು. ಆದರೆ ಜನಸಾಮಾನ್ಯರ ಕಣ್ಣಿಗೆ ಮಹಾದೇವಿ ಈ ಅಂತರಂಗ ಶಕ್ತಿ ಹೇಗೆ ಅರಿವಾಗಬೇಕು? ಅಕ್ಕ ಹೆಣ್ಣಲ್ಲವೇ? ಸರ್ವ ಸಾಮಾನ್ಯ ಜನ ಅಂದು, ಇಂದು ಹೆಣ್ಣನ್ನು ನೋಡುವ ದೃಷ್ಟಿಯಿಂದಲೇ ಮಹಾದೇವಿಯನ್ನು ಕಂಡಿರಬಹುದು. ಇದು ಸಹಜ. ಮಹಾದೇವಿ ತನ್ನ ದೇಹದ ಹಂಗು ಹರಿದು ಕಲ್ಯಾಣದತ್ತ ಬಂದಾಗ ಜನರು ಅನೇಕ ದೃಷ್ಟಿಕೋನದಿಂದ ಮಹದೇವಿಯ ಪರಿಪರಿ ಆಡಿಕೊಂಡಿರಬಹುದು. ಅವರನ್ನ ಹಿಂಸೆ ಮಾಡಿರಲೂಬಹುದು. ಹೀಗೆ ಅನೇಕ ಅಹಿತ ನುಡಿಗಳು ಮಹಾದೇವಿಯ ಕಿವಿಗೆ ಅಪ್ಪಳಿಸಿದಾಗ ನುಡಿಗಳನ್ನು ಕೇಳಿಯೂ ಅವುಗಳಿಗೆ ಕಿವಿಗೊಡದೆ ತನ್ನ ಸ್ವಾಭಿಮಾನ, ದಿಟ್ಟತನದಿಂದ ತನ್ನ ಧೈರ್ಯಶಕ್ತಿಯ ಆತ್ಮಬಲದಿಂದ ಎಲ್ಲವನ್ನು ಎದುರಿಸಿ, ತನ್ನ ಗುರಿಯನ್ನು ಸಾಧಿಸಿದ ಧೀಮಂತ ಮಹಿಳೆ ಮಹಾದೇವಿ. ಮಹಿಳೆಯರ ಸಮಾನತೆಯ ಬಗ್ಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಕುರಿತು ಹೋರಾಟ ಮಾಡಿದ ವಿಶ್ವದ ಪ್ರಥಮ ಕನ್ನಡದ ಮಹಿಳೆ. ಮಹಿಳೆಯರಿಗೆ ಸ್ವಾಭಿಮಾನದ ಪ್ರಥಮಪಾಠ ಹೇಳಿದ ಗುರು ಮಹಾದೇವಿ. ಮಹಿಳೆಯರಿಗೆ ತಮ್ಮ ಆತ್ಮ ಬಲವನ್ನು ಬೆಳೆಸಿಕೊಳ್ಳಲು ಸೂಚಿಸಿದ ಮೊದಲನೆಯ ಮಾರ್ಗದರ್ಶಕಿ ಮಹಾದೇವಿ. ಇದೆಲ್ಲ ಅವರ ಸ್ವಂತ ಜೀವನದ ಗುರಿಯಾದರೂ ಜಪಯೋಗ ಕುರಿತಾದ ಅವರ ಬೋಧನೆ, ನಿಸರ್ಗದ ಮೇಲಿನ ಪ್ರೀತಿ, ಪ್ರಾಣಿಗಳ ಮೇಲೆ ಮಮತೆ. ಹೀಗೆ ಎಲ್ಲ ಪರಿಸರ ಪ್ರೀತಿ ಅವರ ಚಿಂತನೆ ಮಹಾದೇವಿಯ ವಚನಗಳಲ್ಲಿ ಕಂಡುಬರುತ್ತದೆ.

ಮಹಾದೇವಿಯ ಉಡುತಡಿ ಶ್ರೀಶೈಲ ಮಧ್ಯೆ ಪಯಣದ ದಾರಿ ಸಾಗಿಸುವ ನಿಟ್ಟಿನಲ್ಲಿ ಅವರಲ್ಲಿ ಅಡಗಿರುವ ಅನೇಕ ಮಾನವೀಯ ಮೌಲ್ಯಗಳು ಹೊರ ಹೊಮ್ಮಿರುವುದನ್ನು ಕಾಣಬಹುದು. ಅವರ ಪ್ರಾಣಿದಯೆಯನ್ನು ಮಹಾದೇವಿಯವರ ಒಂದು ವಚನದಿಂದಲೇ ಗುರುತಿಸಬಹುದು:

'ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ ಹಲವು ಪ್ರಾಣಿಯ ಕೊಂದು, ನಲಿನಲಿದಾಡುವ, ತನ್ನ ಮನೆಯಲೊಂದು ಶಿಶು ಸತ್ತಡೆ ಅದಕ್ಕೆ ಮರುಗುವಂತೆ ಅವನೇಕೆ ಮರುಗ? ಜಾಲಗಾರನ ದುಃಖ ಜಗಕೆಲ್ಲ ನಗೆಗೆಡೆ. ಇದು ಕಾರಣ ಚೆನ್ನಮಲ್ಲಿಕಾರ್ಜುನಯ್ಯನ ಭಕ್ತನಾಗಿರ್ದು ಜೀವಹಿಂಸೆಮಾಡುವ ಏನೆಂಬೆನಯ್ಯಾ?'

ಎಂದು ಪ್ರಾಣಿಹಿಂಸೆ ಮಾಡುವವರಿಗೆ 'ಪ್ರಾಣಿಗಳನ್ನು ಕೊಲ್ಲಬೇಡಿರಿ. ಅವು ನಿಮ್ಮ ಮಕ್ಕಳ ಸಮಾನ. ಅವುಗಳನ್ನು ಕಾಪಾಡಿ' ಎಂದು ಅಹಿಂಸಾ ಧರ್ಮದ ತಾನೆ ತತ್ವವನ್ನು ಬೋಧಿಸಿದರು.

ಉಡುತಡಿಯಿಂದ ಬಹುದೂರ ಸಾಗಿದ ಮಹಾದೇವಿಯವರು,

ಒಂದು ದಿನ ಒಂದು ಊರಿನ ಹೊರಗಿನ ಹಾಳು ಮಂಟಪದಲ್ಲಿ ಮಹಾದೇವಿ ಒಂದು ಕಡೆ ಕುಳಿತಿದ್ದರು. ಆ ದಾರಿಯಲ್ಲಿ ಸಾಗಿ ಹೋಗುವವರೆಲ್ಲ ಮಹಾದೇವಿಯತ್ತ ಕುತೂಹಲದ ದೃಷ್ಟಿ ಬೀರಿ ಹುಚ್ಚು ಹುಡುಗಿ  ಎಂದು ಹೇಳುತ್ತ ಹೊರಟು ಹೊದರು.

ಆದರೆ ನಾಲ್ಕು ಜನ ಪುಂಡರಂತೆ ಕಾಣುತ್ತಿದ್ದ ತರುಣರು ತುಸು ದೂರದಲ್ಲಿ ನಿಂತು ಮಹಾದೇವಿಯತ್ತಲೇ ನೋಡುತ್ತಿದ್ದರು.

ಮಹಾದೇವಿಗೆ ತುಸು ಕಸಿವಿಸಿಯಾದರೂ, ಈಗಾಗಲೇ ಅಂಥ ಹಲವು ಅನುಭವಗಳಾಗಿದ್ದುದರಿಂದ ಮಹಾದೇವಿಯವರು ಅದನ್ನ ಉದಾಸೀನ ಮಾಡಿದರು.

"ನೋಡೋ, ಎಂಥ ಸುಂದರವಾಗಿದ ಹುಡುಗಿ?" ಎಂದ ಮೊದಲನೆಯವನು.ಹೀಗೆ ಆ ನಾಲ್ಕು ಹುಡುಗರು

ಮಾತನಾಡುಲು ಪ್ರಾರಂಭಿಸಿದ್ದಾರೆ.ಒಂಟಿಯಾಗಿದ್ದಾಳೆ, .

ಅವರ ಚಲನವಲನ, ಮಾತು ಎಲ್ಲವನ್ನೂ ಮಹಾದೇವಿ ಗಮನಿಸಿದ. ಅವರನ್ನು ಹೇಗೆ ಎದುರಿಸಬೇಕೆಂದು ಮನಸ್ಸಿನಲ್ಲೇ ಯೋಚಿಸುತ್ತಿದ್ದರು.

ಅಷ್ಟರಲ್ಲಿ "ಏ ಹುಡುಗಿ ನೀನು ಯಾರು?" ಎಂದ ಮೊದಲನೆಯವನು.

"ಹುಡುಗಿ ಎಂದು ನೀನೇ ಹೇಳಿದೆಯಲ್ಲ?' ಎಂದ ಮಹಾದೇವಿ ನಿರಾತಂಕವಾಗಿ. “ಓಹೋ, ಮಾತಿನ ಚಾತುರವ್ರೋ?” ಎಂದ ಎರಡನೆಯವನು. “ಮಾತಿನಲ್ಲಿ ಮರ್ಯಾದೆಯಿಲ್ಲದ ಅನಾಗರಿಕರಿಗೆ ಚಾತುರವೇಕೆ ಬೇಕು?" ಎಂದ  ಮಹಾದೇವಿ ಮುಖಕ್ಕೆ ಹೊಡೆದಂತೆ.

"ನೀನು ಮಹಾ ಮಯ್ಯಾದಸ್ಥೆಯೋ?” ಮೂರನೆಯವನು ಕೆಣಕಿ ನುಡಿದ. "ಮರಾದೆಯಿದ್ದವಳಾಗಿದ್ದರೆ ಅರೆಬರೆ ಬಟ್ಟೆ ಹಾಕಿ ಅಲೆಯುತ್ತಿರುವೆ?" ಎಂದ ನಾಲ್ಕನೆಯವನು.

ತನ್ನ ರೂಪ ಯೌವ್ವನ ಕಂಡು ಆಸೆಯಿಂದ ಬಂದು ಕೆಣಕುವ ಕಾಮುಕರಿಗೆ- ವಚನ ಹೀಗೆ ಹೇಳುತ್ತಾರೆ ಮಹಾದೇವಿಯವರು.

'ಬಟ್ಟೆಹ ಮೊಲೆಯ ಭರದ ಜವ್ವನದ ಚೆಲುವ ಕಂಡು ಬಂದಿರಣ್ಣಾ! ಅಣ್ಣಾ ನಾನು ಹೆಂಗೂಸಲ್ಲ, ಅಣ್ಣಾ ನಾನು ಸೂಳೆಯಲ್ಲ, ಅಣ್ಣಾ ಮತ್ತೆ ನನ್ನ ಕಂಡು ಆರೆಂದು ಬಂದಿರಣ್ಣಾ! ಚೆನ್ನಮಲ್ಲಿಕಾರ್ಜುನನಲ್ಲದ ಮಿಕ್ಕಿನ ಪರಪುರುಷರು ನಮಗಾಗದ ಮೋರೆ ನೋಡಿರಣ್ಣ'

ಸ್ವಲ್ಪ ಹೆದರಿದರೆ  ಮಹಾದೇವಿ ಆ ನಾಲ್ವರು ಕಾಮುಕರೂ ತನ್ನ ಮೇಲೆ ಎರಗಲು ಸಿದ್ಧರಾಗಿರುವ ರೆಂದು ಮಹಾದೇವಿಗೆ ಅರ್ಥವಾಯಿತು. ಮಹಾದೇವಿ ಅವರತ್ತ ಕೆಕ್ಕರಿಸಿ ನೋಡಿ ಹೇಳಿದರು "ಬರಿ ಅರೆಬರೆ ಬಟ್ಟೆಹಾಕಿಯಿದ್ದವರೆಲ್ಲ ಸೂಳೆಯರೇನು? ನಿಮ್ಮ ತಾಯಂದಿರು, ಸೋದರಿಯರು, ಸ್ನಾನ ಮಾಡುವಾಗಲಾದರೂ ಬರಿ ಮೈಯಲ್ಲಿರುತ್ತಾರಲ್ಲವೆ? ನೀವು ಚಿಕ್ಕ ಮಕ್ಕಳಾಗಿರುವಾಗ ನಿಮ್ಮ ತಾಯಿ ನಿಮ್ಮ ಎದುರು

ಎಷ್ಟೋ ಸಲ ಅರೆಬರೆ ಬಟ್ಟೆಯಲ್ಲಿದ್ದಿರಬಹುದಲ್ಲವೆ? ಅವರನ್ನೆಲ್ಲ ಸೂಳೆಯರೆಂದು ಕರೆಯುತ್ತೀರೇನು? ಅವರ ಅರೆ ಬರೆಮೈಯನ್ನು ಕಂಡು ಹೀಗೆ ಕಾಮುಕರಂತೆ ಜೊಲ್ಲು ಸುರಿಸುತ್ತೀರೇನು?"

ಅವರಿಗೆ ಮುಖದ ಮೇಲೆ ಬಾರಿಸಿದಂತಾಯಿತು. ಮುಂದೆ ಏನು ಮಾತನಾಡ ಬೇಕೆಂದು ತೋಚದೆ ಅವರ ನಾಲಿಗೆ ತೊದಲಿತು. ಗಂಟಲು ಒಣಗಿತು. ಅವರು ಚಡಪಡಿಸುತ್ತಿರುವಾಗ ಮಹಾದೇವಿ ಹೇಳಿದರು "ಅಣ್ಣಂದಿರೇ, ನನ್ನನ್ನೇಕೆ ಕಾಡುತ್ತೀರಿ? ನಾನು ಚೆನ್ನಮಲ್ಲಿಕಾರ್ಜುನನ ಪ್ರೇಮಕ್ಕಾಗಿ ಕಾತರಿಸುತ್ತಿರುವ ನಿಮ್ಮ ಸೋದರಿ. ಈ ದೇಹದ ಸೌಂದರ್ಯ್ಯ ಎಷ್ಟು ಕಾಲ! ಈ ತಾರುಣ್ಯ ಎಷ್ಟು ಕಾಲ! ಬರೀ ಹೊಲಸಿನಿಂದ ತುಂಬಿರುವ ಈ ಹಾಳು ದೇಹಕ್ಕಾಗಿ ಕಳವಳಿಸಿ ನಿಮ್ಮ ತಾಯಂದಿರಿಗೆ, ಸೋದರಿಯರಿಗೆ ಅಪಮಾನ ಮಾಡಬೇಡಿ. ನನ್ನ ಇಷ್ಟದೈವಕ್ಕೆ ಸರ್ವಸ್ವವನ್ನೂ ಸಮರ್ಪಿಸಿರುವ ನನ್ನ ಹಾದಿ ಸುಗಮವಾಗಲಿ, ನನ್ನ ಗುರಿ ಸಫಲವಾಗಲಿ, ನನ್ನ ಚೆನ್ನಮಲ್ಲಿಕಾರ್ಜುನ ನನ್ನನ್ನು ಕೈ ಹಿಡಿದು ಎತ್ತಿಕೊಳ್ಳಲಿ, ಎಂದು ಹರಸಿ ಕಳಿಸಿಕೊಡಿ. ನಿಮಗೆ ನಮಸ್ಕರಿಸುತ್ತೇನೆ."

ಮಹಾದೇವಿಯ ಮಾತಿನಿಂದ ಆ ತರುಣರು ತಲೆ ತಗ್ಗಿಸಿದರು. ಅವರನ್ನು ತಾವು ಅಪರಾಧ ಮಾಡಿದೆವೆಂಬ ಭಾವನೆ ಕಾಡಿತು.

ನಮ್ಮನ್ನು ಕ್ಷಮಿಸು ತಾಯಿ ಎಂದ ಮೊದಲನೆಯವನು.

ನಮ್ಮ ಮೃಗ ಸ್ವಭಾವವನ್ನು ತಿದ್ದಿದ ಗುರು ನೀನು ಎಂದ ಎರಡನೆಯವನು. ನಮ್ಮ ಅಲ್ಪತನಕ್ಕೆ ನಮಗೇ ನಾಚಿಕೆಯಾಗುತ್ತಿದೆ ಎಂದ ಮೂರನೆಯವನು.

ಹೋಗಿ ಬಾ ಸೋದರಿ, ನಿನಗೆ ಶುಭವಾಗಲಿ. ನಿನ್ನ ಹರಕೆ ಕೈಗೂಡಲಿ" ಎಂದ ನಾಲ್ಕನೆಯವನು.

ನಾಲ್ವರೂ ಕೈಮುಗಿದರು. ಮಹಾದೇವಿಯೂ ಅವರಿಗೆ ಕೈಮುಗಿದು ಅಲ್ಲಿಂದ ಹೊರಟುಬಿಟ್ಟರು ಈ ವೇಳೆಗೆ ಇಂಥ ಅನೇಕ ಪ್ರಸಂಗಗಳನ್ನು ಅವಳು ಎದುರಿಸಿದ್ದ ಮಹಾದೇವಿ. ತನ್ನ ಚೆನ್ನಮಲ್ಲಿಕಾರ್ಜುನನೇ ಅಂಥ ಸಂದರ್ಭಗಳಿಂದ ಪಾರು ಮಾಡಿದನೆಂದು ಅವಳು ನಂಬಿಕೊಂಡಳು. ಚೆನ್ನಮಲ್ಲಿಕಾರ್ಜುನನ ಮೇಲಿನ ಅವಳ ಪ್ರೇಮ ಇನ್ನಷ್ಟು ಮತ್ತಷ್ಟು ದೃಢವಾಯಿತು.

ಎಂದು ನೀತಿಬೋಧೆನೆಮಾಡಿ ಕಾಮಾಸಕ್ತರಿಗೆ ಸನ್ಮಾರ್ಗ ತೋರಿದರು.

ಹೀಗೆ ಉಡುತಡಿಯಿಂದ ಶ್ರೀ ಶೈಲದ ಮಧ್ಯೆ ದವರೆಗೆ ಹೋಗುವ ದಾರಿಯಲ್ಲಿ ಅನೇಕ ಹಳ್ಳಿ, ಪಟ್ಟಣ, ನಾಡು, ಕಾಡು, ದಟ್ಟಾರಣ್ಯದಲ್ಲಿ ಅಲೆಯುವವರಿಗೆ ಹಿತೋಪದೇಶ ಮಾಡುತ್ತ ದಾರಿ ಸವೆಸಿದರು. ಶ್ರೀ ಶೈಲ ಹೊಗುವ ದಾರಿಯಲ್ಲಿ ಕಲ್ಯಾಣವು ಕಂಡಿತ್ತು.ಕಲ್ಯಾಣದ ಹೆಸರು ಕೇಳಿದ್ದರು ನೊಡಿರಲಿಲ್ಲ ಆಗ ಮಹಾದೇವಿಯವರಿಗೆ ಅನ್ನಿಸಿತು, ನಮ್ಮ ಊರಿನ ಸಮಿಪವಿರು ಊರು ಬಳ್ಳಿಗಾವಿಯ ಮಹಾಯೋಗಿ ಸಿದ್ದಪುರುಷ ಅಲ್ಲಮಪ್ರಭುವಿನ ನೆನಪು ಬಂದಿತ್ತು.ಅವರನ್ನು ಒಮ್ಮೆ ನೋಡಿಕೊಂಡು ದರ್ಶನ ಮಾಡಿಕೊಂಡು,ಅಲ್ಲಮಪ್ರಭುವಿನ ಆರರ್ಶಿವಾದ ಪಡೆದು ಶ್ರೀಶೈಲಕ್ಕೆ ಹೊಗಬೇಕು ಅನ್ನಿಸಿತು ಮಹಾದೇವಿಯವರಿಗೆ.ತ್ರಿಪುರಾಂತಕ ಕೆರೆ ಅಲ್ಲಿ ಮಹಾದೇವಿಯವರು ಸ್ನಾನ ಮಾಡಿ ಇಷ್ಟಲಿಂಗ ಪೂಜೆ ಮಾಡಿ ಇರುವ ಸಂದರ್ಭದಲ್ಲಿ. ಕಲ್ಯಾಣದ ಸಿಂಹಸನಾದಿಪತಿಯಾದ ಅಲ್ಲಮಪ್ರಭುವಿಗೆ ದಿವ್ಯಾ ದೃಷ್ಟಿಯಿಂದ ನೋಡಿ ಹೇಳುತ್ತಾರೆ. ಮಹಾದೇವಿ ಬರುತ್ತಿದ್ದರೆ, ಯಾರಾದರು ಹೋಗಿ ಕೊರೆದು ಕೊಂಡು ಬನ್ನಿ ಎಂದು. ಆಗ ಬಂದವನೆ ಹುಟ್ಟುಕಾಮುಕನಾಗಿ ಇರುವ ಕಿನ್ನರಿ ಬೌಮ್ಮಯ್ಯ ನಾನು ಕರೆತರುತೆನೆ ಎಂದು ಬಂದ. ಅಲ್ಲಮಪ್ರಭುವಿಗೆ ಇವನ ಸ್ವಭಾವದ ಬಗ್ಗೆ ಮೊದಲೆ ತಿಳಿದಿದ್ದು ಅವನನ್ನೆ ಕಳಿಸಿದರು, ಮಹಾದೇವಿ ಎಂಥ ಶಕ್ತಿವಂತರು ಎಂಥ ಜ್ಞಾನವಂತರು ವೈರಾಗ್ಯವಂತರು ಅನ್ನುವುದು ಅಲ್ಲಮ ಪ್ರಭುವಿಗೆ ತಿಳಿದಿತ್ತು ಅದಕ್ಕೆ ಅವನನ್ನೆ ಕಳಿಸಿಕೊಟ್ಟರು ಕಿನ್ನರಿ ಬೌಮ್ಮಯ್ಯ ಇವನ ಸ್ವಭಾವ ಹೇಗೆ ಅಂದರೆ, ಒಬ್ಬ  ಶರಣನು ಇನ್ನೊಬ್ಬ ಶರಣನಿಗೆ ಹೇಗೆ ನೋಡಬೇಕು ಹೇಗೆ ಗೌರವಿಸಬೇಕು ಅನ್ನುವ ಪರಿಜ್ಞಾನವೆ ಇಲ್ಲದ ಕಿನ್ನರಿಬೌಮ್ಮಯ್ಯ ಮಹಾದೇವಿಯವರು ಒಬ್ಬ ಮಹಾನ್ ಶಿವಶರಣೆ ಆನ್ನುವುದು ಬೌಮ್ಮಯ್ಯನಿಗೆ ತಿಳಿದಿತ್ತು. ಬಸವಣ್ಣ ಅನುಭವ ಮಂಟಪದಲ್ಲಿ ಇಂಥ ಪುರುಷ ಶರಣರು ಕೆಲವರು ಇದ್ದರು ವೇಷಕ್ಕೆ ಮಾತ್ರ ವಿಭೂತಿ ರುದ್ರಾಕ್ಷಿ ಲಿಂಗ ಇರುತ್ತಿತ್ತು, ಕೆಲವರಲ್ಲಿ ಮಾತ್ರ ಇರುತ್ತಿತ್ತು ಕಿನ್ನರಿ ಬೌಮ್ಮಯ್ಯ ಯುವಕನು ತುಂಬಾ ಸುಂದರನು ಆಗಿದ್ದ ನೋಡುವುದಕ್ಕೆ ಹಣೆಮೇಲೆ ವಿಭೂತಿ ಕೊರಳಲ್ಲಿ ರುದ್ರಾಕ್ಷಿ ಲಿಂಗ ಇವು ನೋಡುವುದಕ್ಕೆ ಒಬ್ಬ ಮಹಾನ್ ಶಿವ ಭಕ್ತನೆ ಎನ್ನಬೇಕು, ಇವುಗಳು

ಮಾತ್ರ ಅವನಲ್ಲಿ ಅಡಂಬರಕ್ಕೆ ಮಾತ್ರ ಇದ್ದವು, ಇಂಥ ಕಾಮುಕನಿಗೆ ಲಿಂಗಧೀಕ್ಷೆ ಕೊಟ್ಟಿದ್ರಾ, ಬಸವಣ್ಣ ಎಂದು ಅನಿಸುತ್ತದೆ ಇಂಥ ಕಾಮುಕ ಅನುಭವ ಮಂಟಪದಲ್ಲಿ ಇದ್ದನಾ ಅನಿಸುತ್ತದೆ. **18/19**ವಷದ ಯುವತಿ ಅರೆದಿಗಂಬರೆಯಾಗಿ ಕೇಶಂಬರಿಯಾಗಿ ಇದ್ದರೆ ಎಂದು ಕಾಮುಕನಾಗಿಯೆ ಬಂದಿದ್ದ ಮಹಾದೇವಿಯರಲ್ಲಿ ಚಿಕ್ಕದಾದ ತುಂಡು ಹರಿದ ಬಟ್ಟೆ ಬಿಟ್ಟರೆ ಬೇರೆ ಏನು ಇಲ್ಲ. ದೇಹವು ತುಂಬ ಬಳಲಿತ್ತು ನೊಂದುಬೆಂದ ಸುಸ್ಥಿತಿಯಲ್ಲಿ. ನನ್ನಂಥ ತುಂಬ ಸುಂದರವಾಗಿ ಇರುವ ಯುವಕ ನಾನು ಮಹಾದೇವಿಯ ಮನಸನ್ನು ಗೆಲ್ಲುತ್ತೆನೆ ಎಂದು ಅಹಂಕಾರದಿಂದ ಬಂದಿದ್ದ. ಕಿನ್ನರಿ ಬೌಮಯ್ಯ ತ್ರಿಪುರಂತಕ ಕೆರೆಯ ಹತ್ತಿರ ಮಹಾದೇವಿಯನ್ನು ಕಂಡೊಡನೆ. ಹೀಗೆ ವಚನವನ್ನು ನುಡಿಯುತ್ತನೆ.

ಕಾಯದಲ್ಲಿ ಕಳವಳವಿರಲು ಪ್ರಾಣದಲ್ಲಿ

ಮಾಯೆಯಿರಲು ಏತರ ಗಮನ? ಇದೇತರ ನಿರ್ವಾಣ?

ಮಹಾಲಿಂಗ ತ್ರಿಪುರಾಂತಕನು ನಿನ್ನ

ಸಂಸಾರಿಯೆಂಬನಲ್ಲದೆ ಸಜ್ಜನೆಯೆಂದು ಕೈವಿಡಿವನಲ್ಲ ಕೇಳಾ ಮರುಳೆ.

ನಿನ್ನ ಸ್ವರೂಪ ಕಂಡನ್ನ ದೃಷ್ಟಿ ನಟ್ಟುದೆನಗೆ

ನಿನ್ನ ಲಾವಣ್ಯರಸವ ಕಂಡು ಮನ ಹಾರೈಸಿತ್ತೆನಗೆ.

ನಿನ್ನ ಪುವುಡಿಯಿಂದ ಕೂಡಿಹೆನೆಂಬುದು ಭಾವದಲ್ಲಿ

ಬಚ್ಚಬರಿಯ ಹೆಂಗುಸಾಗಿ ತೋರಿತ್ತೆನಗೆ.

ಮಹಾಲಿಂಗ ತ್ರಿಪುರಾಂತಕನೆಗೊಡ್ಡಿದ ಮಾಯೆಯ ನಿನ್ನ

ಸಮಸುಖಕೂಟದೊಳಿದ್ದು ಶಿವಭಾವಭಕ್ತಿಯಿಂ ಗೆಲುವೆನು ಬಾರೌ ಹೆಣ್ಣೆ ಎಂದು ಕೈವಿಡಿದೆನು.

ಈ ರೀತಿಯಾಗಿ ವಚನವನ್ನು ಹೇಳುತ್ತ ಮಹಾದೇವಿಯವ ಕೈ ಹಿಡಿದೆ ಬಿಟ್ಟನು. ಮಹಾದೇವಿಯವರ ನೋಟವೆ ಬೇರೆ ಈ ಕಾಮುಕನ ನೋಟವೆ ಬೇರೆ ಮಹಾದೇವಿ ಕಿನ್ನರಿಬೌಮ್ಮಯ್ಯನನ್ನು ನೋಡುತ್ತ ಹೀಗೆ ಹೇಳುತ್ತರೆ

ನೋಡುವ ಕಂಗಳಿಗೆ ರೂಪಿಂಬಾಗಿರಲು ನೀವು ಮನನಾಚದೆ ಬಂದಿರಣ್ಣಾ.

ಕೇಳಿದ ಸ್ತೋತ್ರ ಸೊಗಸಿಗೆ ನೀವು ಮರುಳಾಗಿ ಬಂದಿರಣ್ಣಾ.

ನಾರಿಯೆಂಬ ರೂಪಿಂಗೆ ನೀವು ಒಲಿದು ಬಂದಿರಣ್ಣಾ.

ಮೂತ್ರವು ಬಿಂದುವೊಸರುವ ನಾಳವೆಂದು ಕಂಗಾಣದೆ ಮುಂದುಗೆಟ್ಟು ಬಂದಿರಣ್ಣಾ."

ಬುದ್ಧಿಗೇಡಿತನದಿಂದ ಪರಮಾರ್ಥದ ಸುಖವ ಹೋಗಲಾಡಿಸಿಕೊಂಡು ಇದಾವ

ಕಾರಣವೆಂದಜ್ಯದೆ ನೀವು ನರಕಹೇತುವೆಂದರಿದು ಮನಹೇಸದೆ ಬಂದಿರಣ್ಣಾ.

ಚೆನ್ನಮಲ್ಲಿಕಾರ್ಜುನನಲ್ಲದೆ ಮಿಕ್ಕಿಹ ಪುರುಷರೆನಗೆ ಸಹೋದರ ಛೀ ಹೋಗಾ ಮರುಳೆ.

ಎಂದು ಕೈ ಬಿಡಿಸಿಕೊಂಡರು ಅಷ್ಟಕ್ಕೂ ಅವನು ಮಾತು ಕೇಳುವುದಿಲ್ಲ ಮಹದೇವಿಯವರು ಹೀಗೆ ವಚನ ಹೇಳುತ್ತರೆ.

ಬಟ್ಟೆಹಮೊಲೆಯ ಭರದ ಜವ್ವನದ

ಚೆಲುವ ಕಂಡು ಬಂದಿರಣ್ಣಾ.

ಅಣ್ಣಾ, ನಾನು ಹೆಂಗೂಸಲ್ಲ;

ಅಣ್ಣಾ ನಾನು ಸೂಳೆಯಲ್ಲ.

ಅಣ್ಣಾ, ಮತ್ತೆ ನನ್ನ ಕಂಡು ಕಂಡು ಆರೆಂದು ಬಂದಿರಣ್ಣಾ.

ಚೆನ್ನಮಲ್ಲಿಕಾರ್ಜುನನಲ್ಲದ ಮಿಕ್ಕಿನ ಪುರುಷನು ನಮಗಾಗದ ಮೋರೆ ನೋಡಣ್ಣಾ.

ಎಷ್ಟು ಹೇಳಿದರು ಕಿನ್ನರಿ ಬೌಮ್ಮಯನ ವರ್ತನೆ ಹೆಚ್ಚಾಯಿತು ಮತ್ತೆ ಕಿನ್ನರಿ ಬೌಮ್ಮಯನನ್ನು ಕಂಡು ಹೀಗೆ ಹೇಳುತ್ತಾರೆ, ವಿನಂತಿಸಿ ಹೇಳುತ್ತಾರೆ.

ಎನ್ನಂತೆ ಪುಣ್ಯಗೆಯ್ದವರುಂಟೆ,

ಎನ್ನಂತೆ ಭಾಗ್ಯಗೈದವರುಂಟೆ,

ಕಿನ್ನರನಂತಪ್ಪ ಸೋದರನೆನಗೆ,

ಏಳೇಳುಜನ್ಮದಲ್ಲಿ ಶಿವಭಕ್ತರೆ ಬಳಗವೆನಗೆ,

ಚೆನ್ನಮಲ್ಲಿಕಾರ್ಜುನನಂತಪ್ಪ ಗಂಡ ನೋಡಾ ಎನಗೆ.

ಎಷ್ಟೆಲ್ಲ ಮಹಾದೇವಿ ಹೇಳಿದರು ಅವನ ವರ್ತನೆ ಹೆಚ್ಚಾಯಿತ್ತು

ಅವನ ವರ್ತನೆಯನ್ನು ಕಂಡು ಸ್ತಿರವಾಗಿ ನಿಂತೆಬಿಟ್ಟರು. ಕಿನ್ನರಿಬೌಮ್ಮಯ್ಯನ್ನ ವರ್ತನೆ ಮುಂದುವರಿದವು ಮಹಾದೇವಿಯವರು ಮಲ್ಲಿಕಾರ್ಜುನನ ಧ್ಯಾನದಸ್ಥಿತಿಯಲ್ಲಿನಂತೆಬಿಟ್ಟರು. ಇವನ ಕೆಟ್ಟವರ್ತನೆ ಶುರುವಾದವು ಇವನು ಎಂಥ ನೀಚ ಆಂದರೆ ಹೇಳುವುದಕ್ಕೆ ಬಾಯಿ ಬರುವುದಿಲ್ಲಮಹಾದೇವಿಯವರ ಮುಂದೆ ಸೋತು ಸುಣ್ಣವಾದ. ಈ ಮುರ್ಖ ಮಹಾದೇವಿಯನ್ನು ಮುಟ್ಟಿದಕೂಡಲೆ ಅವನಿಗೆ ನಡುಕ ಭಯಉಂಟಾಯಿತ್ತು. ಅವನಿಗೆ ಆದಾಅನುಭವವೆ ಬೇರೆಯಯಿತುಅವನು ಕಾಮುಖನಾಗಿದ್ದನು, ಅಂಥ ಕಮುಖನ ಮನಸ್ಸು ಶಿವಭಕ್ತನಾಗಿ ಪರಿರ್ವನೆಗೊಳ್ಳುತ್ತಾ ಬಂದಿತ್ತುಕಿನ್ನರಿಬೌಮಯ್ಯನಿಗೆ ಮಹಾದೇವಿಯರನ್ನು ಸ್ಪರ್ಶಿಸಿದ ಕೂಡಲೆ ಆದಾ ಅನುಭವ ಈ ವಚನದಲ್ಲಿ ಹೀಗೆ ಹೇಳುತ್ತಾನೆ.

ಮಸ್ತಕವ ಮುಟ್ಟಿ ನೋಡಿದಡೆ ಮನೋಹರನುಳುವೆ

ಕಾಣಬಂದಿತ್ತು

ಮುಖಕಮಲವ ಮುಟ್ಟಿ ನೋಡಿದಡೆ

ಮೂರ್ತಿಯ ಉಳಿವು ಕಾಣಬಂದಿತ್ತು;

ಕೊರಳ ಮುಟ್ಟಿನೋಡಿದಡೆ ಗರಳಧರನಿರವು ಕಾಣಬಂದಿತ್ತು

ತೋಳುಗಳ ಮುಟ್ಟಿ ನೋಡಿದಡೆ ಶಿವನಪ್ಪು ಕಾಣಬಂದಿತ್ತು;

ಉರಸ್ಥಲ ಮುಟ್ಟಿ ನೋಡಿದಡೆ ಕರಸ್ಥಲದಂಗ ಕಾಣಬಂದಿತ್ತು

ಬಸುರ ಮುಟ್ಟಿ ನೋಡಿದಡೆ ಬ್ರಹ್ಮಾಂಡವಡಗಿತ ಕಾಣಬಂದಿತ್ತು

ಗುಹ್ಯವ ಮುಟ್ಟಿ ನೋಡಿದಡೆ ಕಾಮದಹನ ಕಾಣಬಂದಿತ್ತು

ಮಹಾಲಿಂಗ ತ್ರಿಪುರಾಂತಕದೇವ ಮಹಾದೇವಿಯಕ್ಕನ ನಿಲವನರೆಯದೆ ಅಳುಪಿಕೆಟ್ಟೆನು.

ಎನ್ನುತ್ತ ಪರಿತಪಿಸುತ್ತ ನಾನು ತಪ್ಪುಮಾಡಿದೆ ಕ್ಷಮಿಸು ತಾಯಿ ಎಂದು ಪರಿಪರಿಯಾಗಿ ಬೇಡತೋಡಗಿದ ಪಾದಕ್ಕೆ ಎರಗಿದ ಮಹಾದೇವಿಯನ್ನು ಸ್ಪರ್ಶಿಸಿದ ನಂತರ ಅವನ ಕಾಮುಕದ ಎಲ್ಲ ಗುಣಹೋಗಿ ಮಹಾಶಿವಭಕ್ತ ಗುಣ ಅವನಲ್ಲಿ ಬಂದಿತ್ತು ಕಿನ್ನರಿಬೌಮ್ಮಯ್ಯನ್ನು ಕಂಡು ಹೀಗೆ ಹೇಳುತ್ತರೆ ಮಹಾದೇವಿಯವರು.

ಅಂಗದ ಭಂಗವ ಲಿಂಗಮುಖದಲ್ಲಿ ಗೆಲಿದೆ;

ಮನದ ಭಂಗವ ಅರಿವಿನ ಮುಖದಲ್ಲಿ ಗೆಲಿದೆ;

ಜೀವದ ಭಂಗವ ಶಿವನ ಭಾವದಿಂದ ಗೆಲಿದೆ:

ಕರಣದ ಕತ್ತಲೆಯ ಬೆಳಗನುಟ್ಟು ಗೆಲಿದೆ;

ಎನ್ನ ಜವ್ವನದ ಹೊರೆ ಮಿಂಚಿನಲ್ಲಿ

ನಿಮ್ಮ ಕಣ್ಣಿಗೆ ತೋರುವ ಕಾಮನ ಸುಟ್ಟುಹಿದ ಭಸ್ಮವ ನೋಡಯ್ಯಾ.

ಚೆನ್ನಮಲ್ಲಿಕಾರ್ಜುನಾ ಕಾಮನ ಕೊಂದು ಮನಸಿಜನನಾಗುಳುಹಿದಡೆ ಮನಸಿಜನ ತಲೆಯ ಬರೆಹವ ನಾನು ತೊಡೆದೆನು.

ಮಹಾದೇವಿಯವರ ಈ ಮಾತನ್ನು ಕೇಳಿ ಕಿನ್ನರಿಬೌಮ್ಮಯ್ಯ ನಡುನಡುಗಿ ಹೋದ ಉಮ್ಮಳಿಸಿ ಮನದಲ್ಲಿ ನೊಂದು ಬಿನ್ನೈಸುವ ಪ್ರಸ್ತಾಪದ ವಚನ

ವಿಷಯಂಗಳು ವಿಷಮವಾದವಲ್ಲಾ,

ಎನ್ನ ವ್ಯಸನಗಳು ಹಗೆಯಾದವಲ್ಲಾ,

ಎನ್ನ ಅಳಿಪೆ ಯೆದೆವಾ ವಾಯಿತಲ್ಲಾ,

ಎನ್ನ ಮುಳಿಸೆ ಬರಸಿಡಿಲಾಯಿತಲ್ಲಾ,"

ಎನ್ನ ಹುಸಿಯೆ ಮಸದಲಗಾಯಿತಲ್ಲಾ

ಎನ್ನ ಮಹಾಲಿಂಗ ತ್ರಿಪುರಾಂತಕ ಕೊಲ್ಲು ಕಾಯಿ ನಿಮ್ಮ ಧರ್ಮ.

ಕಿನ್ನರಿಬೌಮ್ಮಯ್ಯ ಇನ್ನೂ ಮನನೋಂದು ದು: ಖಿಸಿ

ಈ ವಚನ್ನು ಹೇಳುತ್ತಾನೆ. ಪಾದದಕೆಳಗೆ ಬಿದ್ದು ಹೀಗೆ ವಚನ ಹೇಳುತ್ತಾನೆ.

ಹುಸಿಯೆಂಬ ಅಲಗಿಂಗೆ ಒಡಲೆ ಗುರಿಯಾಯ್ತು.

ವಿಷವೆಂಬ ಅಗ್ನಿಗೆ ತನುವೆ ವಿಂಧ್ಯವಾಯಿತು.

ಏನೆಂಬೆನೇನೆಂಬೆ ವಿಧಿಮಾಡಿತ್ತ.

ಶಮದಮಾದಿಗಳು ನೆಲೆಗೊಳ್ಳದೆ ಹೋದವು. ಮಹಾಲಿಂಗತ್ರಿಪುರಾಂತಕನ ಶರಣರೆ ಎನ್ನೊಡೆಯರೆಂದರೆಯದೆ ಇದ್ದ ಕಾರಣ

ತೆರೆಹುಮರೆಹಿನಲ್ಲಿ ತಾವೆಡೆಗೊಂಡವು.

ಮತ್ತೆ ಮಹಾದೇವಿಯರಲ್ಲಿ ಪಾಪದ ಪ್ರಯಾಚಿತ್ತದಿಂದ

ಪರಿತಪಿಸಿ ಹೀಗೆ ಹೇಳುತ್ತಾನೆ ವಚನ

ಹುಟ್ಟಿತಲ್ಲಾ ಉಂಟೆನಿಸಿತಲ್ಲಾ;

ಕರುವಿಟ್ಟಿತಲ್ಲಾ ರೂಪಾಯಿತಲ್ಲಾ;

ನೋಡನೋಡ ಛಾಯಗುಂದಿತಲ್ಲಾ;

ನೋಡ ನೋಡ ಭಾವಗುಂದಿತಲ್ಲಾ;

ಅರುವಿಕಾರದಲಾಯಿತು ಹೋಯಿತು

ಮಹಾಲಿಂಗ ತ್ರಿಪುರಾಂತಕ ನಿಮಗೆರಗದ ತನು.

ಕಿನ್ನರ ಬೊಮ್ಮಯ್ಯ ನೊಂದು ಅನುತಾಪಿಸುತ್ತಿರಲು, ಮಹಾದೇವಿಯು ಕಿನ್ನರ ಬೊಮ್ಮಣ್ಣಂಗಳ ಸಂತೈಸುವ ವಚನ:

ಹೀಗೆ

ಎಲೆ ಅಣ್ಣಾ ಅಣ್ಣಾ ನೀವು ಮರುಳಲ್ಲಾ.

ಅಣ್ಣಾ ಎನ್ನ ನಿನ್ನಳವೆ! ಹದಿನಾಲ್ಕು ಲೋಕವ ನುಂಗಿದ ಕಾಮನ ಬಾಣದ ಗುಣ ಎನ್ನ ನಿನ್ನಳವೆ! ವಾರುವ ಮುಗ್ಗಿದಡೆ ಮಿಡಿಯ ಹರಿಯ ಹೊಯ್ದರೆ? ಮುಗ್ಗಿದ ಭಂಗವ ಮುಂದೆ ರಣದಲ್ಲಿ ತಿಳಿವುದು. ನಿನ್ನ ನೀ ಸಂವರಿಸಿ ಕೈದುವ ಕೊಳ್ಳಿರಣ್ಣಾ ಚೆನ್ನಮಲ್ಲಿಕಾರ್ಜುನನೆಂಬ ಹಗೆಗೆ ಬೆಂಗೊಡದಿರಣ್ಣಾ.

ಹೀಗೆಂದು ಮಹಾದೇವಿ ನಿರೂಪಿಸಲು ಕಿನ್ನರ ಬೊಮ್ಮಣ್ಣಗಳು ಪರುಷವನ್ನೈದಿ ಬಿನ್ನಿಸಿದ ಅವನ ಸಂತೋಷಕ್ಕೆ ಪರವೇ ಇರಲ್ಲಿಲ್ಲ ಇಷ್ಟುಂದು ಕರುಣಾಮಯಿ ಮಹಾದೇವಿ ಎನ್ನುತ್ತ, ಹೀಗೆ ವಚನ ನುಡಿಯುತ್ತಾನೆ.

ಶರಣಾರ್ಥಿ ಶರಣಾರ್ಥಿ ಎಲೆ ತಾಯೆ ಎಮ್ಮವ್ವಾ ಶರಣಾರ್ಥಿ ಶರಣಾರ್ಥಿ ಕರುಣಾಸಾಗರನಿಧಿಯೆ

ದಯಾಮೂರ್ತಿ ತಾಯೆ ಶರಣಾರ್ಥಿ ಶರಣಾರ್ಥಿ

ಮಹಾಲಿಂಗ ತ್ರಿಪುರಾಂತಕನೊಡ್ಡಿದ ತೊಡಕ

ನೀವು ಬಿಡಿಸಿದಿರಾಗಿ ನಿಮ್ಮ ದಯದಿಂದ ನಾನು ಹುಲಿನೆಕ್ಕಿ ಬದುಕಿದೆನು ಶರಣಾರ್ಥಿ ಶರಣಾರ್ಥಿ ತಾಯೆ

ಕಿನ್ನರ ಬೊಮ್ಮಯ್ಯ ಮಹಾದೇವಿಯಕ್ಕನಿಂದ ಬದುಕಿದೆನೆಂದು ಎನ್ನ ಭವ ನಾಸ್ತಿಯಾಯಿತೆಂದು ಬಿನ್ನಿಸಿದ, ಮಹಾದೇವಿಯನ್ನು ತಡವಲು ಪಶ್ಚಾತ್ತಾಪ ಬೇಗೆಯಿಂದ ಬೆಂದು ಬೆಂದಿದ್ದ ಶರಣ ಕಿನ್ನರಿಬ್ರಹ್ಮಯ್ಯಾ ಮಹಾದೇವಿಯವರನ್ನು ಕಂಡು ಸ್ಪರ್ಶಿಸಿ ತನ್ನ ತಪ್ಪನ್ನು ತಾನೇ ಅರಿತವನಾಗಿ ಮಹಾದೇವಿಯ ಹಿರಿತನವನ್ನು ಈ ರೀತಿಯಾಗಿ ವರ್ಣಿಸಿದನು.

ವಿಷಯಂಗಳು ನಿರ್ವಿಷಯಗಳಾದವಿಂದು,

ಕರಣಂಗಳು ತರಹರಿಸಿನಿಂದವಿಂದು,

ಎನ್ನ ಅಳಿದೆಂಬ ಅರಿವು ನುಡಿಯಿತ್ತೆಂದು ಎನ್ನ ಹೃದಯ ಕಲ್ಮಷ ತೊಳೆಯಿತ್ತಿಂದು ಮಹಾಲಿಂಗ ತ್ರಿಪುರಾಂತಕಯ್ಯಾ, ಮಹಾದೇವಿಯಕ್ಕಗಳ ಧರ್ಮದಿಂದ ಹಿಂದಣ ಹುಟ್ಟು ಮುರಿಯಿತಿಂದು.

ಮಹಾದೇವಿಯವರು ಕಿನ್ನರ ಬೊಮ್ಮಯ್ಯ ಮನೋರಥ ಸಿದ್ಧಿಯಂ ಮಾಡಿ ಒಬ್ಬರಿಗೊಬ್ಬರು ನಮಸ್ಕರಿಸಿಕೊಂಡಾತನ ಬೀಳ್ಕೊಂಡು ಮಹಾದೇವಿ ಯರನ್ನು ಕಲ್ಯಣಕ್ಕೆ ಕರೆತರುವನು. ಕಿನ್ನರಿ ಬೌಮ್ಮಯ್ಯನಾ ಒಟ್ಟು ವಚನ **10** ಇವೆ, ಈ ಶಿವಶರಣನು ಮತ್ತೆ ಯಾವ ವಚನವನ್ನು ಬರೆಯಲಿಲ್ಲ, ಮಹದೇವಿಯೆ ಎನಗೆ ಗುರು ತಾಯಿ ಎಲ್ಲ ಎಂದು ಮೌನವಗಿ ಇರತೋಡಗಿದ. ಮಹಾಶಿವಭಕ್ತನಾದ. ಇತ್ತ ಕಿನ್ನರಿಬೌಮ್ಮಯ್ಯನ ರೀತಿ ನೀತಿಯನ್ನುಎಲ್ಲವನ್ನು ಗಮನಿಸಿದ ಮಹಾದೇವಿಯವರು ಕಲ್ಯಾಣದ ಅನುಭವ ಮಂಟಪದಲ್ಲಿ ನಾನು ಇನ್ನೂ ಹೆಚ್ಚರಿಕೆ ಯಿಂದ ಇರಬೇಕು ಎಂದುಕೊಂಡರು. ಮಹಾದೇವಿಯವರು ಕಾಯದ ವಿಷಯವಾಗಿ ನಿರ್ಮೋಹಿಯಾಗಿದ್ದರು. ಮಳೆ, ಚಳಿ, ಬಿಸಿಲು ಗಾಳಿಗೆ ದೇಹವನ್ನು ಒಡ್ಡಿಕೊಂಡು ಉಡುತಡಿಯಿಂದ ಕಲ್ಯಾಣಕ್ಕೆ ಹೋಗುವ ದಾರಿಯಲ್ಲಿ ಕಾಯ ಬಿಸಿಲಿಗೆ ಕರಗಾಗಿರಬಹುದಾದ, ಕಂದಿರಬಹುದಾದ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಅದನ್ನು ನೋಡಿದ ದಾರಿ ಹೋಕರು ಬಿಸಿಲಿಗೆ ಸುಂದರವಾದ ದೇಹವನ್ನೇಕೆ ಬಳಲಿಸುತ್ತೀ ಎಂದಿರಬಹುದು, ಮಹಾದೇವಿಯವರು ನೋಡುವವರ ಕಣ್ಣಿಗೆ ಒಂದು ಚೋದ್ಯವಾಗಿದ್ದುದರಲ್ಲಿ ಸಂದೇಹವಿಲ್ಲ. ಅದಕ್ಕೆ ಉತ್ತರ ರೂಪವಾಗಿ ಈ ವಚನ ಮೂಡಿಬಂದಿದೆ.

ಕಾಯ ಕರನೇ ಕಂದಿದಡೇನಯ್ಯ? ಕಾಯ ಮಿತ್ರನೇ ಮಿಂಚಿದಡೇನಯ್ಯ? ಅಂತರಂಗ ಶುದ್ಧವಾದ ಬಳಿಕ ಚೆನ್ನಮಲ್ಲಿಕಾರ್ಜುನನೊಲಿದ ಕಾಯ ಕಾ ಎಂತಾದಡೆಮಗೇನಯ್ಯ?!

ಮಹಾದೇವಿಯವರ ಅಂತರಂಗ ಶುದ್ಧವಾಗಿದೆ. ಬಹಿರಂಗದ ಬಗ್ಗೆ ಆಕೆ ಚಿಂತಿಸಿಲ್ಲ. ಕಾಯದ ಮೇಲಿನ ನಿರ್ಲಕ್ಷ್ಯದೊಂದಿಗೆ ಅದರ ಮೇಲಿನ ವ್ಯಾಮೋಹ ಅಥವಾ ಶೃಂಗಾರದ ಅಪೇಕ್ಷೆಯನ್ನು ಇಲ್ಲವಾಗಿಸಿಕೊಂಡುದೇ ಅಂತರಂಗ ಶುದ್ಧಿ. ಬಹಿರಂಗದ ಬಗ್ಗೆ ಅವರು ಚಿಂತಿಸುವದಿಲ್ಲ. ಚೆನ್ನಮಲ್ಲಿಕಾರ್ಜುನ ಈ ಕಾಯವನ್ನು ಮೆಚ್ಚಿಕೊಂಡಿರುವದರಿಂದ ಕಾಯಕ್ಕೆ ಆಗುವ ಭೌತಿಕ ತೊಂದರೆಗಳ ಬಗ್ಗೆ ಅಕ್ಕ ನಿಶ್ಚಿಂತಳಾಗಿದ್ದಾರೆ. ಕಾಯವನ್ನಾಕೆ ತಿರಸ್ಕರಿಸಲಿಲ್ಲ, ಯಾಕೆಂದರೆ ಕಾಯ ಜೀವಾತ್ಮಕ್ಕೆ ಆಶ್ರಯವಾಗಿದೆ. ಮತ್ತು ಕಾಯದ ಮೂಲಕವೇ ಪರಮಾತ್ಮನನ್ನು ಒಲಿಸಬೇಕಾಗಿದೆ. ಸಾಧನೆಗೈಯಬೇಕಾಗಿದೆ. ಕಾಯವು ಕುರೂಪವಾದರೆ ಚಿಂತೆಯಿಲ್ಲ ಆರೋಗ್ಯವಾಗಿ ಇರಬೇಕಾದುದು ಮುಖ್ಯವಾಗಿದೆ. ಮಹಾದೇವಿಯವರಾಗಲೇ ಪ್ರಸಿದ್ಧರಾಗಿದ್ದರು. ಅವರ ಕೀರ್ತಿ ನಾಡಿನುದ್ದಕ್ಕೂ ಹಬ್ಬಿತ್ತು. ಅದೇ ಅಕ್ಕಮಹಾದೇವಿಯವರು ಜಗದ ಜಂಗಮರಾಗಿ, ಸಂಚಾರಿಯಾಗಿ ಕಲ್ಯಾಣಕ್ಕೆ ಬಂದಿದ್ದರಿಂದ ಅಪರಿಚಿತ ಶರಣರು ಒರೆ ಹಚ್ಚುವುದಕ್ಕೆ ಕಾರಣವಾಯಿತು. ಈ ಸಮೃದ್ಧವಾದ ಕಟು ಅನುಭವಗಳು ಅಕ್ಕಮಹಾದೇವಿಯವರ ಶ್ರೇಷ್ಠ ವಚನ ರಚನೆಗೆ ಮೂಲ ದ್ರವ್ಯವಾಗಿದೆ. ಆ ನೆಲೆಯಲ್ಲಿ ಜೀವನಾನುಭವ ದ್ರವ್ಯದಲ್ಲಿಯೂ ಅಕ್ಕಮಹಾದೇವಿ ಬಸವಣ್ಣನವರಿಗಿಂತ ಮಿಗಿಲಾಗಿದ್ದಾರೆ.

ಮಹಾದೇವಿಯು ಕಲ್ಯಾಣ ಪಟ್ಟಣ ಹತ್ತಿರ ಬಂದಂತೆ ಅವರ ಹೆಜ್ಜೆಗಳು ಹೆಚ್ಚಿನ ವೇಗದಿಂದ ಚಲಿಸತೊಡಗಿದವು. ದೂರದಿಂದಲೇ ಕಲ್ಯಾಣ ಪಟ್ಟಣವನ್ನು ನೋಡಿದಾಗ ಇಂದು ಮಹಾಜ್ಞಾನಿಯಾದ ಅಲ್ಲಮಪ್ರಭುವಿನ ಇತರ ಶರಣರ ದರ್ಶನವಾಗಲಿದೆ, ಎಂದು ಮನದಲ್ಲಿ ಮೂಡಿತು ದಣಿವೆಲ್ಲ ದೂರವಾಯಿತು. , ಅನುಭವ ಮಂಟಪದ ಶೂನ್ಯಪೀಠದ ಅಧ್ಯಕ್ಷ ಅಲ್ಲಮಪ್ರಭು, ಜ್ಞಾನಯೋಗಿ ಚೆನ್ನಬಸವಣ್ಣ, ಕಾಯಕಯೋಗಿ ಸಿದ್ಧರಾಮ, ಬಸವಣ್ಣ, ಶರಣ,ಮೊದಲಾದವರ ದರ್ಶನ ಮಾಡುವ ಕಾಲ ಸಮೀಪಿಸಿತೆಂದು ಮನದಲ್ಲಿಯೇ ಸಂತೋಷಪಡತೊಡಗಿದ ಮಹಾದೇವಿ.

ಅಲ್ಲಮಪ್ರಭು ಕಟ್ಟಿದ ಅನುಭವಮಂಟಪವೆಂದರೆ ಅದೊಂದು ಅಧ್ಯಾತ್ಮ ಅನುಭಾವದಲ್ಲಿ ಮುಂದುವರೆವ ಶರಣರ ಚಿಂತನೆಯ ಜನರ ವಿಶ್ವವಿದ್ಯಾಲಯವಾಗಿದ್ದಿತು. ವೀರಶೈವ ಲಿಂಗಾಯಿತ ಧರ್ಮದ ಮರ್ಮವನ್ನು ಲಿಂಗಧೀಕ್ಷೆಯ ಮಾಹಿತಿ ತಿಳಿದುಕೊಳ್ಳಲು ಕಾಶ್ಮೀರದಿಂದ, ಅಫಘನಿಸ್ತಾನ ಮೊದಲಾದ ರಾಜ್ಯಗಳಿಗೆ ಧಾರ್ಮಿಕ ಆಧ್ಯಾತ್ಮಿಕ ಚಿಂತನೆಗಾಗಿ ಎಲ್ಲ ದಿಕ್ಕಿನಿಂದಲೂ ಭಕ್ತರು ಇಲ್ಲಿಗೆ ಧಾವಿಸಿ ಬರುತ್ತಿದ್ದರು. ಕಲ್ಯಾಣದ ಅನುಭವಮಂಟಪದಲ್ಲಿ, ಮೇಲು-ಕೀಳು ಎಂಬ ತಾರತಮ್ಯವಿಲ್ಲದೆ, ಸಿರಿತನ-ಬಡತನದ ವ್ಯತ್ಯಾಸವಿಲ್ಲದೆ ಎಲ್ಲರಿಗೂ ಸಮಾನ ಅವಕಾಶಗಳಿದ್ದವು. ಪ್ರತಿಯೊಂದು

ಜೀವಿಯಲ್ಲೂ ಶಿವಶರಣರ ರೂಪದಲ್ಲಿ, ಶಿವನನ್ನೇ ಕಾಣುವ ಮಹಾಶರಣರನ್ನರಸಿ ಬಂದ ಮಹಾದೇವಿಗೆ ಇಲ್ಲಿಯೂ ಸಹ ಲೌಕಿಕ ನಿಬಂಧನೆಗಳ ಬಗ್ಗೆ ಪ್ರಶ್ನಿಸಿದಾಗ ಮಹಾದೇವಿಯ ಮನಸ್ಸಿಗೆ ಮತ್ತೊಮ್ಮೆ ಆಘಾತವಾಯಿತು. ಆದರೆ ಈ ಲೌಕಿಕ ಜಗತ್ತಿನ ಜಂಜಾಟವನ್ನು ತೊರೆದು, ಅರಸೊತ್ತಿಗೆಯ ಸಿರಿ-ಸಂಪದಕ್ಕೆ ತಲೆಬಾಗದೆ, ವಿರಕ್ತೆಯಾಗಿದ್ದ ಯೋಗಿಣಿ-ವಿರಾಗಿಣಿ ಮಹಾದೇವಿಗೆ ಅಲ್ಲಮಪ್ರಭುಗಳು ಮಹಾದೇವಿಯ ಚಾರಿತ್ರ್ಯವನ್ನು ಅರಿತಿದ್ದರೂ ಅದನ್ನು ತೋರಗೊಡದೆ ಮಹಾದೇವಿಯವರನ್ನ, ಲೋಕದ ದೃಷ್ಟಿಯಿಂದ ವಿಧವಿಧವಾಗಿ ಪ್ರಶ್ನೆಗಳ ಸುರಿಮಳೆಗರೆದರು ಅನುಭವಮಂಟಪಕ್ಕೆ ಮಹಾದೇವಿಯ ಪ್ರವೇಶ ಸುಲಭವಾಗಲಿಲ್ಲ. ಅವರಿಗೆ ಅಲ್ಲಿ ಎಲ್ಲಿಲ್ಲದ ಪರೀಕ್ಷೆ ನಡೆಯಿತು. ಪ್ರಭುದೇವರು ಮಹಾದೇವಿಯರನ್ನು ಕಂಡು ಪ್ರಶ್ನೆಗಳನ್ನು ಕೇಳಿದಾಗ್ಗೆ ಹೆಣ್ಣು ಪುರುಷರ ಛಾಯಾನುವರ್ತಿಯಾಗಿಯೇ ನಡೆಯಬೇಕೆ? ಅವರಿಗೆ ಅವರದೇ ಆದ ಸ್ವತಂತ್ರ ಆಸ್ತಿತ್ವವೇ ಇಲ್ಲವೆ? ಎಂಬ ಸಂದೇಹ ಬಂದರೂ ತಾನು ಆ ಪುರುಷ ಪ್ರಧಾನ ವ್ಯವಸ್ಥೆಯ ಅಂಗವಲ್ಲವೆಂದು ನಿರೂಪಿಸಲು ಸಿದ್ಧರಾಗುತ್ತಾರೆ. ಅಂದು ಮಹಾಸಭೆ. ಎಲ್ಲರೂ ಸೇರಿದ್ದಾರೆ. ಅನುಭವ ಮಂಟಪದಲ್ಲಿ ಗದ್ದಲೊ ಗದ್ದಲ ಒಬ್ಬರು ಮಾತಡಿದರೆ ಮತ್ತೊಬ್ಬರಿಗೆ ಕೇಳಿಸದಷ್ಟು ಶಬ್ದ ನೆಲೆಯಾಗಿದೆ. ವಿಶಿಷ್ಟ ಗೋಪುರಾಕೃತಿಯಲ್ಲಿ ಕಟ್ಟಿದ ಕಟ್ಟಡ ಅದು. ನಡುಮಧ್ಯದ ಎತ್ತರದ ಗೋಪುರಾಕೃತಿಯ ಸೂರು, ವೃತ್ತಾಕಾರದ ವಿಶಾಲ ಆವರಣ, ಸಮೃದ್ಧವಾಗಿ ಬೆಳಕು ಬರುವಂತೆ, ಗಾಳಿ ಬೀಸುವಂತೆ ಇರುವ ಕಿಟಕಿ ಗವಾಕ್ಷಗಳು. ವಿಶಾಲ ಬಯಲಿನಂತಹ ಅಂಗಳದಲ್ಲಿ ಶೂನ್ಯಪೀಠ ಅಥವಾ ಶೂನ್ಯ ಸಿಂಹಾಸನವಿದೆ. ಶೂನ್ಯಪೀಠದ ಮೇಲೆ ಕುಳಿತು ಪ್ರಭುದೇವರು ಸಭೆಯನ್ನು ಮುನ್ನಡೆಸುತ್ತಾರೆ. ಉದ್ದನೆಯ ಗಡ್ಡ, ತಲೆಗೂದಲನ್ನು ಸುರುಳಿ ಸುತ್ತಿ ಕಟ್ಟಿದ ಗಂಟು, ತೇಜೋಮಯ ಕಣ್ಣುಗಳು, ಅಲೆದಾಟವನ್ನು ಸೂಚಿಸುವ ಕಂದು ಚರ್ಮ, ನಿರ್ಲಿಪ್ತ ಶಾಂತ ಮುಖಭಾವದ ಧೃಢಕಾಯ ಅಲ್ಲಮಯ್ಯ. ಕೆಲವರು ಪ್ರಭು ಎಂದೂ, ಇನ್ನೂ ಕೆಲವರು ಅಲ್ಲಮ ಪ್ರಭು ಎಂದೂ, ಪ್ರಭುದೇವರು ಎಂದೂ, ಅಲ್ಲಮಯ್ಯ ಎಂದೂ ನಾನಾ ಹೆಸರುಗಳಿಂದ, ನೀನು-ನೀವು-ತಾವು-ಗುರುವೆ-ಪ್ರಭುವೇ ಮುಂತಾಗಿ ನಾನಾ ವಚನಗಳಿಂದ ಕರೆಸಿಕೊಳ್ಳುವ, ಅಲ್ಲಿದ್ದ ಸಕಲರೂ ಗೌರವಿಸುವ, ಶರಣರ ಹೃದಯ ಸಿಂಹಾಸನಗಳ ಅಲಂಕರಿಸಿದವ ಅಲ್ಲಮಪ್ರಭು. ಸಿಂಹಾವಲೋಕನದ ಭಂಗಿಯಲ್ಲಿ ಅಲ್ಲಮಪ್ರಭುವು ಸಭಾಂಗಣದ ಆ ತುದಿಯಲ್ಲಿರುವ ಶೂನ್ಯ ಸಿಂಹಾಸನದ ಮೇಲೆ ಕುಳಿತಿದ್ದಾರೆ. ಶೂನ್ಯ ಸಿಂಹಾಸನವೆಂದರೆ ಸಿಂಹಾಸನವಲ್ಲ. ರತ್ನಖಚಿತ ಸುವರ್ಣ ಆಸನವಲ್ಲ. ಹಿಂದೆ ಯಾವುದೇ ಪ್ರಭಾವಳಿ ಇಲ್ಲ. ಬೆನ್ನು, ಕೈಗಳಿಗೆ ಹಿತವಾಗಲು ಮೆತ್ತೆ ಇಲ್ಲ. ಅದು ಎತ್ತರದ ಒಂದು ಕಟ್ಟೆ ಅಷ್ಟೆ. ನಾನು, ನನ್ನದೆಂಬುದನ್ನೆಲ್ಲ ತೊರೆದವರು ಏರಬಹುದಾದ ಎತ್ತರ ಅದು. ಮೆಟ್ಟಿಲೇರಿ ಹೋಗಿ ಮೇಲೆ ಪದ್ಮಾಸನದಲ್ಲಿ ಒಬ್ಬರು ಅಚ್ಚುಕಟ್ಟಾಗಿ ಕೂರಬಹುದಾದಷ್ಟು ಜಾಗ ಮಾತ್ರ ಇದೆ. ಅದರ ಮೇಲೆ ಅಲ್ಲಮಪ್ರಭು ಕುಳಿತಿರಲು ಕೆಳಗೆ ಆಚೀಚೆ ಬಸವಣ್ಣ, ಮಡಿವಾಳ ಮಾಚಯ್ಯ, ಚೆನ್ನಬಸವಣ್ಣ, ಸಿದ್ಧರಾಮೇಶ್ವರ, ಮೊದಲಾದ ಶರಣರು ನೆರೆದಿದ್ದಾರೆ. ಗದ್ದಲೊ ಗದ್ದಲ, ಒಂದು ದೊಡ್ಡ ಕಲ್ಲು ಬಿದ್ದರೂ ಕೇಳಿಸದಿರುವಷ್ಟು ಶಬ್ದ. ಇವತ್ತು ಬೇರೆ ವಿಷಯಗಳು ಚರ್ಚೆಗೆ ಎತ್ತಲ್ಪಡುವ ಮುನ್ನವೇ ಹುಸಿಜಂಗಮನ ವಿಷಯ ಎತ್ತಲೇಬೇಕು ಎನ್ನುತ್ತಿರುವಾಗ ಮಹಾದೇವಿಯ ಆಗಮನವಾಯಿತು. ಮಡಕೆಯಿಂದ ಒಂದು ಕುಡಿಕೆ ನೀರು ಎತ್ತಿ ಕುಡಿದು, ಹರವಿಯ ನೀರು ಕಾಲಿಗೆ ಹೊಯ್ದುಕೊಂಡು ಆ ಮೂರ್ತಿ ಒಳಬರುತ್ತಿದೆ. ಎಲ್ಲರ ಗಮನ ಅತ್ತ ಕಡೆ ಹೋಯಿತು. ನಿಶ್ಯಬ್ದ ಮೌನ, ಆಶ್ಚರ್ಯ, ಬಂದವರಾರೆಂದು ತಿಳಿದುಹೋಯಿತು. ಮಡಿವಾಳ ಮಾಚಯ್ಯ ಎದ್ದು ನಿಂತು 'ಉಡುತಡಿಯ ಮಹಾದೇವಿ ಅಕ್ಕನವರು ಆಗಮಿಸುತ್ತಿದ್ದಾರೆ' ಎಂದು ಹೇಳಿದನು. ಬಸವಣ್ಣನು, 'ಮಾಚಿದೇವರೇ, ಮಹಾದೇವಿಯವರನ್ನು ಗೌರವದಿಂದ ಕರೆ ತನ್ನಿ' ಎಂದು ಹೇಳಿದಾಗ ಮಾಚಯ್ಯನು ಮಹಾದೇವಿಗೆ ನಡೆ ಮುಡಿಯನ್ನು ಹಾಸುತ್ತರೆ ಆಗ ಮಹಾದೇವಿಯವರು ಮಡಿಯನ್ನು ಸರಿಸಿ ಕೈಗೆತ್ತಿಕೊಂಡು ತನ್ನ ಹೆಗಲಮೇಲೆ ಹೊತ್ತು ಒಳಗೆ ಬರುತ್ತರೆ. ಮಹಾದೇವಿಯಾದರೋ ನಿಧಾನ ನಡೆಯುತ್ತ ಒಳಗೆ ಬಂದರು. ಗಂಭೀರ ತರುಣಿ. ಮೌನ ಬಂಗಾರ ಧರಿಸಿದ ಸುಂದರಿ. ವಿರಳ ಬಟ್ಟೆ, ಕೂದಲಿನಿಂದ ಅರೆಬರೆ ಮೈಮುಚ್ಚಿದ ಹೆಣ್ಣು. ಸಹಜ ನಿಲುವು. ಧೃಢ ನಿಲುವು, ನೇರನೋಟ, ಶಾಂತ ತಿಳಿಯಾದ ಮುಖಚಹರೆ ಕಂಡವರು ಗಂಭೀರಳಾಗಿ ನಡೆದುಬಂದು ಮಹಾದೇವಿ ಅಲ್ಲಮಪ್ರಭುವಿನ ಎದುರು ನಿಂತರು.

ಇವರೆ ಏನು ಅಲ್ಲಮಯ್ಯ! ಇವರೇ ಏನು ಪ್ರಭುದೇವರು? ಇವರೇ ಏನು ಶರಣರು ವರ್ಣಿಸಿದ ಅನುಭಾವಿಗಳ ಅನುಭಾವಿ ಶೂನ್ಯಬಯಲ ಸೂರ್ಯ ಅಲ್ಲಮಯ್ಯ! ಕಣ್ಣಲ್ಲಿ ಕಣ್ಣಿಟ್ಟು ನೋಡಿದ ಮಹಾದೇವಿ. ಮಿಂಚುಕೋಲುಗಳೆರಡು ತಾಕಿದಾಗ ಆಗುವಂತೆ ವಿದ್ಯುತ್ ಸಂಚಾರವಾಯಿತು. ಆನಂದ, ಧನ್ಯತೆ, ಮೊದಲಾದ ಮಿಶ್ರಭಾವಗಳು ಮಹಾದೇವಿಯ ಮನದಲ್ಲಿ ಸುಳಿದುಹೋದವು. ಶರಣು ಶರಣಾರ್ಥಿ.'

'ಉಡುತಡಿಯ ಮಹಾದೇವಿ, ಬಾರಮ್ಮ ಬಾ.'

'ಚೆನ್ನಮಲ್ಲಿಕಾರ್ಜುನ ದೇವಯ್ಯ ನಿಮ್ಮ ಶರಣರ ಕರುಣವ ಪಡೆದೆನಾಗಿ ಎನಗೆ ಮತ್ತಾವುದಿಲ್ಲವಯ್ಯ ಪ್ರಭುವೆ'

'ನಿನ್ನ ಪರಿಚಯ ಇಲ್ಲಿ ಎಲ್ಲರಿಗೂ ಇದೆ ಮಹಾದೇವಿ. ಆದರೆ ಕೆಲವು ಸಂದೇಹಗಳು ಇವೆ.

ಇಲ್ಲಿ ಮಹಿಳೆಯರಿಗೆ, ಸ್ತ್ರೀಯರಿಗೆ ಪ್ರವೇಶವಿಲ್ಲ ಇಲ್ಲಿ ಪುರುಷರಿಗೆ ಮಾತ್ರ,

ತುಂಬು ಯೌವನದ ನೀನು ಇತ್ತಲೇಕೆ ಹೀಗೆ ಬಂದೆ?

ಅಧ್ಯಾತ್ಮ ಸಾಧನೆಯತ್ತ ಧೃಢಮನದಿಂದ ಚಲಿಸುತ್ತಿರುವೆ ಎಂದು ನಿನ್ನ ಮಾತು, ಚಹರೆಗಳಿಂದ ತಿಳಿಯುತ್ತಿದೆ. ಆದರೆ ಲಗ್ನವಾಗದ ರಾಜನ ಮೇಲೆ ಇಲ್ಲದ ತಪ್ಪನ್ನು ಹೊರೆಸಿ, ಅರಮನೆಯನ್ನು ಬಿಟ್ಟು ಬೆತ್ತಲಾಗಿ ಹೊರಟು ಬಂದಿರುವೆ ಎಂಬ ಆಪಾದನೆ ಕೇಳಿಬರುತ್ತಿದೆ. ನಿಜವೇ? ರಾಜನ ಮೇಲೆ ಸುಮ್ಮಸುಮ್ಮನೆ ತಪ್ಪು ಹೊರಿಸುವ ಧರ್ಮವನ್ನು ಶರಣರು ಮೆಚ್ಚರು.' ನಿನ್ನ ಪತಿಯ ಕುರುಹು ಹೇಳಿದೊಡೆ ಬಂದು ಕುಳ್ಳಿರು,ಅಲ್ಲದಡೆ ತೊಲಗು ತಾಯಿ.

'ನನ್ನ ಮದುವೆಯ ಕತೆಯನ್ನು ಪ್ರಪಂಚ ಹೇಗಾದರೂ ತಿಳಿದುಕೊಂಡಿರಲಿ, ಚಿಂತೆಯಿಲ್ಲ.

**(ಶೂನ್ಯ ಸಂಪಾದನೆಕಾರು, ಅಲ್ಲಮಪ್ರಭುವಿನ, ಮಹಾದೇವಿಯವರ, ವಚನಗಳ ಆಧಾರದ ಮೇಲೆ ಈ ರೀತಿಯಾಗಿ ಸಂಭಾಷಣೆ ನೆಡದಿರಬಹುದೆಂದು, ಕಲ್ಪಿಸಿ ಜೋಡಿಸಿದ್ದಾರೆ)**

ಅಲ್ಲಮಪ್ರಭು:

ನಮ್ಮ ಗುಹೇಶ್ವರನ ಶರಣರಲ್ಲಿ ಸಂಗಸುಖಸನ್ನಿಹಿತವ ಬಯಸುವರೆ ನಿನ್ನ ಪತಿ ಯಾರೆಂಬುದು ಹೇಳು ಎಲೆ ಅವ್ವಾ' ಎಂದು ಪ್ರಭುದೇವರು ಪ್ರಶ್ನಿಸುತ್ತಾರೆ.

ಮಹಾದೇವಿಯವರು ವಚನದಲ್ಲಿಯೇ ಉತ್ತರಿಸುತ್ತಾರೆ.

'ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ ನಾನೊಲಿದೆ. ಎಡೆಯಿಲ್ಲದ ತಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ ಚೆಲುವಂಗೆ ನಾನೊಲಿದೆ ಎಲೆ ಅವ್ವಗಳಿರಾ! ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆ ನಾನು ಸೀಮೆಯಿಲ್ಲದ ನಿಸ್ಸಿಮಂಗೊಲಿದೆ ನಾನು ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆ ಮಿಗೆ, ಮಿಗೆ, ಒಲಿದೆ ಎಲೆ ಅವ್ವಗಳಿರಾ'

ಎಂದು ಸಾವಿಲ್ಲದ ಸೋಲಿಲ್ಲದ ತ್ಯಾಗಕ್ಕೆ ಒಲಿವ ರಾಗದ್ವೇಷಗಳ ಭಾವಗಳನ್ನು ತೊರೆದ ಯೋಗೀಂದ್ರಗೊಲಿದು, ಶರಣರ ಸಂಗದ ನಾನಿರುವ ಶರಣರ ಶರಣ ಶ್ರೀ ಚೆನ್ನಮಲ್ಲಿಕಾರ್ಜುನನೇ ನನ್ನ ಗಂಡ. ಈ ಕುರಿಹಿನ ಮುಂದೆ ಮಿಕ್ಕೆಲ್ಲ ಕುರುಹುಗಳು ಈ ಭುವಿಯಲ್ಲಿ, ನಶ್ವರವು ಎಂದು ನುಡಿದಾಗ್ಗ, ಪ್ರಭುದೇವರು ಸಂತಸಗೊಂಡು ಮಹಾದೇವಿಯ ಪ್ರತಿಭೆಯನ್ನರಿತು ಅವರ ತೇಜಸ್ಸಿನ ಪ್ರಖರತೆಯನ್ನು ಪ್ರಪಂಚಕ್ಕೆ ಸಾದರಪಡಿಸಲ ಮತ್ತೆ ಪ್ರಶ್ನಿಸುತ್ತಾರೆ.

'ಹರನೇ ನೀನೇ ನನಗೆ ಗಂಡನಾಗಬೇಕೆಂದು ಅನಂತಕಾಲ ತಪಸಿದ್ದೆ ನೋಡಾ ಹಸೆಯ ಮೇಲಣ ಮಾತ ಬೆಸಗೊಳಲಟ್ಟಿದಡೆ ಶಶಿಧರನ ಬಳಿಗೆ ಕಳುಹಿದರೆಮ್ಮವರು ಭಸ್ಮವನೆ ಹೂಸಿ, ಕಂಕಣವನೆ ಕಟ್ಟಿದರು ಚೆನ್ನಮಲ್ಲಿಕಾರ್ಜುನ ತನಗೆ ಗಂಡನಾಗಬೇಕೆಂದು' ಎಂದು ಹರನೆ ತನ್ನ ಗಂಡನೆಂದು ಒತ್ತಿ ಒತ್ತಿ

ಹೇಳುತ್ತಾರೆ. ಆ ಕಾಲದಲ್ಲಿಯೂ ಹೆಣ್ಣುಮಕ್ಕಳನ್ನು ಒರೆಹಚ್ಚುವ ಕೆಲಸ ನಡೆದಿರುವುದನ್ನು ನಾವು ಮರೆಯುವಂತಿಲ್ಲ. ಬೌದ್ಧಿಕ ಜೀವನದಲ್ಲಿಯೂ ಎಲ್ಲ ಮಹಿಳೆಯರು 'ಪತಿಯೇ ಪರದೈವ' ಎಂದು ನಡೆದುಕೊಂಡ ಪ್ರಪಂಚದ ಮಹಿಳೆಯರಿಗೆ ಮಹಾದೇವಿ ಒಂದು ಸವಾಲಾಗಿ ನಿಂತರು. ಎಲ್ಲ ಸಾಮಾನ್ಯ ಮಹಿಳೆಯರಿಗೆ ಗಂಡನೇ ದೇವರು. ಗಂಡನಲ್ಲಿ ಧೈವತ್ವವನ್ನು ಕಾಣಬೇಕು ಎನ್ನುವ ಭಾವನೆಯ ಸಂಪ್ರದಾಯಕ್ಕೆ ಮಹಾದೇವಿ ಮಾತು ತನ್ನ ಆರಾಧ್ಯಧೈವವನ್ನೇ ತನ್ನ ಪತಿಯೆಂದು 'ಶರಣಸತಿ ಲಿಂಗಪತಿ' ಭಾವದಿಂದ ಪ್ರತಿಪಾದಿಸಿ. ಅವನನ್ನು ವರಿಸಲು ಅನೇಕ ಕಷ್ಟಕರವಾದ ಪ್ರಸಂಗಗಳನ್ನು ಎದುರಿಸುತ್ತ ಅಂಜದೆ, ಅಳುಕದೆ, ತನ್ನ ಆತ್ಮಬಲದ ಶಕ್ತಿಯಿಂದ, ದಿಟ್ಟ ನಿಲುವಿನಿಂದ ತನ್ನ ಪತಿ ಪರಮಾತ್ಮನನ್ನು ಹುಡುಕುತ್ತ ಹೊರ ಬಿದ್ದಿದ್ದರು. ಇದಕ್ಕೆ ಪೂರಕವಾದ ಕಾರಣವೂ ಬಲವಾಗಿ ನಿಂತಿತು. ಕಾರಣ ಮಹಾದೇವಿ ಸಾಧಾರಣ ಮಹಿಳೆಯಾಗಿರಲಿಲ್ಲ. ಅವರು ಪಾರ್ವತಿಯ ಸಾತ್ವಿಕ ತೇಜಸ್ಸಿನ ಪ್ರತೀಕವಾಗಿದ್ದರು, ಅಂತೆಯೇ ತನ್ನ ಪತಿ ಮಲ್ಲಿಕಾರ್ಜುನನ ಸ್ಥಾನವನ್ನು ಗುರುತಿಸಿ, ಸಾತ್ವಿಕಕಳೆಯ ಸಾಕಾರಮೂರ್ತಿ ಪುನಃ ಪರದೈವನಲ್ಲಿ ಲೀನವಾಗಲು ಹೊರಟ ಅಪರೂಪದ ಮಹಿಳೆಯಾಗಿದ್ದರು.

ಆದರೆ ಅವರ ರೂಪ ಮಾತ್ರ ಸಾಮಾನ್ಯ ಮಹಿಳೆಯ ರೂಪವಾಗಿತ್ತು. ಮಹಾದೇವಿಯು ಎಲ್ಲ ಸಾಮಾನ್ಯ ಹೆಣ್ಣುಮಕ್ಕಳನ್ನು ನೋಡುವ ದೃಷ್ಟಿಯಿಂದಲೇ ಅಂದಿನ ಸಮಾಜವೂ ನೋಡಿರುವುದು ಸಹಜವೇ ಆಗಿದೆ. ಸಾಮಾನ್ಯವಾಗಿ ಹೆಣ್ಣಿಗೆ ಗೌರವ ಬರುವುದಾದರೆ,

ಅದು ಅವಳ ಕುಲ, ಧರ್ಮ, ಹುಟ್ಟು, ಚಾರಿತ್ರ್ಯ, ಗಂಡನ ಕುರುಹುಗಳು, ಪ್ರಾಮುಖ್ಯವಾಗುವ ಅಂಶಗಳು. ಆದರೆ ಅದನ್ನು ಇಂದಿನ ಪುರುಷ ಪ್ರಧಾನ ಸಮಾಜ ಅರ್ಥೈಸುವ ವಿಧಾನವೇ ವಿಭಿನ್ನವಾಗಿ ಹೆಣ್ಣು ಕೇವಲ ಪುರುಷನನ್ನು ಹಿಂಬಾಲಿಸಿ ಸಹಕರಿಸುವುದೇ ಆಗಿದೆ ಎಂದು ಹೇಳುವುದನ್ನು ಅಕ್ಕಮಹಾದೇವಿ ವಿಭಿನ್ನರೀತಿಯಲ್ಲಿ ವಿವರಿಸುತ್ತಾರೆ. ಇದರ ಅರ್ಥ ಕೇವಲ ಭೌತಿಕವಾದದ್ದಲ್ಲ. ಪಾರಮಾರ್ಥಿಕವನ್ನು ಸಾಧಿಸುವ ಸಾಮರ್ಥ್ಯ ಹೆಣ್ಣಿಗೂ ಉಂಟು. ಇಂದಿನ ಸಮಾಜದಲ್ಲಿ ಹೆಣ್ಣುಮಗಳ ಗೌರವ, ಅವಳ ಚಾರಿತ್ರ್ಯ ನಡೆ ನುಡಿಗಳು ಹಾಗೂ ಜೀವನದ ಮೌಲ್ಯಗಳ ಆಧಾರದ ತಳಹದಿಯಲ್ಲಿ ಅವಳ ಆಚಾರ, ವಿಚಾರಗಳ ಪರಿಮಿತಿಯಿಂದ ಅವಳಿಗೆ ತಕ್ಕ ಗೌರವ ನಿರ್ಧರಿಸುವ ಮಾನದಂಡವಾಗಿದೆ. ಎಂದು ೧೨ನೇ ಶತಮಾನದಲ್ಲಿ ಮಹಾದೇವಿ ಹಾಗೂ ಇನ್ನಿತರ ಶರಣೆಯರ ಜೀವನದಿಂದ ಶರಣರೇ ಸೃಷ್ಟಿಕರಿಸಿದ್ದಾರೆ. ಅಂತೆಯೇ ಮಹಾದೇವಿ'ನಾಮದಲ್ಲಿ ಹೆಣ್ಣಾದರೂ, ಭಾವಿಸಲು ಗಂಡು' ಆಗಿದ್ದರು.

ಅಲ್ಲಮ: ಈ ಮಾತಿನ ಚಮತ್ಕಾರವನ್ನು ನಮ್ಮ ಶರಣರು ಮೆಚ್ಚಲಾರರು ಮಹಾದೇವಿ. ನಿನ್ನ ಚರಿತ್ರೆಯನ್ನು ಲೋಕ ತಿಳಿಯದೆಂದು ಭಾವಿಸಬೇಡ. ಲಗ್ನವಾದ ಕೌಶಿಕನ ಮೇಲೆ ತಪ್ಪನ್ನು ಹೊರೆಸಿ ಅರಮನೆಯನ್ನು ಬಿಟ್ಟು ನಿರ್ವಾಣ ಶರೀರಿಯಾಗಿ ಹೊರಟು ಬಂದಿರುವೆ ಎಂಬ ಮಾತು ನಿಜವೇ? ಪತಿಯ ಮೇಲೆ ತಪ್ಪನ್ನು ಹೊರಿಸಿ ಬರುವ ಸತೀಧರ್ಮವನ್ನು ಈ ನಮ್ಮ ಶರಣರು ಮೆಚ್ಚಲಾರರು.

ಅಕ್ಕ: ನನ್ನ ಮದುವೆಯ ಕತೆಯನ್ನು ಪ್ರಪಂಚ ಹೇಗಾದರೂ ತಿಳಿದು ಕೊಂಡಿರಲಿ. ನಾನು ಮೊದಲಿನಿಂದಲೂ ಚನ್ನಮಲ್ಲಿಕಾರ್ಜುನನಿಗೆ ಮೀಸಲು ಹೆಣ್ಣು. ಸಾವ ಕೆಡುವ ಗಂಡಂದಿರನೆಂದೂ ಬಯಸಿದವಳಲ್ಲ. ಸೀಮೆ ಇಲ್ಲದ ನಿಸ್ಸೀಮ ಚಲುವನಿಗೆ ಮಾತ್ರ ಒಲಿದವಳು. ನನ್ನ ಜೀವನದಲ್ಲಿ ಕೌಶಿಕನ ಪ್ರಸಂಗ ಒಂದು ಧೈವ ಕೃಪೆಯಂತೆ ಬಂದಿತಷ್ಟೇ. ಸ್ತ್ರೀಯ ಸೌಂದರ್ಯದ ವ್ಯರ್ಥ ವ್ಯಾಮೋಹವನ್ನು ಬಿಡಿಸಲು ದಿಗಂಬರಳಾಗಿ ಅರಮನೆಯನ್ನು ತ್ಯಜಿಸಿ ಬಂದೆ. ಸೌಂದರ್ಯದ ಹಂಗನ್ನು ಹರಿದೊಗೆದು ಬಂದಂತಹವರು.

ಅಲ್ಲಮ: ನಿನ್ನ ದೇಹದ ಮೋಹ ನಿನಗಿನ್ನು ಹೋಗಿಲ್ಲ, ನಿನ್ನ ಸೌಂದರ್ಯದ ಮೋಹ ನಿನಗಿನ್ನೂ ಉಳಿದಿದೆಯಲ್ಲವೇ?

ಮಹಾದೇವಿ: ಇಲ್ಲ, ಆ ಭಾವ ನನಗೆ ಎಳ್ಳಷ್ಟೂ ಉಳಿದಿಲ್ಲ, ಕಾಯ ಕರ್ರನೆ ಕಂದಿದರೇನಯ್ಯ? ಕಾಯ ಮಿರ್ರನೆ ಮಿಂಚಿದರೇನಯ್ಯ? ಅಂತರಂಗ ಶುದ್ದವಾದ ಬಳಿಕ ಚನ್ನಮಲ್ಲಿಕಾರ್ಜುನನಿಗೆ ಒಲಿದ ಅಂಗವು ಹೇಗಿದ್ದರೇನಯ್ಯ ಪ್ರಭುವೇ?

ಅಲ್ಲಮ: ಇದು ಬರಿಯ ಆಡಂಬರದ ಮಾತು, ಮಾತಿನಂತೆ ನಡೆ ಇಲ್ಲದವರನ್ನು ಗುಹೇಶ್ವರ ಲಿಂಗ ಮೆಚ್ಚುವವನಲ್ಲ. ಅಂತರಂಗದ ನಾಚಿಕೆ ಬಹಿರಂಗದಲ್ಲಿ ತಲೆದೋರುತ್ತಿದೆ. ಸೀರೆಯನ್ನಳಿದು ಕೂದಲನ್ನೇಕೆ ಮರೆಮಾಡಿ ಕೊಳ್ಳಬೇಕಾಗಿತ್ತು,ಇಷ್ಟೆಲ್ಲಾ ವೈರಾಗ್ಯದ ಖಣಿಯಾದ ನೀನು ಎಲ್ಲವನ್ನೂ ತ್ಯಾಗಮಾಡಿ ಬಂದವರೆಂದು ಹೇಳುತ್ತ ದೇಹವನ್ನು ಮುಚ್ಚುವ ವಸ್ತ್ರಗಳನ್ನು ಕಿತ್ತೊಗೆದು ಮತ್ತೆ ಈ ನಿನ್ನ ದೇಹಕ್ಕೆ ಕೂದಲನ್ನು ಮರೆಮಾಡಿಕೊಂಡು ಬರಲು ಕಾರಣವೇನು?' ಎಂದು ಮಾತಿನಲ್ಲಿ ಚುಚ್ಚುತ್ತಾರೆ. ಈ ವರ್ತನೆ ಒಪ್ಪವಲ್ಲ ಗುಹೇಶ್ವರ

ಅವರ ಮಾತಿಗೆ ಧೃತಿಗೆಡದ ಮಹಾದೇವಿ: ನಿಜ. ಒಂದರ ಹಂಗನ್ನು ಬಿಟ್ಟು, ಇನ್ನೊಂದರ ಹಂಗನ್ನು ನಾನು ಹೊಂದಿದ್ದೇನೆಂದು ನೀವು ಹೇಳುವ ಮಾತು ನಿಜ. ಆದರೆ ಅದು ನನಗಾಗಿ ಅಲ್ಲ, ನಿಮಗಾಗಿ ಅಂದರೆ ಜನರ ಹಂಗಿಗಾಗಿ ಇದನ್ನು ಅವಲಂಬಿಸಿದ್ದೇನೆ. ಫಲ ಒಳಗೆ ಪಕ್ವವಾದಲ್ಲದೆ ಹೊರಗಣ ಸಿಪ್ಪೆ ಒಪ್ಪಗೆಡದು. ಕಾಮನ ಮುದ್ರೆಯ ಕಂಡು ನಿಮಗೆ ನೋವಾದಿತೆಂದು ಆ ಭಾವದಿಂದ ಮುಚ್ಚಿದೆ. ಇದಕ್ಕೆ ನೋವೇಕೆ ಕಾಡದಿರಣ್ಣ ಚನ್ನಮಲ್ಲಿಕಾರ್ಜುನನ ದೇವರ ದೇವನ ಒಳಗಾದವಳ.

ಅಲ್ಲಮ: ಏನೂ! ಫಲ ಪಕ್ವವಾದಲ್ಲದೆ ಹೊರಗಣ ಸಿಪ್ಪೆ ಒಪ್ಪಗೆಡದು ಎಂದೆಯಲ್ಲವೆ ನಾನು ಹೇಳುತ್ತೇನೆ ಕೇಳು, ಸಿಪ್ಪೆ ಒಪ್ಪಗೆಟ್ಟಾಗ ಹಣ್ಣಿನ ರಸ ಕೊಳಕಾಗುತ್ತದೆ ಅದನ್ನಾದರೂ ಮೆಚ್ಚುವುದು ಹೇಗೆ?

ಅಕ್ಕ: ಆ ಹಣ್ಣನ್ನು ನಾನು ಹಾಗೇ ಇಟ್ಟಿಲ್ಲ ಪ್ರಭುವೇ, ಎಂದೋ ಚನ್ನಮಲ್ಲಿಕಾರ್ಜುನನಿಗೆ ಸಮರ್ಪಿಸಿ ಬಿಟ್ಟಿದ್ದೇನೆ. ಅರಿಷಡ್ವರ್ಗಗಳನ್ನಳಿದು ನನ್ನ ದೇಹವನ್ನು ವ್ಯಾಪಿಸಿರುವ ಸಚ್ಚಿದಾನಂದಾತ್ಮಕವಾದ ರಸ ಅದು. ಸಿಪ್ಪೆ ಒಪ್ಪಗೆಟ್ಟರು ಕೊಳೆಯಲಾರದು, ನನ್ನ ಒಳ ಹೊರೆಗೆಲ್ಲವ ನಳಿದು ನನ್ನತನ ಒಂದೂ ಇಲ್ಲವೆಂದು ಎಂದೆಂದೂ ಅಳಿಯದ ಅಮರ ಪವಿತ್ರತೆಯನ್ನು ತಂದು ಕೊಟ್ಟಿದೆ ಪ್ರಭುವೆ.

ಅಲ್ಲಮ: ಈ ಬಾಹ್ಯ ಬ್ರಹ್ಮದ ಬೆಡಗನ್ನು ನಾವು ಮೆಚ್ಚುವವರಲ್ಲ. ನಾ ಸತ್ತೆನೆಂದು ಹೆಣ ಕೂಗಿದುದುಂಟೆ? ಬೈಚಿಟ್ಟ ಬಯಕೆ ಕರೆದುದುಂಟೆ? ಹೆಪ್ಪಿಟ್ಟ ಹಾಲು ಸಿಹಿಯಪ್ಪುದೇ? ಈ ಮಾತು ಒಪ್ಪವಲ್ಲ ಗುಹೇಶ್ವರ ಮಹಾದೇವಿ: ಸತ್ತ ಹೆಣ ಕೂಗಿದುದುಂಟು. ಮರೆತು ಒರಗಿ ಕನಸು ಕಂಡು ಅದನ್ನು ಹೇಳುವಲ್ಲಿ ಸತ್ತ ಹೆಣ ಎದ್ದಂತೆ ಆಯಿತು. ಹೆಪ್ಪಿಟ್ಟ ಹಾಲು ಗಟ್ಟಿ ತುಪ್ಪವಾಗಿ ಸಿಹಿಯಾಗಿತ್ತು. ಇದಕ್ಕೆ ತಪ್ಪು ಸಾಧಿಸಲೇಕೆ ಪ್ರಭುವೇ.

ಅಲ್ಲಮ: ಅದೂ ಹೋಗಲಿ, ಅರಿಷಡ್ವರ್ಗಗಳಿಂದಲೇ ತುಂಬಿರುವ ಈ ಶರೀರದಲ್ಲಿದ್ದು ಅದನ್ನು ದಾಟಿದ್ದೇನೆ ಎಂದರೆ ಅದನ್ನಾದರೂ ನಂಬುವುದು ಹೇಗೆ?

ಅಕ್ಕ : ಕಾಮನ ಗೆದ್ದ ಠಾವನ್ನು ಹೇಳಬೇಕೆ ಪ್ರಭುವೇ ? ಕಾಮವನ್ನು ಗೆಲ್ಲುವುದಕ್ಕೆ ಆ ಕಾಮ ನನ್ನ ಮನಸ್ಸಿನಲ್ಲಿ ಎಂದೂ ಹುಟ್ಟಿಯೇ ಇಲ್ಲ. ಕೇಳಿ

ಅಂಗದ ಭಂಗವ ಲಿಂಗ ಸುಖದಿಂದ ಗೆಲ್ಲಿದೆ. ಜೀವದ ಭಂಗವ ಶಿವಾನುಭವದಿಂದ ಗೆಲ್ಲಿದೆ. ಕರಗದ ಕತ್ತಲೆಯ ಬೆಳಗನ್ನುಟ್ಟು ಗೆಲ್ಲಿದೆ. ಜವ್ವನದ ಹೊರ ಮಿಂಚಿನಲ್ಲಿ ನಿಮ್ಮ ಕಣ್ಣಿಗೆ ಕಾಣುವ ಕಾಮನ ಸುಟ್ಟುರಿಯುವ ಭಸ್ಮವ ನೋಡಯ್ಯ. ಕಾಮನ ಕೊಂದು ಮನಸ್ಸಿಜನಾಗುಳಿದರೆ, ಮನಸಿಜನ ತಲೆ ಬರಹವ ತೊಡೆದೆನು.

ಎನ್ನ ಮನಸ್ಸಿಜನ ಜನನಕ್ಕೆ ಅವಕಾಶವನ್ನೇ ಕಲ್ಪಿಸಿಕೊಟ್ಟಿಲ್ಲ. ಇದನ್ನು ತಮ್ಮಂತಹ ಕೆಲವರು ಮಾತ್ರವೇ ಅರ್ಥ ಮಾಡಿ ಕೊಳ್ಳಬಲ್ಲವರು ಪ್ರಭುವೇ. ಘಟ್ಟಿದುಪ್ಪ ತಿಳಿದುಪ್ಪಕ್ಕೆ ಹಂಗುಂಟೆಯಯ್ಯಾ. ದೀಪಕ್ಕೆ ದೀಪ್ತಿಗೆ ಭೇದವುಂಟೆಯಯ್ಯಾ. ಅಂಗಕ್ಕೆ ಆತ್ಮಂಗೆ ಭಿನ್ನವುಂಟೆಯ್ಯಾ. ಎನ್ನ ಅಂಗವನು ಶ್ರೀಗುರು ಮಂತ್ರವ ಮಾಡಿ ತೋರೆದನಾಗಿ ಸಾವಯವಕ್ಕೂ ನಿರವಯಕ್ಕೂ ಭಿನ್ನವಿಲ್ಲವಯ್ಯಾ. ಚೆನ್ನಮಲ್ಲಿಕಾರ್ಜುನ ದೇವರ ಬೆಳಸಿ ಮತಿಗೆಟ್ಟವಳ ಏತಕ್ಕೆ ನುಡಿಸುವೆಯಯ್ಯಾ ಪ್ರಭುವೆ.

ಈ ಉತ್ತರಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾಪದ ವಚನ:

ತನುವಿನ ಗುಣವ ವಿವರಿಸಿಹೆನೆಂದಡೆ ಮನಶುದ್ಧವಾಗಬೇಕು. ಮನದ ಗುಣವ ವಿವರಿಸಿಹೆನೆಂದಡೆ ಇಂದ್ರಿಯಗಳು ಶುದ್ಧವಾಗಬೇಕು. ತನು ಮನ ಇಂದ್ರಿಯಂಗಳು ಶುದ್ಧ ಸುಯಿದಾನವಾಗಿಲಿಂಗಮುಖಕ್ಕೆ ವೇದ್ಯವಾದಲ್ಲದೆ ಗೋಏಶ್ವರ ಲಿಂಗವ ಬೆರಸ ಬಾರದು ಕೇಳವ್ವಾ. ಈ ಉತ್ತರಕ್ಕೆ ಮಹಾದೇವಿ ಕೊಟ್ಟ ಪ್ರತ್ಯುತ್ತರ: ತನುಶುದ್ಧವಾಯಿತು ಶಿವಭಕ್ತರಿಗೆ ಶರಣುವೊಕ್ಕೆನಾಗಿ. ಮನಶುದ್ಧವಾಯಿತು ಅಸಂಖ್ಯಾತರನೆನೆದೆನಾಗಿ ಕಂಗಳು ಶುದ್ಧವಾದವು ಸಕಲ ಗಣಂಗಳ ನೋಡಿ. ಎನ್ನ ಪ್ರೋತ್ರ ಶುದ್ಧವಾದವು ಸಕಲ ಪುರಾತರ ಕೀರ್ತಿಯ ಕೇಳಿ. ಎನ್ನ ಘ್ರಾಣ ಶುದ್ಧವಾಯಿತ್ತೆನ್ನ ನಿಮ್ಮ ಪಾದಾರ್ಪಿತ ಪರಿಮಳ ವಾಸಿಸಿ.

ಎನ್ನ ಜಿಹ್ವೆ ಶುದ್ಧವಾಯಿತು ನಿಮ್ಮ ಶರಣರೊಕ್ಕುದ ಕೊಂಡೆನಾಗಿ. ಭಾವನೆ ಎನಗಿದು ಜೀವನವು ಕೇಳಾ ಲಿಂಗತಂದೆ. ನೆಟ್ಟನೆ ನಿಮ್ಮುವ ಪೂಜಿಸಿ ಭವಗೆಟ್ಟೆನು ಕಾಣಾ ಪ್ರಭುವೆ, ಚೆನ್ನಮಲ್ಲಿಕಾರ್ಜುನಯ್ಯ ಈ ಉತ್ತರಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರದ ವಚನ: ಕಾಯ ಶುದ್ಧವಾಯಿತ್ತೆಂದಡೆ ಲಿಂಗ ನೆಲೆಗೊಳ್ಳದು. ಜೀವ ಶುದ್ಧವಾಯಿತ್ತೆಂದಡೆ ಲಿಂಗ ನೆಲೆಗೊಳ್ಳದು. ಭಾವ ಶುದ್ಧವಾಯಿತ್ತೆಂದಡೆ ಲಿಂಗ ನೆಲೆಗೊಳ್ಳದು. ಗೋಏಶ್ವರಲಿಂಗದಲ್ಲಿ ಶುದ್ಧ ಸುಯಿಧಾನಿಯಾದೆನೆಂದಡೆ ನಿಜವು ಸಾಧ್ಯವಾಗದು ಕೇಳವ್ವಾ. ಇದಕ್ಕೆ ಅಕ್ಕಮಹಾದೇವಿಯ ವರ ಪ್ರತ್ಯುತ್ತರದ ವಚನ:

ಕಾಯದೊಳಗೆ ಆಕಾಯವಾಯಿತು, ಜೀವದೊಳಗೆ ನಿರ್ಜಿವವಾಯಿತು, ಭಾವದೊಳಗೆ ನಿರ್ಭಾವವಾಯಿತು.

ಎನ್ನ ಮನದೊಳಗೆ ಘನ ನೆನಹಾಯಿತು.

ಎನ್ನ ತಲೆ ಮೊಲೆಗಳ ನೋಡಿ ಸಲಹಿದಿರಾಗಿ ಚೆನ್ನಮಲ್ಲಿಕಾರ್ಜುನನ ಧರ್ಮದವಳಾನು ಕಾಣಾ ಪ್ರಭುವೆ.

ಇದಕ್ಕೆ ಪ್ರಭುದೇವರ ಪ್ರತ್ಯುತ್ತರದ ವಚನ:

ಕೂಡಲಿಲ್ಲದ ಘನವ ಕೂಡುವ ಪರಿಎಂತವ್ವಾ. ಹೇಳಿದಡೆ ಅದಕ್ಕೆ ಅದೆ ಕೊರೆತೆ!

ಗೋಏಶ್ವರಲಿಂಗವ ಬೇರೆ ಮಾಡಿ ಬೆರಸುವ ಪರಿಯೆಂತು ಹೇಳವ್ವಾ?

ಇದಕ್ಕೆ ಅಕ್ಕಮಹಾದೇವಿಯವರ ಪ್ರತ್ಯುತ್ತರದ ವಚನ:

ಅಂಗಸಂಗದಲ್ಲಿ ಲಿಂಗಸಂಗಿಯಾದೆನು.

ಲಿಂಗಸಂಗದಲ್ಲಿ ಅಂಗಸಂಗಿಯಾದೆನು.

ಉಭಯ ಸಂಗವನು ಅಳಿಯದೆ ಪರಿಣಾಮಿಯಾದೆನು.

ನುಡಿಯ ಗಡಣವ ಮಣಿದು ತೆರೆಹಿಲ್ಲದಿರ್ದಡೇನು?

ಎನ್ನ ದೇಹ ಚೆನ್ನಮಲ್ಲಿಕಾರ್ಜುನನ ಬೆರಸಿದ ಬಳಿಕ ಎನ್ನ ನಾನು ಏನೆಂದೂ ಅಯೆನಯ್ಯಾ ಪ್ರಭುವೆ.

ಇದಕ್ಕೆ ಪ್ರಭುದೇವರು:

ತನುಗುಣ ನಾಸ್ತಿಯಾಗಿ ಲಿಂಗಸಂಗಿಯಾದಳು. ಮನಗುಣ ನಾಸ್ತಿಯಾಗಿ ಅವು ಸಂಗಿಯಾದಳು. ಭಾವಗುಣ ನಾಸ್ತಿಯಾಗಿ ಮಹಾಪ್ರಭೆ ತಾನಾದಳು. ತಾನಿದಿರೆಂಬೆರಡಳಿದು ನಮ್ಮ ಗೋಏಶ್ವರ ಲಿಂಗದಲ್ಲಿ ಸ್ವಯಲಿಂಗವಾದ ಮಹಾದೇವಿಯಕ್ಕನ ನಿಲವಿಂಗೆ ಶರಣೆನುತ್ತಿರ್ದೆನು.

ಇದಕ್ಕೆ ಅಕ್ಕಗಳ ನಿರಹಂಭಾವದ ಬಿನ್ನಹ:

ನೀರು ಕ್ಷೀರದಂತೆ ನೀನಿಪ್ಪೆಯಾಗಿ, ಆವುದು ಮುಂದು ಆವುದು ಹಿಂದೆಂದರೆಯೆನು. ಆವುದು ಕರ್ತೃ ಆವುದು ನೃತ್ಯನೆಂದರೆಯೆನು. ಆವುದು ಘನ ಆವುದು ಕಿರಿದೆಂದರೆಯೆನು. ಚೆನ್ನಮಲ್ಲಿಕಾರ್ಜುನಯ್ಯಾ, ನೀನೊಲಿದು ಕೊಂಡಾಡಿದಡೆ ಇರುಹೆ ರುದ್ರನಾಗದೆ ಹೇಳಾ ಪ್ರಭುವೆ.

ಚನ್ನಬಸವಣ್ಣನವರ ನಿರೂಪದ ವಚನ:

ಆದ್ಯರ ಅನುಮತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ; ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ;

ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ; ಅಜಗಣ್ಣನ ಐದು ವಚನಕ್ಕೆ ಕೂಡಲಚನ್ನಸಂಗಯ್ಯನಲ್ಲಿ ಅಕ್ಕಮಹಾದೇವಿಯರದೊಂದು ವಚನ ನಿರ್ವಚನ ಕಾಣಾ ಸಿದ್ಧರಾಮಯ್ಯ.

ಆ ಸಮಯದಲ್ಲಿ ಸಿದ್ಧರಾಮಯ್ಯ ಮಹಾದೇವಿಯಕ್ಕನವರಿಗೆ ಸ್ತುತಿಸಿದ ವಚನ:

ಕಂಗಳ ನೋಟ ಕರಸ್ಥಲದಲ್ಲಿ ಪ್ರಾಣವ ಕೂಟ ಅಂತರಂಗದಲ್ಲಿ ಅವಿನಲ್ಲಿ ಅಂಗವಿಕಾರ ನಿರ್ವಿಕಾರವಾಯಿತು ಕರಣದ ಸಂಗಸುಖ ನಿಸ್ಸಂಗವಾಯಿತು. ಹೆಂಗೂಸೆಂಬ ಭಾವ ಬಯಲ ಬೆಳೆರೆತ್ತು. ಕಲಿದೇವರದೇವಾ, ನಿಮ್ಮ ಒಲಿಸಿ ಒಚ್ಚತವಾದ ಮಹಾದೇವಿಯಕ್ಕನ ಪಾದವ ನೆನೆದು ನಾನು ಬದುಕಿದೆನು.

ಅಲ್ಲಮ: ನೋಡಿದೆಯಾ ಬಸವಣ್ಣ, ಮಹಾದೇವಿಯ ಈ ನಿಲುವನ್ನು ಲೋಕಕ್ಕೆ ಪ್ರಕಟ ಮಾಡಬೇಕೆಂದೇ ನಾನು ಇಷ್ಟು ನಿಷ್ಠುರನಾದೆ. ತಾಯೇ ನಿನ್ನ ಜ್ಞಾನ ಘನ, ನಿನ್ನ ವಿರತಿ ಘನ, ನೀನು ವೈರಾಗ್ಯ ನಿಧಿ. ನಿನ್ನನ್ನು ಪಡೆದ ಜಗತ್ತು ಪಾವನ. ಮಾಯೆ ನಿನ್ನ ಮುಟ್ಟಲಿಲ್ಲ, ಮರಹು ನಿನ್ನ ಸೋಂಕಲಿಲ್ಲ, ಕಾಮ ನಿನ್ನ ಕೆಡಿಸಲಿಲ್ಲ, ಮಹಾದೇವಿ ಅಕ್ಕ ನೀನು ವಿಶ್ವ ಸ್ತ್ರೀ ಕುಲದ ಜ್ಯೋತಿ. ದಿಟ್ಟ ಹೆಜ್ಜೆ, ಧೀರ ನುಡಿಯ ತಾಯಿ ನೀನು, ವಿನಯ ವಿಶ್ವಾಸಗಳ ರತ್ನಗಣಿ ನೀನು, ತಾಯೇ ಮಹಾದೇವಿ ನಿನ್ನ ಸ್ತ್ರೀ ಪಾದಗಳಿಗೆ ನಮೋ ನಮೋ ಎಂದೆನು. (ಅಲ್ಲಮಪ್ರಭು ಕೈ ಮುಗಿಯುವರು)

ಅಕ್ಕಮಹಾದೇವಿಯವರು ಅನುಭವ ಮಂಟಪದಲ್ಲಿ

ಕಾಲಿಟ್ಟ ಮೇಲೆ ಅಲ್ಲಿನ ರೀತಿ ನೀತಿಗಳು ಸಾಮಾಜಿಕ

ಪುರುಷನ ವ್ಯವಸ್ಥೆ ಬದಾಲಾಯಿತು.

ಅಲ್ಲಮಪ್ರಭುಗಳು ಎಲ್ಲಾ ಶರಣರಿಗೆ ಹೀಗೆ ಹೆಳುತ್ತರೆ,

ಇನ್ನೂ ಮುಂದೆ ಅನುಭವ ಮಂಟಪದಲ್ಲಿ ಎಲ್ಲ ಸ್ತ್ರೀಯರಿಗೆ ಆಧ್ಯಾತ್ಮಿಕ ಚರ್ಚೆಗೆ ಭಾಗವಾಸಲಿ, ಇದುವರೆಗೆ ಈಲ್ಲಿ ಸ್ತ್ರೀಯರಿಗೆ ಅವಕಾಶವೇ ಇರಲಿಲ್ಲ. ಇನ್ನುಮುಂದೆ, ಸ್ತ್ರೀಯರು, ಮಹಿಳೆಯರು ವಚನಗಳನ್ನು ರಚಿಸಲಿ, ನಾಳೆಯಿಂದ ಶರಣೆಯರಿಗೆ ಅನುಭವ ಮಂಟಪದಲ್ಲಿ ಎಲ್ಲಾ ಪುರುಷರಂತೆ, ಸ್ತ್ರೀಯರೂ ಇಲ್ಲಿ ಸಮಾನರು ಎಂದು ಹೇಳುತ್ತರೆ.

ಮಹಾದೇವಿ ನಾನು ಇಷ್ಟುಂದು ಪರೀಕ್ಷೆ ಮಾಡಿದೆ ಎಂದು ಮನಮೊಂದುಕೋಳ್ಳಬೇಡಮ್ಮ ಎನ್ನಲು ಆಗ ಅಕ್ಕಮಹಾದೇವಿ ಹೀಗೆ ವಚನವನ್ನು ಹೇಳುತ್ತಾರೆ. ಚಂದನವ ಕಡಿದು ಕೊರೆದು ತೇದಡೆ ನೊಂದೆನೆಂದು ಕಂಪ ಬಿಟ್ಟಿತ್ತೆ? ತಂದು ಸುವರ್ಣವ ಕಡಿದೊರೆದಡೆ ಬೆಂದು ಕಳಂಕ ಹಿಡಿಯಿತ್ತೆ? ಸಂದುಸಂದು ಕಡಿದ ಕಬ್ಬನು ತಂದು ಗಾಣದಲ್ಲಿಕ್ಕಿ ಅರೆದಡೆ ಬೆಂದು ಪಾಕಗುಡದೆ ಸಕ್ಕರೆಯಾಗಿ ನೊಂದೆನೆಂದು ಸಿಹಿಯ ಬಿಟ್ಟಿತ್ತೆ? ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು ಮುಂದಿಳುಹಲು ನಿಮಗೇ ಹಾನಿ ಎನ್ನ ತಂದೆ ಚೆನ್ನಮಲ್ಲಿಕಾರ್ಜುನಯ್ಯಾ, ನೀ ಕೊಂದಡೆಯೂ ಶರಣೆಂಬುದ ಮಾಣೆ. ಪ್ರಭುದೇವರು ಹೀಗೆ ಹೇಳುತ್ತಾರೆ, ನೀನು ಎಲ್ಲರಿಗೂ ಅಕ್ಕ, ಬಸವಣ್ಣ, ನಮ್ಮೆಲ್ಲರ ಅಕ್ಕ. ನಮಗೆಲ್ಲರಿಗೂ

ಗುರುವಾಗಬಲ್ಲ ಯೋಗ್ಯತೆಯುಳ್ಳವರು. ಅಕ್ಕಮಹಾದೇವಿ ನಿನಗೆ ಪಾದಗಳಿಗೆ ನಮೋ ನಮೋ ಶರಣು ಶರಣಾರ್ಥಿ. (ಬಸವಣ್ಣ ನವರು ಕೈಮುಗಿಯುವರು)

ಅಕ್ಕ: ತಾವು ಹಾಗೆಲ್ಲಾ ಹೇಳಬಾರದು, ನಿಮ್ಮೆಲ್ಲರ ಕರುಣೆಯ ಶಿಶು ನಾನು, ನಿಮ್ಮೆದುರಿನಲ್ಲಿ ಅತಿ ಚಿಕ್ಕವಳು.

ಚನ್ನಬಸವಣ್ಣ: ಇರಬಹುದು, ವಯಸ್ಸು ಅತಿ ಚಿಕ್ಕದೇ ಇರಬಹುದು. ಆದರೂ ನೀನು ಎಲ್ಲರಿಗೂ ಅಕ್ಕನಾಗಬಲ್ಲವರು ತಾಯಿ. ಮಹಾದೇವಿ ಅಕ್ಕ ಹಿರಿತನ ಕೇವಲ ವಯಸ್ಸಿನಿಂದ ಮಾತ್ರವೇ ಬರುವುದಿಲ್ಲ. ಅಜ ಕಲ್ಪಕೋಟಿ ವರುಷದವರೆಲ್ಲರೂ ಹಿರಿಯರೇ? ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೇ? ನಡು ಮುರಿದು, ತಲೆ ನಡುಗಿ, ಮತಿಗೆಟ್ಟು ಒಂದನಾಡ ಹೋಗಿ ಒಂಭತ್ತನಾಳುವ ಅಜ್ಞಾನಿಗಳೆಲ್ಲರೂ ಹಿರಿಯರೇ? ಅನುವನರಿದು, ಘನವ ಬೆರೆಸಿ, ಹಿರಿದು ಕಿರಿದೆಂಬ ಭೇದವ ಮರೆತು ಕೂಡಲ ಚನ್ನಸಂಗಯ್ಯನಲ್ಲಿ ಬೆರೆಸಿ ಬೇರಿಲ್ಲದಿಪ್ಪ ಹಿರಿತನ ನಮ್ಮ ಮಹಾದೇವಿಯಕ್ಕಂಗಾಯಿತ್ತು.

ಸಿದ್ದರಾಮ: ಅಹುದಹುದು ಮತ್ತೇನು, ಮರಹಿಂಗೆ ಹಿರಿದು ಕಿರಿದುಂಟಲ್ಲದೆ, ಅರಿವಿಂಗೆ ಹಿರಿದು ಕಿರಿದುಂಟೆ ಹೇಳಯ್ಯ? ಜಾತಂಗೆ ಮರಣದ ಭಯ ಉಂಟಲ್ಲದೆ, ಅಜಾತಂಗೆ ಮರಣದ ಭಯವುಂಟೇ ಹೇಳಯ್ಯ? ಕಪಿಲಸಿದ್ದ ಮಲ್ಲಿನಾಥನಲ್ಲಿ ಮಹಾದೇವಿಯಕ್ಕನ ನಿಲವಿಂಗೆ ಶರಣೆಂದು ಶುದ್ದನಾದೆನು ಕಾಣಾ ಚನ್ನಬಸವಣ್ಣ.

ಅಕ್ಕ: ಬಸವಣ್ಣನವರ ಶ್ರೀ ಚರಣಗಳಿಗೆ ಶರಣು ಶರಣಾರ್ಥಿ.

ಬಸವಣ್ಣ: ಶರಣು ತಾಯೇ ಶರಣು ಶರಣು.

ಅಕ್ಕ: ಜ್ಞಾನ ನಿಧಿ ಚನ್ನಬಸವಣ್ಣನವರ ಶ್ರೀ ಚರಣಗಳಿಗೆ ಶರಣು ಶರಣಾರ್ಥಿ.

ಚನ್ನಬಸವಣ್ಣ: ಶರಣು ತಾಯೇ ಶರಣು.

ಅಕ್ಕ: ಧರ್ಮಯೋಗಿ ಸಿದ್ದರಾಮಣ್ಣನವರ ಶ್ರೀ ಚರಣಗಳಿಗೆ ಶರಣು ಶರಣಾರ್ಥಿ.

ಸಿದ್ದರಾಮ: ಶರಣು ತಾಯೇ ಶರಣು.

ಅಕ್ಕ : ಎಲ್ಲಾ ಶರಣ ಶರಣೆಯರಿಗೂ ಶರಣು ಶರಣಾರ್ಥಿ.ಎಲ್ಲರೂ : ಶರಣು ತಾಯೇ ಶರಣು ಶರಣು ಎಂದು ಎಲ್ಲಾ ಶರಣರು ನಮಸ್ಕರಿಸುವರುಆಗ ಬಸವಣ್ಣನವರು ಅಕ್ಕನನ್ನು ಅಂದಿನ ಅನುಭವಮಂಟಪದ ಗೋಷ್ಠಿಯಲ್ಲಿ ಪಾಲ್ಗೊಳ್ಳುವಂತೆ ಹೇಳುವರು. ಆಗ ಅಕ್ಕನು ಶರಣ ಶರಣೆಯರ ನಡುವೆ ಕುಳಿತು ಅಂದಿನ ಗೋಷ್ಠಿಯಲ್ಲಿ ಭಾಗವಹಿಸುವರು.

ನಾವು ಯಾರಾದರು ಮನೆಗೆ ಬಂದರೆ ಕುಳಿತುಕೊ ಊಟಮಾಡಿ ಎನ್ನುತ್ತೇವೆ ಆದರೆ ಅನುಭವ ಮಂಟಪದಲ್ಲಿ ಮಹಾದೇವಿಯವರಿಗೆ ಪರೀಕ್ಷೆ ಮೇಲೆ ಪರೀಕ್ಷೆ ಮಾಡುತ್ತಿದ್ದ ಎಲ್ಲಾ ಶಿವಶರಣರು, ಅಕ್ಕಮಹಾದೇವಿಯವರನ್ನು ನೀನು ಊಟ ಮಾಡು ನೀರುಕುಡಿ ಅನ್ನುವರು ಅಲ್ಲಿ ಸಧ್ಯಕ್ಕೆ ಯಾರುಇರಲಿಲ್ಲ. ಇಂಥವರಿಗೆ ಇಂತಹ ಕಷ್ಟ.ಮೋದಲನೇ ದಿನವೇ ಚೆನ್ನಬಸವಣ್ಣಾನವರ ಜ್ಞಾನದ ಬಗ್ಗೆ ತಿಳಿದರು ಆಗ ಈ ವಚನ ಬರೆಯುತ್ತಾರೆ.ಇದಕ್ಕೆ ಹಿನ್ನೆಲೆಯಲ್ಲಿ ಚೆನ್ನಬಸವಣ್ಣನನ್ನ ಸಮ್ಯಕ್ ಜ್ಞಾನಿ ಎಂದು ಕರೆದು ಶ್ರೀಪಾದ ಶರಣೆನ್ನುತ್ತಾರೆ ಅಕ್ಕಮಹಾದೇವಿಯವರು ಮರ್ತ್ಯ ಲೋಕದ ಭಕ್ತರ ಮನವ ಬೆಳಗಲೆಂದು ಇಳಿತಂದನಯ್ಯಾ ಶಿವನು ಕತ್ತಲೆಯ ತಾಳೆಯವ ರವಿಹೊಕ್ಕಂತಾಯಿತಯ್ಯಾ ಚಿತ್ರದ ಪ್ರಕೃತಿಯ ಹಿಂಗಿಸಿ, ಮುಕ್ತಿ ಪಥವ ತೋರಿಸದನೆಲ್ಲ ಅಸಂಖ್ಯಾತ ಗಣಂಗಳಿಗೆ ತನುವೆಲ್ಲ ಸ್ವಯಲಿಂಗ, ಮನವೆಲ್ಲ ಚರಲಿಂಗ ಭಾವವೆಲ್ಲ ಮಹಾಘನದ ಬೆಳಗಲಿ ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣ ಸಮ್ಯಕ್ ಜ್ಞಾನಿ ಚನ್ನಬಸವಣ್ಣನ ಶ್ರೀಪಾದಕ್ಕೆ ಶರಣೆಂದು ಎನ್ನಭವಂ ನಾಸ್ತಿಯಾಯಿತ್ತಯ್ಯ ಪ್ರಭುವೆ, ಚೆನ್ನಬಸವಣ್ಣನವರ ಜ್ಞಾನಕಂಡು ಬೇರಗಾಗುತ್ತಾರೆ ಅಕ್ಕಮಹಾದೇವಿಯವರು, ಸಿದ್ದರಾಮೇಶ್ವರರಿಂದ ಶ್ರೀ ಶೈಲ ಮಲ್ಲಿಕಾರ್ಜುನನ ಮಹಿಮೆ ತಿಳಿದರು, ಅಲ್ಲಮಪ್ರಭುಗಳು ಅಕ್ಕಮಹಾದೇವಿಯವರ ಇಂಥಮಹಾಜ್ಞಾನ, ಇರುವುದು ತಿಳಿದಿರಲ್ಲಿಲ್ಲ

ಅದಕ್ಕೆಅವರು ಎಲ್ಲರಿಗೆ ನೀನು ಅಕ್ಕನಾಗಿ, ತಾಯಿಯಾಗಿ ಇರುತ್ತೀಯ ನೀನು ಜಗದ ಅಕ್ಕನೀನು ಎನ್ನುತ್ತಾರೆ.

ಆದಿಶಕ್ತಿ ಅನಾದಿಶಕ್ತಿಯೆಂಬರು ಆದಿಯೆಂದಡೆ ಕುರುಹಿಂಗೆಬಂದಿತ್ತು. ಅನಾದಿಯೆಂದಡೆ ನಾಮಕ್ಕೆ ಬಂದಿತ್ತು. ಆದಿಯಲ್ಲಿ ಅನಾದಿಯಲ್ಲಿ ನಾಮವಿಲ್ಲದ ಸೀಮೆಯಿಲ್ಲದ ನಿಜಶಕ್ತಿಯೆನಿಸಿ ಶಕ್ತಿಯಾಯಿತು ನೋಡಾ. ಅಂತರಂಗದ ಪ್ರಭೆ ಬಹಿರಂಗವೆಲ್ಲಾ ತಾನೆಯಾಗಿ, ಗೋಗೇಶ್ವರಲಿಂಗದಲ್ಲಿ ಸಂದಿಲ್ಲದಿಪ್ಪ ಮಹಾದೇವಿಯಕ್ಕನ ಶ್ರೀಪಾದಕ್ಕೆ ನಮೋ ನಮೋ ಎಂಬೆನು. ಸಭೆಯಲ್ಲೊಮ್ಮೆ ಮಿಂಚಿನ ಸಂಚಾರವಾಯಿತು. ಎಲ್ಲರ ಬಾಯಿ ಕಟ್ಟಿಹೋದವು. ಅರೆರೆ ಮಹಾದೇವಿಯಕ್ಕ! ಇವರು ಎಷ್ಟು ವಿನಯಿಯೋ ಅಷ್ಟೇ ದಿಟ್ಟೆ. ಎಷ್ಟು ಜ್ಞಾನಿಯೋ ಅಷ್ಟೇ ನ್ಯಾಯಸೂಚಿ. ಎಷ್ಟು ಸರಳೆಯೋ ಅಷ್ಟೇ ಕಠಿಣರು. ಹೌದು. ಇದುವರೆಗೆ ಯಾರಿಗೂ ಈ ತರಹದ ಪರೀಕ್ಷೆ ನಡೆದಿಲ್ಲ. ದಾಸೋಹದ ಮನೆಗೆ ಯಾರು ಬೇಕಾದರೂ ಬರಬಹುದು. ಸುಳ್ಳ, ಕಪಟಿ ಜಂಗಮರೆಲ್ಲ ಬಂದುಂಡು ಹೋಗುತ್ತಾರೆ. ಬಂದವರನ್ನು ಪ್ರಶ್ನಿಸುವುದು, ಪರೀಕ್ಷಿಸುವುದು, ಹೊರಹಾಕುವುದು ಮಾಡಬಾರದೆಂದು ಸ್ವತಃ ಬಸವಣ್ಣನ ಆಜ್ಞೆಯಾಗಿದೆ. ಅನುಭವ ಮಂಟಪದಲ್ಲಿ ಪುರುಷರಿಗೆ ಮಾತ್ರ ಪ್ರವೇಶ, ಸ್ತ್ರೀ ಯರಿಗೆ ಪ್ರವೇಶವಿಲ್ಲ ಇದೇ ಮೋದಲು ಬಾರಿಗೆ ಅಕ್ಕಮಹಾದೇವಿಯವರ ಪ್ರವೇಶ.ಅನುಭವ ಮಂಟಪದಲ್ಲಿ ಯಾರಿಗೂ ಯಾರೂ ಈ ಮೊದಲು ಪರೀಕ್ಷಿಸಿದ್ದಿಲ್ಲ. ಪುರುಷರು ಮಾತ್ರ ಯಾರಾದರೂ ಬರುವ ಮುನ್ನ ತಾವು ಯಾರೆಂದು ಗುರುತು ಹೇಳಿ ಬರುವರೇ ಹೊರತು ಪರೀಕ್ಷೆ ನಡೆದಿರಲಿಲ್ಲ. ಸ್ತ್ರೀ ಎಂಬ ಕಾರಣಕ್ಕೆ, ಪರೀಕ್ಷೆ ಮಾಡಿದರು. ಸಂಪೂರ್ಣ ನಿಶ್ಯಬ್ದ ಆವರಿಸಿತು. ಹಸಿದ ಹೊಟ್ಟೆಗಳ ಕೊರ, ಗೊರರ ಸದ್ದು ಕೇಳುವಷ್ಟು ನಿಶ್ಯಬ್ದ. ಯಾರೂ ಉತ್ತರಿಸದಿದ್ದಾಗ ಶಾಂತಸಾಗರದ ಮೊರೆತದಂತೆ ಗಂಭೀರ ಧ್ವನಿ ಅಲ್ಲಮಪ್ರಭುವಿನಿಂದ ಕೇಳಿಬಂತು:

'ಮಹಾದೇವಿ, ಹೊಳೆದರೂ ಹೊಳೆಯದಿದ್ದರೂ ಹೊನ್ನು ಹೊನ್ನೇ. ಹೇಗಾದರೂ ಇರಲಿ, ಎಲ್ಲಿಯಾದರೂ ಬಿದ್ದಿರಲಿ, ಲೋಹಕಾರನಿಗೆ ನೋಡಿದ ಕೂಡಲೇ ಹೊನ್ನಗುಣ ತಿಳಿವುದು. ಪುಟವಿಕ್ಕಿಸಿ ಹೊಳೆದರೆ ಮಾತ್ರ ಆಲಸಿ ಕಣ್ಣುಗಳಿಗೂ ಹೊನ್ನು ಥಟ್ಟನೆ ಗೋಚರವಾಗುವುದು. ಇಂದಿನ ಪರೀಕ್ಷೆ ಹೊನ್ನು ಹೊನ್ನೆಂದು ಜಗ ತಿಳಿಯಲಿ ಎಂದೇ ಹೊರತು ಹೊನ್ನನ್ನು ಅನುಮಾನಿಸಲಾಗಲೀ, ಅವಮಾನಿಸಲಾಗಲೀ ಅಲ್ಲ. ಒಬ್ಬ ಸ್ತ್ರೀ ಇಂಥ ಸಾಧನೆಯನ್ನು ಮಡುವಳು ಎಂದು ನನಗೆ ತಿಳಿದಿರಲಿಲ್ಲ, ತೇಯ್ದಷ್ಟೂ ಗಂಧದ ಪರಿಮಳ ಪಸರಿಸುವುದು. ಪುಟವಿಕ್ಕಿದಷ್ಟೂ ಹೊನ್ನು ಥಳಥಳನೆ ಹೊಳೆಯುವುದು. ಮನ್ನಿಸಬೇಕು ಮಹಾದೇವಿ. ತನುಗುಣ ನಾಸ್ತಿಯಾಗಿ ಲಿಂಗಸಂಗಿಯಾದಳು. ಮನಗುಣ ನಾಸ್ತಿಯಾಗಿ ಅರಿವುಸಂಗಿಯಾದಳು. ಭಾವಗುಣ ನಾಸ್ತಿಯಾಗಿ ಮಹಾಪ್ರಭೆ ತಾನಾದಳು. ತಾನಿದಿರೆಂಬೆರೆಡಳಿದು ನಮ್ಮ ಗುಹೇಶ್ವರ ಲಿಂಗದಲ್ಲಿ ಸ್ವಯಲಿಂಗವಾದ ಮಹಾದೇವಿಯಕ್ಕನ ನಿಲವಿಂಗೆ ಶರಣೆನುತಿರ್ದೆನು' ಎಂದು ಹೇಳುತ್ತ ಎದ್ದುನಿಂತು, ಎರಡೂ ಕೈಯೆತ್ತಿ ನಮಸ್ಕರಿಸಿದನು. ಶಿರಾಸಷ್ಟಾಂಗ ನಮಸ್ಕಾರ ಹಾಕಿದರು ಅಲ್ಲಮಪ್ರಭು, ಎದ್ದುನಿಂತು 'ಶರಣೆ ಮಹಾದೇವಿಗೆ, ಮಹಾದೇವಿಯಕ್ಕನಿಗೆ ಶರಣು ಶರಣು' ಎನ್ನುವುದರೊಂದಿಗೆ ಸಭೆ ಮುಕ್ತಾಯವಾಯಿತು. ಹೀಗೆ ಒಂದು ಏರಡು ವಾರಗಳಕಾಲ ಅನುಭವ ಮಂಟಪದಲ್ಲಿ ಇದ್ದಿರಬಹುದು, ಅಕ್ಕಮಹಾದೇವಿಯವರಿಗೆ ಶ್ರೀಶೈಲಕ್ಕೆ ಹೋಗಬೇಕು ಮನಸ್ಸುಇಲ್ಲಿ ನಿಲ್ಲುತ್ತಿರಲಿಲ್ಲ.

ಮಹಾದೇವಿಯಕ್ಕ ತಮ್ಮ ಷಡುಸ್ಥಲವಂ ಬಿನ್ನಿಸುವ ಪ್ರಸ್ತಾಪದ ವಚನ:

ಭಕ್ತಿಯಾನಪ್ಪೆನಯ್ಯಾ ಕರ್ತೃನೃತ್ಯತ್ವ ನಾನರಯೆನಯ್ಯಾ. ಮಾಹೇಶ್ವರಿಯಾನಪ್ಪೆನಯ್ಯಾ ವ್ರತನಿಯಮದ ಛಲವನರೆಯೆನಯ್ಯಾ. ಪ್ರಸಾದಿಯಾನಪ್ಪೆನಯ್ಯಾ ಅರ್ಪಿತ ಅನರ್ಪಿತವ ಮುನ್ನರೆಯೆನಯ್ಯಾ. ಪ್ರಾಣಲಿಂಗಿಯಾನಪ್ಪೆನಯ್ಯಾ ಅನುಭಾವದ ಗಮನವನರೆಯೆನಯ್ಯಾ ಶರಣೆಯಾನಪ್ಪೆನಯ್ಯಾ ಸತಿಪತಿಯೆಂಬ ಭಿನ್ನವನರೆಯೆನಯ್ಯಾ. ಲಿಂಗೈಕ್ಯಳಾನಪ್ಪೆನಯ್ಯಾ ಬೆರೆಸಿ ಭೇದವನರೆಯೆನಯ್ಯಾ. ಚೆನ್ನಮಲ್ಲಿಕಾರ್ಜುನಯ್ಯಾ, ಷಡುಸ್ಥಲದಲ್ಲಿ ನಿಃಸ್ಥಲದ ವರ್ತನೆಯ ಪರಿಜ್ಞಾನಿಯಾಗಿಪ್ಪೆ ನಾನಯ್ಯಾ ಪ್ರಭುವೆ.

ಮತ್ತೆ

ಅಯ್ಯಾ, ನಿಮ್ಮ ಅನುಭಾವಿಗಳ ಸಂಗದಿಂದ ಎನ್ನ ತನು ಶುದ್ಧವಾಯಿತು.

ಅಯ್ಯಾ, ನಿಮ್ಮ ಅನುಭಾವಿಗಳು

ಎನ್ನ ಒರೆದೊರೆದು ಕಡಿಕಡಿದು ಅರೆದರೆದು ಅನು ಮಾಡಿದ ಕಾರಣ ಎನ್ನ ಮನ ಶುದ್ಧವಾಯಿತಯ್ಯಾ.

ಎನ್ನ ಸರ್ವಭೋಗಾದಿ ಭೋಗಂಗಳೆಲ್ಲಾ ನಿಮ್ಮ ಶರಣರಿಗರ್ಪಿತವಾಗಿ ಎನ್ನ ಪ್ರಾಣ ಶುದ್ಧವಾಯಿತಯ್ಯಾ.

ಎನ್ನ ಸರ್ವೇಂದ್ರಿಯಂಗಳೆಲ್ಲವು ನಿಮ್ಮ ಶರಣರ ಪ್ರಸಾದವ ಕೊಂಡ ಕಾರಣ ಎನ್ನ ಸರ್ವಾಂಗ ಶುದ್ಧವಾಯಿತಯ್ಯಾ.

ನಿಮ್ಮ ಶರಣರಂತು ಎನ್ನ ಆಗು ಮಾಡಿದ ಕಾರಣ ಚೆನ್ನಮಲ್ಲಿಕಾರ್ಜುನಯ್ಯಾ,

ನಿಮ್ಮ ಶರಣರಿಗೆ ತೊಡಿಗೆಯಾದೆನಯ್ಯಾ ಪ್ರಭುವೆ.

ಬಸವಣ್ಣರಂತಹವರು ಲೀಲಾಜಾಲವಾಗಿ ಅಕ್ಕಮಹಾದೇವಿಯವರ ವ್ಯೆಕ್ತಿತ್ವ, ವಚನಗಳಿಗೆ ಬಹುಬೇಗ ಪ್ರಭಾವಿತರಾಗಿ ಬಿಡುತ್ತಾರೆ. ಸೌರಮಂಡಲದಲ್ಲಿದ್ದವರಿಗೆ ಸೂರ್ಯನೆದುರು ನಕ್ಷತ್ರ ಮರೆಯಾದಂತೆ ಅಕ್ಕಮಹಾದೇವಿಯವರ ಪರಿಪೂರ್ಣತೆ, ಶಿವಾನುಭಾವ, ವಚನಾಭಿವ್ಯಕ್ತಿಯ ಮುಂದೆ ಬಸವಣ್ಣ ಮಬ್ಬಾಗಿಬಿಡುತ್ತಾರೆ.

ಬಸವಣ್ಣಅಕ್ಕಮಹಾದೇವಿಯವರ ವಚನಕ್ಕೆ ಪ್ರಭಾವಿತರಾಗಿ ಹೀಗೆ ಹೇಳುತ್ತಾರೆ ವಚನವನ್ನು.

ಇಲ್ಲಿನ ಶರಣರಿಂದ ನಾನುಹೆ

ಹೇಗೆ ಹಾಳಾದೆ ಎಂದು.

ಅಯ್ಯಾ ನಿಮ್ಮ ಅನುಭಾವದಿಂದ ಎನ್ನ ತನು ಹಾಳಾಯಿತ್ತಯ್ಯ ಅಯ್ಯಾ ನಿಮ್ಮ ಅನುಭಾವದಿಂದ ಎನ್ನ ಮನ ಹಾಳಾಯಿತ್ತಯ್ಯ ಅಯ್ಯಾ ನಿಮ್ಮ ಅನುಭಾವದಿಂದ ಎನ್ನ ಕರ್ಮ ಹಾಳಾಯಿತ್ತಯ್ಯ ನಿಮ್ಮವರುಅಡಿಗಡಿಗೆ ಹೇಳಿ ಭಕ್ತಿಯೆಂಬ ಒಡವೆಯನು ದಿಟವ ಮಾಡಿ ತೋರಿದರು ಕಾಣಾ ಕೂಡಲಸಂಗಮದೇವ.

ಎರಡು ವಚನಗಳನ್ನು ಒಟ್ಟಿಗೆ ಓದುತ್ತಿದ್ದಂತೆ ಥಟ್ಟನೆ ಅಕ್ಕಮಹಾದೇವಿಯವರ ವಚನದ ಪ್ರಭಾವ ಗೊತ್ತಾಗಿಬಿಡುತ್ತದೆ. ಯಾವ ವಿವರಣೆಯೂ ಇಲ್ಲಿ ಅಗತ್ಯವೇ ಇಲ್ಲ. ಅಕ್ಕಮಹಾದೇವಿಯವರ ವಚನಗಳ ಶ್ರೇಷ್ಠತೆ ನಿಚ್ಚಳವಾಗಿ ಎದ್ದು ಕಾಣುತ್ತದೆ. ಬಹುಶಃ ಅನುಭಾವಗೋಷ್ಠಿ ನಡೆಯುತ್ತಿದ್ದ ಕಾಲಕ್ಕೆ ಅಕ್ಕಮಹಾದೇವಿಯವರ ವಚನದ ಅಪೂರ್ವ ಅಭಿವ್ಯಕ್ತಿ ಮತ್ತು ತನ್ಮಯವಾಗಿ ಹಾಡಿದ್ದು, ಅವರ ವೈರಾಗ್ಯ ಇವೆಲ್ಲವೂ ಸಭೆಯಲ್ಲಿದ್ದ ಬಸವಣ್ಣನವರ ಮೇಲಾಗಿ ತಕ್ಷಣ ಸ್ಫೂರ್ತಿಯಿಂದ ತಾವೂ ಈ ಒಂದು ವಚನ ಹೇಳಿದ್ದಾರೆ

ಈ ಉದಾಹರಣೆಯಿಂದ ಅಕ್ಕಮಹಾದೇವಿಯವರು ಅದೆಷ್ಟು ಶ್ರೇಷ್ಠ ವಚನಕಾರರಾಗಿದ್ದರು ಎಂಬುದು ವೇದ್ಯವಾಗುತ್ತದೆ. ಅಕ್ಕಮಹಾದೇವಿಯವರ ವಚನದ ಶ್ರೇಷ್ಠತೆ, ಅಭಿವ್ಯಕ್ತಿ ಪರಿಣಾಮಕಾರಿ ಶಕ್ತಿ, ಮೇಲಿನ ಬಸವಣ್ಣನವರ ವಚನಕ್ಕೆ ಇಲ್ಲವಾಗಿದೆ. ಅನುಭಾವಕ್ಕಾಗಿ ಪ್ರತಿಯೊಬ್ಬ ಸದ್‌ಭಕ್ತರು ತಮ್ಮ ತನು, ಮನ, ಪ್ರಾಣ ಅಥವಾ ಧನದ ಅಶುದ್ಧತೆಯನ್ನು ಒರೆ ಹಚ್ಚಿಕೊಳ್ಳುತ್ತಿದ್ದರು. ತಾವು ಪರಿಶುದ್ಧ ರಾಗುವುದು ಮಹಾತ್ಮರ ಸನ್ನಿಧಿಯಿಂದ ಅವರ ಅರಿವಿನಿಂದ, ಅನುಗ್ರಹದಿಂದ ಎಂದು ತಿಳಿದಿದ್ದರು. ಒಬ್ಬ ವ್ಯಕ್ತಿ ಪರಿಶುದ್ಧ ನಾಗುವುದು ಹೇಗೆ? ಶರಣರು ಅದನ್ನು ಈ ರೀತಿಯಾಗಿ ವಿವರಿಸಿದ್ದಾರೆ. ನಮ್ಮ ಎಲ್ಲ ಅಶುದ್ಧತೆಗಳು ದೇಹದಲ್ಲಿ ರುತ್ತವೆ. ಮನಸ್ಸಿನಲ್ಲಿರುತ್ತವೆ. ದೇಹ ಮನಸ್ಸು ಪ್ರಾಣಗಳನ್ನು ಪರಿಶುದ್ಧ ಮಾಡಿಕೊಂಡಾಗ ನಾವು ಪರಿಪೂರ್ಣರಾಗುತ್ತೇವೆ. ಈ ಪರಿಪೂರ್ಣತೆಯ ದಾರಿ ಅನುಭಾವಿಗಳ ಸಂಗ. ನನ್ನ ತನು, ಮನ, ಪ್ರಾಣಗಳು ಅನುಭಾವಿಗಳ ಸಂಗದಿಕದ ಶುದ್ಧವಾಯಿತ್ತು ಎಂದು ಅಕ್ಕಮಹಾದೇವಿಯವರು ಹಾಡಿಕೊಂಡಿದ್ದಾರೆ.

ಅಕ್ಕಮಹಾದೇವಿಯವರು ತಮ್ಮ ಐಕ್ಯಸ್ಥಲದ ನಿಲವಂ

ಪ್ರಭುದೇವರ ಕೇಳುವ ಪ್ರಸ್ತಾಪದ ವಚನ:

ತನುವನೆಲ್ಲವ ಜರೆದು ಮನವ ನಿಮ್ಮೊಳಗಿರಿಸಿ ಘನಸುಖದಲೋಲಾಡುವ ಪರಿಯ ತೋರೆಯ್ಯಾ. ಎನಗೆ ಭಾವವಿಲ್ಲದ ಬಯಲ ಸುಖವು ಭಾವಿಸಿದಡೆಂತಹುದು ಬಹುಮುಖರುಗಳಿಗೆ? ಕೇಳಯ್ಯಾ ಶ್ರೀಶೈಲ ಚೆನ್ನಮಲ್ಲಿಕಾರ್ಜುನದೇವ ನಾನಳಿದು ನೀನುಳಿವ ಪರಿಯ ತೋರಿಯ್ಯಾ ಪ್ರಭುವೆ.

ಲಿಂಗಾಂಗ ಸಂಗ ಸಮರಸ ಸುಖದಲ್ಲಿ ಮನ ವೇದ್ಯವಾಯಿತು. ನಿಮ್ಮ ಶರಣರ ಅನುಭಾವ ಸಂಗದಿಂದ ಎನ್ನ ತನು ಮನ ಪ್ರಾಣ ಪದಾರ್ಥವ ಗುರು ಲಿಂಗ ಜಂಗಮಕ್ಕಿತ್ತು ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಿಯಾದೆನು. ಆ ಮಹಾಪ್ರಸಾದದ ರೂಪು ರುಚಿ ತೃಪ್ತಿಯ ಇಷ್ಟ ಪ್ರಾಣ ಭಾವಲಿಂಗದಲ್ಲಿ ಸಾವಧಾನದಿಂದರ್ಪಿಸಿ ಮಹಾಘನ ಪ್ರಸಾದಿಯಾದೆನು. ಇಂತೀ ಸರ್ವಾಚಾರ ಸಂಪತ್ತು ಎನ್ನ ತನುಮನ ವೇದ್ಯವಾಯಿತು. ಇನ್ನೆಲ್ಲಿಯಯ್ಯಾ ಎನಗೆ ನಿಮ್ಮಲ್ಲಿ ನಿರವಯವು. ಇನ್ನೆಲ್ಲಿಯಯ್ಯಾ ನಿಮ್ಮಲ್ಲಿ ಕೂಡುವುದು. ಪರಮಸುಖ ಪರಿಣಾಮ ಮನ ಮೇರೆದುವ ನಾನು ನಿಜವನ್ನೈದುವ ಠಾವ ಹೇಳಾ ಚೆನ್ನಮಲ್ಲಿಕಾರ್ಜುನ ಪ್ರಭುವೆ. ಹೀಂಗೆಂದು ಮಹಾದೇವಿಯಕ್ಕನವರು ತನ್ನ ಲಿಂಗೈಕ್ಯದ ಸ್ಥಾನದ ಕಾಲಸ್ಥಿತಿಯೆಂಹುದೆಂದು ಬೆಸಗೊಳಲು, ಇದಕ್ಕೆ ಪ್ರಭುದೇವರು ತತ್ಕಾಲಸ್ಥಾನ ಸಮರಸಮಂ ನಿರೂಪಿಸಿದ ಪ್ರಸ್ತಾಪದ ವಚನ:

ನೀ ನಾನೆಂಬ ಉಭಯ ಸಂಗವಳಿದು ತಾನು ತಾನಾದ ತ್ರಿಕೂಟವೆಂಬ ಮಹಾಗಿರಿಯ ತುದಿಯ ಮೆಟ್ಟಿ ನೋಡಲು ಬಟ್ಟ ಬಯಲು ಕಾಣಬಹುದು ನೋಡಾ. ಆ ಬಯಲ ಬೆರಸುವಡೆ ತ್ರಿಕೂಟಗಿರಿಯೊಳಗೊಂದು ಕಾಣಬಾರದ ಕದಳಿಯುಂಟು ನೋಡಾ. ಆ ಕದಳಿಯ ಕಳೆದು ಒಳಹೊಕ್ಕು ನೋಡಲು, ತೊಳಗಿ ಬೆಳಗುವ ಜ್ಯೋತಿಯುಂಟು ಕೇಳಾ. ನಡೆಯಲ್ಲಿಗೆ ತಾಯೆ, ಗೋಗೇಶ್ವರ ಲಿಂಗದಲ್ಲಿ ಪರಮಪದವು ನಿನಗೆ ಸಯವು ನೋಡಾ ಮಹಾದೇವಿ.

ಹೀಗೆಂದು ಪ್ರಭುದೇವರು ನಿರೂಪಿಸಲು ಮಹಾದೇವಿಯಕ್ಕ ಕೇಳಿ ಹರುಷಿತೆಯಾಗಿ ಆ ಪ್ರಭುದೇವರು ಮುಖ್ಯವಾದ ಎಲ್ಲಾ ಪುರಾತನರನೂ ಬೀಳುಕೊಂಬ ಪ್ರಸ್ತಾಪದ ವಚನ :

ಒಡಲಿಲ್ಲದ ನುಡಿಯಿಲ್ಲದ ನಲ್ಲನನು ಒಡಗೂಡಿ ಸುಖಿಯಾದೆನು ಕೇಳಯ್ಯಾ.

ಭಾಷೆಗೆ ಪೈಸರವಿಲ್ಲದೋಸರಿಸೆನನ್ಯಕ್ಕೆ. ಆಸೆಮಾಡೆನು ಮತ್ತೆ ಭಿನ್ನ ಸುಖಕ್ಕೆ.

ನಿಮ್ಮ ಶರಣರ ಪ್ರಸಾದಕ್ಕಲ್ಲದೆ ಮನವೆಳಸೆನು.

ಕಡೆಗಣಿಸಿ ಪೂರ್ವೈಸಿನಿಂದು ಆರಳಿದು ಮೂರಗಿ ಮೂರಳಿದು ಎರಡಾಗಿ ಎರಡಳಿದು ಒಂದಾಗಿ ನಿಂದೆನಲ್ಲಾ.

ಶರಣರಿಗೆ ಶರಣಾರ್ಥಿ. ಪ್ರಭುವಿನಿಂದ ಕೃತಕೃತ್ಯಳಾದೆನಲ್ಲಾ.

ಮರೆಯಲಾಗದು ನಿಮ್ಮ ಶಿಶುವೆಂದು ಎನ್ನುವನು. ಚೆನ್ನಮಲ್ಲಿಕಾರ್ಜುನನ ಬೆರಸೆಂದು ಹರಸುತ್ತಿಹುದು.

ಇನ್ನು ಶರಣಶರಣೆಯರ ಸಂಕುಲದಲ್ಲಿ ಮಹಾದೇವಿಯ ಬಗೆಗೆ ಕೆಲವರಲ್ಲಿ ಗೌರವ ಹೆಚ್ಚುತ್ತ ಹೋಗಿದ್ದರೂ ಕೆಲವರಲ್ಲಿ ಅನುಮಾನ ಇರುವುದನ್ನು ಮಾತು, ನೋಟಗಳಿಂದ ಮಹಾದೇವಿ ಗುರುತಿಸಿದ್ದರು. ನಿನ್ನೆಮೊನ್ನೆ ಬಂದವಳು ಮುಖ್ಯಸ್ಥಾನ, ಹೊಗಳಿಕೆಗೆ ಪಾತ್ರವಾಗುತ್ತಿರುವುದು; ಅಲ್ಲಮಪ್ರಭು-ಚೆನ್ನಬಸವಣ್ಣ, ಸಿದ್ಧರಾಮೇಶ್ವರು, ಸೇರಿದಂತೆ ಬಹುಪಾಲು ಪುರುಷರು ಮಹಾದೇವಿಯನ್ನು ಹೊಗಳುತ್ತಾ, ಎಂದಿನಿಂದಲೂ ಅಲ್ಲಿರುವ ತಮ್ಮನ್ನು ಗಮನಿಸದೇ ಇದ್ದಾರೆನ್ನುವುದು ಅಸೂಯೆ ಹುಟ್ಟಲು ಕಾರಣವಾಗಿ. ಗಂಡು ಮೇಲರಿಮೆಯ ಸಮಾಜದಲ್ಲಿ .ಹೆಣ್ಣುತನ ಹುಟ್ಟಿಸುವ ಕೀಳರಿಮೆ, ಸ್ಪರ್ಧೆ, ವಿನಾಕಾರಣ ದ್ವೇಷಗಳೂ ಕೆಲವರಲ್ಲಿ ತಲೆದೋರಿತು

ಜನಾದರ, ಜನಪ್ರಿಯತೆಗಳ ನಡುವೆ ಮಹಾದೇವಿ ಏಕಾಂಗಿಯಾಗುತ್ತ ನಡೆದಿದ್ದರು. ಶರಣಶರಣೆಯರ ಬಳಿಗೆ ತಾನೇ ಹೋಗಿ ಮಾತನಾಡಿಸಿಕೊಂಡು ಬಂದರೂ ಆಪ್ತವಾಗುವಂಥ ಸಂಗ ಸಿಗಲಿಲ್ಲ. ಮಹಾದೇವಿಯ ಮನ ಒಂದು ಆಪ್ತ ಹೆಣ್ಣುಜೀವಕ್ಕೆ ಹಂಬಲಿಸುವುದು ಸುಳ್ಳಲ್ಲ. ಅಲ್ಲಮಯ್ಯರು ಗುರುಸಮಾನರಾಗಿ ಅತಿಗೌರವ ಹುಟ್ಟಿಸುವವರಾಗಿದ್ದರು. ಚೆನ್ನಬಸವಣ್ಣನನ್ನು ನೋಡಿದರೆ ಸೋದರಭಾವ ಮೂಡುವುದು. ಅವನಿಗೂ ಅಕ್ಕನ ಮೇಲೆ ಬಹಳ ಪ್ರೀತ್ಯಾದರ. ಆದರೆ ಅವನ ಕೆಲಸದ ವ್ಯಾಪ್ತಿ, ಬಳಗ ದೊಡ್ಡದು. ವಿರಾಮವೆಂಬ ಪದ ಅವರಿಂದ ದೂರ. ಎಂದೇ ಅವರಿಬ್ಬರೂ ಒಬ್ಬರನ್ನೊಬ್ಬರು ಗಮನಿಸಿದರೇ ಹೊರತು ಮಾತಿಗೆ ಕೂರಲು ಆಗಲೇ, ಅನುಭವ ಮಂಟಪದ ಅಲ್ಲಿನ ಇತರ ಶರಣರ ವರ್ತನೆಯಿಂದ ಮನನೋಂದಿದ್ದರು, ಸಾಕು ಸಾಕು ಈ ಶರಣರ ಸಾಹವಾಸ ಅನ್ನುವ ರೀತಿಯಲ್ಲಿ ಇತ್ತು, ಅಲ್ಲಿ ಅವುಗಳನ್ನು ಸಹಿಸಿಕೊಂಡಿದ್ದರು. ಅಲ್ಲಿ ನೀಲಾಂಬಿಕೆ, ಗಂಗಾಂಬಿಕೆ ಅಕ್ಕನಾಗಮ್ಮ ಇತರೆ ಶಿವ ಶರಣೆಯರು ಅಷ್ಟಾಗಿ ಅಕ್ಕಮಹಾದೇವಿಯವರ ಜ್ಞಾನ ಅವರಿಗೆ ತಿಳಿಯುವಷ್ಟು ಪರಿಜ್ಞಾನವೆ ಇರಲ್ಲಿಲ್ಲ. ಸಾವಿರಾರು ವಚನಗಳಲ್ಲಿ ಗಂಗಾಂಬಿಕೆ, ನೀಲಾಂಬಿಕೆ ಅಕ್ಕನಾಗಮ್ಮ ಅಕ್ಕಮಹಾದೇವಿಯವರ ಬಗ್ಗೆ ಒಂದು ಪ್ರೀತಿಯ ವಚನವಿಲ್ಲ, ಗೌರವದ ವಚನವು ಇಲ್ಲ, ಅಕ್ಕಮಹಾದೇವಿಯವರ ಜ್ಞಾನದ ಬಗ್ಗೆ ತಿಳಿದವರು **6/7** ಜನರು ಮಾತ್ರ. ಬಸವಣ್ಣ ಭಕ್ತಿಯಾವರೀತಿಯಲ್ಲಿ ಇತ್ತು ಅಂದರೆ ಅಲ್ಲಿ ಧಾಸೊಹ ಯಾವರೀತಿಯಲ್ಲಿ ಇತ್ತು, ಇತರ ಶರಣರು ಹೇಗೆ ವರ್ತಿಸುತ್ತಿದ್ದರು. ಎನ್ನುವದಕ್ಕೆ ಒಂದು ವಚನ ಸಾಕ್ಷಿ ಇದೆ.

ಬಸವನ ಭಕ್ತಿ ಕೊಟ್ಟಣದಮನೆ. ಸಿರಿಯಾಳನ ಭಕ್ತಿ ಕಸಬುಗೇರಿ.

ಸಿಂಧುಬಲ್ಲಾಳನ ಭಕ್ತಿ ಪರದಾರದ್ರೋಹ.

ಉಳಿದಾದ ಅಟಮಟ ಉದಾಸೀನ ದಾಸೋಹವ ಮಾಡುವವರ

ದೈನ್ಯವೆಂಬ ಭೂತ ಸೋಂಕಿತು. ಮಣ್ಣಿನ ಮನೆಯ ಕಟ್ಟಿ

ಮಾಯಾ ಮೋಹಿನಿಯೆಂಬ ಮಹೇಂದ್ರಜಾಲದೊಳಗಾಗಿ

ಮಾಡುವ ಮಾಟ. ಭಕ್ತನಲ್ಲಿ ಉಂಡು ಉದ್ದಂಡವೃತ್ತಿಯಲ್ಲಿ ನಡೆವವರು ಶಿವನಲ್ಲ.

ಇವರು ದೇವಲೋಕ ಮತ್ರ್ಯಲೋಕಕ್ಕೆ ಹೊರಗು. ಶ್ರೀಗಿರಿ ಚೆನ್ನಮಲ್ಲಿಕಾರ್ಜುನಾ, ನನ್ನ ಭಕ್ತಿ ನಿನ್ನೊಳಗೈಕ್ಯವಾಯಿತ್ತಾಗಿ

ನಿರ್ವಯಲಾದ ಕಾಣಾ

ಬಸವಣ್ಣನವರ ಭಕ್ತಿ ಏನಾಗಿದೆ ಎಂದರೆ ಧವಸ ಧಾನ್ಯ ಕುಟ್ಟುವ ಒಂದು ಗಿರಿಣಿಮನೆಯಾಗಿದೆ. ಅಲ್ಲಿ ಭಕ್ತಿ ಜ್ಞಾನಕ್ಕಿಂತ ಹೆಚ್ಚಾಗಿ ಉಣ್ಣುವ, ಅಟ್ಟುವ, ನೀರು ತರುವ, ಎಲೆ ತರುವ, ಪಾತ್ರೆ ತೊಳೆಯುವ ಸ್ವಚ್ಛ ಮಾಡುವ ಕಾರವೆ ಹೆಚ್ಚಾಗಿದೆ. ಸಿರಿಯಾಳನ ಭಕ್ತಿಯಾದರೋ ಅದು ಕಟುಕರ ಮನೆಯಾಗಿದೆ. ಮಗನನ್ನೆ ಕಡಿದು ಉಣಬಡಿಸುವುದು ಎಂದರೆ ಏನು? ಮನುಷ್ಯತ್ವ ಇಲ್ಲದ ಭಕ್ತಿ. ಸಿಂಧು ಬಲ್ಲಾಳನ ಭಕ್ತಿ ಪರದಾರ ದ್ರೋಹ. ಸಿಂಧು ಬಲ್ಲಾಳನು ಮಹಾರಾಜನಂತೆ. ಅವನ ಭಕ್ತಿ ಸತಿಯರಿಗೆ ದ್ರೋಹ ಮಾಡುವ ಭಕ್ತಿ. ಪತ್ನಿಯನ್ನು ಕೊಡುವುದು ಎಂದರೇನು? ಹಾದರವೂ ಭಕ್ತಿಯೆ? ಉಳಿದಾದ ಅಟಮಟ ಉದಾಸೀನ ದಾಸೋಹವ ಮಾಡುವವರ ದೈನ್ಯವೆಂಬ ಭೂತ ಸೋಂಕಿತು. ಇನ್ನು ದಾಸೋಹ ಮಾಡುವವರಲ್ಲಿ ಎರಡು ವಿಧ. ಕೆಲವರು ಉದಾಸೀನದಿಂದ ಮಾಡಬೇಕಲ್ಲ ಎಂದು ದಾಸೋಹ ಮಾಡುತ್ತಾರೆ. ಮತ್ತೆ ಕೆಲವರಿಗೆ ದೀನಭಾವದ ದೆವ್ವ ಮೆಟ್ಟಿಕೊಂಡಿದೆ. ಇದೆಲ್ಲ ಭಕ್ತಿಯಿಂದ ಹೊರಗು. ಭಕ್ತಿಯೆಂದರೆ ಒಂದು ಗಾಂಭೀರ ಬೇಕು. ಘನತೆ ಬೇಕು. ಇದು ಭಕ್ತಿಮಾಡುವವರಿಗೆ ತಿಳಿಸಿದ ವಿಚಾರ. ಈಗ ಇಂತಹ ಭಕ್ತಿ ಸ್ವೀಕರಿಸಲು ಬರುವ ಜಂಗಮ ದೇವರಿಗೆ ಕೂಡ ಒಂದು ಸರಿಯಾದ ವ್ಯಕ್ತಿತ್ವ ಬೇಕು. ದೇವರಾದರೇನು? ಅವನೂ ಒಂದು ಗೆರೆಯ ಒಳಗೆ ನಡತೆ ಇರಿಸಿಕೊಂಡಿರಬೇಕು. ಮಣ್ಣಿನ ಮನೆಯಕಟ್ಟಿ ಮಾಯಾಮೋಹಿನಿ ಎಂಬ ಮಹೇಂದ್ರ ಜಾಲದೊಳಗಾಗಿ ಮಾಡುವ ಮಾಟ. ಭಕ್ತನಲ್ಲಿ ಉಂಡು ಉದ್ದಂಡವೃತ್ತಿಯಲ್ಲಿ ನಡೆವವರು ಶಿವನಲ್ಲ. ಜಂಗಮ ಎನಿಸಿಕೊಂಡವರು ಇಂದ್ರಜಾಲ

ಮಾಡುವವವರು, ಮಹೇಂದ್ರಜಾಲ ಮಾಡುವವವರು ಮಾಡುವಹಾಗೆ ವರ್ತನೆ ಮಡುವುದಲ್ಲ. ಭಕ್ತರ ಮನೆಗೆ ಬಂದರೆ ನಯವಿನಯ ಗಂಭೀರ ಬೇಕು. ಹೇಗೆಂದರೆ ಹಾಗೆ ಗುರುಗಳಾದವರು ವರ್ತನೆ ಮಾಡಬಾರದು. ಭಕ್ತರನ್ನು ಕಸದಂತೆ ನಡೆಸಿಕೊಳ್ಳುವುದಾಗಲಿ, ಭಕ್ತರು ಮಾತೆ ಆಡದಂತೆ ಭಯಂಕರವಾಗಿ ವರ್ತಿಸುವುದಾಗಲಿ ಕೂಡದು. ಗುರುವಾದರೇನು ಸ್ವೇಚ್ಛೆಯಾಗಿ ನಡೆದುಕೊಳ್ಳಕೂಡದು. ಹಾಗೇನಾದರೂ ವರ್ತಿಸಿದರೆ ಅವರು ಗುರುಗಳಲ್ಲ. ಜಂಗಮರಲ್ಲ. ಅಂತಹವರಿಗೆ ಭಕ್ತಿಮಾಡುವವರು ಭಕ್ತರಲ್ಲ. ಇವರು ಮರ್ತ್ಯಲೋಕಕ್ಕೆ ಸಲ್ಲುವುದಿಲ್ಲ. ಚೆನ್ನಮಲ್ಲಿಕಾರ್ಜುನನೆ ಇನ್ನು ನಾನು ಬಯಲಾಗುತ್ತೇನೆ. ಈ ಭಕ್ತರ, ಗುರುಗಳ ವಿಚಿತ್ರ ಪ್ರಪಂಚ ಸಾಕು. ಶರಣರ, ಮಹಾಮನೆಯ ಬಗೆಗೆ ಹಿರಿದಾದ ಕಲ್ಪನೆ ಇರಿಸಿಕೊಂಡಿದ್ದರು. ಅವೆಲ್ಲ ಕನಸಿನ ಗೋಪುರದಂತೆ . ಕಲ್ಪನೆಯಾಗಿ ಹೋಯಿತು. ಇಲ್ಲಿಂದ ಶ್ರೀ ಶೈಲದ ಕಡೆಗೆ ಮಹಾದೇವಿಯವರ ಪ್ರಾಯಣ

"ಇನ್ನು ನೀವು ಇಲ್ಲಿ ನಿಲ್ಲಿರಿ. ನಿಮ್ಮೆಲ್ಲರಿಗೂ ಶರಣು ಶರಣಾರ್ಥಿ" ಎಂದು ಕೈಗಳನ್ನೆತ್ತಿ ಜೋಡಿಸುತ್ತಿರುವಂತೆಯೇ ಮಹಾದೇವಿಯ ಮೈಯಲ್ಲಿ ಮಿಂಚಿನ ಶಕ್ತಿ ತಾರವಾದಂತಾಯಿತು. ಗಂಭೀರವಾದ ಧ್ವನಿಯಿಂದ ಹೇಳತೊಡಗಿದರು:

**(ಉಡುತಡಿಯಿಂದ ಕಲ್ಯಾಣದವರೆಗೆ ಅಸಂಖ್ಯಾತ ಶರಣರ ಪರಿಚಯದ ನೆನಪು)**

ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ; ಬೆಳೆದನು ಅಸಂಖ್ಯಾತರ ಕರುಣದೊಳಗೆ. ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ, ಪರಮಾರ್ಥವೆಂಬ ಸಕ್ಕರೆಯನ್ನಿಕ್ಕಿದರು ನೋಡಾ! ಇಂತಪ್ಪ ತ್ರಿವಿಧಾಮೃತವನು ದಣಿಯಲೆರೆದು ಸಲಹಿದರನ್ನ. ವಿವಾಹ ಮಾಡಿದಿರಿ, ಸಯವಪ್ಪ ಗಂಡಂಗೆ ಕೊಟ್ಟಿರಿ. ಕೊಟ್ಟ ಮನೆಗೆ ಕಳುಹಲೆಂದು ಅಸಂಖ್ಯಾತರೆಲ್ಲರೂ ನೆರೆದು ಬಂದಿರಿ. ಚನ್ನಮಲ್ಲಿಕಾರ್ಜುನನ ಕೈವಿಡಿದು ನಿಮ್ಮ ತಲೆಗೆ ಹೂವ ತಹೆನಲ್ಲದೆ ಹುಲ್ಲ ತಾರೆನವಧಾರಿಸಿ. ನಿಮ್ಮಡಿಗಳೆಲ್ಲರು ಮರಳಿ ಬಿಜಯಂಗೆಯ್ವುದು; ಶರಣು ಶರಣಾರ್ಥಿ. ಗಂಭೀರವಾದ ಅಮೃತಮೇಘದ ಮೊಳಗಿನಂತೆ ಒಂದೊಂದೇ ನುಡಿ, ಮಹಾದೇವಿಯ ತಃಕರಣದಿಂದ ಉಕ್ಕಿಬರುತ್ತಿತ್ತು. "ಶರಣು ಶರಣಾರ್ಥಿ" ಎಂದು ಮತ್ತೊಮ್ಮೆ ಹೇಳುತ್ತಾ ವೇಗವೇಗವಾಗಿ ನಡೆಯತೊಡಗಿದರು, ಹಿಂತಿರುಗಿ ನೋಡದಂತೆ. ನಡೆದು ಸವೆದ ನಿಚ್ಚಳ ದಾರಿಗಳಲ್ಲಿ ನಡೆಯುವುದಕ್ಕಿಂತ ತಿಟ್ಟು, ಬೆಟ್ಟ, ಕೊರಕಲು ಹತ್ತಿಳಿದು ಹೋಗುವ ಕಾಲುದಾರಿಯೇ ಮಹಾದೇವಿಗೆ ಅಪ್ಯಾಯಮಾನ. ಸವೆದ ದಾರಿಗಳಲ್ಲಿ ಎಲ್ಲ ತರಹದ ಜನರೂ ಎದುರು ಹಾಯುವರು. ಒಂದಷ್ಟು ಪ್ರಶ್ನೆ, ಒಂದಷ್ಟು ಕುಹಕ, ಒಂದಷ್ಟು ಕಾಮುಕ ದೃಷ್ಟಿ, ಒಂದಷ್ಟು ಕಕ್ಕುಲಾತಿ. ಹೊಸ ದಾರಿ ಹಿಡಿಯುವ ಏಕಾಂಗಿ ನಡಿಗೆಯಲ್ಲಿ ಹಕ್ಕಿ, ಪ್ರಾಣಿ, ಗಿಡಮರ, ಮುಳ್ಳು, ಬಂಡೆಗಳೆಲ್ಲ ಧೈರ್ಯ ತುಂಬುವವು. ಹೊತ್ತೊತ್ತಿಗೆ ಹೊಟ್ಟೆಗೆ ಸಿಗದೆ ಕೆಲವೊಮ್ಮೆ ಕಷ್ಟವಾದರೂ ನಿರಾಳದ ಎದುರು ಹಸಿವೆ ಕರಗಿಹೋಗುವುದು ಇದು ಹುಡುಕಾಟವೇ ಆದರೂ, ಒಬ್ಬ ಲೌಕಿಕನಿಗಾಗಿ, ಲೌಕಿಕರನ್ನು ಕೇಳುತ್ತ ತಿರುಗುವ ಭ್ರಮಿತ ಮಹಿಳೆಯ ಚಿತ್ರಣವಾಗಿದೆ. ಅಕ್ಕಮಹಾದೇವಿಯವರು ಪರಮಾತ್ಮ ಎಲ್ಲಿದ್ದಾನೆಂದು ಕಂಡ ಕಂಡವರನ್ನು ಕೇಳಲಿಲ್ಲ. ನಿಸರ್ಗದ ಪಶು ಪಕ್ಷಿಗಳನ್ನು ಮಾತ್ರ ಕೇಳಿದರು ತನ್ನ ಎಚ್ಚರದಲ್ಲಿ ಇದ್ದರು ಎಂಬುದನ್ನು ಗಮನಿಸಬೇಕಾಗುತ್ತದೆ. ನೀವು ಕಾಣಿರೆ ನೀವು ಕಾಣಿರೆ ಗಿರಿ ಗಹ್ವರದೊಳಗಾಡುವ ನವಿಲುಗಳಿರಾ ನೀವು ಕಾಣಿರೆ ನೀವು ಕಾಣಿರೆ ಚೆನ್ನಮಲ್ಲಿಕಾರ್ಜುನನೆಲ್ಲಿದ್ದಹನೆಂದು ಹೇಳಿರೆ ಇಲ್ಲಿ ಉದಾಹರಿಸಿದ ಎಲ್ಲ ಪಕ್ಷಿಗಳು ಮತ್ತು ಅವುಗಳ ಚಟುವಟಿಕೆಗಳು ಅಕ್ಕಮಹಾದೇವಿಯವರ ಆರ್ತತೆಯನ್ನು ಧ್ವನಿಸುತ್ತವೆ. ಅಕ್ಕನಂತೆ ಅವೂ ಸಹಿತ ಪರಮಾತ್ಮನಿಗಾಗಿ ಮೊರೆಯಿಡುತ್ತವೆ. ಅಲ್ಲದೆ ಅಕ್ಕಮಹಾದೇವಿಯವರು ಅವುಗಳೊಂದಿಗೆ ಮಾತಾಡುತ್ತ ಅವುಗಳೊಂದಿಗೆ ಆತ್ಮೀಯತೆಯಿಂದ ಬೆಸೆದುಕೊಳ್ಳುತ್ತರೆ.

**(ಉಡುತಡಿಯಿಂದ, ಕಲ್ಯಾಣದ ಮಧ್ಯೆ ಅಕ್ಕನ ಸಮಯವೆಲ್ಲ ಲೋಕದ ಕಂಟಕಗಳನ್ನು ನಿವಾರಿಸಿಕೊಳ್ಳುವದರಲ್ಲಿಯೇ ಕಳೆಯಿತು.)**

"ಈ ವಚನ ಸೂಚಿಸುವ ಸಂದರ್ಭ ಇನ್ನೂ ಒಂದು ರೀತಿಯಲ್ಲಿ ಅದರ ಅರ್ಥವನ್ನು ಭಾವ ತೀವ್ರತೆಯನ್ನು ಬಹಳಷ್ಟು ಹೆಚ್ಚಿಸುತ್ತದೆ. ನಿರ್ಜನವಾದ ಅರಣ್ಯ, ಸುತ್ತಲೂ ಹಬ್ಬಿರುವ ದರಿ ಕಂದರ, ನದಿ, ಪರ್ವತ, ಶಿಖರಗಳು ಅವುಗಳ ನಡುವೆ ಒಂಟಿಯಾಗಿ ಚೆನ್ನಮಲ್ಲಿಕಾರ್ಜುನನನ್ನು ಹುಡುಕುತ್ತ ಆತ

ಅಲ್ಲೇ ಇರುವನೆಂಬ ನಂಬಿಕೆಯಿಂದ ತಿರುಗಾಡುತ್ತಿರುವ ಅಕ್ಕಮಹಾದೇವಿಯವರು. ಅಕ್ಕ ಆ ಪರಿಸರಕ್ಕೆ ಹೊಸಬರು. ಅಲ್ಲಿಯೇ ಹುಟ್ಟಿ ಬೆಳೆದು ಆಡಿಕೊಂಡಿರುವ ಗಿಳಿ ಹಂಸೆ, ಕೋಗಿಲೆ ದುಂಬಿ, ನವಿಲುಗಳು, ಅಲ್ಲಿರುವ ಚೆನ್ನಮಲ್ಲಿಕಾರ್ಜುನನನ್ನು ಕಂಡಿರಬೇಕು. ಅಂತೆಯೇ ತಪ್ಪಿಸಿಕೊಂಡಿರುವ ಗಂಡನನ್ನು ಹುಡುಕುವವರಂತೆ ಆಕ್ಕ ನೀವು ಕಾಣಿರೆ, ನೀವು ಕಾಣಿರೆ ಎಂದು ಕೇಳುತ್ತಿದ್ದಾರೆ.

ಅಕ್ಕ ಚೆನ್ನಮಲ್ಲಿಕಾರ್ಜುನನನ್ನು ಸೇರುವ ನಿಶ್ಚಿತ ಗುರಿಯಿಂದ ಶ್ರೀಶೈಲ ಪರ್ವತದ ಕಡೆಗೆ ಹೆಜ್ಜೆ ಹಾಕಿದರು. ನಿರ್ದಿಷ್ಟವಾಗಿ ಎಲ್ಲಿಗೆ ಹೋಗಬೇಕೆಂಬುದರ ಬಗ್ಗೆ ಪ್ರಭುದೇವರ ಮಾರ್ಗದರ್ಶಕ ಸೂಚನೆ ಇದೆ.

ತನ್ನ ಆರಾಧ್ಯ ದೇವರನ್ನು ಸ್ಮರಿಸುತ್ತ ಸಾಗಿರುವ ಮಹಾದೇವಿ ಅಲ್ಲಲ್ಲಿ ತರು-ಮರ, ಗಿರಿ-ಸರೋವರಗಳಲ್ಲಿ ಕಾಣುವ ನಿಸರ್ಗವನ್ನು ಕಂಡು ಹಾಡಿದರು 'ಅಳಿ ಸಂಕುಳವೆ ಮಾಮವರವೆ ಬೆಳುದಿಂಗಳೆ ಕೋಗಿಲೆಯೆ ನಿಮ್ಮನೆಲ್ಲರನೂ ಒಂದು ಬೇಡುವೆನು. ಎನ್ನೊಡೆಯ ಚೆನ್ನಮಲ್ಲಿಕಾರ್ಜುನದೇವನ ಕಂಡರೆ ಕರೆದು ತೋರಿರೆ! ಚಿಲಿಮಿಲಿ ಎಂದು ಓದುವ ಗಿಳಿಗಳಿರಾ ನೀವು ಕಾಣಿರೆ? ನೀವು ಕಾಣಿರೆ? ಸ್ವರವೆತ್ತಿ ಪಾಡುವ ಕೋಗಿಲೆಗಳಿರಾ ನೀವು ಕಾಣಿರೆ? ನೀವು ಕಾಣಿರೆ? ಎರಗಿ ಬಂದಾಡುವ ತುಂಬಿಗಳಿರಾ ನೀವು ಕಾಣಿರೆ? ನೀವು ಕಾಣಿರೆ? ಗಿರಿಗಹ್ವರದೊಳಗಾಡುವ ನವಿಲುಗಳಿರಾ, ನೀವು ಕಾಣಿರೆ? ನೀವು ಕಾಣಿರೆ? ಚೆನ್ನಮಲ್ಲಿಕಾರ್ಜುನನೆಲ್ಲಿಹನೆಂದು ಹೇಳಿರೆ!' ಎಂದು ತನ್ನ ಸುಮಧುರವಾದ ಧ್ವನಿಯಿಂದ ಹಾಡುತ್ತ ಚೆನ್ನಮಲ್ಲಿಕಾರ್ಜುನನನ್ನೇ ಅರಸುತ್ತಾ ದಾರಿ ಸಾಗಿಸಿದ್ದರು. ಮಹಾದೇವಿಯವರು ಇಂಪಾದ ಧ್ವನಿಯನ್ನು ಕೇಳಿ ನಿಸರ್ಗದಲ್ಲಿಯ ಎಲ್ಲ ಪ್ರಾಣಿಗಳು ತಮ್ಮ ತಮ್ಮ ಭಾಷೆಯಲ್ಲಿ ಉಲಿಯುತ್ತ ಕೂಗುತ್ತ, ಅಕ್ಕನ ಜೊತೆಗೂಡಿ ಕುಣಿದು ಕುಪ್ಪಳಿಸುತ್ತಿದ್ದವೇನೋ! ಎಂದೆನಿಸುತ್ತಿತ್ತು. ನಿಸರ್ಗದ ನೆರಳಿನಲ್ಲಿಯೇ ದೇವರಧ್ಯಾನದಲ್ಲಿಯೇ ನಡೆಯುತ್ತಿದ್ದ ಮಹಾದೇವಿಗೆ ದಾರಿ ಸಾಗಿದುದು ಅರಿವಾಗುತ್ತಿರಲಿಲ್ಲ.

ಶ್ರೀಗಿರಿಯತ್ತ ನಡೆಯುತ್ತಿದ್ದ ಮಹಾದೇವಿಯ ಮನಸ್ಸಿನ ಮುಂದೆ, ತನ್ನ ಜೀವನದ ಘಟನೆಗಳೆಲ್ಲಾ ಸುರುಳಿ ಬಿಚ್ಚಿದ ಘಟನೆಗಳೆಲ್ಲಾ ಸುಳಿ ಬಿಚ್ಚಿದಂತೆ ಎದುರು ನಿಲ್ಲುತ್ತಿದ್ದುವು. ದೂರ ಕುಳಿತು ನೋಡುವ ಪ್ರೇಕ್ಷಕನಂತೆ ಅವೆಲ್ಲವನ್ನೂ ತಾನು ಬೇರೆ ನಿಂತು ನೋಡುತ್ತಾ ಸೃಷ್ಟಿಕರ್ತನ ಲೀಲಾವಿಲಾಸಕ್ಕೆ ಬೆರಗಾಗುತ್ತಿದ್ದರು.

'ಚನ್ನಮಲ್ಲಿಕಾರ್ಜುನನಿಗೂ ಎನಗೂ ಎತ್ತಣಿಂದ ಎತ್ತ ಸಂಬಂಧ! ಶ್ರೀ ಗುರು ವಿನ ಮೂಲಕ ಕರಸ್ಥಲಕ್ಕೆ ಬಂದ. ಶರಣರ ಅನುಭಾವದ ಸಂಗದಿಂದ ಮನಸ್ಥಲವನ್ನು ಪ್ರವೇಶಿಸಿದ. ಹೃದಯವನ್ನು ವ್ಯಾಪಿಸಿದ; ನನ್ನನ್ನೇ ಇಲ್ಲದಂತೆ ಮಾಡಿದ' ಎಂದು ಕೊಂಡರು.

ಈ ಐಕ್ಯಭಾವದ ನಿಲುವಿನಲ್ಲಿಯೇ ಮಹಾದೇವಿಯ ಪ್ರಯಾಣ ಸಾಗುತ್ತಿತ್ತು. ದೇಹದ ಪರಿಮಿತವಾದ ವಲಯವನ್ನು ಮೀರಿ ನಿಂತು, ಅಪರಿಮಿತವಾದ ಶಕ್ತಿಯನ್ನು ಪಡೆದ ಮಹಾದೇವಿಗೆ, ಪ್ರಕೃತಿಯೇ ಕೈಂಕರ್ಯವನ್ನು ಕೈಕೊಂಡು, ಅದಾವ ರೂಪದಿಂದಲೂ ಬಂದು ಅಕ್ಕಮಹಾದೇವಿಯವರ ಅವಶ್ಯಕತೆಗಳನ್ನು ಪೂರ್ಣಗೊಳಿಸಿಕೊಡುತ್ತಿತ್ತು. ಕೆಲವು ದಿನಗಳು ಕಳೆಯುವುದರೊಳಗಾಗಿ ಕನ್ನಡ ಭಾಷೆಯನ್ನು ದಾಟಿ ತಾನು ಮುಂದೆ ನಡೆಯುತ್ತಿರುವುದು ಮಹಾದೇವಿಅಕ್ಕ, ಅನುಭವಕ್ಕೆ ಬರತೊಡಗಿತು. ಬರುಬರುತ್ತಾ ಕನ್ನಡ ಭಾಷೆಯ ಬಳಕೆ ಕಡಿಮೆಯಾಗುತ್ತಿತ್ತು. ತನಗೆ ಅಷ್ಟಾಗಿ ತಿಳಿಯದ ಭಾಷೆಯೊಡನೆ ವ್ಯವಹರಿಸಬೇಕಾಯಿತು. ಅಕ್ಕಮಹಾದೇವಿಗೆ ಭಾಷೆಯ ತೊಡಕಿನಿಂದ ವಿಶೇಷ ತೊಂದರೆಯೇನೂ ಆಗಲಿಲ. ಎಲ ವನ್ನೂ ಮೀರಿ ನಿಂತ ಅಕ್ಕಮಹಾದೇವಿಯ ನಿಲವು, ಭಾವವನ್ನು ಭಾಷೆಯನ್ನಾಗಿ ಪರಿವರ್ತಿಸುತ್ತಿತ್ತು. ಅವರ ದಿವ್ಯ ವ್ಯಕ್ತಿತ್ವದಿಂದ ಆಕರ್ಷಿತರಾದ ಜನ ತಾವಾಗಿ ಬಂದು ಅಕ್ಕಮಹಾದೇವಿಯವರ ಸೇವೆಗೆ ನಿಲ್ಲುತ್ತಿದ್ದರು. ಉಟ್ಟ ತೆಳು ಕಾವಿಯ ಬಣ್ಣದ ತುಂಡು ಬಟ್ಟೆ ಅವರ ವೈರಾಗ್ಯದ ಕಾಂತಿಯ ಕಿಡಿಯನ್ನು ರಕ್ಷಿಸುವಂತೆ ಕಾಣುತ್ತಿತ್ತು. ಅದರ ಮೇಲೆ ವಿಶಾಲವಾಗಿ ಹರಡಿದ ತಲೆಯ ಕೂದಲು ಬೆನ್ನು ಮೇಲೆಲ್ಲಾ ವ್ಯಾಪಿಸಿ ದೇಹವನ್ನೇ ಮುಚ್ಚಿರುವಂತೆ ತೋರುತ್ತಿದ್ದವು. ಮುಂಗೈಯಲ್ಲಿ ರುದ್ರಾಕ್ಷಿಯ ಕಂಕಣ, ಕೊರಳಲ್ಲಿ ರುದ್ರಾಕ್ಷಿಯ ಸರ, ಸಂಸಾರದ

ವ್ಯಾಮೋಹವನ್ನು ಸುಟ್ಟು ಬೊಟ್ಟಿಟ್ಟ ಪವಿತ್ರತೆಯ ಸಂಕೇತವೆಂಬಂತೆ ಹಣೆಯ ಮೇಲೆ ತ್ರಿಪುಂಡ್ರಧಾರಣೆ. ಎಲ್ಲಕ್ಕಿಂತ ಮಿಗಿಲಾಗಿ ಚನ್ನಮಲ್ಲಿಕಾರ್ಜುನನ ಜ್ಯೋತಿರ್ಲಿಂಗದ ಕಾಂತಿಯನ್ನೇ ಅಡಕಗೊಳಿಸಿಕೊಂಡಂತೆ ತೇಜಃಪುಂಜವಾಗಿ ಹೊಳೆಯುತ್ತಿರುವ ಕಣ್ಣುಗಳು ಎಂತಹವರನ್ನೂ ಮುಗ್ಧರನ್ನಾಗಿ ಮಾಡುತ್ತಿದ್ದುವು. ಅಕ್ಕಮಹಾದೇವಿಯ ಸೇವೆಯನ್ನು ಮಾಡುವ ಭಾಗ್ಯವನ್ನು ಹಂಚಿಕೊಳ್ಳುವುದಕ್ಕೆ ಅಲ್ಲಿನ ಭಕ್ತಜನರಲ್ಲಿ, ಸಂತೋಷದ ಸ್ಪರ್ಧೆ ಕಂಡುಬರುತ್ತಿತ್ತು. ಯಾರ ಆತಿಥ್ಯವನ್ನೂ ವಿಶೇಷವಾಗಿ ಸ್ವೀಕರಿಸದೆ ಮಹಾದೇವಿ ಶ್ರೀಗಿರಿಯತ್ತ ನಡೆಯುತ್ತಿದ್ದರು.

ಆತ್ಮ ಕೂರಿನಿಂದ ಮುಂದೆ ಶ್ರೀಶೈಲಪರ್ವತಶ್ರೇಣಿಗಳು ಪ್ರಾರಂಭವಾಗುತ್ತವೆಂದು ಗುರುಲಿಂಗದೇವರು ಹೇಳಿದ್ದರು. ಮತ್ತು ಪ್ರಭುದೇವ ಸಿದ್ಧರಾಮರು ವಿವರವಾಗಿ ಅದರ ವರ್ಣನೆಯನ್ನು ಮಾಡುವಾಗಲೂ ತಿಳಿಸಿದ್ದರು. ಅದನ್ನು ನೆನೆಸಿಕೊಳ್ಳುತ್ತಾ ಪ್ರಯಾಣದ ಕಷ್ಟಸುಖಗಳನ್ನು ಲೆಕ್ಕಿಸದೆ, ಆತ್ಮಕೂರನ್ನು ಸೇರುವ ಆತುರದಿಂದ ನಡೆಯುತ್ತಿದ್ದರು. ಮಹಾದೇವಿ. ಅನೇಕ ದಿನಗಳ ಪ್ರಯಾಣ ಶ್ರೀ ಶೈಲ ಪ್ರಾರಂಭ, ಅಲ್ಲಿನ ಸುತ್ತಲಿನ ಬೆಟ್ಟಗಳ ಸಾಲನ್ನು ಹಚ್ಚ ಹಸಿರು ಗಿಡ, ಬಳ್ಳಿಗಳನ್ನು ಕಂಡು ಅಕ್ಕನ ಆತ್ಮ ಆನಂದಭರಿತವಾಯಿತು. ಸೌಂದರ್ಯವನ್ನು ಕಂಡು

ವನವೆಲ್ಲಾ ನೀನೆ, ವನದೊಳಗಣ ದೇವತರುವೆಲ್ಲಾ ನೀನೆ' 'ತರುವಿನೊಳಗಾಡುವ ಖಗಮೃಗವೆಲ್ಲಾ ನೀನೆ, ಚೆನ್ನಮಲ್ಲಿಕಾರ್ಜುನಾ ಸರ್ವಭರಿತನಾಗಿ ಎನಗೇಕೆ ಮುಖದೋರೆ?'

ಎಂದು ನುಡಿಯುತ್ತಾ ಫಲಭರಿತ ಮರ ಹಾಗೂ ಮೃಗಗಳನ್ನು ಕಂಡಾಗ ನಿಸರ್ಗದ ವೈಶಿಷ್ಟ್ಯವನ್ನು ವಚನದಲ್ಲಿ ತುಂಬುತ್ತಾ-

'ಈಳೆ ನಿಂಬೆ ಮಾವು ಮಾದಲಕ್ಕೆ ಹುಳಿ ನೀರೆರೆದವರಾರಯ್ಯಾ? ಕಬ್ಬು, ಬಾಳೆ, ಹಲಸು, ನಾರಿವಾಳಕ್ಕೆ ಸಿಹಿನೀರೆರೆದವರಾರಯ್ಯಾ? ಕಳವೆ ರಾಜಾನ್ನ ಶಾಲ್ಯನ್ನಕ್ಕೆ ಓಗರದ ಉದಕವನೆರೆದವರಾರಯ್ಯಾ? ಮರುಗ, ಮಲ್ಲಿಗೆ, ಪಚ್ಚೆ, ಮುಡಿವಾಳಕ್ಕೆ ಪರಿಮಳದುದಕವನೆರೆದವರಾರಯ್ಯಾ? ಇಂತೀ ಜಲವು ಒಂದೆ, ನೆಲನು ಒಂದೆ, ಆಕಾಶವು ಒಂದೆ, ಜಲವು ಹಲವು ದ್ರವ್ಯಂಗಳ ಕೂಡಿ, ತನ್ನ ಪರಿ ಬೇರಾಗಿಹ ಹಾಗೆ, ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನು ಹಲವು ಜಗಂಗಳ ಕೂಡಿಕೊಂಡಿರ್ದಡೇನು? ತನ್ನ ಪರಿ ಬೇರೆ'.

ಈ ಸೃಷ್ಟಿಯನ್ನು ಬೆರಗು ಕಣ್ಣುಗಳಿಂದ ನೋಡಿದ ಅಕ್ಕನವರು ಅನಂತ ಸಸ್ಯ ಸಂಕುಲಗಳಲ್ಲಿ ಜೀವ ಜಾಲದಲ್ಲಿ ಸೃಷ್ಟಿಯ ವಿಧವಿಧ ಛಾಪು ಒತ್ತಿರುವುದನ್ನು ಗುರುತಿಸಿ ಆನಂದಾತಿಶಯವನ್ನು ವ್ಯಕ್ತ ಮಾಡಿದ್ದಾರೆ. ಒಂದೊಂದು ಸೃಷ್ಟಿಯಲ್ಲೂ

ಒಂದೊಂದು ವೈಶಿಷ್ಟ್ಯವಿದೆ. ಇದೆಲ್ಲ ಯಾರು ನಡೆಸಿದರು ? ಹೇಗೆ ನಡೆಸಿದರು. ಈ ಶಕ್ತಿ ಯಾರಿಗಿದೆ.? ಈ ಪ್ರಶ್ನೆಗಳನ್ನು ಹಾಕಿಕೊಂಡು ಈ ವಚನ ಹಾಡಿಕೊಂಡಿದ್ದಾರೆ. ಕಾಣುವ ಜಗತ್ತಿನಲ್ಲಿ ವಿಶಿಷ್ಟವಾದುದನ್ನು ಗುರುತಿಸುವ ಪ್ರತಿಭಾಶಕ್ತಿ ವಿಶೇಷವಾಗಿ ಅಕ್ಕನವರಲ್ಲಿರುವುದು ಈ ವಚನದಿಂದ ತಿಳಿಯುತ್ತದೆ. ಸಾಮಾನ್ಯರು ನೋಡಿ ಆನಂದ ಪಟ್ಟರೆ ಕವಿಯ ಕಣ್ಣಿಂದ ನೋಡಿದ ಅಕ್ಕ ಅದನ್ನು ವಚನವಾಗಿ ಹಾಡಿಕೊಂಡಿದ್ದಾರೆ. ಫಲವಾಗಿ ಭಾವಗೀತಾತ್ಮಕವಾದ ಶ್ರೇಷ್ಠ ಕವಿತೆಗಳು ಪ್ರಕಟವಾದವು. ಕುತೂಹಲ, ಬೆರಗು, ಸಂಗೀತ, ಸಾಹಿತ್ಯ, ಭಾಷಾ ಸೌಂದಯ್ಯ ಎಲ್ಲವು ಇಲ್ಲಿ ಪ್ರಕಟವಾಗಿವೆ.

ಈಳೆ ಲಿಂಬೆ ಮಾವು ಮಾದಲಕ್ಕೆ ಹುಳಿ ನೀರನ್ನೆರೆದವರಾರಯ್ಯ ? ಪ್ರಶ್ನೆ, ಅದಕ್ಕೆ ಉತ್ತರದ ಹುಡುಕಾಟ, ಕುತೂಹಲ ಸತ್ಯಾನ್ವೇಷಣೆಯ ದೃಷ್ಟಿ ಇಲ್ಲಿ ಹೊಳಹು ಗೊಂಡಿವೆ. ನಾವು ನಿತ್ಯ ಸಸ್ಯಸಂಕುಲಗಳನ್ನು ನೋಡುತ್ತೇವೆ. ಅದರ ಈ ಸೃಷ್ಟಿಯ ಕಾಣದ ಕೈಯನ್ನು ಹುಡುಕುವ ಪ್ರಯತ್ನ ಕುತೂಹಲ ನಮ್ಮಲ್ಲಿ ಪ್ರಕಟವಾಗಲಿಲ್ಲ. ಅಕ್ಕನವರಲ್ಲಿ ಅಪಾರ ಕುತೂಹಲ, ಹುಡುಕಾಟವಿದೆ. ಈ ಸಸ್ಯ ಸಂಕುಲಗಳಲ್ಲಿ ಎಷ್ಟೊಂದು ವೈವಿಧ್ಯ! ಎಷ್ಟೊಂದು ಫಲಗಳಿವೆ! ಎಷ್ಟೆಲ್ಲ ಸಿಹಿ, ಹುಳಿ, ಒಗರು, ಕಹಿ ಏನೆಲ್ಲ ವೈವಿಧ್ಯವಿದೆ. ಇವುಗಳಿಗೆ ಈ ಸಿಹಿ, ಹುಳಿ, ಒಗರು, ಕಹಿ ಏನೆಲ್ಲ ಶಕ್ತಿ ಕೊಟ್ಟವರು ಯಾರು? ಕಬ್ಬು, ಬಾಳೆ, ಹಲಸು ನಾರಿವಾಳಕ್ಕೆ ಸಿಹಿ ನೀರನ್ನೆರೆದವರಾರಯ್ಯ? ಅಲ್ಲಿ ಹುಳಿ. ಇಲ್ಲಿ ಸಿಹಿ, ಒಂದೆಡೆ ಹುಳಿ, ಇನ್ನೊಂದೆಡೆ ಸಿಹಿ. ಇದು ಹೇಗೆ ಸಾಧ್ಯ ವಾಯಿತು? ಇದು, ಅದು ಇರುವುದು ಒಂದೇ ಭೂಮಿಯಲ್ಲಿ,

ಏನಾಶ್ಚರ?! ಕಬ್ಬು, ಬಾಳೆ,ಹಲಸು, ತೆಂಗು ಬೆಳೆಯುವುದು ಇದೆ ಭೂಮಿಯಲ್ಲಿ ಇದೆ ಬಿಸಿಲು, ಇದೆ ಗಾಳಿ ಇದೆ ನೀರು, ಇದೆ ಆಕಾಶ, ಅಲ್ಲಿ ಹುಳಿ ಇಲ್ಲಿ ಸಿಹಿ. ಏನಾಶ್ಚರ! ಇದು ಹೇಗೆ ಸಾಧ್ಯವಾಯಿತು? ಈ ಹುಳಿ, ಸಿಹಿಗಳು ಎಲ್ಲಿಂದ ಬಂದವು.? ಇದನ್ನು ಇಲ್ಲಿಗೆ ತಂದವರು ಯಾರು? ಮರುಗ, ಮಲ್ಲಿಗೆ, ಪಚ್ಚೆ ಮುಡಿವಾಳ ಈ ಸಸ್ಯಗಳಿಗೆ ಪರಿಮಳ ದ್ರವ್ಯವನ್ನು ಎರೆದವರು ಯಾರು ? ಒಂದೆಡಿ ಸಿಹಿ, ಹುಳಿ, ಇನ್ನೊಂದೆಡೆ ಪರಿಮಳ. ಈ ಹೂ ಗಿಡಗಳು ಹೇಗೆ ಪರಿಮಳ ಕೊಡುತ್ತವೆ. ಇವನ್ನು ಇವು ಎಲ್ಲಿಂದ ತಂದವು? ಕಳವೆ. ರಾಜಾನ್ನ, ಶಾಲ್ಯಾನ್ನಕ್ಕೆ ಒಗರದ ಉದಕವನೆರೆದವರಾರಯ್ಯ? ಇದೀಗ ಇನ್ನೊಂದಾಶ್ಚಯ್ಯ. ಈ ಪೈರುಗಳು ನಮಗೆ ಅನ್ನ ಕೊಡುತ್ತವೆ. ಇವುಗಳಿಗೆ ಈ ಅನ್ನ ಕೊಡುವ ಶಕ್ತಿ ಎಲ್ಲಿಂದ ಬಂತು.? ನಮಗೆ ಇವು ಹಸಿವೆಗೆ ಅನ್ನ ಕೊಡುತ್ತವಲ್ಲ. ಈ ವ್ಯವಸ್ಥೆ ಮಾಡಿದವರು ಯಾರು ? ಈ ಮನುಷ್ಯನಿಗೆ ಈ ಸಸ್ಯ ಸಂಕುಲಗಳು ಏನೆಲ್ಲ ಸುಖ, ಸಂಪತ್ತು ಕೊಡುತ್ತಿವೆ. ಇವು ಕೊಡದಿದ್ದರೆ ಮನುಷ್ಯನ ಬದುಕು ಎಷ್ಟು ಘೋರವಾಗುತ್ತಿತ್ತೋ?ಏನೊ? ಇವೆಲ್ಲವೂ ಈ ಸೃಷ್ಟಿಯಲ್ಲಿ ಕಾಣದ ಕೈನ ಇಚ್ಛೆಯನ್ನು ನೆರವೇರಿಸುತ್ತಿವೆ. ಇವು ಒಂದೆ ಜಲ, ಒಂದೆ ನೆಲ, ಒಂದೆ ಆಕಾಶದಲ್ಲಿವೆ. ಆದರೂ ವೈವಿಧ್ಯ. ಇವುಗಳಲ್ಲಿ ಸ್ಥಾಯಿಯಾಗಿ ಎಲ್ಲ ಕಡೆ ಹಿಂದಿರುವುದು ಒಂದೆ ನೀರು, ಒಂದೆ ಗಾಳಿ. ಒಂದೆ ಆಕಾಶ. ಪರಿಣಾಮ ಇಲ್ಲಿ ಹುಳಿ, ಅಲ್ಲಿ ಸಿಹಿ, ಒಂದೆಡೆ ಪರಿಮಳ, ಇನ್ನೊಂದೆಡೆ ಅನ್ನ. ಹಾಗೆ ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನು ಈ ಜಗತ್ತಿನಲ್ಲಿ ತನ್ನ ಸೃಷ್ಟಿಯನ್ನು ಪ್ರಕಟಪಡಿಸಿದ್ದೂ, ತನ್ನ ಶಕ್ತಿ ಸಾಮಾರ್ಥ್ಯವನ್ನು ತೋರಿದ್ದೂ, ಈ ಜೀವ ಜಾಲದಲ್ಲಿ ತಾನಿದ್ದೂ ಇದೆಲ್ಲವನ್ನು ಮೀರಿ ನನ್ನ ಚೆನ್ನಮಲ್ಲಿಕಾರ್ಜುನನಿದ್ದಾನೆ. ಆತ ಹಲವು ಜಗತ್ತು ಕೂಡಿಕೊಂಡಿದ್ದೂ ತಾನು, ತಾನೆ ತಾನಾಗಿ ಇದ್ದಾನೆ. ಅವನ ವಿಶೇಷತೆಯೆ ಬೇರೆ. ಪ್ರಪಂಚ ಕಂಡ ಮಹಾನ್

ಕವಿಯಿತ್ರಿಯರು ಅಕ್ಕಮಹಾದೇವಿಯರು. ಜಗತ್ತಿನ ಮೊದಲ ಭಾವಗೀತಕಾರರು ಅಕ್ಕಮಹಾದೇವಿ. ಭಾವಗೀತ ಸಾಹಿತ್ಯ ಹತ್ತೊಂಭತ್ತನೆಯ ಶತಮಾನದಲ್ಲಿ ವರ್ಡ್ಸ್ವರ್ತ, ಕೀಟ್ಸ, ಕೋಲರಿಜ್,ಷೆಲ್ಲಿ, ಬೈರನ್ ಇತರ ಇಂಗ್ಲೀಷ್ ಕವಿಗಳಿಂದ ಸೃಷ್ಟಿಯಾಯಿತು ಎಂದು ವಿದ್ವಾಂಸರು ಬರೆಯುತ್ತಾರೆ. ಆದರೆ ಅಕ್ಕ ಮಹಾದೇವಿಯರು ಹನ್ನೆರಡನೆಯ ಶತಮಾನದಲ್ಲಿಯೇ ಇಂತಹ ಭಾವಗೀತವನ್ನು ಸೃಷ್ಟಿಸಿದ್ದಾರೆ. ಅಕ್ಕಮಹಾದೇವಿಯವರು ಪ್ರಕೃತಿ ಪ್ರೇಮಿಯೂ ಹೌದು. ಅವರ ಒಂದೊಂದು ವಚನವೂ ಒಂದೊಂದು ಶ್ರೇಷ್ಠ ಭಾವಗೀತೆ. ನವೋದಯ ಸಾಹಿತ್ಯ ೨೦ನೆಯ ಶತಮಾನದಲ್ಲಿ ಏನು ಪ್ರಕಟವಾಯಿತು, ಅದಕ್ಕೂ ಮೊದಲೆ ಅಕ್ಕಮಾಹಾದೇವಿಯವರಲ್ಲಿ ಈ ಪ್ರಕೃತಿ ಪದ್ಯಗಳು ಪ್ರಕಟವಾಗಿವೆ. ಭಾವಗೀತಪ್ರಕಾರಕ್ಕೆ ಮೊದಲ ಮತ್ತು ಸರ್ವ ಶ್ರೇಷ್ಠ ಬೆಳೆ ಅಕ್ಕಮಹಾದೇವಿಯವರ ವಚನಗಳು. ಅವರ ಅನೇಕ ವಚನಗಳ ವಸ್ತು ಪ್ರಕೃತಿ. ಇಲ್ಲಿ ಕುತೂಹಲ, ಬೆರಗು. ಉತ್ಸಾಹ, ಗೌರವ ಸ್ಥಾಯೀಭಾವ. ಇಲ್ಲಿ ಶ್ರದ್ಧೆ, ಭಕ್ತಿ ಇವೆ. ಕುವೆಂಪು, ವರ್ಡ್ಸ್ ವರ್ತ್ ಕವಿಗಳಲ್ಲಿ ಏನು ಪ್ರಕೃತಿ ಪ್ರೇಮವಿದೆ. ಅದು ಕೇವಲ ಸಂಚಾರೀ ಭಾವ. ಆದರೆ ಅಕ್ಕನವರು ಈ ಪ್ರಕೃತಿಯಲ್ಲೆ ನೆಲೆ ಮಾಡಿಕೊಂಡು ನೆಲೆಸಿದರು. ಅದು ಕೇವಲ ಉದ್ಗಾರ ಉತ್ಸಾಹದ ಪದ್ಯವಲ್ಲ. ಅದು ಇಲ್ಲಿ ಜೀವನವೆ ಆಯಿತು. ಇದು ಋಷಿಯ ದೃಷ್ಟಿ ಇಲ್ಲಿ ದರ್ಶನವಿದೆ. ಹೊಸ ಅನುಭವ ಈ ವಚನಗಳನ್ನು ಓದಿದಾಗ ಹಾಡಿಕೊಂಡಾಗ ಎಂತಹವರಿಗೂ ಆಗುತ್ತದೆ. ಈ ವಚನಗಳಲ್ಲಿ ಇಂದಿಗೂ ತಾಜಾ ತಾಜಾ ಹೊಸತನ ಸ್ಪಂದನವಿದೆ. ನಿಸರ್ಗದ ಹಲವು ಪರಿ, ಆನಂತ ದರ್ಶನ ಇಲ್ಲಿದೆ ಮುಂದೆ ಭವ್ಯವಾದ ಬೆಟ್ಟದ ಸಾಲುಗಳನ್ನೇರುತ್ತ, ಭೀಕರವಾದ ಕೊಳ್ಳಗಳನ್ನಿಳಿಯುತ್ತ ಚೆನ್ನಮಲ್ಲಿಕಾರ್ಜುನನ ನಾಮಸ್ಮರಣೆಯೊಂದೆ ಅವರ ಜೊತೆಯಾಗಿತ್ತು. ಬಿಸಿಲಿಗೆ ದೇಹ ಬಾಡಿತು. ಮುಖ ಮುದುಡಿತು. ಆದರೂ

'ಕಾಯದ ಕಳವಳವ ಕೆಡಿಸಿ ಮನದ ಮಾಯೆಯ ಮಾಣಿಸಿ' ಅವರ ದೇಹಭಾವವಳಿಯಿತು. ದೇಹದ ಆಯಾಸ ಹೆಚ್ಚಿದಂತೆ ಮನದ ಏಕಾಗ್ರತೆ ಸ್ಥಿರವಾಗತೊಡಗಿತು. 'ಏನೀ ಮಹಿಮೆ ನಿನ್ನದು' ಎಂದು ಅಕ್ಕ ಅಚ್ಚರಿಗೊಂಡಳುತ್ತ. ಅಕ್ಕನ ಜೀವನದ ಪಯಣ ಸಾಮಾನ್ಯವಾಗಿರಲಿಲ್ಲ ಅವರು ಸಾಧಿಸಬೇಕಾದ ಗುರಿ ಅಸಾಮಾನ್ಯವಾದುದು. ಉಡುತಡಿಯಿಂದ ಕಲ್ಯಾಣದ ಮಾರ್ಗದಲ್ಲಿ ಅಕ್ಕಮಹಾದೇವಿಯವರಿಗೆ ಸ್ವಲ್ಪಮಟ್ಟಿಗೆ ಆಸರೆ ಸಿಕ್ಕಿರಬಹುದು.

ಚೆನ್ನಮಲ್ಲಿಕಾರ್ಜುನನ ಕನಸಿನ ಕರೆ ಕೈ ಬೀಸಿ ಕರೆದಂತೆ ಭಾಸವಾಗುತ್ತಲಿತ್ತು. ಆ ಅಗೋಚರ ಕರೆಯನ್ನು ನಂಬಿಯೇ ಶ್ರೀ ಗಿರಿಯ ಏಳುಸುತ್ತಿನ ಪರ್ವತವನ್ನು ಏರುತ್ತ ಸಾಗಿದರು ಮುಂದೆ ಸಾಗಿದಾಗ ದಟ್ಟವಾದ ಕಾಡು, ವಿಶ್ರಮಿಸಲು ಯಾವ ಸ್ಥಳವೂ ಲಭ್ಯವಿಲ್ಲ. ಗಿರಿ, ಗುಹೆಗಳೂ ಕಾಣದಾದವು.

ಗಗನಚುಂಬಿ ಪರ್ವತಗಳ ಸಾಲು. ಬಾಯಾರಿಕೆಗೆ ಹನಿ ನೀರು ಎಲ್ಲಿಯೂ ಕಾಣಲಿಲ್ಲ. ಆದರೂ ಅವರ ಆತ್ಮಶಕ್ತಿಯೇ ಅವರ ಪಯಣದ ಶಕ್ತಿಯಾಗಿದ್ದಿತು.

'ಚೆನ್ನಮಲ್ಲಿಕಾರ್ಜುನ, ಕದಳಿಯ ವನ ಕಾಣುವವರೆಗೆ, ನೀನು ಸಾಕಾರವಾಗಿ ನನ್ನೆದುರಿಗೆ ಬಂದು ನಿಲ್ಲುವವರೆಗೆ ನನ್ನೀ ಯಾತ್ರೆ ಹೀಗೆ ಮುಂದುವರಿಯುವುದು. ನಾನೇನು ಸೋಲುವವಳಲ್ಲ. ಇನ್ನೂ ಮುಂದೆ ಘೋರಾರಣ್ಯವಿದ್ದರೂ ನಾನು ಹೆದರುವಳಲ್ಲ. ನಿನ್ನನ್ನು ಒಲಿಸಿಕೊಂಡು ನಿನ್ನನ್ನು ಒಂದುಗೂಡುವೆನೆಂದು ಎಲ್ಲರಿಗೂ ಹೇಳಿ ಬಂದಿರುವೆನು. ನನಗೆ ಯಾವ ಭಯ,

ಈ ವಚನ ಹೇಳುತ್ತರೆ

ಕಳನೇರಿ ಇಳಿವುದು ವೀರಂಗೆ ಮತವಲ್ಲ.

ಶಿವಶರಣಂಗೆ ಹಿಮ್ಮೆಟ್ಟುವುದು ಪಥವಲ್ಲ

ಮನ ದೊಡೆಯ ಮನವನಿಂಬುಗೊಂಬನಯ್ಯ,

ಏರಲಾಗದು ಶ್ರೀ ಪರ್ವತವ ಏರಿ ಇಳಿದಡೆ ವ್ರತಕ್ಕೆ ಭಂಗ ಕಳನೇರಿ ಕೈದು ಮರೆದಡೆ ಮಾರಂಕ ಚೆನ್ನಮಲ್ಲಿಕಾರ್ಜುನ ಇಮ್ಮೆಗಾಣ ಲಿ ರಿವನು.

ಚೆನ್ನಮಲ್ಲಿಕಾರ್ಜುನನು, ಹಿಂದಿರುಗಿದರೆ ನಮ್ಮನ್ನು ಸುಮ್ಮನೆ ಬಿಡುವನೆ. ಅಕ್ಕಮಹಾದೇವಿಯ ಜೊತೆ ಗಿದ್ದವರು ಶ್ರೀಗಿರಿ ಏರಲು ಅಸಹಾಯಕತೆ ಅಧೈರ್ಯ್ಯ ವ್ಯಕ್ತಮಾಡಿಸಿದರೂ ಅವರನ್ನು ಹುರುಪುಗೊಳಿಸಲು ಅಕ್ಕಮಹಾದೇವಿಯವರು ವೀರತ್ವದ ಉದಾಹರಣೆ ಕೊಟ್ಟು ವಿವರಿಸಿದ್ದಾರೆ. ಈ ವಚನದಲ್ಲಿ ಸಾಧಕ ಶರಣನನ್ನು ವೀರಯೋಧನಿಗೆ ರೂಪಕ ಮಾಡಿಚಿತ್ರಿಸಲಾಗಿದೆ. ವೀರನಾದವನು ಯುದ್ಧದಲ್ಲಿ ಹಿಮ್ಮೆಟ್ಟುವುದು ಲಕ್ಷಣವಲ್ಲ. ಮನದೊಡೆಯನಾದ ಪರಮಾತ್ಮನು ನಮ್ಮನ್ನು ಒರೆಹಚ್ಚಿ 'ನೊಡುತ್ತಾನೆ. ಆದರೆ ಆ ಯೋಗ್ಯತೆ ನಮಗಿರಬೇಕು. ಶ್ರೀಶೈಲವನ್ನು ಏರುವುದು ಅಷ್ಟು ಸುಲಭವಲ್ಲ. ಶ್ರೀಶೈಲವೇರುತ್ತೇನೆ ಎಂದು ನಿರ್ಧರಿಸಿ ಬಂದು ಹಿಂದೆ ಹೊಗುವುದು ಸದ್ಭಕ್ತನ ಲಕ್ಷಣವಲ್ಲ. ಅದು ವ್ರತ, ನಿಯಮ ಮುರಿದಂತೆ. ಯುದ್ಧಮಾಡಲು ರಣರಂಗಕ್ಕೆ ಹೋಗಿ ನಾನು ಆಯುಧ ತಂದಿಲ್ಲ ಎಂದರೆ ಶತ್ರು ಯೋಧರು ಬಿಡುವರೇನು? ಬೆನ್ನಿಂದೆಕಾಣುವಂತೆ ಖಡ್ಗ ದಲ್ಲಿ ತಿವಿದು ಬಿಡುತ್ತಾರೆ. ದುರ್ಗಮವಾದ ಕಾಡಾರಣ್ಯ, ಕ್ರಿಮಿ, ಕೀಟ ಜಂತು ಕ್ರೂರ ಪ್ರಾಣಿಗಳು ನಿರ್ಜನ ಇವೆಲ್ಲವೂ ಅಂಜಿಕೆ ಹುಟ್ಟಿಸುವಷ್ಟು ಭಯಾನಕವಾಗಿವೆ. ತಿನ್ನಲೊಂದು ಹಣ್ಣಿಲ್ಲ. ಕುಡಿಯಲು ನೀರಿಲ್ಲ. ಪೂಜೆಗೆ ಹೂವಿಲ್ಲ. ಇಂತಹ ಕಾಡಿಗೆ ಹೋಗಿ ಮಾಡುವುದೇನು? ಹೋಗುವುದೇ ಬೇಡ. ಅಲ್ಲೇನಿದೆ ಬೆಟ್ಟಗುಡ್ಡ, ಕಾಡು, ಗಿಡ, ಮರ ಹೋಗುವುದೆ ಬೇಡ ಎಂದು ಜೊತೆಯಲ್ಲಿ ಬಂದವರು ಹೇಳಿದರು. ಅಂತಹವರಿಗೆ, ಸಹಪಾಠಿಗಳಿಗೆ ಉತ್ತರ ರೂಪವಾಗಿ ಅಕ್ಕನವರು ಈವಚನ ಹೇಳಿದ್ದಾರೆ. ಅನುಭಾವ ಯಾತ್ರೆಯನ್ನು ಯುದ್ಧರಂಗಕ್ಕೆ ರೂಪಕಮಾಡಿ ಚಿತ್ರಿಸಿದ್ದಾರೆ. ಪರಮಾ ತ್ಮನನ್ನು ಶತ್ರು ರಾಜನೆಂದೂ, ಭಕ್ತಿಯನ್ನು ವೀರತ್ವಕ್ಕೂ ಹೇಡಿತನವನ್ನು ಭಯಕ್ಕೂ ಚಿತ್ರಿಸಿ ವಿವರಿಸಿರುವುದು ಉತ್ಸಾಹದಾಯಕವೂ, ಉದ್ಯೋಧಕವೂ ಆಗಿದೆ.

'ಚೆನ್ನಮಲ್ಲಿಕಾರ್ಜುನ, ಕದಳಿಯ ವನ ಕಾಣುವವರೆಗೆ, ನೀನು ಸಾಕಾರವಾಗಿ ನನ್ನೆದುರಿಗೆ ಬಂದು ನಿಲ್ಲುವವರೆಗೆ ನನ್ನೀ ಯಾತ್ರೆ ಹೀಗೆ ಮುಂದುವರಿಯುವುದು. ನಾನೇನು ಸೋಲುವವಳಲ್ಲ. ಇನ್ನೂ ಮುಂದೆ ಘೋರಾರಣ್ಯವಿದ್ದರೂ ನಾನು ಹೆದರುವಳಲ್ಲ. ನಿನ್ನನ್ನು ಒಲಿಸಿಕೊಂಡು ನಿನ್ನನ್ನು ಒಂದುಗೂಡುವೆನೆಂದು ಎಲ್ಲರಿಗೂ ಹೇಳಿ ಬಂದಿರುವೆನು. ನನಗೆ ಯಾವ ಭಯವೂ ಇಲ್ಲ. ಭವದ ಭಯವನ್ನು ಸುಟ್ಟು ಭಸ್ಮ ಮಾಡಿ ಬಂದವಳಿಗೆ ಯಾವ ಭಯ? ಮಲ್ಲಿಕಾರ್ಜುನಾ, ನನ್ನನ್ನು ನಿನ್ನೆಡೆಗೆ ಬೇಗ ಬರಮಾಡಿಕೊಳ್ಳಾ?' ಎಂದು. ಶ್ರೀಶೈಲಪರ್ವತಶ್ರೇಣಿಗಳು ಪ್ರಾರಂಭವಾದ ಮೇಲಂತೂ, ಉತ್ಸಾಹ ಇಮ್ಮಡಿಸಿತು. ಬಿಸಿಲಿನ ತಾಪವನ್ನು ಲೆಕ್ಕಿಸಿದೆ, ಬೆಟ್ಟವನ್ನು ಹತ್ತಿ ಇಳಿಯುವ ಆಯಾಸವನ್ನು ಪರಿಗಣಿಸದೆ, ಹೀಗೆ ಎರಡು ಮೂರು ದಿನಗಳ ಪ್ರಯಾಣ ನಡೆಯಿತು. ಅಕ್ಕಮಹಾದೇವಿಯವರು. ಮಲ್ಲಿಕಾರ್ಜುನನ ಆ ಪರ್ವತಕೋಶಗಳನ್ನು ಒಂದೊಂದಾಗಿ ದಾಟಿ ಮುಂದೆ ನಡೆಯುತ್ತಿದ್ದರು.

"ಇನ್ನು ಶ್ರೀಶೈಲ ದೇವಸ್ಥಾನಕ್ಕೆ ಒಂದು ಹರದಾರಿಯಷ್ಟು ದೂರ. ಈ ಸಂಜೆಯೊಳಗೆ ಅಲ್ಲಿಗೆ ಸೇರುತ್ತೇವೆ.

ಹೀಗೆ ದೂರದ ದಾರಿಯನ್ನು ಸಾಗಿಸಿ ಶ್ರೀಶೈಲ ಮಲ್ಲಿಕಾರ್ಜುನ ಶಿಖರವನ್ನು ಕಂಡಾಗ ಅಕ್ಕನ ಮನಸ್ಸಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಶ್ರೀಶೈಲ ಶಿಖರದರ್ಶನ ಮಾಡಿ ಮುಂದೆ ಮಲ್ಲಿಕಾರ್ಜುನ ದರ್ಶನ ಪಡೆದು ಪಾತಾಳಗಂಗೆಯಲ್ಲಿ ಮಿಂದು ಹುರುಪಿನಿಂದ ಮುಂದೆ ನಡೆದರು, ಅವರ ಕಣ್ಣಿಗೆ ಕಾಣುವ ಎಲ್ಲ ವಸ್ತುವೂ ಮಲ್ಲಿಕಾರ್ಜುನನೆಂದು ತೋರುತ್ತಿತ್ತು. ದೇವಾಲಯದ ಮಹಾದ್ವಾರದ ಶಿಖರ, ಧೀರನಿಲವಿನಿಂದ ತಲೆಯೆತ್ತಿ ನಿಂತಿತ್ತು. ಆಲಸ ಮನೋಧರ್ಮದ ಲಘುಜೀವಿಗಳಿಗೆ ತಾನು ದುರ್ಲಭನೆಂಬುದನ್ನು ಸಾರುವುದರ ಸಂಕೇತವಾಗಿಯೇ ಮಲ್ಲಿಕಾರ್ಜುನ ಈ ದುರ್ಗಮವಾದ ಕಾಡಿನ ಪರ್ವತಶ್ರೇಣಿಗಳ ಮಧ್ಯದಲ್ಲಿ ನೆಲಸಿದನೆಂಬುದನ್ನು ಘೋಷಿಸುವಂತೆ ತೋರುತ್ತಿತ್ತು ಶಿಖರದ ಹೊನ್ನ ಕಳಶ. ಮರ್ತ್ಯಲೋಕದಿಂದ ಪಾರಾಗಿ ಇನ್ನಾವುದೋ ಲೋಕದಲ್ಲಿ ನಡೆಯುತ್ತಿರುವವರಂತೆ ಮಹಾದೇವಿ ದೇವಾಲಯವನ್ನು ಪ್ರವೇಶಿಸಿದರು. ಅಕ್ಕಮಹಾದೇವಿ ಬಳಿಗೆ ಬರುತ್ತಿದ್ದಂತೆಯೇ ಕಿಕ್ಕಿರಿದು ನೆರೆದಿದ್ದ ಜನಸಮೂಹ ಅಕ್ಕಮಹಾದೇವಿಯವರಿಗೆ ದಾರಿ ಮಾಡಿಕೊಡುತ್ತಿತ್ತು. ಅವರ ತೇಜೋಮೂರ್ತಿಯನ್ನು ಸಮೀಪದಿಂದ ಕಂಡೊಡನೆಯೇ ಗೌರವದಿಂದ ನಮಸ್ಕರಿಸಿ ಸರಿದು ನಿಲ್ಲುವರು ಜನ. ಅಕ್ಕಮಹಾದೇವಿಯವರು ದೇವಾಲಯದ ಒಂದನೇ ಎರಡನೇ ಆವರಣಗಳನ್ನು ದಾಟಿ, ಗರ್ಭಗೃಹದ ಬಳಿಗೆ ಬಂದು. ಚಿಕ್ಕದಾದ ಗರ್ಭಗೃಹದ ತುಂಬ ಜನ ಕಿಕ್ಕಿರಿದು ತುಂಬಿದ್ದರು. ಅಂದು ಸೋಮವಾರ ಹಬ್ಬದ ದಿನವಾದ ಕಾರಣ, ನಾನು ಮುಂದೆ ತಾನು ಮುಂದೆಂದು ಜನಗಳು ನುಗ್ಗಿ ಮಲ್ಲಿಕಾರ್ಜುನನನ್ನು ಕೈಯಿಂದ ಮುಟ್ಟಿ ನಮಸ್ಕಾರ ಮಾಡುತ್ತಿದ್ದರು. ಅವರಿವರೆಂಬ ಯಾವ ಭೇದವೂ ಇಲ್ಲದೆ ಎಲ್ಲರಿಗೂ ಈ ಸಮಾನ ಅವಕಾಶವಿತ್ತು. ಜನರೆಲ್ಲ ಹಿಂದೆ ಸರಿದು ಮಹಾದೇವಿಗೆ ಒಳಗೆ ಹೋಗಲು ಅವಕಾಶ ಮಾಡಿ ಕೊಟ್ಟರು. ಗರ್ಭಗೃಹವನ್ನು ಪ್ರವೇಶಿಸಿದರು ಅಕ್ಕಮಹಾದೇವಿಯವರು. ಶ್ರೀಶೈಲದ ಚನ್ನಮಲ್ಲಿಕಾರ್ಜುನನ ಸಾಕ್ಷಾತ್ ಸನ್ನಿಧಿಯಲ್ಲಿ ಬಂದು ನಿಂತಿದ್ದಾರೆ ತನ್ನ ಪತಿ ಚನ್ನಮಲ್ಲಿಕಾರ್ಜುನನ ಹೃದಯಗಹ್ವರವನ್ನು ಹೊಕ್ಕಂತೆಯೇ ಅನಿಸಿತು ಅಕ್ಕಮಹಾದೇವಿಯವರಿಗೆ ಕಣ್ಣುಗಳಿಂದ ಆನಂದಬಾಷ್ಪಗಳು ಸುರಿಯತೊಡಗಿದ್ದುವು. ಮನಸ್ಸು ಅಂತರಂಗದ ಅರಿವನ್ನು ಆಶ್ರಯಿಸಿ ಸುಷುಪ್ತಿಯನ್ನು ಪಡೆದಂತೆ ತೋರಿತು. ಹಾಗೆಯೇ ಮಲ್ಲಿಕಾರ್ಜುನನ ಸನ್ನಿಧಿಯಲ್ಲಿ ಕುಸಿದು ಕುಳಿತರು. ಜನರೆಲ್ಲಾ ಸ್ತಬ್ದರಾಗಿ ಮಹಾದೇವಿಯನ್ನು ನೋಡುತ್ತಿದ್ದರು. ಕ್ಷಣಕಾಲದ ನಂತರ ಮಹಾದೇವಿ ಎಚ್ಚತ್ತುಕೊಂಡವರಂತೆ ಕಣ್ತೆರೆದರು. ಕಣ್ಣುಗಳು ನಕ್ಷತ್ರದಂತೆ ಹೊಳೆಯುತ್ತಿದ್ದವು. ಜ್ಯೋತಿರ್ಲಿಂಗವನ್ನೇ ನೋಡತೊಡಗಿದ್ದರು.

ಭವ್ಯವಾದ ಆಕಾರದ ದೊಡ್ಡ ಲಿಂಗವಲ್ಲ ಅದು. ನೆಲದಿಂದ ಸ್ವಲ್ಪ ಮಾತ್ರವೇ ಮೇಲೆದ್ದು ಒಂದು ಪಕ್ಕಕ್ಕೆ ಸ್ವಲ್ಪ ಒರೆಯಾದ ಚಿಕ್ಕಮೂರ್ತಿ. ಆದರ ಜ್ಯೋತಿರ್ಲಿಂಗವೆಂಬ ಮಾತು ಸಾರ್ಥಕವಾಗುವಂತೆ ಅದು ಹೊಳೆಯುತ್ತಿತ್ತು. ಮಹಾದೇವಿಗೆ ತನ್ನ ಅಂತರಂಗದಲ್ಲಿ ತೋರಿದ ಅಪೂರ್ವವಾದ ರೂಪವೇ ಬಹಿರಂಗದಲ್ಲಿಯೂ ಪ್ರಕಾಶಿಸಿದಂತಾಯಿತು. ಆ ಆನಂದದಲ್ಲಿಯೇ ತಲ್ಲೀನರಗಿ ಮೈಮರೆತು ಕುಳಿತಿದ್ದರು. ಅಲ್ಲಿ ಸೇರಿದ್ದವರೆಲ್ಲರೂ ಅವರ ಈ ಅಲೌಕಿಕವಾದ ಆನಂದದ ಅನುಭವದಲ್ಲಿ ಭಾಗಿಗಳಾದರು. ದೇವಾಲಯದಿಂದ ಹೊರಟ ಜಯಘೋಷಗಳು, ಭಜನೆಗಳು, ಸುತ್ತಲ ಪರ್ವತ ಪ್ರಾಂತಗಳಲ್ಲಿ ಪ್ರತಿಧ್ವನಿಸಿದುವು. ಕ್ರಮೇಣ ಎಚ್ಚತ್ತುಕೊಂಡ ಮಹಾದೇವಿ ತಾನೂ ಆ ಭಜನೆಯ ಪರಮಾನಂದರಸದಲ್ಲಿ ಭಾಗಿಯಾದರು. ರಾತ್ರಿ ಕಳೆದು ಬೆಳಗಾಗುತ್ತಿತ್ತು. ಅಕ್ಕಮಹಾದೇವಿ ಬಹಳ ಮುಂಚೆಯೇ ಎದ್ದು ಮಲ್ಲಿಕಾರ್ಜುನನ ದೇವಾಲಯದ ಎದುರಿನಲ್ಲಿ ಬಂದು ನಿಂತಿದ್ದರು. ದೇವಾಲಯದ ಸುತ್ತ ಅವನ ಸಾನ್ನಿಧ್ಯದ ಸೇವೆಯನ್ನು ಮಾಡುತ್ತಿರುವ ಪ್ರಕೃತಿ ಸೌಂದರ್ಯ, ಮಹಾದೇವಿಯನ್ನು ಸ್ವಾಗತಿಸಲು ಕಾತರಗೊಂಡು ಕಾದು ನಿಂತಿತ್ತು. ಸೂರ ಇನ್ನೂ ಮೂಡಿಬಂದಿರಲಿಲ್ಲ. ಚೇತನದ ಚಿಲುಮೆಯೇ ಉಕ್ಕಿಬರು ತಿರುವಂತೆ ಮೂಡಣದಿಗಂತದಲ್ಲಿ ಅರುಣೋದಯದ ಛಾಯೆ, ಮಂಗಳದ ಓಕುಳಿಯನ್ನು ನಿವಾಳಿಸಿ ಚೆಲ್ಲಿದಂತೆ ಕಾಣಿಸುತಿತ್ತು. ಹೀಗೆ ನಾಲ್ಕಾರು ದಿನಗಳು ಶ್ರೀಶೈಲದಲ್ಲಿ ಕಳೆದವು. ನಿತ್ಯವೂ ಪಾತಾಳ ಗಂಗೆಯಲ್ಲಿ ಸ್ನಾನ, ಪೂಜೆ; ಒಂದೊಂದು ದಿನ ಒಂದೊಂದು ಶಿಖರವನ್ನೋ ತೀರ್ಥವನ್ನೋ ನೋಡಿಬರುವುದು;

ಶ್ರೀಶೈಲಕ್ಕೆ ಬಂದುಹೋಗುವವರಿಗೆಲ್ಲ ಮಹಾದೇವಿಯು ಅಕ್ಕನೆಂದು ಪರಿಚಿತರಾಗಿಬಿಟ್ಟರು. ಅಕ್ಕ ಎಲ್ಲೇ ಕುಳಿತು ಹಾಡಲಿ, ಅಲ್ಲಿ ಜನ ನೆರೆಯುತ್ತಿದ್ದರು.

ಗುಡಿಯ ಆವಾರವನ್ನೆಲ್ಲ ದಾಟಿದ ಮೇಲೆ ಅನತಿ ದೂರದಲ್ಲಿ ಒಂದು ಅರಳೀಮರವಿದೆ. ಯಾರೋ ಕಟ್ಟೆ ಕಟ್ಟಿ ಇಟ್ಟಿದ್ದಾರೆ. ಅದು ದೇವಾಲಯದ ಜನಸಂದಣಿಯ ಸದ್ದು ಕೇಳುವಷ್ಟು ಹತ್ತಿರವೂ ಇಲ್ಲ, ಹಾಗಂತ ಗುಡಿಯ ದೂರವು ಇಲ್ಲದಷ್ಟು ನಿರ್ಜನ, ಏಕಾಂತ ಪ್ರದೇಶವೂ ಅಲ್ಲ. ಮಹಾದೇವಿಯ ಊಟ, ಧ್ಯಾನ, ವಿರಾಮ, ಹಾಡುವಿಕೆ, ಚರ್ಚೆ ಎಲ್ಲವೂ ಹೆಚ್ಚುಕಡಿಮೆ ಅಲ್ಲಿಯೇ ಆಗುತ್ತಿದೆ. ಇತ್ತೀಚೆಗೆ ಅಳ್ಳಿಕಟ್ಟೆ ಅಕ್ಕ ಎಂದೂ ಜನ ಅವರನ್ನು ಕರೆಯುವುದಿದೆ.

ಈಗ ಶ್ರೀಶೈಲಕ್ಕೆ ಮಹಾದೇವಿ ಹೊಸಬರಲ್ಲ. ಅವರ ಸುದ್ದಿ ಎಲ್ಲೆಲ್ಲಿಯವರೆಗೋ ಹಬ್ಬಿತ್ತು. ಕೂದಲು, ಕಂಬಳಿ ಹೊದ್ದ ಅರೆಬೆತ್ತಲ ಸಾಧ್ವಿ, ಚೆನ್ನಮಲ್ಲಿಕಾರ್ಜುನನ ಭಾವಲಿಂಗ ಪೂಜಿಸುವಾಕೆ, ತನ್ನಿಷ್ಟದಂತೆ, ತನ್ನ ತಾನರಿವ ಹಾದಿಯಲ್ಲಿ ನಡೆಯುತ್ತಿರುವ ಯೋಗಿನಿ ಮುಂತಾಗಿ ನಾನಾ ತರಹದ ವಿಶೇಷಣಗಳು ಮಹಾದೇವಿಯವರಿಗೆ ಅಂಟಿದವು. ಅಕ್ಕನಂಥವರೂ ಶ್ರೀಶೈಲಕ್ಕೆ ಹೊಸಬರಲ್ಲ. ಅಲ್ಲಿಗೆ ದಂಡುಗಟ್ಟಲೆ ಸಾಧುಗಳು ಬರುವರು. ಯೋಗಸಾಧನೆಯೆಂದು, ಚರ್ಚೆ ವಾಗ್ವಾದವೆಂದು, ಅನುಭಾವವೆಂದು. ಸಿದ್ಧಿ ಸಾಕಾರವೆಂದು ಸಾಧುನದಿ ನಿರಂತರ ಶ್ರೀಶೈಲದೆಡೆಗೆ ಹರಿಯುವುದು. ಮತ್ತಲ್ಲಿಂದ ಅವರ ಹರಿವು ಕದಳಿ ಗುಹೆಗಳತ್ತ ಸಾಗುವುದು. ನಡುನಡುವೆ ಒಮ್ಮೊಮ್ಮ ಸಾಧಕರು ಕದಳಿಯಿಂದೆದ್ದು ಬಂದು ಕಾಣಿಸಿಕೊಳ್ಳುವರು. ಮಸಣದಲ್ಲಿ, ಗುಡಿಯ ಹೊರ ಆವರಣದಲ್ಲಿ, ಊರ ಹೊರಗಿನ ಗುಡ್ಡದ ತಲೆಯಲ್ಲಿ ಸಾಧುಗಳ ನಡುವೆ ಬಿಸಿಬಿಸಿ ವಾಗ್ವಾದವೇರ್ಪಡುವುದು. ವಾದದ ಸೋಲು ಗೆಲುವುಗಳನ್ನು ಒಮ್ಮೊಮ್ಮೆ ಮಲ್ಲಿಕಾರ್ಜುನನೇ ನಿರ್ಧರಿಸುವುದುಂಟು.

ಗುಡಿಗೆ ಬರುವುದಕ್ಕಿಂತ ಸಾಧುಸಂತರಾದ ಅಕ್ಕನ ಬಳಿ ಬರುವವರೇ ಹೆಚ್ಚಿರುವಂತೆ ಕಾಣುತ್ತಿದ್ದರು. ಮದ್ದಿಗೆಂದು, ವ್ಯಾಜ್ಯ ಪರಿಹಾರಕ್ಕೆಂದು, ಸಮಸ್ಯೆ ಬಗೆಹರಿಸಿಕೊಳ್ಳಲು. ದುಃಖ ಹೇಳಿಕೊಳ್ಳಲು. ಸಲಹೆ ಕೇಳಲು ಮುಂತಾಗಿ ನಾನಾ ಕಾರಣ ಹೊತ್ತು ಜನ ಬರುತ್ತಲಿರುವರು. ಅಕ್ಕಮಹಾದೇವಿಯವರ ಮಲ್ಲಿಕಾರ್ಜುನನ ಸಾನ್ನಿಧ್ಯದಲ್ಲಿ ತನ್ನ ಆನಂದಾನುಭವದ ವಚನಗಾಯನ; ಹೀಗೆ ಸಾಗಿತ್ತು. ಅಂದು ಮಹಾದೇವಿ ಮಲ್ಲಿಕಾರ್ಜುನನ ಮುಂದೆ ಕುಳಿತು ಹಾಡುತ್ತಿರುವುದನ್ನು, ಪ್ರಧಾನ ಅರ್ಚಕ ಕೇಳಿದ:

ಹೊಳೆವ ಕೆಂಜೆಡೆಗಳ, ಮಣಿಮಕುಟದ ಒಪ್ಪುವ ಸುಲಿವಲ್ಲ ನಗೆಮೊಗದ,

ಕಂಗಳ ಕಾಂತಿಯಿಂ ಈರೇಳು ಭುವನಮಂ ಬೆಳಗುವ ಜಗದಾದಿ ಶಕ್ತಿಯೊಳು ಬೆರಸಿ ಒಡನಾಡುವ

ದಿವ್ಯ ಸ್ವರೂಪವನು ಕಂಡೆ ನಾನು. ಕಂಡೆನ್ನ ಕಂಗಳ ಬರ ಹಿಂಗಿಂದು.

ಗಂಡಗಂಡರನೆಲ್ಲ ಹೆಂಡಹೆಂಡಿರಾಗಿ ಆಳುವ ಗರುವನ ಕಂಡೆ ನಾನು.

ಪರಮಗುರು ಚನ್ನಮಲ್ಲಿಕಾರ್ಜುನನ ನಿಲವ ಕಂಡು ಬದುಕಿದೆನು.

ಹಾಡು ಮುಗಿಯಿತು. ಗೌರವಭಾವನೆಯಿಂದ ಬಳಿಗೆ ಬಂದು ಅರ್ಚಕ ನಮಸ್ಕರಿಸುತ್ತಾ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿದ ಮಹಾದೇವಿಯೂ ಕದಳಿಯ ವನಕ್ಕೆ ಹೋಗುವ ನಿರ್ಧಾರವನ್ನು ಆಗಲೇಮಾಡಿದ್ದರು:

ಚನ್ನ ಮಲ್ಲಿಕಾರ್ಜುನನ ಎದುರು ನಿಂತರು.

"ನಿನ್ನನ್ನು ಕೂಡಿ, ಸಮರಸಗೊಳ್ಳುವುದಕ್ಕಾಗಿಯೇ ನಿನ್ನ ಅಂತರಂಗದ ಗರ್ಭಗೃಹವೆಂದು ತಿಳಿದಿರುವ ಕದಳಿಯ ವನಕ್ಕೆ ನಡೆಯುತ್ತಿದ್ದೇನೆ. ಸರ್ವಶಕ್ತಿ ಸಮನ್ವಿತನಾಗಿ ನೀನಲ್ಲಿ ಮೈದೋರಿ ನನ್ನನ್ನು ಸ್ವೀಕರಿಸು" ಎಂದು ವಂದಿಸಿ ಹೊರಗೆ ಬಂದತ್ತರೆ ಕದಳಿಯ ಚಿತ್ರವನ್ನು ಮನಸ್ಸಿನಲ್ಲಿಯೇ ಕಟ್ಟಿಕೊಳ್ಳುತ್ತಾ ದೇವಾಲಯವನ್ನು ಬಲಕ್ಕೆ ಬಿಟ್ಟು ಉತ್ತರಕ್ಕೆ ನಡೆದು ಆನಂತರ ವಾಯುವ್ಯದ ಕಡೆಗೆ ತಿರುಗುತ್ತಿತ್ತು ಮಹಾದೇವಿ ನಡೆಯುತ್ತಿದ್ದ ಮಾರ್ಗ. ಮಾರ್ಗದರ್ಶಕರಾದ ಚುಂಚರಲ್ಲಿಬ್ಬರು ಮುಂದೆ, ಇಬ್ಬರು ಹಿಂದೆ ನಡೆಯುತ್ತಾ ಅವರನ್ನು ಕರೆದೊಯ್ಯು ತಿದ್ದರು. ಮಹಾದೇವಿ ಅವರನ್ನು ಹತ್ತಿರ ಕರೆದು ಮಾತನಾಡಿಸಲು ಪ್ರಯತ್ನಿಸಿದರು, ಭಾಷೆಯ ತೊಡಕಿನಿಂದಾಗಿ ಮಾತು ಸ್ಪಷ್ಟವಾಗುತ್ತಿರಲಿಲ್ಲ. ಆದರೆ ಭಯಭಕ್ತಿಯಿಂದ ಕೂಡಿದ ಅವರ ವರ್ತನೆಯನ್ನು ಕಂಡು ಅಕ್ಕಮಹಾದೇವಿಯವರಿಗೆ ಆಶ್ಚರ್ಯವಾಗುತ್ತಿತ್ತು.

ಮಧ್ಯಾಹ್ನದ ವೇಳೆಗೆ ಮಾರ್ಗ ಮಧ್ಯದಲ್ಲಿ ಒಂದು ಚುಂಚರ ಹಳ್ಳಿ ಸಿಕ್ಕಿತು. ಅಲ್ಲಿನ ಚುಂಚರ ಆತಿಥ್ಯವನ್ನು ಪಡೆದು, ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡ ನಂತರ ಮತ್ತೆ ನಡೆಯತೊಡಗಿದರು. ಮಧ್ಯಾಹ್ನದ ಬಿಸಿಲಿನಲ್ಲಿ ದಾರಿ ನಿಧಾನವಾಗಿ ಸಾಗುತ್ತಿತ್ತು. ಹೀಗೆ ದೂರದ ದಾರಿಯನ್ನು ಹುರುಪಿನಿಂದ ಮುಂದೆ ನಡೆದರು. ಅವರ ಕಣ್ಣಿಗೆ ಕಾಣುವ ಎಲ್ಲ ವಸ್ತುವೂ ಮಲ್ಲಿಕಾರ್ಜುನನೆಂದು ತೋರುತ್ತಿತ್ತುಅಕ್ಕ ಶ್ರೀಗಿರಿಯನ್ನು ಪರಿಸರವನ್ನು ಕಂಡು ಅತ್ಯಂತ ಆನಂದ ಭರಿತರಾಗಿ ಉದ್ಗರಿಸುತ್ತಾರೆ.

"ವನವೆಲ್ಲ ಕಲ್ಪತರು, ಗಿಡವೆಲ್ಲ ಮರುಜವಣಿ ಶಿಲೆಗಳೆಲ್ಲ ಪರುಷ, ನೆಲವೆಲ್ಲ ಅವಿಮುಕ್ತ ಕ್ಷೇತ್ರ ಜಲವೆಲ್ಲ ನಿರ್ಜರಾಮೃತ, ಮೃಗವೆಲ್ಲ ಪುರುಷಾಮೃಗ ಎಡಹುವ ಹರಳೆಲ್ಲಾ ಚಿಂತಾಮಣಿ ಚೆನ್ನಮಲ್ಲಿಕಾರ್ಜುನಯ್ಯನ ನೆಚ್ಚಿನ ಗಿರಿಯ ಸುತ್ತಿ ನೋಡುತ್ತ ಬಂದು ಕದಳಿಯ ಬನವ ಕಂಡೆ ನಾನು"

ಈ ವಚನದಲ್ಲಿ ಉಕ್ತವಾದ ವಸ್ತುಗಳು ಅನೇಕ. ಇದು ಅಕ್ಕನ ವ್ಯಕ್ತಿತ್ವದ ಘನತೆಗೆ ಹಿಡಿದ ಕನ್ನಡಿಯಾಗಿದೆ. ಅಕ್ಕ ಪ್ರತಿಯೊಂದು ವಸ್ತುವನ್ನು ನೋಡಿ ಅದರಲ್ಲಿ ಹೊಸತನ್ನು ಕಂಡು ಸಂಭ್ರಮಿಸುವ, ಸಂತೋಷಿಸುವ ಗುಣವನ್ನು ಉಳಿಸಿಕೊಂಡು ಬಂದಿದ್ದಾರೆ. ಅದಕ್ಕಾಗಿ ಶ್ರೀಶೈಲದ ಗಿರಿಯಲ್ಲಿ ಪ್ರತಿಯೊಂದು ವಸ್ತುವೂ ಅವರಿಗೆ ಭಿನ್ನವಾಗಿ ಕಂಡಿದೆ. ತನ್ನ ಗುಣವನ್ನು ಕಳೆದುಕೊಂಡು ಚಿನ್ನದ ಗುಣವಾಗಿ ತೋರಿದೆ. ಶಿಲೆಗಳಲ್ಲಿ, ವನದಲ್ಲಿ, ಗಿಡ-ಮರಗಳಲ್ಲಿ, ಹರಳುಗಳಲ್ಲಿ ಸಹಿತ ತನ್ನ ಮೂಲಗುಣಕ್ಕಿಂತ ಹೆಚ್ಚು ಮಹತ್ವದ ಅಂಶವನ್ನು ಹೊಂದಿದಂತೆ ಕಾಣುವ ಉದಾತ್ತ ದೃಷ್ಟಿ ಅಕ್ಕನದು. ಉನ್ನತ ಸಂಸ್ಕಾರದ ಹೃದಯಕ್ಕೆ ಮಾತ್ರ ಹರಳನ್ನು ಚಿಂತಾಮಣಿಯಾಗಿ, ಶಿಲೆಗಳನ್ನು ಪರುಷವಾಗಿ, ವನವನ್ನು ಕಲ್ಪತರುವಾಗಿ ಕಾಣಲು ಸಾಧ್ಯ. ಅಂಗಗುಣಗಳನ್ನು ಕಳೆದುಕೊಂಡ ಅಕ್ಕನಂತೆ ನಿಸರ್ಗದ ಘಟಕಗಳು ಅಕ್ಕನ ದೃಷ್ಟಿಯಲ್ಲಿ, ಅವರ ಸ್ಪರ್ಶದಲ್ಲಿ ಉತ್ತಮ ಗುಣಮಟ್ಟವನ್ನು ಪಡೆದುಕೊಂಡಿವೆ. ಅಕ್ಕ ಲೋಕವನ್ನು ನೋಡುವ ದೃಷ್ಟಿ ಹಿರಿದು. ಅಲ್ಲಿ ಔನ್ನತ್ಯವನ್ನು, ಉದಾತ್ತತೆಯನ್ನು ವೀಕ್ಷಿಸುತ್ತಾರೆ. ಬಾಲ್ಯದಲ್ಲಿ ನಿಸರ್ಗದ ಚೆಲುವನ್ನು ಕಂಡುಂಡ ಅಕ್ಕನಲ್ಲಿ ಅದರ ಬಗ್ಗೆ ಅಪಾರ ಪ್ರೀತಿ. ಅಕ್ಕನ ಅನೇಕ ವಚನಗಳಲ್ಲಿ ಇದು ವ್ಯಕ್ತವಾಗಿದೆ.ಇಲ್ಲಿ ಉದಾಹರಿಸಿದ ಪ್ರತಿಯೊಂದು ತತ್ವವು ಉನ್ನತ ಗುಣವನ್ನು ಪಡೆದ ವಸ್ತುವಿನೊಂದಿಗೆ ಹೋಲಿಸಲ್ಪಟ್ಟಿದೆ. ಶ್ರೀ ಗಿರಿಯ ಮಹತ್ವವನ್ನು ಸೂಚಿಸುತ್ತದೆ. ಇವೆಲ್ಲ ಒಮ್ಮೆಲೆ ಸಿಗಬೇಕಾದರೆ ಅಸಾಧ್ಯ ಪರಿಶ್ರಮ ಅವಶ್ಯವಾಗಿದೆ. ಅಂಥ ಅವಸ್ಥೆಯನ್ನು, ಅಂದರೆ ಕದಳಿ ಎಂಬ ಭವವನ್ನು ದಾಟಿ ಅಕ್ಕ ಇಲ್ಲಿ ಬಂದಿದ್ದಾರೆ ಮತ್ತು ಇಲ್ಲಿ ಅದ್ಭುತವನ್ನೇ ಕಂಡಿದ್ದಾರೆ.

ವನವೆಲ್ಲಾ ನೀನೆ, ವನದೊಳಗಣ ದೇವತರುವೆಲ್ಲಾ ನೀನೆ ತರುವಿನೊಳಗಾಡುವ ಖಗಮೃಗವೆಲ್ಲಾ ನೀನೆ ಚೆನ್ನಮಲ್ಲಿಕಾರ್ಜುನಾ ಸರ್ವಭರಿತನಾಗಿ ಎನಗೇಕೆ ಮುಖದೋರೆ ?

ವನ, ವನದೊಳಗಿರುವ ದೇವತರು, ನಂತರದ ಸಾಲಿನಲ್ಲಿ ತರುವಿನೊಳಾಡುವ ಖಗ, ಮೃಗ, ಎಲ್ಲವೂ ನೀನೆ. ಕೊನೆಯ ಸಾಲು ಸರ್ವಭರಿತನಾಗಿರುವೆ ಆದರೂ ನನಗೆ ತೋರೆ ಏಕೆ? ಅಕ್ಕನ ಈ ಶಬ್ದಗಳಲ್ಲಿ ಒಂದು ನಾವಿನ್ಯತೆ ಇದೆ. ಶಿವನು ಖಗವಾಗಿ, ಮೃಗವಾಗಿ ದೇವತರುವಾಗಿ ತೋರಿದ್ದಾನೆ. ತೋರುವುದನ್ನು ಅಕ್ಕ ನೋಡುತ್ತಾರೆ. ಆತನ ರೂಪವೇ ನಿಸರ್ಗ. ಆತ ನಿರಾಕಾರನಾಗಿದ್ದರೂ ಈ ಆಕಾರಗಳಲ್ಲಿ ಕಾಣಿಸಿದ್ದಾನೆ. ಅದಕ್ಕಾಗಿ ಅಕ್ಕ ಆತನಿಗೊಂದು ರೂಹು. ಇದರಿಂದ ಭಿನ್ನವಾದ ಒಂದು ರೂಪವನ್ನು ಕಲ್ಪಿಸಿ ತನ್ನ ಭಾವಕ್ಕೊಂದು ಆಲಂಬನವನ್ನು ರಚಿಸಿಕೊಳ್ಳುತ್ತಾರೆ. ನಿಸರ್ಗದ ಘಟಕಗಳಲ್ಲಿ ಚೆನ್ನಮಲ್ಲಿಕಾರ್ಜುನನನ್ನು ಹುಡುಕುವ, ಅವುಗಳನ್ನು ಬೇಡಿಕೊಳ್ಳುವ, ಅವುಗಳ ವಿಶಿಷ್ಟತೆಯನ್ನು ವ್ಯಕ್ತಪಡಿಸುವ ಅಕ್ಕನಲ್ಲಿ ಅವುಗಳ ಬಗ್ಗೆ ಅಗಾಧ ಪ್ರೀತಿ ಇದೆ ಎಂಬುದು ವ್ಯಕ್ತವಾಗುತ್ತದೆ. ನಿಸರ್ಗದ ತೊಂದರೆಗಳಿಗೂ ಅಕ್ಕ ನಲುಗಲಿಲ್ಲ ಅಕ್ಕನ ದೃಷ್ಟಿಯಲ್ಲಿ ಅಲ್ಲಿಯ ನೆಲವೆಲ್ಲ ಅವಿಮುಕ್ತ ಕ್ಷೇತ್ರ ಜಲವೆಲ್ಲಾ ನಿರ್ಜಲಾಮೃತ. ಎಡಹುವ ಹರಳುಗಳೆಲ್ಲ ಚಿಂತಾಮಣಿ. ಎಲ್ಲವೂ 'ಶಿವಮಯ'. ಎಲ್ಲವೂ ಸತ್ಯಂ, ಶಿವಂ, ಸುಂದರಂ ಎಂದು, ಮಧ್ಯಾಹ್ನ ಕಳೆದು ಸೂರ ಕ್ರಮೇಣ ಕೆಳಗಿಳಿಯಲು ಪ್ರಾರಂಭಿಸುತ್ತಿರುವ ವೇಳೆಗೆ, ತಾವು ನಡೆಯುತ್ತಿರುವ ಪರ್ವತದ ಶಿಖರದ ತುದಿಗೆ ಬಂದು ನಿಂತಿದ್ದರು. ಇದುವರೆಗೂ ನಿಧಾನವಾಗಿ ಏರಿಬಂದ ಪರ್ವತವನ್ನು ಅಲ್ಲಿ ನೇರವಾಗಿ ಕೆಳಗೆ

ಇಳಿಯಬೇಕಾಗಿತ್ತು. ಆ ಗಿರಿಯ ಶಿಖರದ ತುಟ್ಟತುದಿಯಲ್ಲಿ ನಿಂತು ನೋಡಿದರೆ ಕೆಳಗೆ ಕಣಿವೆಯಲ್ಲಿ ಹರಿಯುವ ಕೃಷ್ಣಾನದಿ ಒಂದು ಸಣ್ಣ ಕಾಲುವೆಯಂತೆ ಕಾಣುತ್ತಿತ್ತು. ಅವರು ನಿಂತಿರುವ ಆ ಪರ್ವತವನ್ನು ಕೃಷ್ಣಾ ನದಿ ಅರ್ಧಚಂದ್ರಾಕಾರದಲ್ಲಿ ಸುತ್ತುಹಾಕಿಕೊಂಡು ಹೋಗುತ್ತಿತ್ತು. ದಕ್ಷಿಣದ ಕಡೆಯಿಂದ ಬಂದು ಪೂರ್ವಕ್ಕೆ ಬಾಗುತ್ತಾ ಹರಿದು ಮತ್ತೆ ದಕ್ಷಿಣಕ್ಕೆ ತಿರುಗಿ ಮುಂದುವರೆದು ಮರೆಯಾಗುತ್ತಿತ್ತು. ಅರ್ಧಚಂದ್ರನ ಮಧ್ಯದಲ್ಲಿರುವ ನಕ್ಷತ್ರದಂತೆ ಈ ಪರ್ವತದ ಶಿಖರ ನಿಂತಿತ್ತು. ಮಹಾದೇವಿಯವರಿಗೆ ಸೂಚನಗಳನ್ನು ಕೊಡುತ್ತಿದ್ದರು. ತಾವು ವೇಗವಾಗ ವರಾದರೂ ಮಹಾದೇವಿಗೋಸ್ಕರ ಅತಿ ನಿಧಾನವಾಗಿ ಇಳಿಯುತ್ತಿದ್ದರು. ಅರ್ಧದಷ್ಟು ದೂರ ಇಳಿದ ಮೇಲೆ, ಕಡಿದಾದ ಭಾಗ ಸ್ವಲ್ಪ ಕಡಿಮೆಯಾದಂತಾ ಯಿತು. ಕ್ರಮೇಣ ಇಳಿಜಾರಾಗಿರುವ ಜಾಗವನ್ನು ಈಗ ಇಳಿಯುತ್ತಿದ್ದರು. ಇಳಿದಷ್ಟೂ ಪರ್ವತ ಬೆಳೆಯುತ್ತಿರುವಂತೆ ತೋರುತ್ತಿತ್ತು. ನಾಲ್ಕಾರು ಕಡೆಗಳಲ್ಲಿ ಕುಳಿತು ನಿಧಾನವಾಗಿ ಇಳಿಯುತ್ತಿದ್ದರು. ಮಹಾದೇವಿ ಆಯಾಸದಿಂದ ಏದುತ್ತಿದ್ದರೂ ಸುತ್ತಲಿನ ಸೌಂದರ್ಯವನ್ನು ನೋಡುತ್ತಾ ಸುಧಾರಿಸಿ ಕೊಳ್ಳುತ್ತಾ ಇಳಿಯುತ್ತಿದ್ದರು, ಕ್ರಮೇಣ ಪರ್ವತದ ಬುಡಕ್ಕೆ ಬರುತ್ತಿರುವಂತೆ ತೋರುತ್ತಿತ್ತು. ಎದುರಿಗಿರುವುದು ಈಗ ಕಾಲುವೆಯಲ್ಲ, ನದಿಯೆಂಬ ಭಾವನೆ ಬರತೊಡಗಿತ್ತು. ಇನ್ನೂ ಹತ್ತಿರ ಹೋದಂತೆ ಕೃಷ್ಣೆಯ ಸಲಿಲದೇಹದ ಮಂಜುಳನಾದ ಅಸ್ಪಷ್ಟವಾಗಿ ಕಿವಿಗೆ ಬೀಳತೊಡಗಿತು. ಸೂರ್ಯ ಎದುರಿಗಿರುವ ಪರ್ವತಶಿಖರದ ಮೇಲೆ ಕೆಂಪು ಚೆಂಡಿನಂತೆ ಕಾಣಿಸು ತಿದ್ದ. ಆ ವೇಳೆಗೆ ಅಂತೂ ಚುಕ್ಕಲ ಪರ್ವತವನ್ನು ಇಳಿಯುವುದು ಮುಗಿಯಿತು. ಕೃಷ್ಣಾ ನದಿಯ ಮರಳುದಂಡೆಯ ಮೇಲೆ ಈಗ ನಡೆಯತೊಡಗಿದ್ದರು, ಚುಕ್ಕಲ ಪರ್ವತವನ್ನು ಸವೆಸಿ ಬಂದ ಸಂತೋಷದಿಂದ.

ಮರುಳುದಂಡೆಯಮೇಲೆ ಓಡುತ್ತಾ ಮಹಾದೇವಿ ನದಿಯ ಕಡೆಗೆ ನಡೆಯುತ್ತಿದ್ದರು. ಕಲ್ಲು ಬಂಡೆಗಳ ಮೇಲೆ ಅಲ್ಲಿ ನದಿ ವೇಗವಾಗಿ ಹರಿಯುತ್ತಿತ್ತು. ಮರಳನ್ನು ದಾಟಿ, ಬಂಡೆಗಳನ್ನು ನೆಗೆದು, ನೀರಿನ ಬಳಿಗೆ ಬಂದರು ಮಹಾದೇವಿಯವರನ್ನು, ಸ್ವಾಗತವನ್ನು ಬಯಸುವಂತೆ ಕೃಷ್ಣೆ ಸಂಭ್ರಮದಿಂದ ದಡಕ್ಕೆ ಅಪ್ಪಳಿಸಿ ನೊರೆಮುತ್ತನ್ನೆರಚುತ್ತಾ ಕರೆಯುತ್ತಿದ್ದಳು. ಶ್ರೀಶೈಲದ ದೇವಾಲಯದ ಬಳಿ ಪಾತಾಳಗಂಗೆಯಾಗಿ ಮಲ್ಲಿ ಕಾರ್ಜುನನ ಪಾದವನ್ನು ತೊಳೆಯಲು ಇಷ್ಟು ಆತುರದಿಂದ ಓಡುತ್ತಿರುವಳೆಂದೆನಿಸಿತು ಮಹಾದೇವಿಗೆ. ಉಕ್ಕಿಹರಿಯುತ್ತಿರುವ ತಣ್ಣನೆಯ ನೀರನ್ನು ಮುಖದ ಮೇಲೆ ಎರಚಿಕೊಂಡರು. ಅವರ ಆಯಾಸದ ಎಷ್ಟೋ ಭಾಗ ಕಡಿಮೆಯಾದಂತಾಯಿತು. ಚುಂಚರೂ ಸ್ವಲ್ಪ ಕಾಲ ವಿಶ್ರಾಂತಿಯನ್ನು ಪಡೆದರು. ನದಿಯ ದಡದಲ್ಲಿ ಬಹುಶಃ ತಮಗಾಗಿಯೇ ಕಾಯುತ್ತಿದ್ದ ಇನ್ನಿಬ್ಬರು ಚುಂಚರು ಅವರನ್ನು ಕೂಡಿಕೊಂಡಿದ್ದರು. ಸ್ವಲ್ಪ ಹೊತ್ತಾದ ಮೇಲೆ ಅವರೆಲ್ಲಾ ಬಳಿಗೆ ಬಂದು ಮಹಾದೇವಿಗೆ ತಮ್ಮ ಆಲೋಚನೆಯನ್ನು ಹೇಳಿದರು: 'ಈಗಾಗಲೇ ಕತ್ತಲಾಗುತ್ತಿರುವುದರಿಂದ ನದಿಯನ್ನು ನಾಳೆ ಬೆಳಿಗ್ಗೆಯೇ

ದಾಟುವುದು 'ಎಂದು ಅವರು ಹೇಳಿದುದು ಮಹಾದೇವಿಗೂ ಒಪ್ಪಿತವಾಯಿತು. ಆ ರಾತ್ರಿ ನದಿಯ ದಡದ ಮರಳುಹಾಸಿಗೆಯೇ ಅಕ್ಕಮಹಾದೇವಿಯವರಿಗೆ ಮನೆಯಾಯಿತು. ಲಕ್ಷಾಂತರ ನಕ್ಷತ್ರಗಳು ಮಹಾದೇವಿಯ ಭವ್ಯವಾದ ಹರ್ಮ್ಯದ ಮಣಿಕಟ್ಟಿನಂತೆ ಮಿನುಗುತ್ತಿದ್ದವು. ಮಹಾದೇವಿ ಮಲಗುವ ಸ್ಥಳವನ್ನು ನಿರ್ಧರಿಸಿದ ಚುಂಚರು ಅಲ್ಲಿಯ ಮರಳನ್ನು. ಸರಿಗೊಳಿಸಿದ್ದರು. ಅಲ್ಲಿಂದ ಸ್ವಲ್ಪ ದೂರದಲ್ಲಿ ಎರಡು ಮೂರು ಕಡೆ ಕಟ್ಟಿಗೆಯನ್ನು ರಾಶಿಹಾಕಿದ್ದರು. ಮಹಾದೇವಿಗೆ ಅದೇಕೆಂಬುದು ತಿಳಿಯಲಿಲ್ಲ. ಕಾಡುಪ್ರಾಣಿಗಳಿಂದ ರಕ್ಷಿಸಿಕೊಳ್ಳುವುದಕ್ಕಾಗಿ ಎಂದು ಅವರು ಹೇಳಿದಾಗ ಅವರ ಮುಂಜಾಗ್ರತೆಗಾಗಿ ಮೆಚ್ಚಿ ದರು, ಅವರ ಸಂಶಯ ವ್ಯರ್ಥವಾದುದಾಗಿರಲಿಲ್ಲ. ಈ ಮಾತನ್ನು ಆಡುತ್ತಿರುವಂತೆಯೇ. ಎದುರಿಗಿರುವ ಪರ್ವತದ ಬುಡದಲ್ಲಿ ವಿದ್ಯುತ್ತಿನ ಕೆಂಡಗಳಂತೆ ಹೊಳೆಯುತ್ತಿರುವ ಎರಡು ಕಣ್ಣುಗಳು ಮಾತ್ರ ಕಾಣುತ್ತಿದ್ದುವು. ಕ್ರಮೇಣ ಕಣ್ಣುಗಳು ಕೆಳಗಿಳಿದು ಬರತೊಡಗಿದುವು. ಉಸಿರು ಬಿಗಿಹಿಡಿದು ಚುಂಚುರು ಅತ್ತಲೇ ನೋಡುತ್ತಿದ್ದರು. ಹುಲಿ ನೀರನ್ನು ಕುಡಿಯಲು ಹತ್ತಿರ ಹತ್ತಿರ ಬರುತ್ತಿತ್ತು. ನದಿಯ ಬಳಿಗೆ ಬಂದಿತು. ನೇರವಾಗಿ ಇವರ ಎದುರಿಗೇ, ಆದರೆ ಆಚೆಯ ದಡದಲ್ಲಿ ಬಂದು ನೀರನ್ನು ಕುಡಿದು. ಮತ್ತೆ ನಿಧಾನಾವಾಗಿ ಬೆಟ್ಟವನ್ನು ಏರಿಹೋಯಿತು. ಬೆಳಿಗ್ಗೆ ಮುಂಚೆಯೇ ಎದ್ದರು ಮಹಾದೇವಿಯವರು. ಚುಂಚರೆಲ್ಲಾ ಎದ್ದು ಸಿದ್ಧರಾಗಿದ್ದರು. ನದಿಯ ದಂಡೆಯ ಮೇಲೆ ಪ್ರವಾಹಕ್ಕೆ ಮೇಲ್ಮುಖವಾಗಿ ನಡೆಯತೊಡಗಿದರು. ಕಲ್ಲು ಬಂಡೆಗಳನ್ನು ಹತ್ತಿ ಇಳಿದು ಕಷ್ಟದಿಂದ ಒಂದೆರಡು ಮೈಲುಗಳಷ್ಟನ್ನು ನಡೆದ ಮೇಲೆ ಅಲ್ಲಿ ನದಿಯ ವೇಗ ಕಡಿಮೆಯಾಗಿ

ಗಂಭೀರವಾಗಿ ನಿಂತಂತೆ ಕಾಣುತ್ತಿತ್ತು. ಬಿದಿರುಗಳನ್ನು ಕಟ್ಟಿದ ತೆಪ್ಪವೊಂದು ಅಲ್ಲಿ ಸಿದ್ದವಾಗಿತ್ತು. ಅದರಲ್ಲಿ ಎಲ್ಲರೂ ಕೃಷ್ಣಯನ್ನು ದಾಟಿ ಆಚೆಯ ದಡವನ್ನು ಸೇರಿದರು. ಅಕ್ಕಮಹಾದೇವಿಯವರು ತನ್ನ ಪರಮಆರಾಧ್ಯ ಚೆನ್ನಮಲ್ಲಿಕಾರ್ಜುನನನ್ನು ಪ್ರಾರ್ಥಿಸುತ್ತಾರೆ ಆ ದಿನಯ ಸುಳಿಯನ್ನ, ತನ್ನ ಜೀವನಕ್ಕೆ ನೆನಪಿಸಿಕೊಂಡು ಒಂದು ಸೂಂದರ ಸ್ವರ ವಚನ ಬರೆಯುತ್ತರೆ.

ನಂಬಿದೆ ಗುರುವೇ ನಂಬಿದೆ, ನಂಬಿದೆ ಸ್ವಾಮಿ ನಂಬಿದೆ ಅಂಬಿಕಾರಮಣ, ನೀನಂಬಿಗ!

ಹೊಳೆಯ ಬರವ ನೋಡಂಬಿಗ!
ಸೆಳಹು ಬಹಳ ಕಾಣಂಬಿಗ
ಸುಳುಹಿನೊಳಗೆ ಬಿದ್ದೆನಂಬಿಗ!
ಸೆಳೆದುಕೊಳ್ಳೋ ನೀನಂಬಿಗ!

ಆರು ತೆರೆಯ ನೋಡಂಬಿಗ!
ಬಲು ಮೀರಿ ಬರುತಲಿವೆ ಅಂಬಿಗ.!
ಹಾರಲೊದೆದು, ಎನ್ನ ತಡಿಗೆ ಸೇರಿಸು, ನೀ
ದೂರ ಮಾಡದಿರು ಅಂಬಿಗ!

ತುಂಬಿದ ಹರಿಗೋಲಂಬಿಗ!
ಅದ ಕೊಂಭತ್ತು ಛಿದ್ರ ನೋಡಂಬಿಗ!
ಸಂಭ್ರಮವನು ನೋಡಂಬಿಗ!
ಇದ ರಿಂಬನರಿದು ತೆಗೆಯಂಬಿಗ

ಹತ್ತು ಹತ್ತು ನೋಡಂಬಿಗ!
ಹತ್ತಿದರೈವರು ಅಂಬಿಗ
ಮುತ್ತಿಗೆಗೊಳಗಾದೆನಂಬಿಗ,
ಎನ್ನ ನೆತ್ತಿಕೊಳ್ಳೋ ನೀನಂಬಿಗ!

ಸತ್ಯವೆಂಬ ಹುಟ್ಟಂಬಿಗ,
ಸದ್ ಭಕ್ತಿಯೆಂಬ ಪಥವಂಬಿಗ,
ನಿತ್ಯಮುಕ್ತ ನಮ್ಮ ಚೆನ್ನಮಲ್ಲಿಕಾರ್ಜುನನ
ಮುಕ್ತಿಮಂಟಪಕೊಯ್ಯೋ, ಅಂಬಿಗ!

ಅದು ಕೃಷ್ಣಯನ್ನು ಸೇರುವುದಕ್ಕೆ ಒಂದೆರಡು ಮೈಲುಗಳಷ್ಟು ಹಿಂದೆ ಮನೋಹರವಾದ ಸನ್ನಿವೇಶವನ್ನು ನಿರ್ಮಿಸಿಕೊಂಡಿತ್ತು. ಸುತ್ತಲೂ ಎತ್ತರದ ಪರ್ವತಗಳು. ಮಧ್ಯದ ಆ ಕಣಿವೆಯ ಪ್ರದೇಶದಲ್ಲಿ ದಟ್ಟವಾದ ಹಸಿರು ಮರಗಳು. ಅವುಗಳ ಮಧ್ಯದಲ್ಲಿ ಹರಿಯುತ್ತಿದೆ 'ಬುಗ್ಗುವಾಗು' ಎಂದು ಚುಂಚರು ಕರೆಯುತ್ತಿರುವ ಈ ಸಣ್ಣ ಹಳ್ಳ. ಅದಕ್ಕೆ ಸ್ವಲ್ಪ ದೂರದಲ್ಲಿಯೇ ಚುಂಚರ ಒಂದು ಹಳ್ಳಿ, ಅಂದರೆ ಅವರ ನಾಲ್ಕಾರು ಗುಡಿಸಲುಗಳು. ಅದೇ ತ್ರಿಕೂಟಪರ್ವತದ ಬುಡ. ತ್ರಿಕೂಟಪರ್ವತದ ತುಟ್ಟತುದಿಯ ಬಟ್ಟಬಯಲಿನಲ್ಲಿಯೇ ಕದಳಿವನವಿರುವುದೆಂದು ಪ್ರಭು ಹೇಳಿದ್ದ. ಕದಳಿಯ ಬುಡದಲ್ಲಿಯೇ ಈಗ ಇದ್ದ ಮಹಾದೇವಿ. ಕದಳಿ ವನಕ್ಕೆ ಹೋಗುವುದಕ್ಕೆ ಮುನ್ನ ಇಲ್ಲಿ ಕೆಲವು ವರ್ಷಗಳ ಕಾಲ ಇದ್ದು ಹೋಗಬೇಕೆಂದು ನಿರ್ಧರಿಸಿದರು. ತನ್ನ ಬಯಕೆಯನ್ನು ಚುಂಚರಿಗೆ ತಿಳಿಸಿದರು. ಸಂತೋಷದಿಂದ ಅವರು ಒಪ್ಪಿದರು. ಶ್ರೀಶೈಲದಿಂದ ಜೊತೆಯಲ್ಲಿ ಬಂದ ಚುಂಚರು ಮಹಾದೇವಿಯ ಅಪ್ಪಣೆ ಪಡೆದು ಹಿಂದಕ್ಕೆ ಹೊರಟುಹೋದರು.  ಅಲ್ಲಿಂದ ಮುಂದೆ ದೂರ ಹೋಗುವುದರೊಳಗಾಗಿ ಅತಿ ಸುಂದರವಾದ ಸ್ಥಳ ಗೋಚರಿಸಿತು. ಪ್ರಕೃತಿನಿರ್ಮಿತವಾದ ಆಶ್ಚರ್ಯವನ್ನು ಕಂಡು ಮಾರುಹೋಗಿದ್ದರು. ಹಳ್ಳದಿಂದ ಪೂರ್ವಕ್ಕಿರುವ ಬೆಟ್ಟವನ್ನು ಹತ್ತಿ ಉತ್ತರದ ಕಡೆಗೆ ಮೇಲೇರುತ್ತಾ ಸ್ವಲ್ಪ ದೂರ ಹೋಗುವುದರೊಳಗಾಗಿ ಪಶ್ಚಿಮದ ಕಡೆಯಿಂದ ಹಬ್ಬಿ ಬಂದಿರುವ ಬೆಟ್ಟವೂ ಅಲ್ಲಿ ಬಂದು ಸೇರುತ್ತಿತ್ತು. ಎರಡೂ ಬೆಟ್ಟಗಳೂ ಸೇರುವ ಆ ಮೂಲೆಯಲ್ಲಿ ಅತಿ ವಿಶಾಲವಾದ ಒಂದು ಗವಿ ಏರ್ಪಟ್ಟಿತ್ತು.

ಮಹಾದೇವಿ ಅದನ್ನು ಕಂಡೊಡನೆಯೇ ಆಶ್ಚರ್ಯ ಸಂತೋಷಗಳಿಂದ ಒಳಗೆ ನುಗ್ಗಿದಳು. ನೂರಾರು ಗಜಗಳಷ್ಟು ವಿಸ್ತಾರವಾಗಿತ್ತು ಆ ಗವಿ. ಸಂಪೂರ್ಣವಾಗಿ ನೋಡಬೇಕೆಂಬ ಕುತೂಹಲ ಹುಟ್ಟಿತು. ಗವಿಯ ಒಳಗೆ ಬಲಭಾಗದ ಕಡ ನಡೆಯತೊಡಗಿದಳು. ಸ್ವಲ್ಪ ದೂರ ಹೋಗುವುದರೊಳಗೆ ಪರ್ವತದ ಕಲ್ಲ ಗೋಡೆ ಅಡ್ಡ ಬಂದಿತು. ಆ ಭಾಗದ ಗವಿ ಅಲ್ಲಿಗೆ ಮುಗಿದಿತ್ತು. ಹಿಂದಕ್ಕೆ ಬಂದು ಮತ್ತೆ ಗವಿಯ ಎಡಗಡೆ ಹೊರಟಳು. ಮುಂದೆ ಹೋದಂತೆಲ್ಲಾ ಮಾರ್ಗ ಕಿರಿದಾಗುತಾ ಹೋಗುತ್ತಿತ್ತು. ಅನಂತರ ಅದು ಬಲಕ್ಕೆ ತಿರುಗಿತು. ಗಾಳಿ ಬೆಳಕು ಕಡಿಮೆಯಾಗುತ್ತಾ • ಉಸಿರು ಕಟ್ಟುತ್ತಿತ್ತು. ಕಣ್ಣಿಗೆ ಕತ್ತಲೆ ಆವರಿಸುತ್ತಿತ್ತು. ಧೈರಮಾಡಿ ಮುಂದೆ ನಡೆದರು ಅಕ್ಕ ಮಹಾದೇವಿಯವರು. ಸ್ವಲ್ಪ ದೂರ ಹೋದಮೇಲೆ ಮತ್ತೆ ಎಡಕ್ಕೆ ತಿರುಗಿತು ಮಾರ್ಗ. ಕೊನೆಗೆ ಇನ್ನೂ ಇಕ್ಕಟ್ಟಾಗುತ್ತಾ ಒಬ್ಬರು ಮಾತ್ರ ಕಷ್ಟದಿಂದ ಹೋಗಬಹುದಾದಷ್ಟು ಕಿರಿದಾಗಿ ಕೊನೆಗೊಂಡಿತ್ತು. ಅಲ್ಲಿ ಒಬ್ಬರು ಕುಳಿತುಕೊಳ್ಳುವಂತಹ ಚಿಕ್ಕ ವೇದಿಕೆಯೊಂದು ಮಬ್ಬು ಬೆಳಕಿನಲ್ಲಿ ಗೋಚರಿಸಿದಂತಾಯಿತು ಹೆಚ್ಚುಕಾಲ ಅಲ್ಲಿರಲು ಆಗಲಿಲ್ಲ, ಹೊರಗೆ ಬಂದು ನೀಳವಾಗಿ ಉಸಿರೆಳೆದು ಹೊರಗಿನ ಪರಿಶುದ್ಧ ಗಾಳಿಯನ್ನು ಸೇವಿಸಿದರು. ಗವಿಯ ರಚನೆ ಮಹಾದೇವಿಯರನ್ನ ಮನಸ್ಸನ್ನು ಸೆಳೆದಿತ್ತು. ಗವಿಯ ಕತ್ತಲೆಯ ಆ ಕೊನೆಯ ಭಾಗದಲ್ಲಿ ಇದ್ದ ವೇದಿಕೆ ಇನ್ನೂ ಆಶ್ಚರ್ಯವನ್ನುಂಟುಮಾಡಿತ್ತು. ಅನುಷ್ಠಾನಕ್ಕೆ ಕುಳಿತುಕೊಳ್ಳುವುದಕ್ಕೆ ಅದು ಯೋಗ್ಯವಾದ ಸ್ಥಳವಾಗಿತ್ತು ಆದರೆ ಗವಿಯ ಮುಂಭಾಗ ತುಂಬಾ ಸುಂದರವಾಗಿತ್ತು. ಭವ್ಯತೆಯ ಅನುಭವವನ್ನು ತಂದುಕೊಡುವಂತಿತ್ತು. ಪರ್ವತಗಳ ಬಂಡೆಗಳು ಚಿತ್ರವಿಚಿತ್ರವಾದ ಆಕಾರವನ್ನು ನಿರ್ಮಿಸಿ, ಗವಿಯ ಮಹಾದ್ವಾರಕ್ಕೆ ಸಹಜವಾದ ಕಲೆಯ ತೋರಣವನ್ನು ಕಟ್ಟಿದ್ದುವು ಗವಿಯ ಮುಂದುಗಡೆ ಕುಳಿತರೆ ಕೆಳಗಡೆ ಬಗ್ಗುವಾಗು ಹರಿಯುವುದು ಕಾಣುತ್ತಿತ್ತು.  ಪರ್ವತವನ್ನು ಸುತ್ತಿ ಸುತ್ತಿ ಬರುತ್ತಿರುವ ಆ ಚಿಕ್ಕ ಹಳ್ಳ, ಆ ಎತ್ತರದಲ್ಲಿ ನಿಂತು ನೋಡಿದರೆ ಬಹಳ ದೂರದಿಂದಲೂ ತನ್ನ ದೀರ್ಘದೇಹವನ್ನು ಕಣ್ಣಿಗೆ ಬೀಳಿಸುತ್ತಿತ್ತು. ತನ್ನ ಮಾರ್ಗದಲ್ಲಿ ಬಂದ ಅಡ್ಡಿಗಳನ್ನೆಲ್ಲಾ ಎದುರಿಸಿ ತಪ್ಪಿಸಿಕೊಂಡು, ಕೊನೆಗೂ ಬಿಡದೆ ಕೃಷ್ಣಯನ್ನು ಸೇರಲು ಹೋಗುವ ಧನ್ಯತೆಯ ಸಾಹಸ ಗೋಚರಿಸಿದಂತಾಯಿತು ಮಹಾದೇವಿಗೆ ಅದನ್ನು ಕಂಡಾಗ ಆ ಗುಹೆಯ ಮುಂಭಾಗದ ಮಂಟಪ, ಮಹಾದೇವಿಗೆ ಅತಿಪ್ರಿಯವಾದ ಸ್ಥಳವಾಯಿತು. ಅಲ್ಲಿ ಕುಳಿತು ಗಂಟೆಗಳನ್ನು ನಿಮಿಷಗಳಂತೆ ಕಳೆಯುತ್ತಿದ್ದಳು. ಚುಂಚರು ಅದನ್ನು 'ಅಕ್ಕಮ್ಮ ಗವಿ 'ಎಂದೇ ಕರೆಯತೊಡಗಿದರು. ಹಾಗೆಯೇ ಬಗ್ಗು ವಾಗು 'ಅಕ್ಕಮ್ಮವಾಗು 'ಆಯಿತು. ಬೆಳಿಗ್ಗೆ ಮಹಾದೇವಿ ನಿತ್ಯದಂತೆ ಹಳ್ಳದಲ್ಲಿ ಸ್ನಾನಮಾಡಿ ಪೂಜೆ ಮಾಡಿದರು, ಗುಡಿಸಲಿಗೆ ಹಿಂತಿರುಗುವ ವೇಳೆಗೆ ಚುಂಚರ ಮುಖಂಡ ಹಣ್ಣು ಹಾಲುಗಳನ್ನು ಹಿಡಿದು ನಿಂತಿದ್ದ ಆ ಜನರು  ಮಹಾದೇವಿಯವರಿಗೆ ನಮಸ್ಕರಿಸಿಹಾಲು ಹಣ್ಣು ಮುಂದಿಟ್ಟು ಬುಗ್ಗುವಾಗ ಹಳ್ಳಿಯ ಚುಂಚರು ಮಹಾದೇವಿಯ

ಸೇವೆಯನ್ನು ಸಂತೋಷದಿಂದ ಕೈಗೊಂಡರು. ನಿತ್ಯ ಹಾಲುಹಣ್ಣುಗಳನ್ನು ಅತಿವಿಶ್ವಾಸದಿಂದ ತಂದುಕೊಡುತ್ತಿದ್ದರು. ಶ್ರೀಶೈಲದ ಭ್ರಮರಾಂಭೆಯೇ ಈ ರೂಪದಿಂದ ಬಂದಿರುವಳೆಂಬಂತಹ ಮುಗ್ಧಭಕ್ತಿಯಿಂದ. ಮಹಾದೇವಿಯನ್ನುಕಾಣುತ್ತಿದ್ದರು ಚುಂಚರು.ಇನ್ನೇನು ಅನುಷ್ಠಾನಕ್ಕೆಕುಳಿತುಕೊಳ್ಳಬೇಕು, ಅಷ್ಟರಲ್ಲಿ ಗವಿಯ ಕಡೆಗೆ ಯಾರೋ ಓಡುತ್ತಾ ಬರುತ್ತಿರುವುದನ್ನು ಕಂಡರು ಮಹಾದೇವಿ, ಬಳಿಗೆ ಬರುತ್ತಿದ್ದಂತೆಯೇ ಗುರುತಿಸಿದರು. ಅಂದು ಶ್ರೀಶೈಲದಿಂದ ನಿನ್ನನು ಇಲ್ಲಿಗೆ ಕರೆದುಕೊಂಡು ಬಂದ ಚುಂಚರಲ್ಲಿ ಈತನೂ ಒಬ್ಬನಾಗಿದ್ದ. ಇಲ್ಲಿ ತನ್ನನ್ನು ಬಿಟ್ಟು ಶ್ರೀಶೈಲಕ್ಕೆ ಹೋದವನು ಮತ್ತೇಕೆ ಹೀಗೆ ಓಡಿಬರುತ್ತಿದ್ದಾನೆಂದು ಆಶ್ಚರಪಡುತ್ತಿರುವ ವೇಳೆಗೆ ಆತ ಬಳಿಗೆ ಬಂದು ನಮಸ್ಕರಿಸಿದ: ಅವನು ಹೇಳಿದುದರಲ್ಲಿ ಒಟ್ಟು ಅರ್ಥ ಸ್ವಲ್ಪಮಟ್ಟಿಗಾಯಿತು. "ಶ್ರೀಶೈಲದಿಂದ ನಿಮ್ಮನ್ನು ನೋಡಲು ಯಾರೋ ಬಂದಿದ್ದಾರೆ. ನೆನ್ನೆ ಶ್ರೀಶೈಲಕ್ಕೆ ಬಂದರು. ನಿಮ್ಮನ್ನು ನೋಡಬೇಕೆಂದು ಆತುರಪಡಿಸಿದರು. ಕರೆದುಕೊಂಡು ಬಂದಿದ್ದೇನೆ. ಹಳ್ಳದ ಬಳಿ ಇದ್ದಾರೆ, ತಮ್ಮನ್ನು ನೋಡಲು ಚಡಪಡಿಸುತ್ತಿದ್ದಾರೆ. ಬರಬೇಕು. ಇಷ್ಟನ್ನು ಅವನ ಮಾತು, ಮುಖಭಾವ ಮೊದಲಾದವುಗಳಿಂದ ಅರ್ಥಮಾಡಿ ಕೊಂಡಳು ಮಹಾದೇವಿ. ತನ್ನನ್ನು ನೋಡಲು ಯಾರು ಬಂದಿರಬಹುದೆಂಬುದನ್ನು ಊಹಿಸಲಾರದವರಾಗಿ ತನ್ನನ್ನು ನೋಡಲು ಬಂದಿರುವ ಈ ಪುರುಷರಾರಿರಬಹುದೆಂಬುದು ಮಹಾದೇವಿವರ ಊಹೆಗೂ ನಿಲುಕದ ವಿಷಯವಾಗಿತ್ತು. ಅದನ್ನೇ ಕುರಿತು ಆಲೋಚಿಸುತ್ತಿರುವಷ್ಟರಲ್ಲಿ

ಅತ್ತ ಆ ಪುರುಷ, ಮಹಾದೇವಿಯನ್ನು ಕಂಡೊಡನೆಯೇ ಉದ್ವೇಗವನ್ನು ತಾಳಲಾರದೆ ತಾನೇ ಹಳ್ಳವನ್ನು ದಾಟಿ ಮಹಾದೇವಿಯತ್ತ ಓಡತೊಡಗಿದನು, ಮಹಾದೇವಿಯ ಕುತೂಹಲ ಕೊನೆಮುಟ್ಟುತ್ತಿರುವಷ್ಟರಲ್ಲಿ "ತಾಯಿ...."ಎಂದು ಕೂಗುತ್ತಾ ಬಂದು ಮಹಾದೇವಿಯ ಕಾಲಮೇಲೆ ಬಿದ್ದನು ಮಹಾದೇವಿ ತನ್ನ ಕಿವಿಯನ್ನು ತಾನೇ ನಂಬಲಾರದವರದರು. ಪರಿಚಿತ ಧ್ವನಿ; ಹೌದು. ಆದರೆ ಅದು ಇಲ್ಲಿ ಕೇಳಿಬರುವುದು ಹೇಗೆ ಸಾಧ್ಯ? ಅನುಮಾನದಿಂದ ಹಿಂದೆ ಸರಿಯುತ್ತಾ ಕೇಳಿದರು:"ಯಾರಪ್ಪ ನೀನು?" ಮರೆತುಹೋಯಿತೇ, ತಾಯಿ?" ಅಕ್ಕಮಹಾದೇವಿ ಮರೆತಿರಲಿಲ್ಲ. ಆದರೆ ಪ್ರತ್ಯಕ್ಷವಾದರೂ ನಂಬಲಾಗದಷ್ಟು ಆಸಂಭವವಾಗಿತ್ತು ಮಹಾದೇವಿಯ ಎದುರಿನಲ್ಲಿ ಕುಸಿದು ಕುಳಿತ. ಆತನಾರೆಂಬುದನ್ನು ಹೇಳಿದರೂ ಒಪ್ಪಿಕೊಳ್ಳುವುದು ಕಷ್ಟವಾಗುವಂತಿತ್ತು, "ಕೌಶಿಕ ಮಹಾರಾಜರೇ, ಏಳಬೇಕು.... ತಾವು ಹೀಗೆ...." ಮಹಾದೇವಿಯ ಮಾತು ಇನ್ನೂ ಬಾಯಲ್ಲಿದ್ದಂತೆಯೇ ಕೌಶಿಕ:

"ಅಲ್ಲ ಮಹಾದೇವಿ.... ನಾನು ಕೌಶಿಕ ಮಹಾರಾಜನಲ್ಲ.... ನಿನ್ನ ದಾಸಾನುದಾಸ.... ರಾಜ್ಯ ಬಂಧನವನ್ನೆಲ್ಲಾ ಕಳೆದುಕೊಂಡು ಬಂದಿರುವ ಶಿವಭಕ್ತ. ತಲೆಯನ್ನೆತ್ತಿ ಮಹಾದೇವಿಯನ್ನು ನೋಡುತ್ತಾ ಹೇಳಿದ. ಅಂದು ತನ್ನ ಬಲಾತ್ಕಾರಕ್ಕೆ ಗುರಿಯಾಗಿ, ಸೆರಗನ್ನು ಕಿತ್ತೆಸೆದ ಮಹಾದೇವಿಯ ನಗ್ನ ದೇಹವನ್ನು ಕಂಡ ಕೌಶಿಕನ ಕಣ್ಣುಗಳು, ಇಂದು ತಪೋಲಕ್ಷ್ಮಿಯೇ ಭ್ರಮರಾಂಭೆಯೇ ಮೈವತ್ತು ನಿಂತಂತೆ ತೇಜಸ್ಸಿನ ಕಿರಣಗಳನ್ನು ಹೊರಸೂಸುತ್ತಿರುವ ಅಕ್ಕಮಹಾದೇವಿಯ ದಿವ್ಯ ವಿಗ್ರಹವನ್ನು ವೀಕ್ಷಿಸಿದುವು. ನಾನು ಶಿವಭಕ್ತನಾಗಿದ್ದೇನೆ ಮಹಾದೇವಿ ಈಗ, ಕೌಶಿಕಮಹಾರಾಜನಿಗೆ ಅಕ್ಕಮಹದೇವಿಯರ ಮೇಲಿನ ವ್ಯಾಮೋಹ ಕಡಿಮೆಯಾಗಿರಲಿಲ್ಲ. ಮಹಾದೇವಿಯವರಿಗೆ ಒಂದು ವಚನ ಹಾಡುವರು.

ಬಿಟ್ಟೆನೆಂದಡೆ ಬಿಡದೀ ಮಾಯೆ

ಬಿಡದಿದ್ದಡೆ ಬೆಂಬತ್ತಿತ್ತು ಮಾಯೆ. ಯೋಗಿಗೆ ಯೋಗಿಣಿಯಾಯಿತ್ತು ಮಾಯೆ,

ಸವಣಂಗೆ ಸವಣಿಯಾಯಿತ್ತು ಮಾಯೆ. ಯತಿಗೆ ಘರಾಕಿಯಾಯಿತ್ತು ಮಾಯೆ.

ನಿನ್ನ ಮಾಯೆಗೆ ನಾನಂಜುವಳಲ್ಲ, ಚೆನ್ನಮಲ್ಲಿಕಾರ್ಜುನದೇವಾ, ನಿಮ್ಮಾಣೆ.

ಅಕ್ಕಮಹಾದೇವಿಯವರು ಸಾವ ಕೇಡುವ ಗಂಡ ನನಗೆ ಬೇಡ ಎಂದು ತಪಸ್ಸಿಗೆ ಬಂದರು, ಆದರೆ ರಾಜ್ಯಭ್ರಷ್ಟನಾದ ಕೌಶಿಕ ಅಕ್ಕಮಹಾದೇವಿಯರನ್ನುಪಡೆಯಲು ತಾನೂ ವಿರಾಗಿ ವೇಷಹಾಕಿ ಬೆನ್ನ ಹಿಂದೆ ಬಂದನು, ಕಾವಿವಲ್ಕಲಗಳನ್ನುಟ್ಟು ಭಕ್ತನಾದೆನು ಮಹಾದೇವಿ ನಾನು ಶರಣನಾಗಿದ್ದೇನೆ

ಈಗಲಾದರೂನನ್ನು ಲಗ್ನ ಮಾಡಿಕೊ ಎಂದು ಬೇಡತೊಡಗಿದ್ದಾನೆ. ಪೀಡೆಹೋಯಿತು ಎಂದು ಈ ಕಾಡಾರಣ್ಯಕ್ಕೆ ಬಂದರೆ ಈ ಪೀಡೆ ಇಲ್ಲಿಗೂಬಂತು ಈ ಮಾಯೆಯಿಂದ ನನಗೆ ಬಿಡುಗಡೆ ಇಲ್ಲವೆ? ಅಕ್ಕಮಹಾದೇವಿಯವರು ಕಳವಳಿಸಿದ್ದಾರೆ. ಅಲ್ಲೆಂದೊಡೆ ಉಂಟೆಂಬುದೀ ಮಾಯೆ. ನಾನು ಯಾವುದನ್ನು ಇಲ್ಲ ಎನ್ನುತ್ತೇನೆ ಅದನ್ನು ಇದು ಉಂಟು ಎಂದು ಹೇಳುತ್ತದೆ. ಒಲ್ಲೆನೆಂದೊಡೆ ಬಿಡದೀಮಾಯೆ ಒಲ್ಲೆ ಹೋಗು ಎಂದರೆ ಹೋಗದು ಈ ಮಾಯೆ. ನಾನು ಲೌಕಿಕ ನಡೆಸಲು ಬಂದ ವಳಲ್ಲ. ಹೋಗು ಎಂದರೆ ಹೋಗುತ್ತಿಲ್ಲ. ಈ ಕೌಶಿಕ ಮಹಾರಾಜ, ಚೆನ್ನಮಲ್ಲಿಕಾರ್ಜುನನೆ ಇದು ನನಗೆ ಹಣೆ ಬರಹವೆ. ನಾನು ನಿನ್ನನ್ನು ನಂಬಿದ್ದೇನೆ. ನಿನ್ನನ್ನು ಮೊರೆಹೊಕ್ಕಿದ್ದೇನೆ. ಈ ಮಾಯೆ ಯಿಂದ ಬಿಡುಗಡೆಗೊಳಿಸು ಕಾಪಾಡು ಕಾಪಾಡು. ಶಿವಧೋ ಶಿವಧೋ. ನಿನಗೆ ಮೊರೆಹೊಕ್ಕಿದ್ದೇನೆ. ಹೀಗೆ ನೀವು ರಾಜ್ಯವನ್ನು ತ್ಯಜಿಸಿ, ನಿಮ್ಮ ಕರ್ತವ್ಯವನ್ನು ಮರೆತು, ಇಷ್ಟೊಂದು ಕಷ್ಟಪಟ್ಟು ನನ್ನನ್ನು ಹುಡುಕಿಕೊಂಡು ಅಲೆಯುವ ಅಗತ್ಯವೇನಿತ್ತು, ಕೌಶಿಕ ಮಹಾ?" "ಅಗತ್ಯವೇನೆಂದು ಕೇಳುತ್ತಿದ್ದೀಯ? ನೀನಿಲ್ಲದೆ, ನನ್ನ ಜೀವನವೇ ಅನಗತ್ಯವಾಗಿತ್ತು. ಅದಾವ ಜನ್ಮದ ಸಂಸ್ಕಾರಬಂಧನವೋ, ನಿನ್ನ ವಿನಹ ನಾನು ಬಾಳುವುದು ಅಸಾಧ್ಯವೆಂದು ಅಸಾಧ್ಯವೆಂದು ತೋರಿತು. ಬಂಧನ ನನ್ನನ್ನು ಎಳೆಯಿತು. ನೀನಿಲ್ಲದ ನಾನು ಉಳಿಯಲಾರೆನೆಂದು ಅನ್ನಿಸಿತು. ಉಳಿದರೂ ವ್ಯರ್ಥವೆಂದು ಆತ್ಮ ತಿರಸ್ಕೃತಿ ತೋರಿತು. ಅದಕ್ಕಾಗಿ ಹೊರಟೆ. ನಾನು ಭಕ್ತನಾಗಬೇಕೆಂಬುದು ನಿನ್ನ ಆಶಯವಾಗಿತ್ತ ಲ್ಲವೇ? ಇದೋ ನಾನಿಂದು ಭಕ್ತನಾಗಿದ್ದೇನೆ. ನನ್ನನ್ನು ಸ್ವೀಕರಿಸಿ ಕಾಪಾಡು "ಎನ್ನುತ್ತಾ ಮಹಾದೇವಿಯ ಪಾದಗಳ ಮೇಲೆ ಬಿದ್ದ ಕೌಶಿಕ. ಅವನ ನಿಷ್ಠೆಯನ್ನು ಕಂಡು ಮರುಗಿತು ಮಹಾದೇವಿಯ ಮನಸ್ಸು.

'ಅದಾವ ಜನ್ಮದ ಸಂಸ್ಕಾರಬಂಧನವೋ ಅವನನ್ನು ಇಲ್ಲಿಯವರೆಗೂ ಕರೆದು ತಂದಿದೆ.ದನ ಉದಾ ರಕ್ಕೂ ಕಾರಣವಾಗುತ್ತದೆ 'ಎಂದು ಮೇಲೇಳು ಅಣ್ಣ! ನಿನ್ನ ಮೋಹದ ಮಗಳಾಗಿ ಉಳಿಯುತ್ತೇನೆ. ಕೌಶಿಕನಲ್ಲಿ ಈಗ ಸಂಪೂರ್ಣ ಪರಿವರ್ತನೆಯಾಗಿತ್ತು. ವೇಷದಿಂದ ಮಾತ್ರ ಭಕ್ತನಾಗಿ ಬಂದವನು, ಈಗ ಆವೇಶದಿಂದಲೂ ಭಕ್ತನಾಗಿದ್ದ. ಸಾಧನೆಯ ಮಾರ್ಗ ದಲ್ಲಿ ಆತನನ್ನು ತೊಡಗಿಸಿದರು ಮಹಾದೇವಿ. ಅವನಿಗೆ ಅನುಗ್ರಹವನ್ನಿತ್ತು ಸಾಧನೆಯ ರಹಸ್ಯವನ್ನು ಅರುಹಿದರು. ಆ ಮಾರ್ಗದಲ್ಲಿ ಮಗ್ನರಾದುದನ್ನು ಕಂಡು ಮಹಾದೇವಿಯ ಮನಸ್ಸು ನೆಮ್ಮದಿಯಿಂದ ನಲಿಯಿತು. ತನ್ನ ಸಂಪರ್ಕದಿಂದ ಅವರ ಜೀವನ ದುಃಖಮಯವಾಗದೆ ವಿಕಾಸದ ದಿವ್ಯಮಾರ್ಗದತ್ತ ತಿರುಗಿದುದಕ್ಕಾಗಿ, ತನ್ನ ಕರ್ತವ್ಯದ ಕೊನೆಯ ಹೊಣೆಯನ್ನು ನಿರ್ವಹಿಸಿದ ತೃಪ್ತಿ ಅಕ್ಕಮಹಾದೇವಿಗೆ ಉಂಟಾಯಿತು. ಗವಿಯ ಒಳಭಾಗದಲ್ಲಿ ಪದ್ಮಾಸನಸ್ಥಿತರಗಿ ಕುಳಿತರುಮಹಾದೇವಿಯವರು. ತನ್ನ ಜೀವನದ ಹಿಂದಿನ ಘಟನೆಗಳೆಲ್ಲಾ ಏಕೋ ಅವರ ಮುಂದೆ ಇಂದು ಸುರುಳಿಯನ್ನು ಬಿಚ್ಚುತ್ತಿದ್ದುವು. ತಂದೆ -ತಾಯಿಗಳು, ಗುರು -ಲಿಂಗದೇವರು ಬಂದುಹೋದರು. 'ಇದುವರೆಗಿನ ನನ್ನ ಸಾಧನೆಯ ಫಲ ನನ್ನ ತಂದೆ-ತಾಯಿಗಳಿಗೆ ಶಾಂತಿಯನ್ನು ಕೊಡಲಿ 'ಎಂದು ಹಾರೈಸಿದರು. ಎಳೆಯ ವಯಸ್ಸಿನಿಂದಲೂ ತನ್ನ ಸಾಧನೆಗೆ ನೆರವಾದ ಗುರುಲಿಂಗರ ಮೂರ್ತಿಗೆ ಸಂಕಲ್ಪಪೂರ್ವಕ ನಮಸ್ಕಾರಗಳನ್ನು ಸಲ್ಲಿಸಿದರು. ಅನಂತರ ಕೌಶಿಕ ಮಹಾದೇವಿಯವಲ ಮನಸ್ಸಿನ ಮುಂದೆ ಸುಳಿದ: ಆಲೋಚನಾ ಸರಣಿ. ಅಷ್ಟರಲ್ಲಿ ಗುಹೆಯ ಒಳಗೆ ಏನೋ ಶಬ್ದವಾದಂತಾಯಿತು. ತಿರುಗಿ ನೋಡಿದರೆ, ಹುಲಿ ನಿಧಾನವಾಗಿ ಹೆಜ್ಜೆ ಹಾಕುತ್ತಾ ಬರುತ್ತಿದೆ, ಮಹಾದೇವಿಯ ಕಡೆಗೆ. ಭೀಮಕಾಯದ ಆ ಹುಲಿಯನ್ನು ಕಂಡೊಡನೆಯೇ ಕ್ಷಣಕಾಲ ಸ್ತಬ್ಧರಾದರು. ಆದರೆ ಮರುಕ್ಷಣದಲ್ಲಿಯೇ ಮಹಾದೇವಿಯ ಸುಪ್ತ ದೈವಿಕ ತೇಜಸ್ಸು ಮೇಲೆದ್ದು ಮಹಾದೇವಿಯ ಸುತ್ತ ಪರಿವೇಷವನ್ನು ರಚಿಸಿತು. ಹುಲಿಯನ್ನೇ ದಿಟ್ಟಿಸಿ ನೋಡತೊಡಗಿದ ಮಹಾದೇವಿ ನರಾಕೃತಿಯನ್ನು ಕಂಡು ಕ್ರೌರ್ಯದಿಂದ ಹಲ್ಲು ಮಸೆಯುತ್ತಾ ಬರುತ್ತಿದ್ದ ಹುಲಿ, ಮಹಾದೇವಿಯ ದೃಷ್ಟಿಯನ್ನು ಸಂಧಿಸಿದೊಡನೆಯೇ ಗುಂಡಿನ ಏಟನ್ನು ಕಂಡಂತೆ ಹಿಂದೆ ಸರಿಯಿತು. ಬಾಲವನ್ನು ಮುದುರಿಕೊಂಡು ನಾಯಿಯಂತೆ ನಡೆಯುತ್ತಾ ಬಂದು, ಸ್ವಲ್ಪ ದೂರದವರೆಗೂ ಮಹಾದೇವಿಯನ್ನು ನೋಡುತ್ತಾ ಹಿಂದೆ ಹಿಂದೆ ಸರಿದು ಅನಂತರ ನೆಗೆದು ಓಡಿ ಮಾಯವಾಯಿತು. ಮಹಾದೇವಿಯ ವರ ಯೋಗದೃಷ್ಟಿಯ ಮಹಿಮೆಯಿಂದ ಹುಲಿಯ ಕ್ರೌರ್ಯ ಅಡಗಿ ಹೋಗಿತ್ತು. ಅದು ಹೋದ ದಿಕ್ಕನ್ನೇ ಕುರಿತು ನೋಡುತ್ತಿದ್ದ ಮಹಾದೇವಿಯ ಮನಃಪಟಲದ ಮೇಲೆ ತನ್ನಲ್ಲಿ ಈ ಅಸದೃಶವಾದ ಶಕ್ತಿಯನ್ನು ತುಂಬಿದ ಚಿತ್ರ ತಿರುಗುತ್ತಿತ್ತು.ಅಷ್ಟರಲ್ಲಿ ಮಹಾದೇವಿಯವರಿಗೆ ಒಂದು ವಚನವನ್ನು ಹಾಡುತ್ತರೆ,

ಆರೂ ಇಲ್ಲದವಳೆಂದು ಆಳಿಗೊಳಲುಬೇಡ ಕಂಡೆಯಾ ಎನ ಮಾಡಿದಡೂ ಆನಂಜುವಳಲ್ಲ.

ತರಗೆಲೆಯ ಮೆಲಿದು ಆನಿಹೆನು. ಸುರಿಗಿಯ ಮೇಲೊರಗಿ ಆನಿಹೆನು.

ಚೆನ್ನಮಲ್ಲಿಕಾರ್ಜುನಯ್ಯಾ, ಕರಕರ ಕಾಡಿದರೆ

ಒಡಲನು ಪ್ರಾಣವನು ನಿಮಗೊರ್ಪಿಸಿ ಶುದ್ಧಳಹೆನು.

ಅಕ್ಕಮಹಾದೇವಿಯವರಿಗೆ ವಯಸ್ಸು ಸಣ್ಣದಾದರೂ ಧ್ಯರ್ಯ ದೊಡ್ಡದು, ಅರಿವು ಹಿರಿದು. ದೇವರನ್ನೆ ಗೆಲ್ಲುವ ಉತ್ಸಾಹ ಅವರದು. ಪರಮಾತ್ಮನೊಂದಿಗೆ ಸಂಭಾಷಿಸುತ್ತಿದ್ದಾರೆ. ಆರೂ ಇಲ್ಲದವಳೆಂದು ಆಳಿಗೊ ಳಲುಬೇಡ ಕಂಡಯ್ಯ. ಅಕ್ಕಮಹಾದೇವಿಯವರು ತಪಸ್ಸಿಗೆ ಕುಳಿತ ಕಾಲಕ್ಕೆ ಬರೆದ ವಚನವಿದು. ಜೊತೆ ಯಾರೂ ಇಲ್ಲ. ಕಾಡಾರಣ್ಯ. ಆ ಭಯವನ್ನು ಗೆಲ್ಲುವ ಪ್ರಯತ್ನ ಈವಚನ. ಅಕ್ಕಮಹಾದೇವಿ ಒಬ್ಬರೇ ಕಾಡಾರಣ್ಯದಲ್ಲಿದ್ದಾಳೆಂದು ಹೆದರಿಸಲು ಬರು ವೆಯಾ.? ಏನು ಮಾಡಿದರೂ ನಾನಂಜುವಳಲ್ಲ. ನೀನು ನನ್ನನ್ನು ಹೆದರಿಸಲುನೋ ಡಿದರೆ ನಾನು ಹೆದರುವವಳಲ್ಲ. ಎಲೆ ತಿಂದು ಜೀವನ ಮಾಡುತ್ತೇನೆ. ಖಡ್ಗ, ಮು ಳ್ಳಿನ ಮೇಲೂ ಮಲಗಿ ನಿದ್ರಿಸಬಲ್ಲೆನು. ಋಷಿಮುನಿಗಳು ಎಲೆ ಸೊಪ್ಪು ತಿಂದು ಜೀವನ ಮಾಡಿದ್ದಾರೆ. ಬಂಡೆ, ಕಲ್ಲು ಮುಳ್ಳುನೆಲ ಎಲ್ಲಿ ಬೇಕಾದರೂ ಮಲಗಿ ಕಾಲಕಳೆಯುತ್ತೇನೆ. ಈಜೀವನಕ್ಕೆ ಬಂದಿರುವುದು ಸುಖಪಡುವುದಕ್ಕಲ್ಲ. ಪರ ಮಾತ್ಮನೆ ನಿನ್ನನ್ನು ಸಾಧಿಸಿಕೊಳ್ಳುವುದಕ್ಕೆ. ಚೆನ್ನಮಲ್ಲಿಕಾರ್ಜುನಯ್ಯ ಕರಕರ ಕಾಡಿ ದರೆ ಒಡಲನೂ ಪ್ರಾಣವನು ಒಪ್ಪಿಸಿ ಶುದ್ಧಳಹೆನು. ಇಷ್ಟೆಲ್ಲ ಕಷ್ಟ ಎದುರಿಸಲು ನಾನು ಸಿದ್ಧಳಿದ್ದರೂ ನೀನು ಮತ್ತೂ ಕಾಡಲು ತೊಡಗಿದರೆ ನಾನು ನನ್ನ ಪ್ರಾಣವನ್ನೆ ನಿನಗೆ ಒಪ್ಪಿಸುತ್ತೇನೆ. ಅಕ್ಕಮಹಾದೇವಿಯವರು ಸುಕೋಮಲ ಸುಂದರ ತರುಣ ಹೆಣ್ಣುಮಗಳು ತನ್ನ ಬದುಕಿನಲ್ಲಿ ದುಃಖಎಂದರೇನೆಂಬುದನ್ನರಿಯದ ಹೆಣ್ಣು ಮಗಳು ಅಂತಹವರಿಗೆ ದುಃಖ ಸಮುದ್ರವೇ ಎದುರಾಯಿತು. ಹೆದರಲಿಲ್ಲ ಅಕ್ಕ. ದುಃಖದ ದಾವಾನಲವನ್ನೆ ಗಟಗಟ ಕುಡಿದರು. ಅವರು ಧೀರರು. ಅನುಪಮರು. ಹೋಲಿಸಲು ಇನ್ನೋಂದು ಹೋಲಿಕೆಯಿಲ್ಲ.

ಸಾಕ್ಷಿ ಸತ್ತಿತ್ತು, ಪತ್ರ ಬೆಂದಿತ್ತು, ಲೆಕ್ಕ ತುಂಬಿತ್ತು,

ಜೀವ ಜೀವಿತದ ಆಸೆ ನಿಂದುದು, ಭಾಷೆ ಹೋಯಿತ್ತು,

ದೇಶವೆಲ್ಲರಿಯೆ ಎನ್ನ ದೇವ ಚೆನ್ನಮಲ್ಲಿಕಾರ್ಜುನನ ನಂಬಿ ಹಂಬಲ ಮರೆದೆನಾಗಿ.

ತಪಸ್ಸು ಸಾಧನೆಯಿಂದ ಈಗ ಅವರು ಎಲ್ಲ ಭ್ರಮೆಗಳನ್ನು ದಾಟಿದ್ದಾರೆ. ಸಾಕ್ಷಾತ್ಕಾ ರದ ಈವಚನವು ಮನುಷ್ಯ ಏರಬಹುದಾದ ಎತ್ತರಕ್ಕೆ ಸಾಕ್ಷಿಯಾಗಿದೆ. ಮೇಲಿನ ವಚನವು ಇಂಥದೆ ಇನ್ನೊಂದು ಜ್ಞಾನೋದಯದ ವಚನ, ಸಾಕ್ಷಿ ಸತ್ತಿತ್ತು. ಪತ್ರ ಸುಟ್ಟಿತ್ತು. ಲೆಕ್ಕ ತುಂಬಿತ್ತು. ।।ಹಸಿವೆನೀನು ನಿಲ್ಲು ನಿಲ್ಲು ಚೆನ್ನ ಮಲ್ಲಿಕಾರ್ಜುನನ ಬಳಿಗೆ ಅವಸರದ ಓಲೆಒಯ್ಯುತ್ತಿದ್ದೇನೆ ಎಂದು ಹೇಳಿದ್ದರು. ಈಗ ಆ ಪತ್ರ ಸುಟ್ಟಿದೆ. ಓಲೆ ಓದುವ ಚೆನ್ನಮಲ್ಲಿಕಾರ್ಜುನನು ಮನುಷ್ಯರೂಪದವನಲ್ಲ. ಅವನಿಗೆ ಪತ್ರ ಓದಲು ಕನ್ನಡ ಭಾಷೆಯೂ ಬರುವುದಿಲ್ಲ. ಅವನು ಶರೀರಧಾರಿಯೆ ಅಲ್ಲ. ಎಂದಮೇಲೆ ಎಲ್ಲ ಕನಸುಗಳೂ ಹೋದವು. ಕನಸಿದ್ದೆಲ್ಲ ಬಯಲ ಭ್ರಮೆಯಾಗಿ ಹೋಯಿತು. ಅಕ್ಕ ಮಹಾದೇವಿಯವರು ಮಹಾತ್ಮರಾದರು. ಅವರಿಗೆ ಮಹಾತ್ಮ ಪದವಿ ಬೇಕಿಲ್ಲ. ಚಿನ್ನ ಮಲ್ಲಿಕಾರ್ಜುನ ಬೇಕು. ಆದರೆ ಆ ಸತ್ಯ ಬೇರೆಯೆ ಆದ ಸತ್ಯವಾಯಿತು. ಇದು ದೊಡ್ಡ ಆಘಾತ. ಈ ಜೀವ, ಜಗತ್ತು ಸೂರ, ಚಂದ್ರ ನಕ್ಷತ್ರಾದಿಗಳೆಲ್ಲವೂ ಬಯ ಲಿನಿಂದ ಬಂದುದು. ಆ ಬಯಲಿಗೆ ಹೋಗುವವು. ಇನ್ನು ಯಾವ ದೇವರು? ಯಾವ ಕಥೆಗಳು? ಇವುಗಳಿಂದ ಆಗುವುದೇನಿದೆ? ಅಕ್ಕನವರ ಮನಸ್ಸನ್ನು ಬಯಲು, ಶೂನ್ಯ ತುಂಬಿತು. ಅಕ್ಕನವರಿಗೆ ಇದು ಮರುಜನ್ಮ. ಇಲ್ಲಿನ ಅರಿವೆ ಬೇರೆ. ಬೇವ ಜೀವಿತದ ಆಸೆ ನಿಂದುದು. ಭಾಷೆ ಹೋಯಿತ್ತು. ಎಲ್ಲರಿಗೆ ಭಾಷೆ ಕೊಟ್ಟಿದ್ದೆ ಚೆನ್ನಮಲ್ಲಿಕಾರ್ಜು ನನನ್ನು ಪತಿಯನ್ನಾಗಿ ಪಡೆಯುತ್ತೇನೆ ಎಂದು ಈಗ ಅಭಾಷೆ, ಪತ್ರ ಹೋಯಿತು ಪತ್ರವನ್ನು ನಾನೆ ಸುಟ್ಟೆ ಭಾಷೆಯನ್ನು ನಾನೆ ಮುರಿದೆ. ಆಶೆಗಳೆಲ್ಲ ಹೋದವು ಇನ್ನು ಯಾವ ಆಶೆಯೂ ಉಳಿದಿಲ್ಲ. ಈ ಜೀವ ಇನ್ನು ಇದ್ದರೂ ಅಷ್ಟೆ. ಹೋದರೂ ಅಷ್ಟೆ. ದೇಶವೆಲ್ಲ ಅರಿಯೆ ಎನ್ನದೇವ ಚೆನ್ನಮಲ್ಲಿಕಾರ್ಜುನನ ನಂಬಿ ಬಯಲ ಮರೆದೆ

ನಾಗಿ. ಜಗತ್ತೆ ತಿಳಿಯುವಂತೆ ಚೆನ್ನಮಲ್ಲಿಕಾರ್ಜುನನೆ ನನ್ನ ಗಂಡ ಎಂದು ಸಾರಿದೆ. ಅವನನ್ನು ಪಡೆಯಲು ಬಂದೆ. ಆದರೆ ಈದೇಶವೆಲ್ಲ ಅಂತಹ ಕಥೆಗಳನ್ನು ಕಟ್ಟಿದೆ. ಚೆನ್ನಮಲ್ಲಿಕಾರ್ಜುನನು ಕಥೆಯ ಸತ್ಯವಾಗಿ ಮಾತ್ರ ಉಳಿದ. ಇದನ್ನು ನಂಬಿ ಬಂದೆ. ಈಗ ಆ ಹಂಬಲ ಮರೆದೆ. ಎಲ್ಲರೂ ದೇವರನ್ನು ಭಾವಸತ್ಯವಾಗಿ ನೋಡಿದರು. ಅಕ್ಕನವರು ಅವನನ್ನು ವಸ್ತು ಸತ್ಯದಲ್ಲಿ ಕಾಣಬಯಸಿದರು. ಅವರಿಗಾದ ದರ್ಶನ ಜಗದ ಕಣ್ಣು ತೆರೆಸಲಿ. ಇದು ಅಕ್ಕನವರಿಗೆ ಆಘಾತ. ಆದರೆ ಇದು ಜಗತ್ತಿಗೆ ಜ್ಞಾನೋದಯ. ಸತ್ ಹೇಗೆ ಅರ್ಥಪಡೆದುಕೊಳ್ಳುತ್ತದೆ ನೋಡಿ. ಅಶ್ಚರವಾಗುತ್ತದೆ.

ಅಕ್ಕಮಹಾದೇವಿಯ ಹೆಸರಿನಲ್ಲಿ ಒಂದು ಅದ್ಭುತವಾದ 'ಅಕ್ಕನ ಗವಿ' ಎಂದೇ ಹೆಸರುವಾಸಿಯಾದ ಗವಿಯೊಂದಿರುವುದು. ಈ ಗವಿಯಲ್ಲಿ **10** ವರ್ಷಗಳ ಕಾಲ ಅಕ್ಕ ಅನುಷ್ಠಾನಗೈದರೆಂಬ ಪ್ರತೀತಿ ಇದೆ. ಈ ಗವಿಯನ್ನು ಒಳಹೊಕ್ಕರೆ ಅಕ್ಕ ಅನುಷ್ಠಾನದ ಸಮಯದಲ್ಲಿ ಪೂಜಿಸಿದ್ದ 'ಶಿವಲಿಂಗ' ಗೋಚರವಾಗುವುದು ಇದೊಂದು ಅಕ್ಕನ ಅಳಿದುಳಿದ ಸ್ಮಾರಕವಾಗಿ ನಿಂತಿದೆಯೆಂದರೆ ತಪ್ಪಾಗಲಾರದು. ಹೇಗೆ ಮಹಾದೇವಿಯವರು ಹತ್ತು ವರ್ಷಗಳ ಕಾಲಕ್ಕೆ ದಿನದಿಂದ ದಿನಕ್ಕೆ ಜನರು ಅಕ್ಕಮಹಾದೇವಿಯವರನ್ನು ನೋಡುವದಕ್ಕೆ ಭಕ್ತರು ಇಲ್ಲಿಗೆ ಬರಲು ಪ್ರಾರಂಭವಾಯಿತು, ಶಿವಶರಣರು ಶರಣೆಯರು, ಅಕ್ಕಮಹಾದೇವಿಯವರವರಿಂದ ಲಿಂಗದೀಕ್ಷೆ, ಪಡೆಯುವದಕ್ಕೆ ಲಕ್ಷಾಂತರ ಜನರಿಗೆ ಲಿಂಗದೀಕ್ಷೆ ಕೊಟ್ಟರು ಅಕ್ಕಮಹಾದೇವಿಯವರು, ಈ ಗುಹೆಯಲ್ಲಿ ಇರುವಾಗಲೆ ಸ್ವರ ವಚನ, ಸೃಷ್ಟಿಯ ವಚನ ಇನ್ನೂ ಹಲವರು ವಚನ ಬರೆದರು, ಇಲ್ಲಿಬರು ಜನರಿಗೆ ವಚನವನ್ನು ಹಾಡುತ್ತ ಹೇಳುತ್ತಾ, ಆತ್ಮ ಪರಾಮಾತ್ಮ ಎಂದರೆನು ಎಲ್ಲವನ್ನು ಅಕ್ಕಮಹಾದೇವಿಯವರ ರಿಂದ ತಿಳಿಯುತ್ತಿದ್ದರು. ಅಕ್ಕಮಹಾದೇವಿಯವರು ಹೆಸರುವಾಸಿ ದೇಶದೂದ್ದಕ್ಕೂ ಹಬ್ಬಿತು. ಇಲ್ಲಿ ನಾನು ತಪಸ್ಸು ಮಾಡಿದ ಶಕ್ತಿ ಅಷ್ಟಸಿಧ್ಧಿಗಳು ಈ ಗುಹೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ತುಂಬಿರುತ್ತದೆ, ನನ್ನ ಒಂದು ಶಕ್ತಿಇಲ್ಲಿ ಇರುತ್ತದೆ ಎಂದು ಅಲ್ಲಿದ್ದ ಜನರಿಗೆ ಹೇಳಿ ಇಲ್ಲಿಗೆ ಅಕ್ಕಮಹಾದೇವಿಯವರ ವಯಸ್ಸು **27**ವರ್ಷ ತುಂಬಿತ್ತು ಅಲ್ಲಿಂದ ಮುಂದೆ ಮರುದಿನವೇ ಕದಳಿಯ ವನಕ್ಕೆ ಹೊರಡಬೇಕೆಂದು ಸಂಕಲ್ಪಿಸಿದ್ದ ಮಹಾದೇವಿಯವರು ಶರೀರದಲ್ಲಿ ಅಡಗಿರುವ ಹಾಗೂ ಕಾಡುವ ಅರಿಷಡ್ವರ್ಗಗಳನ್ನು ಮೆಟ್ಟಿನಿಂತು, ಅವುಗಳನ್ನು ಹೊಸಕಿಹಾಕಿ ಪ್ರಶಾಂತ ಚಿತ್ತದಿಂದ ಚೆನ್ನಮಲ್ಲಿಕಾರ್ಜುನನನ್ನು ಅರಸುತ್ತ, ಅಕ್ಕ ನಿಸರ್ಗಪ್ರೇಮಿ, ದಾರಿ ಸವೆಯುತ್ತ ನಡೆದಾಗ ದಾರಿಯುದ್ದಕ್ಕೂ ಕಂಡುಬರುವ ನಿಸರ್ಗಸಂಪತ್ತನ್ನು ಕಣ್ಣ ತುಂಬಾ ನೋಡುತ್ತಾ ಪರಮಾತ್ಮನ ಸೃಷ್ಟಿಯನ್ನು ಹೊಗಳುತ್ತ ತನ್ನ ವಚನಕೃತಿಗೆ ಹೆಚ್ಚಿನ ಶಕ್ತಿಯನ್ನು ಕೊಡುತ್ತ ಹೊಸ ಹೊಸ ಪರಿಸರದಲ್ಲಿ ಕಾಣುವ ಎಲ್ಲ ವಸ್ತುಗಳನ್ನು ಕುರಿತು ವಚನಗಳನ್ನು ರಚಿಸುತ್ತಿದ್ದರು.

ತ್ರಿಕೂಟಪರ್ವತವನ್ನು ಏರತೊಡಗಿದರು. ಇಬ್ಬರು ಚುಂಚರು ಮಾರ್ಗದರ್ಶಕ ರಾಗಿ ಮುಂದೆ ಮುಂದೆ ನಡೆಯುತ್ತಿದ್ದರು. ತ್ರಿಕೂಟಪರ್ವತ, ಅಕ್ಕನ ಹಳ್ಳದಿಂದ ಪಶ್ಚಿಮಕ್ಕೆ ಹೊರಟು ಮೇಲೆ ಏರುತ್ತಾ ಹೋದಂತೆ ದಕ್ಷಿಣದ ಕಡೆಗೆ ಹಾವಿನಂತೆ ಮುಂದುವರಿಯುತ್ತಿತ್ತು. ಪರ್ವತವನ್ನು ಏರತೊಡಗಿದ ಸ್ವಲ್ಪ ಹೊತ್ತಿನಲ್ಲಿಯೇ ಕೃಷ್ಣಾ ನದಿಯ ದೀರ್ಘ ದೇಹ ಕಣ್ಣಿಗೆ ಬೀಳತೊಡಗಿತು. ದಕ್ಷಿಣದ ಕಡೆಯಿಂದ ಬಂದುಬಾಗಿ ಚುಕ್ಕಲ ಪರ್ವತವನ್ನು ಅರ್ಧಚಂದ್ರಾಕಾರದಲ್ಲಿ ಸುತ್ತಿ ಹೋಗಿರುವ ಕೃಷ್ಣ ಯ ದಂಡೆಯನ್ನೇ ಆಶ್ರಯಿಸಿ, ಆ ನದಿಯ ಪ್ರವಾಹದ ಮೇಲ್ಮುಖದ ಕಡೆಗೆ ಮೇಲೆ ಮೇಲೆ ಏರುತ್ತಿತ್ತು ತ್ರಿಕೂಟ. ತ್ರಿಕೂಟದ ಪರ್ವತವೆಂದು ಇದಕ್ಕೆ ಹೆಸರು ಬರಲು ಕಾರಣವಾದ ಮೂರು ಕೂಟಗಳಾವುದೆಂದು ಮಹಾದೇವಿ ಸುತ್ತಲೂ ಇದ್ದ ಪರ್ವತಶಿಖರಗಳನ್ನು ಹುಡುಕ ತೊಡಗಿದರು. 'ಯಾವ ಯಾವ ಪರ್ವತದ ಮೂರು ಶಿಖರಗಳನ್ನು ಗಮನಿಸಿ ತ್ರಿಕೂಟ ಪರ್ವತವೆಂದು ಕರೆದಿರಬಹುದು?" ಎಂದು ಆಲೋಚಿಸುತ್ತಿದ್ದರು. ಅಷ್ಟರಲ್ಲಿ ಏರುತ್ತಿದ್ದ ಪರ್ವತದ ಕಡಿದಾದ ದಾರಿ ಮುಗಿದು ಮಟ್ಟಸವಾದ ನೆಲದಲ್ಲಿ ನಡೆಯುತ್ತಿದ್ದರು. ಎತ್ತರವಾಗಿ ಬೆಳೆದು ನಿಂತ ಒಣಗಿದ ಹುಲ್ಲನ್ನು ತುಳಿದು ಕೊಂಡು ಕಲ್ಲಿನಿಂದ ಕಲ್ಲಿಗೆ ನೆಗೆಯುತ್ತಾ ಕಷ್ಟದಿಂದ ಮುಂದುವರಿಯಬೇಕಾಗಿತ್ತು. ಅಕ್ಕಪಕ್ಕಗಳಲ್ಲಿ ಸಾಲುಸಾಲಾಗಿ ಹಬ್ಬಿದ ಬಿಲ್ವವೃಕ್ಷಗಳು ಮಹಾದೇವಿಯನ್ನು ಎದುರುಗೊಳ್ಳುತ್ತಿದ್ದುವು.

ಸ್ವಲ್ಪ ಮುಂದೆ ಹೋಗುವುದರೊಳಗಾಗಿ ಪರ್ವತ ದಕ್ಷಿಣಕ್ಕೆ ಬಾಗುತ್ತಿತ್ತು. ಮತ್ತು ಮೊದಲಿಗಿಂತಲೂ ಕಡಿದಾಗಿ ಮೇಲೇರುತ್ತಿತ್ತು. ಆಗ ಮಹಾದೇವಿಗೆ ಹೊಳೆ ಯಿತು:

'ತ್ರಿಕೂಟಪರ್ವತವೆಂದರೆ ಬೇರೆ ಬೇರೆ ಪರ್ವತದ ಮೂರು ಶಿಖರಗಳನ್ನು ಕುರಿತು ಹೇಳಿರುವುದಿಲ್ಲ. ಇದೊಂದೇ ಪರ್ವತದ ಮೂರು ಶಿಖರಗಳು ಅವು. ಒಂದು ಶಿಖರವನ್ನು ಹತ್ತಿ ಬಂದು, ಈಗ ಎರಡನೇ ಶಿಖರವನ್ನು ಏರತೊಡಗಿದ್ದೇವೆ.' ಇದನ್ನು ಆಲೋಚಿಸುತ್ತಿದ್ದಂತೆಯೇ ಪ್ರಭುದೇವನ ವಚನವೂ ನೆನಪಿಗೆ ಬಂದಿತು: 'ನೀನಾನೆಂಬುಭಯ ಸಂಗವಳಿದು ತಾನೇ ತಾನಾದ ತ್ರಿಕೂಟವೆಂಬ ಮಹಾಗಿರಿಯ ಮೆಟ್ಟಿ ನೋಡಲು ಬಟ್ಟಬಯಲು ಕಾಣಬಹುದು ನೋಡಾ ' ಆ ವಚನವನ್ನೇ ಮೆಲುಕು ಹಾಕುತ್ತಾ ಏರುತ್ತಿದ್ದರು. ಎರಡನೆಯ ಶಿಖರವನ್ನು ಏರಿದರು. ಅಲ್ಲಿ ಸ್ವಲ್ಪ ವಿಶ್ರಾಂತಿಯನ್ನು ಪಡೆಯಲು ಕುಳಿತರು. ಎದುರಿಗಿರುವ ಪರ್ವತಗಳನ್ನೆಲ್ಲಾ ಮೀರಿ ನಿಂತಿರುವ ತ್ರಿಕೂಟಪರ್ವತದ ಮಧ್ಯಭಾಗದಲ್ಲಿ ಬಂದು ಕುಳಿತಿದ್ದರು. ತ್ರಿಕೂಟದೊಡನೆ ಹೊಯ್‌ಕೈಯಾಗಿ ನಿಂತ ಕೆಚ್ಚೆದೆಯ ಪರ್ವತವೆಂದರೆ ಚುಕ್ಕಲ ಪರ್ವತವೊಂದೇ ಎಂಬಂತೆ ತೋರಿತು. ಇವೆರಡು ಪರ್ವತಗಳ ಆಳವಾದ ಕಣಿವೆಯಲ್ಲಿ ಹರಿಯುತ್ತಿದ್ದ ಕೃಷ್ಣ, ಇವುಗಳನ್ನು ಬೇರ್ಪಡಿಸುವ ನೀಲಿರೇಖೆಯಂತೆ ಹೊಳೆಯುತ್ತಿದ್ದಳು. ಮೇಲೆದ್ದು ನಡೆಯತೊಡಗಿದ ಮಹಾದೇವಿ ಈಗ ಏರುತ್ತಿದ್ದುದು ಮೂರನೆಯ ಶಿಖರ. ಮೇಲೆಮೇಲೇರಿದಂತೆಲ್ಲಾ ಮಹಾದೇವಿಗೆ ಅನಿರ್ವಚನೀಯವಾದ ಆನಂದವಾಗುತ್ತಿತ್ತು.

"ದೇಹದ ತ್ರಿಗುಣಗಳನ್ನು ಮೆಟ್ಟಿ ಮೇಲೇರುವಂಥ ಅನುಭವ ಈ ತ್ರಿಕೂಟ ಪರ್ವತನ್ನೇರುವುದು ಸತ್ಯವಾದುದಾಗಿತ್ತು ಮಹಾದೇವಿಯವರು ಹೀಗೆ ಹೇಳುತ್ತಾರೆ. ಮೂಲಾಧಾರದ ಬೇರ ಮೆಟ್ಟಿ ಭೂಮಂಡಲವನೇರಿದೆ ಆಚಾರದ ಬೇರ ಹಿಡಿದು ಐಕ್ಯದ ತುದಿಯನೇರಿದೆ. ವೈರಾಗ್ಯದ ಸೋಪಾನದಿಂದ ಶ್ರೀ ಗಿರಿಯನೇರಿದೆ. ಕೈವಿಡಿದು ತೆಗೆದುಕೊಳ್ಳಾ, ಚೆನ್ನಮಲ್ಲಿಕಾರ್ಜುನ. ಯೋಗಮಾರ್ಗದ ರಹಸ್ಯವನ್ನು ಅಕ್ಕಅರುಹುತ್ತಾರೆ. ಮೂಲಾಧಾರದಿಂದ ಹಿಡಿದು ಸಹಸ್ರಾರದವರೆಗೆ ಏಳು ಚಕ್ರಗಳಿವೆ. ಮೂಲಾಧಾರದಿಂದ ಸಾಧಕನ ಊರ್ಧ್ವಮುಖ ಗಮನ ಪ್ರಾರಂಭವಾಗುತ್ತದೆ. ಯೋಗ ಸಾಧನೆಯಿಂದ ಕುಂಡಲಿನೀ ಶಕ್ತಿಯನ್ನು ಮೆಟ್ಟಿದರೆ ಅದು ಊರ್ಧ್ವಮುಖವಾಗಿ ಹರಿಯುತ್ತ ಸಹಸ್ರಾರದವರೆಗೆ ಸಾಗಿ ಅಲ್ಲಿ ಸಹಸ್ರ ದಳ ಕಮಲದಲ್ಲಿ ಐಕ್ಯವಾಗುತ್ತದೆ. ಈ ಸಾಧನೆಯಲ್ಲಿ ವೈರಾಗ್ಯವೇ ಸೋಪಾನ, ಅದಕ್ಕೆ ಆಚಾರ ವಿಚಾರಗಳು ಜೊತೆಯಾಗಿವೆ. ಯೋಗದ ಭಾಷೆಯಲ್ಲಿ ದೇಹದಲ್ಲಿ ಏಳು ಚಕ್ರಗಳಿವೆ. ಒಂದೊಂದು ಚಕ್ರದಲ್ಲಿ ಒಂದೊಂದು ಲಿಂಗ ಪ್ರತಿಷ್ಠಾನ ಮಾಡಿದ್ದು ಶರಣಮಾರ್ಗ. ಮೂಲಾಧಾರ ಚಕ್ರದಲ್ಲಿ ಆಚಾರಲಿಂಗ ಸಹಸ್ರಾರದಲ್ಲಿ ನಿಷ್ಕಲ ಲಿಂಗ. ಪ್ರಾಣಾಯಾಮದ  ಧ್ಯಾನ ಸತತ ಅಭ್ಯಾಸದಿಂದ... ಕುಂಡಲಿನಿ ತನ್ನ ನಿದ್ರೆಯಿಂದ ಜಾಗ್ರತವಾಗಿ ಇಚ್ಚಾಶಕ್ತಿಯ ನಿಯಂತ್ರಣದಲ್ಲಿ ಬರುತ್ತದೆ, ಯಾವಾಗ ಈ ಕುಂಡಲಿನಿಯು ತನ್ನ ಸುಪ್ತಾವಸ್ಥೆಯಿಂದ ಏಳುತ್ತದೆಯೊ, ಆಗ ಅದು ಎಲ್ಲ ಚಕ್ರಗಳ ಮೂಲಕ ಹಾಯ್ದು ಹೋಗುತ್ತಾ ಅವುಗಳನ್ನು ಕ್ರಿಯಾಶೀಲವಾಗುವಂತೆ ಪ್ರಚೋದಿಸುತ್ತದೆ. ಅದು ಹಂತ ಹಂತವಾಗಿ ಮೇಲೇರುತ್ತಿದ್ದಂತೆ, ಮನಸ್ಸು ಪೂರ್ಣ ತೆರೆದುಕೊಳ್ಳುತ್ತದೆ, ಮೆದುಳನ್ನು ಪ್ರವೇಶಿಸುತ್ತಲೇ ದಿವ್ಯ ದೃಷ್ಟಿ ಹಾಗೂ ಅದ್ಭುತವಾದ ಶಕ್ತಿಗಳು ಯೋಗಿಗೆ ದೊರೆಯುತ್ತವೆ. ಆಗ ಆ ಯೋಗಿಯು ಸಂಪೂರ್ಣವಾಗಿ ದೇಹ ಭಾವದಿಂದ ಬಿಡುಗಡೆ ಹೊಂದುತ್ತಾನರೆ ಮತ್ತು  ಮನಸ್ಸು ಹಾಗೂ ಆತ್ಮಗಳು ಎಲ್ಲ ರೀತಿಯಿಂದಲೂ ಸ್ವತಂತ್ರವಾಗುತ್ತವೆ. ಕುಂಡಲಿನಿ ಶಕ್ತಿಯು ಜಾಗ್ರತವಾದರೆ ಉಂಟಾಗುವ ಪರಿಣಾಮಗಳನ್ನು ಈ ರೀತಿ ವಿವರಿಸಿದ್ದಾರೆ, ಆದರೆ ಅಕ್ಕ ಕೇವಲ ಯೋಗ ಮಾರ್ಗದವರಲ್ಲ. ಮಧುರ ಭಕ್ತಿಯನ್ನು ಅಳವಡಿಸಿಕೊಂಡವರು. ನಿಮ್ಮನೊಂದಿಗೆ ನೆರೆವೆನೋ ಈ ಪದ ಪ್ರಯೋಗ ಗಮನಾರ್ಹವಾದುದು. ಚೆನ್ನಮಲ್ಲಿಕಾರ್ಜುನ ವಿಶ್ವರೂಪಿಯಾದರೂ ಆತ್ಮವೇ ತಾನಾಗಿದ್ದಾನೆ. ಅಕ್ಕಮಹಾದೇವಿಯವರಿಗೆ ತ್ರಿಕೂಟಪರ್ವತದ ತುದಿಯ ಬಟ್ಟಬಯಲಿನಲ್ಲಿ ಸ್ವಲ್ಪ ದೂರ ನಡೆದರು. ಮಾರ್ಗ ನಿಧಾನವಾಗಿ ಇಳಿಯುತ್ತಿತ್ತು. ಮತ್ತು ಮುಂದೆ ಹೋದಂತೆ ಕಾಡು ದಟ್ಟವಾಗುತ್ತಿತ್ತು. ಅಷ್ಟರಲ್ಲಿ ಮುಂದೆ ನಡೆಯುತ್ತಿದ್ದ ಚುಂಚರು ಕದಳಿವನ ಬಂದಿತೆಂಬುದನ್ನು ಹೇಳುವಂತೆ ಒಂದು ಕಡೆಯಲ್ಲಿ ನಿಂತರು. ಮಳೆಗಾಲದಲ್ಲಿ ಮಾತ್ರ ಅಕ್ಕಪಕ್ಕದ ನೀರು ಹರಿದುಬರುವ ಕಾಲುವೆಯಂತಹ ಒಂದು ಹಳ್ಳ. ಅದರ ತುದಿಯಲ್ಲಿ ವಿಸ್ತಾರವಾದ ಒಂದು ಹಾಸುಗಲ್ಲು. ಅವರು ಬರುತ್ತಿದ್ದ ಮಾರ್ಗ ಆ ಹಾಸುಗಲ್ಲಿನ ಮೇಲೆಯೇ ಮುಂದೆ ಸಾಗಿಹೋಗುತ್ತಿತ್ತು. ಹಾಸುಗಲ್ಲಿನ ಎಡಗಡೆಯ ಕೊನೆಯಲ್ಲಿ ಬೆಟ್ಟ ಇಳಿದು ಆಳವಾದ ಕೊಳ್ಳ ಪ್ರಾರಂಭ ವಾಗುತ್ತಿತ್ತು.ಕಣಿವೆಯ ಕೊಳ್ಳದ ದಡದಲ್ಲಿಯೇ ಮಾರ್ಗ ಇಳಿಯುತ್ತಿತ್ತು.

ಕೊಳ್ಳದ ಆಳ ಕಾಣದಂತೆ ದೊಡ್ಡ ದೊಡ್ಡ ಮರಗಳೂ ಪೊದೆಗಳೂ ಬೆಳೆದು ಹರಡಿದ್ದುವು. ನಾಲ್ಕಾರು ಹೆಜ್ಜೆ ಹೋದಮೇಲೆ ಕೊಳ್ಳದ ಕಡೆಗೆ ಇಳಿಯಲು ಕಿಟಕಿಯಂತಹ ಒಂದು ಸಣ್ಣ ದಾರಿ ಗೋಚರಿಸಿತು. ಅದರಲ್ಲಿ ನುಗ್ಗಿದರು ಚುಂಚರು. ಅವರ ಹಿಂದೆಯೇ ಇದ್ದರು ಮಹಾದೇವಿ. ಅಲ್ಲಿ ನುಗ್ಗಿ ಮುಂದೆ ಹೆಜ್ಜೆ ಇಟ್ಟ ಕೂಡಲೇ ಆಳವಾದ ಕೊಳ್ಳ ಕಾಣಿಸುತ್ತಿತ್ತು. ಅದನ್ನು ಕಷ್ಟಪಟ್ಟು ಇಳಿಯಲು ಸಹಾಯವಾಗುವಂತೆ ಬಂಡೆಗಳು ಇಳಿಜಾರಾಗಿ ಹರಡಿದ್ದವು. ಅದನ್ನು ಬಿಟ್ಟು ಅದರ ದಡದಲ್ಲಿಯೇ ಮೇಲಕ್ಕೆ ತಿರುಗಿದರು. ಅಲ್ಲಿ ಮುಂದೆ ಹೋದಂತೆ ಮಾರ್ಗವು ಮೇಲೆ ನಿಂತು ನೋಡಿದ ಹಳ್ಳದ ಹಾಸುಬಂಡೆಯ ಕಡೆಗೆ ಕೊಂಡೊಯ್ಯುತ್ತಿತ್ತು. ಆ ಹಾಸುಬಂಡೆಯನ್ನೇ ಮೇಲಾವಣಿಯನ್ನಾಗಿ ಉಳ್ಳ ಗುಹೆಯೊಂದರ ಬಳಿಗೆ ಒಯ್ದು ಮುಟ್ಟಿಸುತ್ತಿತ್ತು ಆ ಮಾರ್ಗ. ಆ ಗುಹೆ ಕಣ್ಣಿಗೆ ಬೀಳುವುದಕ್ಕೆ ಮೊದಲೇ ಅದರ ಮುಂದೆ ಸಾಲಾಗಿ ಬೆಳೆದಿರುವ ಬಾಳೆಯ ಗಿಡಗಳು ಗೋಚರಿಸಿದವು. ಮಹಾದೇವಿಯ ಹೃದಯ ಸಂತೋಷದಿಂದ ಉಕ್ಕಿ ಬಂದಿತು. ಗುಹೆಯನ್ನು ಪ್ರವೇಶಿಸಿದರು. ಸ್ವಲ್ಪಮಟ್ಟಿಗೆ ಅರ್ಧಚಂದ್ರಾಕಾರವಾಗಿ ಹಬ್ಬಿ ಹರಡಿದ್ದ ಗುಹೆ, ತುಂಬಾ ವಿಸ್ತಾರವಾಗಿತ್ತು. ಗುಹೆಯ ಮುಂಭಾಗ ಅರ್ಧಚಂದ್ರನ ಕೊನೆಯ ಸರಳರೇಖೆಯಂತಿದ್ದು ಹಳ್ಳದ ಎರಡು ಕೊನೆಗಳನ್ನು ಮುಟ್ಟಿನಿಂತಿತ್ತು. ಆ ಮುಂಭಾಗದಲ್ಲಿ ನಿಂತು ನೋಡಿದರೆ ಕೆಳಗೆ ಆಳವಾಗಿದ್ದ ಕಣಿವೆಯಕೊಳ್ಳ ಕಾಣಿಸುತ್ತಿತ್ತು. ಗುಹೆಯ ಮುಂಭಾಗದ ತುದಿಯ ಗಿಡಗಳು ಗುಂಪುಗುಂಪಾಗಿ ಬೆಳೆದುನಿಂತಿದ್ದು ವು. ಗುಹೆಯಬಾಗಿಲಲ್ಲಿ ಕಾವಲು ನಿಂತಂತೆ ತೋರುತ್ತಿದ್ದ ಆ ಕದಳಿ ಗಿಡಗಳು ಗಾಳಿಯ ಹೊಡೆತಕ್ಕೆ ಸಿಕ್ಕದೆ, ಬಿರುಬಿಸಲಿಗೆ ನಲುಗದೆ ನಳನಳಿಸಿ ಬಾಳನರಳಿಸುವಂತೆ ಬೆಳೆದು ನಿಂತಿದ್ದುವು. ಪ್ರಭು ಹೇಳಿದಂತೆ ಪ್ರಕೃತಿ ರಚನೆಯ ವೈವಿಧ್ಯಗಳಲ್ಲಿ ಇದೊಂದು ವಿಶಿಷ್ಟವಾದ ಕೃತಿಯೆಂದುಕೊಂಡರು ಮಹಾದೇವಿ. "ನಾವು ನಿಂತ ಕಲ್ಲಿನ ಕೆಳಗೇ ಕದಳಿಯ ಗುಹೆಯಿದೆಯೆಂದು ನಾನು ಖಂಡಿತವಾಗಿ ಊಹಿಸಿರಲಿಲ್ಲ, ಇದೊಂದು ಅದ್ಭುತವಾದ ಗುಹೆ!" ಚೆನ್ನಮಲ್ಲಿಕಾರ್ಜುನನ ಕೃಪೆಗಾಗಿ ಮಹಾದೇವಿ ಧನ್ಯವಾದಗಳನ್ನು ಅರ್ಪಿಸಿದರು. ನೀರಿನ ಸಮಸ್ಯೆ ಬಗೆಹರಿಯಿತು. ಚುಂಚರು ತಂದ ಹಣ್ಣು ಹಂಪಲುಗಳನ್ನು ತಿಂದರು. ರಾತ್ರಿ ಚುಂಚರು ಹಾಲನ್ನು ತಂದುಕೊಟ್ಟರು, (ಲಿಂಗಭೇರಿ ಹಳ್ಳಿಯಿಂದ.) ಆ ರಾತ್ರಿ ಕಳೆಯಿತು. ಕದಳಿಯ ಗುಹೆಯಲ್ಲಿ ಆ ರಾತ್ರಿ! ಹೊರಗೆ ಕಾಡುಪ್ರಾಣಿಗಳ ಕೂಗು ಕೇಳುತ್ತಿತ್ತು. ಕೆಲವು ಹಕ್ಕಿಗಳಂತೂ ಅಳುವ ದೀರ್ಘಸ್ವರದಿಂದ ಕೂಗಿಕೊಳ್ಳುತ್ತಿದ್ದವು. ಹುಲಿಗಳು ಘರ್ಜಿಸುತ್ತಿದ್ದುವು. ಆದರೆ ಕದಳಿಯ ಗುಹೆಯ ಒಳಗಡೆ ಅವುಗಳಾವುವೂ ಹೋಗುವಂತಿರಲಿಲ್ಲ. ಅಂತರಂಗದ ಕದಳಿಯನ್ನು ಸೇರಿದವರಿಗೆ ಲೌಕಿಕ ಜಗತ್ತಿನ ವಿಷಯವೆಂಬ ಕ್ರೂರ ಪ್ರಾಣಿಗಳು ಏನೂ ಮಾಡಲಾರವೆಂಬುದನ್ನು ಅಕ್ಕಮಹಾದೇವಿಯವರ ಆ ನಿಲುವು ಬೆಳಗಾಯಿತು. ಬೆಳಗಿನ ಸೂರನ ಮೊಟ್ಟಮೊದಲನೆಯ ಕಿರಣಗಳು ಗುಹೆಯಲ್ಲಿ ಧ್ಯಾನಸ್ಥಳಾಗಿ ಕುಳಿತ ಮಹಾದೇವಿಯ ಸೇವೆಗೈಯಲೆಂಬಂತೆ ಬಂದು ಬೀಳುತ್ತಿದ್ದುವು. ಗುಪ್ತವಾದ ಸ್ಥಳದಲ್ಲಿದ್ದರೂ ಗುಹೆಗೆ ಗಾಳಿ ಬೆಳಕುಗಳ ಆಶ್ರಯ ತುಂಬಾ ಅನುಕೂಲವಾಗಿತ್ತು. ಇದು ಬುಗ್ಗವಾಗುವಿನ ಬಳಿ ಕಂಡ ಗುಹೆಯಂತೆ ಕಗ್ಗತ್ತಲು ಕೋಣೆಯಾಗಿರಲಿಲ್ಲ. ಅನುಷ್ಠಾನಕ್ಕೆ ತುಂಬಾ ಪ್ರಶಸ್ತವಾದ ಸ್ಥಳವಾಗಿತ್ತು. ಆದುದ ರಿಂದಲೇ ಇದು ಅನೇಕ ಸಿದ್ಧರನ್ನೂ ಸಾಧಕರನ್ನೂ ಆಕರ್ಷಿಸಿದೆಯೆಂದುಕೊಂಡರು ಅಕ್ಕಮಹಾದೇವಿಯವರು ಬುಗ್ಗು ವಾಗುವಿನ ಚುಂಚರು ತಮ್ಮ ಹಳ್ಳಿಗೆ ಹಿಂತಿರುಗಲು ಮಹಾದೇವಿಯ ಅಪ್ಪಣೆ ಕೇಳಿದರು. ಆಗ ಮಹಾದೇವಿಯವರ ಅಭಿಪ್ರಾಯವನ್ನು ಅರಿತು ತಾವೂ ಹೊರಡಲು ಸಿದ್ಧರಾಗಬೇಕಾಯಿತು,.

"ನೀವು ಒಬ್ಬರೇ ಇಲ್ಲಿ ಹೇಗೆ ಇರುತ್ತೀರಿ, ತಾಯಿ? " ಕೇಳಿದರು ಚುಂಚರು,"ಅದನ್ನೇನೂ ಯೋಚಿಸಬೇಡರಿ ನಾನು ಏಕಾಂಗಿಯೆಂಬುದೇ ಇಲ್ಲ. ಚನ್ನಮಲ್ಲಿಕಾರ್ಜುನ ಸದಾ ನನ್ನ ಸಂಗಡ ಇದ್ದಾನೆ. ಬಹುಶಃ ನಾನಿನ್ನು ಹೆಚ್ಚು ಕಾಲ ಅವನಿಂದ ಬೇರೆಯಾಗಿರಲಾರೆ. ನನ್ನ ಜೀವನದ ಗುರಿ ಸಿದ್ಧಿಸಿತು. ನನ್ನ ಬಯಕೆಗಳೆಲ್ಲಾ ಕೈಗೂಡಿದುವು. ನಾನು ನಿಯೋಜಿಸಿದ ಮಾರ್ಗದಲ್ಲಿ ನೀವು ನಡೆಯಿರಿ, ಇದೇ ನನ್ನ ಕೊನೆಯ ಬಯಕೆ. ಅಕ್ಕಮಹಾದೇವಯವರು ವಚನವನ್ನು ಹಾಡುತ್ತಾ ಬರೆಯ ತೊಡಗಿದರು. ಊರನಡುವೆ ಒಂದು ಬೇಂಟೆ ಬಿದ್ದಿತ್ತು! ಆರು ಕಂಡವರು ಕೊಡಿರಯ್ಯ! ಊರಿಗೆ ದೂರುವೆನಗುಸೆಯನಿಕ್ಕುವೆ! ಅರಿತೂ ಅರಿಯದೇ ಒಂದು ಬೇಂಟೆಯನಾಡಿದೆನು ಅರಸಿಕೊಡಯ್ಯ ಚೆನ್ನಮಲ್ಲಿಕಾರ್ಜುನ ಇಲ್ಲಿ ಹೇಳಿದ ಬೇಂಟೆಯ ಕ್ರಿಯೆ ಒಂದು ಅದ್ಭುತವನ್ನೊಳಗೊಂಡಿದೆ. ಇಲ್ಲಿಯ ಉದ್ಗಾರವಾಚಕ ಚಿನ್ಹೆಗಳು ಇದನ್ನು ದೃಢಪಡಿಸುತ್ತವೆ. ಇದು ಶಿವನ ಹುಡುಕಾಟ, ತನ್ನ ಅಂತರಂಗವನ್ನೇ ಹುಡುಕುವ ಒಂದು ಮಾಟ. ಊರು ಎಂದರೆ ದೇಹ. ಈ ಊರಲ್ಲಿಯ ಬೇಂಟೆ, ಬೆನ್ನು

ಹುರಿಯ ಕೆಳಭಾಗದಲ್ಲಿ (ಮಣಿಪುರ ಚಕ್ರ) ಸರ್ಪದಂತೆ ಸುರುಳಿ ಸುತ್ತಿಕೊಂಡು, ಸುಪ್ತಸ್ಥಿತಿಯಲ್ಲಿರುವ ಕುಂಡಲಿನೀ ಶಕ್ತಿ. ಸಾಮಾನ್ಯರಿಗೆ ಅದರ ಅರಿವಿರುವದಿಲ್ಲ. ಅಗಸೆ ಊರಿನ ಹೆಬ್ಬಾಗಿಲು. ಪ್ರಾಣ ಶಕ್ತಿಯನ್ನು ದೇಹದ ಒಳಗೆ ಪ್ರವೇಶಿಸಲು ಅನುವು ಮಾಡಿಕೊಡುತ್ತದೆ. ದೇಹದ ಅಗಸೆ ನಾಸಿಕ ದ್ವಾರ, ಶ್ವಾಸೋಚ್ಛ್ವಾಸದ ಪ್ರಮುಖ ಮಾರ್ಗ, ಪ್ರಾಣಾಯಾಮದಲ್ಲಿ ಕುಂಭಕ ಕ್ರಿಯೆಯನ್ನು ಮಾಡುವಾಗ ಬಾಗಿಲನ್ನು, ನಾಸಿಕ ದ್ವಾರವನ್ನು, ಮುಚ್ಚಬೇಕಾಗುತ್ತದೆ. ಶ್ವಾಸದ ಸ್ಥಂಭನವಾಗುತ್ತದೆ. ಈ ಕ್ರಿಯೆ ನಿರಂತರವಾಗಿ ನಡೆದರೆ, ಕುಂಡಲಿನಿ ಜಾಗೃತಗೊಳ್ಳುತ್ತದೆ. ಯೋಗಾಚಾರ್ಯರಾದ ಅಕ್ಕಮಹಾದೇವಿಯವರು ಕುಂಡಲಿನಿ ಶಕ್ತಿಯನ್ನು ಜಾಗೃತಗೊಳಿಸಿದ್ದಾರೆ. ಅಕ್ಕ ಕೇವಲ ಜ್ಞಾನಿಯಲ್ಲ. ಅವರದು ಮಧುರಾ ಭಕ್ತಿ, ಮಹಾದೇವಿಯ ಅನುಭವ ಚೆನ್ನಮಲ್ಲಿಕಾರ್ಜುನನನ್ನು ಬಿಟ್ಟು ಬೇರೆಯಾಗುವದಿಲ್ಲ. ಭಕ್ತಿ ಮತ್ತು ಜ್ಞಾನ ಒಂದಕ್ಕೊಂದು ಪೂರಕವಾಗುವದು ಶರಣಮಾರ್ಗ. ಜಾಗ್ರತವಾದ ಸ್ಥಿತಿ ಚೆನ್ನಮಲ್ಲಿಕಾರ್ಜುನನ ಭಕ್ತಿಯಾಗಿ ಮಾಡುತ್ತದೆ. ಬೇಂಟೆ ಈ ಶಬ್ದವು ಇದು ಸತತವಾಗಿ ನಡೆಯುವ ಕ್ರಿಯೆಯಾಗಿರುವದನ್ನು ಸೂಚಿಸುತ್ತದೆ.

'ಊರ ನಡುವೆ ಒಂದು ಬೇಂಟೆ ಬಿದ್ದಿದೆ. ಅದನ್ನು ಯಾರಾದರೂ ನೋಡಿದರೆ ನನಗೆ ತೋರಿಸಿರಯ್ಯ, ಈ ಕುರಿತು ಊರಿಗೆ ದೂರು ನೀಡಿದ್ದೇನೆ. ಊರ ಮಹಾದ್ವಾರವನ್ನು ಮುಚ್ಚುತ್ತೇನೆ. ಆನಂತರ ನನ್ನ ಬೇಂಟೆಯನ್ನು ಹುಡುಕುತ್ತೇನೆ. ಮತ್ತೊಂದನ್ನು ಹುಡುಕಿ ಕೊಡು ಚೆನ್ನಮಲ್ಲಿಕಾರ್ಜುನ' ಐದು ಪರಿಯ ಬಣ್ಣವ ತಂದು ಕೊಟ್ಟಡೆ /ನಾಲ್ಕು ಮೊಲೆಯ ಹಸುವಾಯಿತ್ತು ಹಸುವಿನ ಬಸುರಲ್ಲಿ ಕರುವು ಹುಟ್ಟಿತ್ತು ಕರುವ ಮುಟ್ಟಲೀಯದೆ ಹಾಲು ಕರೆದುಕೊಂಡರೆ / ಕರ ರುಚಿಯಾಯಿತ್ತು ಮಧುರ ತಲೆಗೇರಿ ಅರ್ಥವ ನೀಗಾಡಿ ಆ ಕರುವಿನ ಬೆಂಬಳಿವಿಡಿದು ಭವಹರಿಯಿತ್ತು ಚೆನ್ನಮಲ್ಲಿಕಾರ್ಜುನ ಐದು ವಿಧದ ಬಣ್ಣವನ್ನು ಪಂಚೇಂದ್ರಿಯ ರೂಪದಲ್ಲಿ ಮನುಷ್ಯ ಜನ್ಮಕ್ಕೆ ತಂದು ಕೊಟ್ಟರೆ ನಾಲ್ಕು ಮೊಲೆಯುಳ್ಳ ಹಸುವಾಗಿ ಬಿಟ್ಟಿತು. ಕರುವನ್ನು ಮುಟ್ಟಲು ಬಿಡದೇ ಇದ್ದ ಕಾರಣ ಶಿವಭಕ್ತಿ ಎಂಬ ಹಾಲು ಕರೆದುಕೊಂಡರೆ ವಿಶೇಷವಾಗಿ ರುಚಿಯಾಗಿತ್ತು. ಹಾಲಿನ ಮಧುರ ತಲೆಗೇರಿ ಅರ್ಥವನ್ನು ನೀಗಿಸಿಕೊಂಡರೆ ಆ ಲಿಂಗವೆಂಬ ಕರುವನ್ನು ಹಿಂಬಾಲಿಸಿ ಹೋದ ನನಗೆ ಲೋಕದ ಸಂಕಷ್ಟ ನಾಶವಾಯಿತು ಚೆನ್ನಮಲ್ಲಿಕಾರ್ಜುನ. ಪಂಚಭೂತಗಳೇ ಐದು ಪರಿಯ ಬಣ್ಣಗಳು. ಇವುಗಳ ಸಮ್ಮಿಶ್ರದಲ್ಲಿ ಜೀವವೆಂಬ ಹಸು ಜನಿಸುವದು. ಈ ಹಸುವಿಗೆ ಧರ್ಮ ಅರ್ಥ, ಕಾಮ ಮೋಕ್ಷಗಳೆಂಬ ನಾಲ್ಕು ಮೊಲೆಗಳು. ಗುರು, ಲಿಂಗ, ಜಂಗಮ ಪ್ರಸಾದಗಳೆಂಬ ಚತುರ್ವಿಧ ಸಾರಾಯ ಸಂಪತ್ತೆಂದೂ ಅರ್ಥೈಸಿ, ಜೀವಾತ್ಮನ ಬಸಿರಲ್ಲಿ ಕುಂಡಲಿನಿ ಎಂಬ ಕರು ಸಾಧನೆಯಿಂದ ಹುಟ್ಟುವದು. ಕುಂಡಲಿನಿ ಶಕ್ತಿ ಜಾಗ್ರತವಾದರೆ ಶಿರದರಮನೆಯಲ್ಲಿ ಪರಮಾತ್ಮನೆಂಬ ಹಾಲು ಕರೆಯುವದು. ಇಲ್ಲಿ ಕರುವನ್ನು ಮುಟ್ಟುವ ಅವಶ್ಯಕತೆ ಬೀಳುವದಿಲ್ಲ. ಹಾಲನ್ನು ಕರೆಯುವದರಿಂದ ಕರ ರುಚಿಯಾಗುವದು. ಅಂದರೆ ಶರಣರ ಪ್ರಾಣಲಿಂಗಾರಾಧನೆಯಿಂದ ಮಧುರತೆ ತಲೆಗೇರುವದು. ಈ ಸಾಧನೆಯಿಂದ ಕುಂಡಲಿನಿಯನ್ನು ಬೆಂಬಲಿಸಿದಾಗ ಊರ್ಧ್ವಮುಖವಾದ ಶಿವಯೋಗ ಸಾಧನೆಯಿಂದ ಭವವು ಹರಿದು ಹೋಗುವದು. ಮತ್ತೆ ಹುಟ್ಟು ಸಂಭವಿಸದು. ಲಿಂಗಾಂಗ ಸಾಮರಸ್ಯದ ಸವಿ ತಲೆಗೇರುವದು ಅಂದರೆ ಮಸ್ತಕಕ್ಕೆ ವ್ಯಾಪಿಸುವದು.

ಕುಂಡಲಿನಿ ಜಾಗ್ರುತಾವಸ್ಥೆಗೆ ಬರುವ ಸ್ಥಿತಿಯನ್ನು ಅಕ್ಕ ಈ ಬೆಡಗಿನ ವಚನದಲ್ಲಿ ವಿವರಿಸಿದ್ದಾರೆ. ಪಂಚಭೂತಗಳಿಂದಾದ ದೇಹವೆ ಹಸು. ಗುರು, ಲಿಂಗ ಜಂಗಮ. ಪ್ರಸಾದಗಳೆಂಬ ಭಕ್ತಿಮಾರ್ಗವಿಡಿದು ಸಾಧನೆ ಮಾಡಿದಾಗ ಕುಂಡಲಿನಿ ಎಂಬ ಕರು ಹುಟ್ಟುತ್ತದೆ. (ಜಾಗೃತವಾಗುತ್ತದೆ) ಆಗ ಸಹಸ್ರಾರ ಚಕ್ರದಿಂದ ಅಮೃತವೆಂಬ ಹಾಲು ಸುರಿದು, ಅದನ್ನು ಸ್ವಾದಿಸಿದ ದೇಹವು ರುಚಿಯಾಗಿ ಮಧುರತೆಯು, ತಲೆಗೆ ಏರುತ್ತದೆ. ಈ ಶಿವ ಯೋಗ ಸಾಧನೆಯಿಂದ ಜೀವ ಜನನ ಮರಣಗಳಿಂದ ಮುಕ್ತವಾಗುವದು. ಇಂಥ ಸಾಧನೆಯನ್ನು ತನ್ನದಾಗಿಸಿಕೊಂಡ ಅಕ್ಕ ಅಂತಿಮವಾಗಿ ಕದಳಿಗೆ ಬರುತ್ತಾಳೆ. ಕದಳಿಯ ವನವನ್ನು ಕಂಡು ಹೀಗೆ ಪ್ರತಿಕ್ರಿಯಿಸಿದ್ದಾರೆ.

ಕದಳಿ ಎಂಬುದು ತನು ಕದಳಿ ಎಂಬುದು ಮನ ಕದಳಿ ಎಂಬುದು ಭವ ಘೋರಾರಣ್ಯ ಈ ಕದಳಿ ಎಂಬುದ ಗೆದ್ದು ತವೆ ಬದುಕಿ ಬಂದು ಕದಳಿಯ ಬನದಲ್ಲಿ ಭವಹರನ ಕಂಡೆನು ಭವ ಗೆದ್ದು ಬಂದ ಮಗಳೇ ಎಂದು ಕರುಣದಿ ತೆಗೆದು ಬಿಗಿಯಪ್ಪಿದಡೆ ಚೆನ್ನಮಲ್ಲಿಕಾರ್ಜುನನ ಹೃದಯ ಕಮಲದಲ್ಲಿ ಅಡಗಿದೆನು.

ಕದಳಿಯ ಬನ ಎಂದರೆ ಬಾಳೆಯ ವನ. ಅಕ್ಕ ಕದಳಿ ಎಂಬುದರ ಅರ್ಥವನ್ನು ಎಷ್ಟು ವಿಸ್ತಾರದಲ್ಲಿ ಪ್ರಸ್ತುತಪಡಿಸುತ್ತಾರೆ ಎಂಬುದು ಗಮನಿಸಬೇಕಾದ ಅಂಶವಾಗಿದೆ. ಕದಳಿ ಎಂಬುದು ಒಂದು ಗೂಢವಾದ, ಕ್ಲಿಷ್ಟವಾದ, ಸಂಕೀರ್ಣವಾದ ಸ್ಥಿತಿ. ಇಲ್ಲಿ ತನು ಹಾಗೂ ಮನ ಎರಡೂ ಕದಳಿ ಎಂದು ಹೇಳಲ್ಪಟ್ಟಿವೆ. ತನುವಿನ ರಚನೆ ಮನದ ಸ್ವಭಾವ ಇವೆರಡೂ ಸಂಕೀರ್ಣವಾಗಿವೆ. ಭವವು ಘೋರ ಅರಣ್ಯದಂತೆ ಭೇದಿಸಲು ಅಸಾಧ್ಯವಾದುದು. ಅಂಥ ಭವವನ್ನು (ಸಂಸಾರವನ್ನು) ಅಕ್ಕ ಗೆದ್ದು ಬಂದಿದ್ದಾರೆ. ಅವರ ಹೋರಾಟ ಅತ್ಯಂತ ಕಠೋರವಾಗಿತ್ತು, ವಿಸ್ಮಯಕಾರಿಯಾಗಿತ್ತು. ಅದಕ್ಕಾಗಿ ಚೆನ್ನಮಲ್ಲಿಕಾರ್ಜುನ ಅಕ್ಕಮಹಾದೇವಿಯವರನ್ನು ಬಿಗಿದಪ್ಪಿಕೊಳ್ಳುತ್ತಾನೆ. ಚೆನ್ನಮಲ್ಲಿಕಾರ್ಜುನ ಅವರನ್ನು ಬಿಗಿದಪ್ಪಿಕೊಳ್ಳುವದು ಸಗುಣರೂಪದ ಕಲ್ಪನೆ. ಬದುಕಿನ ಅಂತಿಮ ಘಟ್ಟವು ಬಯಲಲ್ಲಿ ಬಯಲಾಗಿ ಹೋಗುವದು. ಅಕ್ಕ ಸಶರೀರ ಜ್ಯೋತಿರ್ಲಿಂಗದಲ್ಲಿ ಐಕ್ಯವಾದರೆಂಬ ಊಹೆಗೆ ಅವಕಾಶ ಒದಗಿಸುತ್ತದೆ. ಅಕ್ಕ ಯೋಗಾಚಾರ್ಯರು ಹೌದು. ಯೋಗ ಮಾರ್ಗವು ಅಕ್ಕನ ಸಾಧನೆಯಲ್ಲಿ ಪೂರಕವಾಗಿದೆ.

ಅಕ್ಕ ಲೋಕದೊಳಗೆ ಹುಟ್ಟಿ ವಿಷಯಂಗಳ ಗೆದ್ದು ಪಾರಮಾರ್ಥವನ್ನು ಸಾಧಿಸಿದ ಧೀಮಂತ ಮಹಿಳೆ.ಕತ್ತಲಿನಲ್ಲಿ ಕಾಡಿನ ಬೆಂಕಿ ತನ್ನ ಕೆನ್ನಾಲಿಗೆಯನ್ನು ಚಾಚಿ ಧಗಧಗನೆ ಉರಿಯತೊಡಗಿತು. ಅದೇ ವೇಳೆಗೆ ಎಡಭಾಗದ ಪರ್ವತದ ಮೈಯನ್ನು ಕಾಡುಕಿಚ್ಚು ವ್ಯಾಪಿಸಿ ಹಬ್ಬುತೊಡಗಿದ್ದುದು ಕಾಣಿಸಿತು. ಅಲ್ಲಿ ಕೆದರುವ ಕಿಡಿಗಳು ನಕ್ಷತ್ರಗಳಂತೆ ಕಾಣುತ್ತಿದ್ದುವು. ಅದರೊಡನೆ ಇಲ್ಲಿನ ಬೆಂಕಿ, ಸ್ಪರ್ಧೆ ಹೂಡಿದಂತೆ ತೋರುತ್ತಿತ್ತು.

ಬೆಂಕಿಯ ಮಧ್ಯದಲ್ಲಿ ಕದಳಿವನದ ಗುಹೆಯಲ್ಲಿ ಕುಳಿತ ಮಹಾದೇವಿಗೆ ತನ್ನದೇ ಆದ ವಚನ ನೆನಪಿಗೆ ಬಂದ ವಚನ

ಕಿಡಿಕಿಡಿ ಕೆದರಿದೊಡೆ, ಎನಗೆ ಹಸಿವು ತೃಷೆ ಅಡಗಿತೆಂಬೆನು; ಮುಗಿಲು ಹರಿದು ಬಿದ್ದೊಡ, ಎನಗೆ ಮಜ್ಜನಕ್ಕೆರೆದರೆಂಬೆನು; ಗಿರಿ ಮೇಲೆ ಬಿದ್ದೊಡೆ, ಎನಗೆ ಪುಷ್ಪಪೂಜೆಯೆಂಬೆನು; ಚನ್ನಮಲ್ಲಿಕಾರ್ಜುನಯ್ಯ; ಶಿರ ಹರಿದು ಬಿದ್ದೊಡೆ, ಪ್ರಾಣ ನಿಮಗರ್ಪಿತವೆಂಬೆನು.

ಅಕ್ಕಮಹಾದೇವಿಯವರು ಕಾಡಿನ ದಾರಿಯ ಮೂಲಕ ಹಾಯ್ದು ಹೋಗಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಜಲಪಾತ ಎನ್ನುವ ಶಬ್ದ ಮೂರು ಮತ್ತು ನಾಲ್ಕನೇ ಸಾಲುಗಳಿಂದ ಸೂಚಿತವಾಗುತ್ತದೆ. ಅಕ್ಕನ ವಚನಗಳಲ್ಲಿ ನಿಸರ್ಗ ವರ್ಣನೆಯ ಚಿತ್ರ ಸಾಕಷ್ಟಿದೆ. ಆದರೆ ವರ್ಷ ಋತುವನ್ನು ವರ್ಣಿಸಿದ ವಚನವಿಲ್ಲ. ಅಕ್ಕನ ಅನುಭವ ಬಹಳ ಕಟುತರವಾಗಿತ್ತು ಅಥವಾ ಅಕ್ಕನ ಪಯಣ ವರ್ಷ ಋತುವಿನಲ್ಲಿ ಆಗಲಿಲ್ಲ. ದಾರಿಯಲ್ಲಿ ಎದುರಾಗಿರಬಹುದಾದ, ಜಲಪಾತ (ಮುಗಿಲು ಹರಿದು ಬಿದ್ದರೆ) ಗುಡುಗು, ಮಿಂಚು, ಸಿಡಿಲು ಎಲ್ಲವೂಗಳನ್ನು ಅಕ್ಕ ಧನಾತ್ಮಕ ರೀತಿಯಲ್ಲಿ ತೆಗೆದುಕೊಂಡಿದ್ದಾರೆ. ಮೃತ್ಯುವಾದರೂ ಕೂಡ ಪರಮಾತ್ಮನಿಗೆ ಪ್ರಾಣವನ್ನರ್ಪಿಸಿ ನಿಶ್ಚಿಂತೆಯಿಂದಿರುತ್ತಾರೆ. ಸುಂದರ ನಿಸರ್ಗವನ್ನು ಪ್ರೀತಿಸಿದಂತೆ ಅದರ ಉಗ್ರ ಸ್ವರೂಪವನ್ನೂ ಅಕ್ಕ ಒಪ್ಪಿಕೊಳ್ಳುತ್ತಾರೆ. ಇದು ಅಕ್ಕನು ಸಾಧಿಸಿದ ಸಮತ್ವ.

ಕದಳಿಯ ಗುಹೆಯ ಕಲ್ಲಮೇಲೆ ಅಕ್ಕಮಹಾದೇವಿಯವರು ಮೇಟ್ಟಿ ನಿಂತಿದ್ದರು ಕೆದರಿದ ಕೂದಲ ಸಮೂಹ, ಉಟ್ಟ ತೆಳುಗಾವಿವರ್ಣದ ತುಂಡು ಬಟ್ಟೆಯು ಮೇಲೆ ಹರಡಿ, ತಪೋಲಕ್ಷ್ಮಿಯ ದಿವ್ಯವಿಗ್ರಹಕ್ಕೆ ಮಂಗಳದ ರಕ್ಷೆಯನ್ನು ಕಟ್ಟಿದಂತಿತ್ತು. ಸಪ್ತಕಾಂಚನವರ್ಣದ ತೇಜಸ್ಸಿನ ಕಾಂತಿಯಿಂದ ಹೊಳೆಯುತ್ತಿರುವ ಮುಖದ ಮೇಲೆ, ಚಂದ್ರಮೌಳಿಯ ಕರುಣೆಯ ಸಾಕ್ಷಾತ್ಕಾರವೆಂಬಂತೆ ವಿಭೂತಿ ಹೊಳೆಯುತ್ತಿತ್ತು. ಅವನ ಉರಿಗಣ್ಣಿನಿಂದ ಸಿಡಿದ ಪವಿತ್ರತೆಯ ಕಿಡಿಗಳೆಂಬಂತೆ ಕೊರಳಿನಲ್ಲಿ ರುದ್ರಾಕ್ಷಿಯ ಸರ, ಮುಂಗೈಯಲ್ಲಿ ರುದ್ರಾಕ್ಷಿಯ ಕಂಕಣ. ಮಿಂಚಿನ ಬೆಳಕನ್ನು ಹೊರಸೂಸುತ್ತಿ. ಅಕ್ಕಮಹಾದೇವಿಯವರು ಯೋಗಾಂಗ ತ್ರಿವಿಧಿಯನ್ನು ಜನರಿಗೆ ಸಾಧನೆಯ ಮಡುವವರಿಗೆ ಉಪಯೋಗಾವಗಲೆಂದು ತನ್ನ ಎಲ್ಲ ಅನುಭವವನ್ನು ಇದರಲ್ಲಿ ಬರೆಯುತ್ತರೆ,

# ಯೋಗಾಂಗತ್ರಿವಿಧಿ

ಶ್ರೀಮಹಾಮಹಿಮನೆ | ಸೋಮಶೇಖರಗುರುವೆ
ಕಾಮಿತದ ಫಲವ ಕೊಡು ಕಂಡ | ಎನ್ನ ಹೃ
ಸ್ಥಾಮದೊಳು ನಿಂತು ಮೆರೆ ಕಂಡ!

ಮೊದಲು ಮಾಡುವೆ ನಾನು | ಸದಮಲ ಗುರುವಿನ
ಮೃದುಪಾದಗಳನು ಬಲಗೊಂಡು ತತ್ತ್ವದ
ಚದುರ ಪದಗಳನು ಮುದದಿಂದ

ಜೀವ-ಪರಮರ ಭೇದ | ಭಾವವನರಿವೊಡೆ
ಆವಾವ ಮುಖದೊಳಿರುವುದು। ಯೆನ್ನನು
ಭಾವಕ್ಕೆ ಬಂದುದನೊರೆವೆ

ಶರಣರ ನೆಲೆಗಳನರಿವಡೆನ್ನ ಅಳವೆ.
ಹರಿಯಜಸುರರಿಗಳವಲ್ಲ | ವೆಂದೆನ
ಲೊರೆವೆ ನಾನವರ ಕೃಪೆಯಿಂದ

ಎಲ್ಲ ದೇವರ ದೇವ | ವಲ್ಲಭನೆ ಗುರುಚೆನ್ನ
ಮಲ್ಲಿಕಾರ್ಜುನನೆ ಮನದೊಳು | ಇರು ಕಂಡ
ಬಲ್ಲಂತೆ ನಿನ್ನ ನುತಿಸುವೆನು

ಆರು ಭೂತಗಳಲ್ಲಿ ಆರು ತತ್ವಗಳಲ್ಲಿ
ಪೂರೈಸಿಯಿರ್ಪ ಘನವನ್ನು | ಮನದಲ್ಲಿ
ಆರೈದು ತಿಳಿದಡವ ಮುಕ್ತ

ಮಾಘಮಾಸವು ಪೋಗಿ ಮೇಗೇ ಬಂದಿತು ಚೈತ್ರ
ಬೇಗ ಮಾಮರನು ತಳಿರಿತು | ಅದ ಕಂಡು
ಕೂಗಿ ಕರೆದಿತ್ತು ಕಳಕಂಠ

ಆಕಾಶದೊಳಗಣ | ಜೋಡಿಕೆಯ ಪ್ರಭೆ ಬಂದು

ಲೋಕಂಗಳೊಳಗೆ ಮುಸುಗಲು ‌| ಅದ ಕಂಡು
ಏಕಾಂಗಿಯಾದಡವ ಯೋಗಿ

ಒಂಬತ್ತು ವೆಚ್ಚದ | ತುಂಬಿದ ಕೊಡನೊಳು
ಸಂಭ್ರಮದ ಮುತ್ತು ಇರುತಿಹುದು । ಅದರನುವ
ನಂಬಿ ಕಂಡವನೆ ಕಡು ಜಾಣ

ಅಷ್ಟದಳ ಕಮಲದ | ಬಟ್ಟಬಯಲೊಳಗೊಂದು
ಮುಟ್ಟಬಾರದ ಘನವಿಹುದು! ಅದರೊಳಗೆ
ದೃಷ್ಟಿಯಿಟ್ಟವನೆ ಕಡುಜಾಣ

ಕೋಡಗನೊಡಗೂಡಿ | ಯಾಡುವ ನರಿ ನಾಯಿ
ಗೀಡಾದ ಮನೆಯ ಮುರಿದಿಹೆನು | ಮತ್ತೊಂದು
ಗೂಡಿನೊಳು ನಾನು ಮೆರೆದಿಹೆನು

ಒಡಹುಟ್ಟಿದೈವರ| ಒಡನೆ ಶಿರಗಳನರಿದು
ಮಡಿದಯ ಕರವ ಹಿಡಿದಿಹೆನು | ಮುಂದಣ
ನಡುಬಟ್ಟೆಯೊಳಗೆ ನಡೆದಿಹೆನು

ನುಡಿಯಬಾರದ ಹಣ್ಣು ಕಡೆಯೊಳಗಿರಲಾಗಿ
ಮಡದಿ ತಾನೊರ್ವಳದ ಕಂಡು | ಗ್ರಹಿಸಲ್ಕೆ
ನುಡಿಯೊಳಗಾಗಿ ಮೆರೆಯಿತ್ತು!

ಕಂಗಳ ನೋಟದಿ ಸಂಗಮನ್ಮನ
ತಿಂಗಳ ಸೂಡಿದಭವನೆ । ನೀನೀಗ
ಹಿಂಗದಲೆನಗೆ ದಯವಾಗೋ

ನೂರೆಂಟು ಮಣಿಗಳ ಮೂರು ಭಾಗವ ಮಾಡಿ
ಮೂರು ಪುರುಷರಿಗೆ ಅಳವಡಿಸಿ | ಮೂವರನು
ಸೇರಿ ನಾನಳಿದು ಬಯಲಾದೆ

ಒಂದು ರತ್ನವು ತಾ ׀ ಮುಂದೆ ಈರಾರಾಗಿ
ಕುಂದದೈವತ್ತು ತೆರನಾದ ׀ ರತ್ನವದು
ಸಂದಿತ್ತು ಎನ್ನ ಮನದೊಳು

ಊರೊಳಗೆ ಆಡುವ ׀ ಮಾರಿಯ ಹಿಡಿತಂದು
ಭಾರಿಕೋಳವನಳವಡಿಸಿ । ಆ [ಊರ]]
ಮಾರಿದೆನು ಒಬ್ಬ ಚದುರಂಗೆ

"ಕೋಟಿ ರವಿಶಶಿಗಳಿಗೆ ಮೀಟಾದ ಪ್ರಭೆ ಬಂದು
ನಾಟಿತ್ತು ಎನ್ನ ಮನದೊಳಗೆ ׀ ಅದ ಕಂಡು
ದಾಟಿದೆನು ಭವದ ಕುಣಿಗಳನು

ಅಂಬರದೊಳಗಣ ׀ ತುಂಬಿದ ಕೊಡನುಕ್ಕಿ
ಕುಂಭಿನಿಯ ಮೇಲೆ ಸುರಿಯಲು ׀ ಮಾನವರು'
ಸಾಂಬಲೋಕಕ್ಕೆ ತೆರಳಿದರು

ಮೊರೆವ ನಾದವ ಕೇಳಿ ಉರಿವ ಜೋತಿಯ ನೋಡಿ
ಸುರಿವಮೃತವನು ಸವಿದುಂಡ ׀ ಕಾರಣ
ತೊರೆದೆನೋ ಜನನಮರಣಗಳ

ಅಷ್ಟದಿಕ್ಕಲಿ ಶಕ್ತಿ । ಅಷ್ಟರುದ್ರುರು ಮೂರ್ತಿ
ಅಷ್ಟದಿಕ್ಪಾಲಾರಾದಿಗಳ ׀ ನಡುವಿರ್ದ
ಕಟ್ಟಾಣಿ ಮುತ್ತ ಬರಸೆಳೆದೆ

ಒಂಬತ್ತು ವೆಜ್ಜದ ׀ ಇಂಬುಗಳ ಬಲಿವುತ್ತ
ತುಂಬಿ ಸುಷುಮ್ನೆಯೊಳು ಘನವ ׀ ನೋಡಲ್ಕೆ
ಕುಂಭದೊಳಮೃತ ಸುರಿಯಿತ್ತು

ಆರು ಮುಖದ ಮುತ್ತ। ನೀರೊಳಗಿರಿಸಲ್ಕೆ
ನೀರಳಿದು ಮುತ್ತು ಉಳಿಯಿತು। ಆ ಮುತ್ತ
ಸೇರಿಸಿದೆನೆನ್ನ ಉರದಲ್ಲಿ

ಉಪ್ಪರದ ಗುಡಿ ಮೇಲೆ ಸರ್ಪವದು ಹೆಡೆಯೆತ್ತಿ
ಎಪ್ಪತ್ತು ಪುರವನಗಿದುಂಡು। ದಣಿಯದೆ
ಕಪ್ಪೆಯ ಶಿರವ ಮುರಿಯಿತ್ತು.

ಹಿತ್ತಿಲ ಬಾಗಿಲ ತೆರೆದು। 'ಸತ್ತಾತನ ಎಚ್ಚರಿಸಿ
ಹೆತ್ತಮ್ಮನ ಕರವ ಪಿಡಿಯಲ್ಕೆ। ಅವಳಿಗ
ಇತ್ತಳ್ಕೆ ತನ್ನ ಪದಕವ

ಕೋಣ ಕೊಂಬಿನ ಮೇಲೆ। ಮಾಣದಲೆ ಕಪಿಯೇರಿ
ಜಾಣೆಯ ಮನೆಯೊಳಹೊಗಲು। ಅವಳೆದ್ದು
ಕೋಣನ ಕಾಲ ಮುರಿದಳು

ಹೇಮಕೂಟದ ತುದಿಗೆ। ಆ ಮಹಾಗಜವೇರಿ
ಸೋಮನ ಕಳೆಯ ಸವಿದುಂಡು। ಮದವೇರಿ
ಕಾಮನ ಹಿಡಿದು ಬಡಿಯಿತ್ತು

· ಪಶ್ಚಿಮದ ಕೊಳದಲ್ಲಿ। ಅಚ್ಚ ತಾವರೆಯರಳಿ
ನಿಚ್ಚಳದ ಗಂಧವೆಸೆಯಲ್ಕೆ। ಅದ ಕಂಡು
ಸಚ್ಚಿತ್ತ ಭ್ರಮರವೆರಗಿತ್ತು

ನವಪುರದೊಳಗೊಂದು। ನವರತ್ನ ಬೆಲೆಯಾಗಿ
ನವನಾರಿಯರು ಅದ ಕಂಡು। ಕೊಳಲಾಗಿ
ಭವಸೂತ್ರ ಹರಿದು ಬಯಲಾದೆ

ಬೆಟ್ಟದ ಮೇಲಿಚ್ಚು। ಸುಟ್ಟಿತ್ತು ಕಾನನವ

ಅಷ್ಟಮೃಗಜಾತಿಯಳಿದವು! ಅದ ಕಂಡು
ಬಟ್ಟಬಯಲೊಳಗೆ ಮೆರೆದನು

ಕೊಂಡಕ್ಕೆ ಬೀಳ್ವಂಥ ‖ ಲಂಡಸ್ತ್ರೀಯಳು ತಾನು
ದಂಡೆಯ ಕುಣಿಕೆ ಸಡಿಲಿಸಲು‖ ಕೊಂಡದ
ಕೆಂಡದೊಳಗಾಗಿ ಮುಳುಗಿದಳು

ಕುಂಡಲಿಯ ಸರ್ಪನ ‖ ತುಂಡ ಮೇಲಕೆ ನೆಗೆಯೆ
ಮಂಡಲವು ಮೂರು ಬೆಳಗಾಗಿ ‖ ಉರಿಯುವ
ಖಂಡಜ್ಯೋತಿಯೊಳು ಬಯಲಾದೆ

ಅಷ್ಟವರ್ಣದ ಹಣ್ಣು ‖ ಬಟ್ಟಬಯಲೊಳಗಿರಲು
ಅಷ್ಟಾಂಗಯೋಗವನು ಮಾಡಿ ‖ ಬಳಲುವರು
ದೃಷ್ಟಿಯೊಳಗಿರುವುದನು ಮರೆತು.

ನೆಲನಿಲ್ಲ ತೋಟದಲಿ ‖ ಎಲೆಯಿಲ್ಲ ಗಿಡ ಹುಟ್ಟಿ
ಫಲವಿಲ್ಲ ಹಣ್ಣು ಕೆಡೆದರಲು । ಅದ ಕಂಡು
ಮೆಲಲಿಲ್ಲ ಹೋಗಿ ಸವಿದಿಹೆನು.

ಸಪ್ತಸಾಗರ ಬತ್ತಿ । ಹತ್ತು 'ಹಂಸೆಯು ಸತ್ತು
ಮುತ್ತು ಮಾಣಿಕವು ತಲೆದೋರೆ ‖ ಅದಕಂಡು
ಸತ್ತವನು ಎದ್ದು ಕುಣಿದ.

ಕರ್ತೃ ಶ್ರೀಗುರುರಾಯ ‖ ಮುತ್ತಿನ ಕವಚವ
ಅರ್ತಿಯಿಂದೆನಗೆ ಅಳವಡಿಸೆ ‖ ಅದರಿಂದ
ಕಿತ್ತೆನು ಮಾಯದ ಬಲೆಗಳನ್ನು

ನಡೆವ ಲಿಂಗದ ಕೂಡೆ ‖ ನುಡಿವ ಲಿಂಗದ [ಕೂಡೆ]
ಎಡೆವಿಡದೆ ಬರ್ಪ ವಿಷಯಾದಿ ‖ ಭೋಗವ

ನೂಡುವೆ ಲಿಂಗಮುಖಗಳ

ಒಂಬತ್ತು ಚೌಕದ ।ಉಂಬುಡವ ಮನೆಯನ್ನು
ನಂಬದಲೆ ಕಡೆಗೆ ತೊಡಗಿಸಿ ।ಮುಂದಣ
ಸಂಭ್ರಮದ ಮನೆಗೆ ನಡೆದೆನು.

ಗುರುವೆ ನನ್ನಯ ಕಾಯ ।ಹರನೆನ್ನಯ ಮನವು
ಪರಮ ಜಂಗಮವೆ ಅನುಭಾವ ।ಮುಖವೆನ್ನ
ಇರವೆಲ್ಲ ಲಿಂಗಮಯವೆಂಬೆ

ಉಟ್ಟ ಸೀರೆಯ ಸೀಳಿ । ತೊಟ್ಟ ತೊಡುಗೆಯ ಮುರಿದು
ಬಿಟ್ಟಿಹೆನು ನಾನು ಬಿಡುಮುಡಿಯ । ನೆಲೆ ದೇವ
ಕೊಟ್ಟಿಹೆನೆನ್ನ ತನುಮನವ

ಷಡಚಕ್ರದೊಳಗಣ ।ಷಡುವಿಧ ಲಿಂಗಕ್ಕೆ
ಷಡುವಿಧೇಂದ್ರಿಯವ । ಮುಖಮಾಡಿ
ವಿಷಯಗಳ ಷಡುಭಕ್ತಿಯಿಂದಲೂಡುತಿಹೆನು

ಆಧಾರದೊಳಗಣ ।ಆದಿಯ ಲಿಂಗಕ್ಕೆ
ಮೇದಿನಿಯ ಘ್ರಾಣಮುಖಮಾಡಿ ।ಗಂಧವನು
ಮೋದದಿಂದ ಕೊಡುವ ಸದ್ಭಕ್ತ

ಅರೆಸಳ ಕಮಲದ ಕರ್ತೃ ಗುರು ಲಿಂಗಕ್ಕೆ
ಸಾರಜಿಹ್ವೆಯನು ಮುಖಮಾಡಿ ।ರಸಗಳ
ಪೂರೈಸಿಕೊಡುವ ನಿಜನಿಷ್ಠ

ಹತ್ತೆಸಳ ಕಮಲದ ।ಕರ್ತೃಶಿವಲಿಂಗಕ್ಕೆ
ಮತ್ತೆ ನೇತ್ರಗಳ ಮುಖಮಾಡಿ ।ರೂಪಿನ
ತುತ್ತುಗಳ ಕೊಡುವನವಧಾನಿ

ದ್ವಾದಶದಳ ಕಮಲದ ಲಾದ ಚರಲಿಂಗಕ್ಕೆ

ಸಾದರದಿ ತ್ವಕ್ಕ ಮುಖಮಾಡಿ ❙ ಸ್ಪರುಶನದಿ

ಸ್ವಾದವನು ಕೊಡುವನನುಭಾವಿ

ಷೋಡಶ ಕಮಲದ । ಲಾಡುವ ಲಿಂಗಕ್ಕೆ

ಗಾಢದಿಂ ಪ್ರೋತ್ರಮುಖಮಾಡಿ । ಶಬ್ದವನು

ನೀಡಿ ಕೊಡುತಿರ್ಪ ಪರಿಣಾಮಿ.

ದ್ವಿದಳತ್ರಿಕೂಟದಲಿ । ಹುದುಗಿದ ❙ಮಹಲಿಂಗಕೆ

ಸದಮಲ ಹೃದಯಮುಖಮಾಡಿ ❙ ತೃಪ್ತಿಯನು

ಒದಗಿ ಕೊಡುತಿಹನು, ಸಮರಸನು

ಅಂಗದಾಶೆಯನಳಿದು ❙ ಲಿಂಗದಾಶ್ರಯವುಳಿದು

ಸಂಗಸುಧೆಯನೇ ನಲಿದುಂಡು ❙ ತನುಮನದ

ಭಂಗವನು ಹರಿದು ಸುಖಿಯಾದೆ

ಗುರು ನಿಮ್ಮ ಚರಣವ ❙ ಮರೆಯೆನು, ಮರೆದರೆ

ಪರಿಭವದ ಬಾಧೆ ಬರಲಯ್ಯ । ಕಡೆಯಲ್ಲಿ

ದೊರೆಯೆ ನರಕದೊಳು ತುಳಿಯಯ್ಯ

ನಡೆವಲ್ಲಿ ನುಡಿವಲ್ಲಿ ❙ ಉಡುವಲ್ಲಿ ❙ ಉಂಬಲ್ಲಿ

ಬಿಡೆನಯ್ಯ ನಿಮ್ಮ ಚರಣವನು । ಈ ಛಲವ

ಕಡೆಮುಟ್ಟಿಸೆನಗೆ ಗುರುರಾಯ

ಘನಗುರುವೆ ನೀಯೆನ್ನ ❙ ಮನದೊಳಗಿರು ಕಂಡ

ಮನವ ಬಿಟ್ಟೆನಿಯ ಅಗಲಿದರೆ ❙ ನಿಮಗಿನ್ನು ಅನಘಶಿವಶರಣರಡಿಯಾಣೆ

ಆವಾವ ಭೋಗಗಳ | ಜೀವಭಾವದಿ ನಾನು
ಭಾವಿಸುತ ಪಿರಿದು ಸವಿದರೆ | ನರಕದ
ಬಾವಿಯೊಳಗದ್ದಿ ತೆಗೆಯಯ್ಯ

ಗುರು ಕೊಟ್ಟ ಭೋಗವನು | ಗುರುವಿಗೆ ನಾನಿತ್ತು
ಗುರುಮುಖದಿಂದ ಒದಗಿದ | ಶೇಷವನು
ಅರಿವಿಂದ ಉಂಡು ಸುಖಿಯಾದೆ

ಲಿಂಗವು ಬಂದೆನ್ನ | ಅಂಗದೊಳ್ಳೆಲಸಲು
ಸಂಗದೊಳ್ ಜ್ಯೋತಿರೂಪಾದ । ಕಾರಣದಿ
ಇಂಗಿದವು ಎನ್ನ ಭವಭವವು

ಎಲ್ಲ ಭೋಗಗಳಲ್ಲಿ | ಪಲ್ಲವಿಸಿ ಇರುತಿಹರು
ಬಲ್ಲಡೆ ಅವರ ಪರಿ ಬೇರೆ | ಶರಣರ
ಖುಲ್ಲಮಾನವರು ಜರಿವರು

ಬಲ್ಲವರೆ ಬಲ್ಲರು | ಎಲ್ಲರಿಗೆ ತಿಳಿಯದು
ಕಲ್ಲೊಳು ಮಿಸುನಿಯಿರುವಂತೆ । ಇದರನುವ
ಬಲ್ಲವರಿಗರ್ಥ ತಿಳಿಯುವುದು

ನಾನಾ ಜನ್ಮಗಳಲ್ಲಿ | ಹೀನಳಾಗಿರುತಿರಲು
ನೀನೆ ಬಂದೆನ್ನ ಕೈಪಿಡಿದ । ಕಾರಣದಿ
ಮೌನಮುದ್ರಿಕೆಯೊಳೊಡವೆರೆದೆ

ಹಿಂದಣ ಭವವೆಲ್ಲ । ಸಂದಿಹವಿಲ್ಲಿಗೆ
ಮುಂದಿನ್ನು ನನಗೆ ಭವವಿಲ್ಲ | ಗುರುರಾಯ
ಹೊಂದಿದೆನು ನಿಮ್ಮ ಚರಣವ

ಎನ್ನ ಕಾಯವೆ ಗುರು | ಎನ್ನ ಪ್ರಾಣವೆ ಲಿಂಗ

ಎನ್ನಂತರಾತ್ಮ ಚರಲಿಂಗ । ವಾಗಿರಲು
ಇನ್ನುಂಟೆ ಎನಗೆ ತನುಮನವು!

ನಲ್ಲೆ ನಲ್ಲನ ಸುಖವ । ನೆಲ್ಲರೊಳುರುಹುವಳೆ
ಬಲ್ಲವರದರ! [ತೆರದೊಳು । ನಿಜತೃಪ್ತಿ
ಸಲ್ಲೀಲೆಯಿಂದ ಘಟಿಸುವುದು.

ಚಿನ್ನ-ಬಣ್ಣಗಳಂತೆ ರತ್ನ-ದೀಪ್ತಿಗಳಂತೆ
ಭಿನ್ನವಿಲ್ಲದಲೆ ಬೆರದಿಹರು । ಲಿಂಗದೊಳು
ಪನ್ನಗಧರನ ಶರಣರು

ನಿಮ್ಮ ತೊತ್ತಿನ ತೊತ್ತು । ನಿಮ್ಮ ನಭೃತ್ಯನ ಭೃತ್ಯೆ
ನಿಮ್ಮಡಿಯ ನಾನು ಮರೆವೊಕ್ಕೆ । ಘನಗುರುವೆ
ನಿಮ್ಮ ಕೃಪೆಯಿಂದ ಸಲಹಯ್ಯ

ಭಕ್ತರ ಮನೆಯಲ್ಲಿ । ತೊತ್ತಾಗಿ ಇರಿಸೆನ್ನ
ಭಕ್ತರುಂಡುಳಿದ ವರಶೇಷ । ವನು ಕೊಂಬ
ನಿತ್ಯಸುಖವೆನಗೆ ಕೊಡು ಗುರುವೆ

ಎನ್ನವಗುಣಗಳ । ನಿನ್ನು ನೀ ನೋಡದಲೆ
ಚೆನ್ನಮಲ್ಲೇಶ ಕೃಪೆಗೆಯ್ದು । ಕರುಣದಿ
ಎನ್ನ ಭವಬಂಧ ಪರಿಯಿತ್ತು

ಜಯ ನಿತ್ಯನಿರುಪನೆ । ಜಯ ಸತ್ಯಸದ್ಗುರುವೆ
ಜಯಭಕ್ತರರಸ । ಅಘಹರನೆ । ಮದ್ಗುರುವೆ
ಜಯ ಎನ್ನ ಮನದ ನಿಧಿಯೆ!

ಗುರು ಚೆನ್ನಮಲ್ಲೇಶ । ವರಕೃಪಾರಸವನ್ನ
ಶರೀರವನು ತುಂಬಿ ಪೊರಸೂಸೆ । ಯದರಿಂದ

ಬರೆದಿಹೆನು ಬಲ್ಲ ಪರಿಯಲಿ.

ಯೋಗಾಂಗತ್ರಿವಿಧಿಯನು । ರಾಗದಿಂ ಬರೆದೋದೆ ರೋಗಭವಬಾಧೆ ಪರಿಯುವುದು ‖ ಲಿಂಗದೊಳು

ಸಾಗಿ ಭವದಿಂದ ಮೆರೆಯುವರು.

ಈ ರೀತಿಯಾಗಿಅಕ್ಕಮಹಾದೇವಿಯವರ ತನ್ನ ಅಪೂರ್ವ ಸಾಧನೆಗಳನ್ನು ಬರೆದರು ಎರಡು ವರ್ಷಗಳ ಕಾಲ ಕಠಿಣ ತಪಸ್ಸು ಮಾಡಿದರು ಈ ಕದಳಿವನದ ಗುಹೆಯಲ್ಲಿ ಬದುಕುವ ಯಾವ ಆಸೇನು ಇನ್ನೂ ಉಳಿದಿರಲಿಲ್ಲ. ಅಕ್ಕಮಹಾದೇವಿಯವರು ವಿರಳ ಗುಡ್ಡಗಳು. ವಿಪುಲ ಬಯಲಿನ ದಾರಿಯನ್ನೀಗ ಕ್ರಮಿಸಿ, ಬಂದಾಯಿತು. ಇಂದು ಏಕೋ ಮೋಡ, ಬಿಸಿಲಿನ ಕಣ್ಣಾಮುಚ್ಚಾಲೆಯಲ್ಲಿ ಹಗಲಿಡೀ ನಡೆದಿದ್ದಾರೆ ಮಹಾದೇವಿಯವರು. ಕಾರ್ಮೋಡ ಆವರಿಸಿ ಉಸಿರುಗಟ್ಟಿಸುವ ಸೆಕೆ. ಮೈಯೆಲ್ಲ ಬೆವರಿ, ಅಂಟಿ, ಗುಳ್ಳೆಯೆದ್ದವು. ಭಾರೀ ಮಳೆ ಶುರುವಾಯಿತು. ಅದು ಬಯಲಿನಲ್ಲಿ ನಿಂತು ಕಂಡುಂಡ ಮಳೆ. ಗುಡ್ಡವೊಂದರ ನೆತ್ತಿ ಇಳಿದು ಬಂದಾಯಿತು.ಅಲ್ಲೆ ಕಣಿವೆಯಲ್ಲಿ ಸಣ್ಣಗೆ ಹರಿಯುವದು ಕಾಣುತ್ತಿದೆ. ಕಣಿವೆಯ ಆಚೆ ಬಯಲಿದೆ. ಇನ್ನೇನುಮಳೆ ಬರಲಿರುವ

ಸಂಜೆಯಾಗುತ್ತಿದೆ. ಕಾರ್ಮೋಡಗಳು ಪಶ್ಚಿಮ ದಿಗಂತದಲ್ಲಿ ನೆರೆಯುತ್ತಿವೆ. ಗಿಡದ ಮೇಲೆ ಸರಸರ ಓಡುವ ಕೆಂಪಿರುವೆ, ಹಾರಿ ಬಂದ ಚಿಟ್ಟೆ, ಕೊಂಬೆ ಮೇಲೆ ಕುಳಿತು ಒಂದೇಸಮ ಪುಚ್ಛ ಸ್ವಚ್ಛಗೊಳಿಸಿಕೊಳ್ಳುತ್ತಿರುವ ಚೋರೆ ಹಕ್ಕಿ, ಒಣಗಿ ಉದುರುತ್ತಿರುವ ಎಲೆ ಎಲ್ಲವೂ ಮಳೆಯನ್ನೇ ಕರೆಯುತ್ತಿವೆ. ತಪ್ತ, ಸ್ತಬ್ಧ, ಮಗ್ನ ಲೋಕ. ನೋಡನೋಡುತ್ತಿದ್ದಂತೆ ಆಗಸದಲ್ಲಿ ಮೋಡಗಳು ದಟ್ಟೈಸತೊಡಗಿದವು. ಇಳಿಯತೊಡಗಿದ ಸೂರ್ಯನನ್ನು ಮುಚ್ಚಿ ಹಾಕಿದವು. ಹುಚ್ಚು ಗಾಳಿಯ ರಭಸಕ್ಕೆ ಲೋಕ ಧೂಳಿನ ಕಡಲಿನಲ್ಲಿ ಮುಳುಗಿ ಹೋಯಿತು. ಅದೋ ಅಲ್ಲಿ ಬಯಲಲ್ಲಿ ಕೆಳಗೆ ಧೂಳಿನ ಮೋಡ ಸುರುಳಿ ಸುತ್ತುತ್ತ ಸುಂಟರಗಾಳಿಯಾಗಿ ಮೇಲೆದ್ದಿದೆ. ಅಕೋ ಅಲ್ಲಿ ಮಳೆಯಾಗುತ್ತಿದೆ. ತಂಗಾಳಿ ಮಣ್ಣವಾಸನೆ ಹೊತ್ತು ಏನನ್ನೋ ನೆನಪಿಸುತ್ತಿದೆ.

ಆಹಾ!

ಮಹಾದೇವಿಯವರಿಗೆ ಗುಹೆಯ ಒಳಗೆ ಕೂರಲಾಗಲಿಲ್ಲ. ತನ್ನೂರ ಮಳೆಯ ನೆನಪು ಬಂದು ಹೊರಬಂದರು. ಮಿಂಚಿನ ಕೋಲು ಒಂದೇಸಮ ಈ ಕಡೆಯಿಂದ ಆ ಕಡೆಗೆ ಚಲಿಸುತ್ತಿದೆ. ಒರಳಿನಲ್ಲಿ ಕಲ್ಲು ಹಾಕಿ ಕಡೆಯುತ್ತಿರುವಂತೆ ಗುಡುಗುಡು ಗುಡುಗುಡು ಸದ್ದು, ದೊಪ್ಪದೊಪ್ಪನೆ ದೊಡ್ಡ ಹನಿಗಳು ಬೀಳಲು ತೊಡಗಿದವು. ಫಟಪಟ ನಾಲ್ಕು ಹನಿ ನೆಲಕ್ಕೆ ಬಿತ್ತು. ಏನೋ ಒಂದು ಫಟೀರನೆ ತಲೆಗೆ ಬಡಿಯಿತು. ಇದೇನು, ಯಾರು ಕಲ್ಲು ಒಗೆದವರು? ಮಹಾದೇವಿಯವರು ಹೊಡೆತ ಬಿದ್ದ ಜಾಗ ಮುಟ್ಟಿ ನೋಡಿದರೆ ರಕ್ತ ಒಸರುತ್ತಿದೆ! ಹಾಗೇ ಇನ್ನೊಂದು ದಿಕ್ಕಿನಿಂದ ಮತ್ತೊಂದು ಪೆಟ್ಟು ಬಿದ್ದಾಗ, ಅದು ಆಲಿಕಲ್ಲು ಎಂದುಅರ್ಥವಾಗಿ ಸರಸರ ಗುಹೆಒಳಗೆ ಹೊದರು ಅಲ್ಲೇನು ರಕ್ಷಣೆಯಿದೆ? ಅದು ಮುರುದಿಕ್ಕೂ ದಿಕ್ಕಿನಿಂದ ತೆರೆದ ಗುಹೆ, ಪಟಪಟನೆ ಆಲಿಕಲ್ಲುಗಳು ಬಂದು ಗುಹೆಯ ಒಳಗೆ ಬಿದ್ದವು.

ಭೋರೆಂದು ಮಳೆ ಶುರುವಾಯಿತು. ಗುಹೆಯ ನಡುಮಧ್ಯ ಒಂದು ಹೆಜ್ಜೆ ಜಾಗ ಬಿಟ್ಟರೆ ಮತ್ತೆಲ್ಲ ಒದ್ದೆಮುದ್ದೆ. ಗುಹೆಯ ಮೇಲಿಂದ ಕೆಂಬಣ್ಣದ ನೀರು ಕೆಳಗುರುಳುತ್ತ ಉರುಳುತ್ತ . ಮಳೆಯ ಮಂಜಿನಲ್ಲೂ ದೂರದ ದಿಬ್ಬಗಳಿಂದ ನೀರು ಕಣಿವೆಯತ್ತ ಧುಮ್ಮಿಕ್ಕುವುದು ಅಸ್ಪಷ್ಟವಾಗಿ ಕಾಣುತ್ತಿದೆ. ಸದ್ದು, ಸದ್ದು, ಹಲವು ರೀತಿಯ ಭೋರ್ಗರೆತದ ಸದ್ದುಗಳು. ಶಬ್ದ ಪ್ರಳಯ.

ಮಹಾದೇವಿಯವರು ಮಲೆನಾಡಿನ ಕಾರ್ಗಾಲ ವೈಭವ ಕಂಡಿದ್ದರು.ಶ್ರೀಗಿರಿಯ ಬೇಟ್ಟದ ಮಳೆ ಇಷ್ಟು ರಭಸವಿರಬಹುದೆಂದು ಅಂದುಕೊಂಡಿರಲಿಲ್ಲ. ಉಡುತಡಿಯಲ್ಲಿ ಒಂದುಬಾರಿ ಆಲಿಕಲ್ಲು ಹುಡುಕಿ ಮಳೆಯಲ್ಲಿ ನೆನೆದು, ಶೀತವಾಗಿ, ಕೆಮ್ಮಾಗಿ, ಜ್ವರ ಬಂದಿತ್ತು. ಮಲೆಯ ಸೀಮೆಯ ಹೆಣ್ಣು ನನ್ನಮ್ಮ, ಮಳೆಗಾಲದ ಕಾಯಿಲೆಗೆ ಏನು ಮಾಡಬೇಕು ಎಂದು ಬಲು ಚೆನ್ನಾಗಿ ಅರಿತವರು ಅಮ್ಮ. ಕೂದಲು ಬಿಚ್ಚಿ ಹರಡಿ ಸಾಂಬ್ರಾಣಿ ಹೊಗೆಯ ಮೇಲೆ ಬುಟ್ಟಿ ಕವುಚಿ ತಲೆ ಕಾಸಿದ್ದಳು. ಮಳೆಗಾಲ ಆರು ತಿಂಗಳು ಬಿಸಿ ನೀರೇ ಕುಡಿಯಬೇಕು. ಬರಿಯ ನೀರು ಕುಡಿದಿದ್ದೇ ಇಲ್ಲ. ಬೆಲ್ಲ, ಕಷಾಯದ ಹಿಟ್ಟು ಹಾಕಿ ಕುದಿಸಿದ

ಹಾಲುನೀರನ್ನೇ ಬಿಸಿನೀರು ಎಂದು ಕುಡಿಯುವುದು. ಉಡುತಡಿಯ ನೆನಪುಗಳು ಯಾವುದೋ ಜನ್ಮದ ನೆನಪುಗಳಂತೆ ಬಲು ದೂರದವಾಗಿ ಕಂಡವು.

ಕತ್ತಲಾವರಿಸಿತು. ಭೋರೆಂದು ಬೀಸುವ ಗಾಳಿ, ಗಾಳಿ ನಿಂತಾಗ ಮಳೆ. ಮಳೆ ಸುರಿದದ್ದೇ ನೆಲಕ್ಕೆ ಬಾಯಿ ಬಂದಿದೆಯೋ ಎಂಬಂತೆ ಕೂಗುವ, ಕಿರಿಚುವ, ಕೀಂಗುಡುವ, ವದರುವ, ವಟಗುಡುವ ಅಸಂಖ್ಯ ದನಿಗಳು, ಅಲ್ಲೆಲ್ಲೋ ಬೀಸುವ ಗಾಳಿಗೆ ರೆಂಬೆ ಮುರಿದು ಉರುಳುವ ಸದ್ದು. ಯಾವುದೋ ಪ್ರಾಣಿ ನೆಗೆದ ಸದ್ದು. ರೆಕ್ಕೆ ಪಟಪಟಿಸಿ ಮಳೆಹನಿಗಳ ಕೊಡವಿಕೊಳ್ಳುವ ಸದ್ದು. ಕೆಳಗೆಲ್ಲೋ ಭೋರನೆ ನೀರು ಹರಿವ ಸದ್ದು. ಮಳೆ ನಿಂತರೆ ಉಳಿದೆಲ್ಲ ಸದ್ದು ಕೇಳುವುದು. ಮಸುಕು ಮಸುಕಾಗಿ ಅಲ್ಲಲ್ಲಿ ಆಗಸ ಕಾಣುವುದು. ಮತ್ತೆ ಮಳೆ ಸುರಿವಾಗ ಮಳೆಸದ್ದು ಕಿವಿ. ಕಣ್ಣುಗಳನ್ನು ತುಂಬುವುದು. ರಾತ್ರಿ ಎಷ್ಟು ಜಾವ ಹೀಗೆ ಕಳೆಯಿತೋ?

ಮಹಾದೇವಿಗೆ ಇದು ಮುಗಿಯದ ಇರುಳು ಎನಿಸಿ ಗುಹೆಯ ನಟ್ಟನಡುವಲ್ಲಿ, ತೋಯ್ದ ಕಂಬಳಿಯ ಮೇಲೆ  ಕಿಂಚಿತ್ತೂ ನಡುಗದೆ ಕಲ್ಲಿನಂತೆ ಧ್ಯಾನಕ್ಕೆ ಕುಳಿತೇ ಇದ್ದರು. ಬೆಳಕು ಈಗ ಹರಿಯಹುದು, ಸೂರ್ಯ ಇನ್ನೊಂದು ಗಳಿಗೆಗೆ ಬರಹುದು ಊಂಹೂಂ. ಯಾಕೋ ಇರುಳು ಸುದೀರ್ಘವೆನಿಸುತ್ತಿದೆ. ಅಂತೂ ಮಳೆ ಕೊಂಚ ಹಿಂದಾದಂತೆನಿಸುವ ಹೊತ್ತಿಗೆ. ಧ್ಯಾನಕ್ಕೆ ಕುಳಿತಲ್ಲೇ ಅಕ್ಕಮಹಾದೇವಿಯವರ ಪ್ರಾಣ ಪರಮಾತ್ಮನಲ್ಲಿ ಸೇರಿತ್ತು. ಅದೆಲ್ಲಿಂದ ಬಂದಿತೋ  ಆ ಧ್ಯಾನ ಸೂರ್ಯ ಮೂಡುವಾಗ ಅವನ ಕೆಂಪಿನ ನಗುವಿಗೆ ಮಹಾದೇವಿ ತಿರುಗಿ ನಗಲಿಲ್ಲ. ಅವ ಮೇಲೇರತೊಡಗಿದರೂ ಅವನ ಬೆಳಕಿಗೆ ಮಹಾದೇವಿಯ ಕಣ್ಣು ತನ್ನ ಬೆಳಕು ಸೇರಿಸಲಿಲ್ಲ. ಮಹಾದೇವಿ ಧ್ಯಾನದಲ್ಲಿರುವಾಗ ಹಗಲು ಹರಿದಿದೆ. ಬೆಳಿಗ್ಗೆ ಎಚ್ಚರಗೊಂಡ ಮಹಾದೇವಿಯ ಆತ್ಮ ಕೂಡಲೇ ಏನಾಯಿತೆಂದು ಅರ್ಥವಾಗಲು ಸಮಯ ಹಿಡಿಯಿತು. ಸುತ್ತಮುತ್ತ ನೋಡಿದರೆ ಇಡಿಯ ಗುಡ್ಡಕ್ಕೆ ಗುಡ್ಡವೇ ಮಳೆಯಲ್ಲಿ ಮಿಂದೆದ್ದು ನಿಂತಿದೆ. ಮಳೆನಿಂತ ಬಳಿಕದ ಸ್ತಬ್ಧತೆ ಅನುಭವಕ್ಕೆ ಸಿಗುತ್ತಿದೆ. ಯಾವ ಹಕ್ಕಿ ಕೂಗೂ ಕೇಳುತ್ತಿಲ್ಲ.

ಮೋಡದ ಮರೆಯಿಂದ ಸೂರ್ಯನು ಚಂದ್ರನಂತೆ ನೆತ್ತಿ ಮೇಲೆ ಕಾಣುತ್ತಿದ್ದಾನೆ. ದೂರದಲ್ಲಿ ಕೆಳಗೆ ಕಣಿವೆಯಲ್ಲಿ ಕೆಂಪುನೀರ ಹೊಳೆ ಭೋರೆಂದು ಹರಿಯುತ್ತಿದೆ. ಮಹಾದೇವಿಯ ದೇಹ ಧ್ಯಾನದಲ್ಲಿ ಕುತಸ್ಥಿಯಲ್ಲಿ ಹಾಗೆ ಇದೆ ದೇಹ ಅಕ್ಕಮಹಾದೇವಿಯವರು ತನ್ನ ದೇಹ ಕದಳಿಯವನದ ಗುಹೆಯಲ್ಲಿ ಕಂಡು, ಆಶ್ಚರ್ಯ ಕಾದಿತ್ತು, ಇಡೀ ಶ್ರೀಶೈಲ ಪರ್ವತವನ್ನು ಆವರಿಸಿದೆ ನನ್ನ ಆತ್ಮ  ಇಲ್ಲೆ ಚೆನ್ನಮಲ್ಲಿಕಾರ್ಜುನನಲ್ಲಿ, ಐಕ್ಯವಾಗಿದೆ. ಅಕ್ಕಮಹಾದೇವಿಯವರ ಆತ್ಮ ಪರಾತ್ಮನಲ್ಲಿ ಲಿನಾವಾಗಿದೆ. ಮುಚ್ಚಿದ ಕಣ್ಣುಗಳ ಒಳಗೆ ನೀಲ ಬೆಳಕು ತುಂಬಿಕೊಂಡಿತು. ದೇಹವನ್ನೆಲ್ಲ ನೀಲವೇ ಆವರಿಸಿ, ಉಬ್ಬಿದಂತಾಗಿ, ಹಗುರವಾಗಿ ಕಾಯರಹಿತ ಸ್ಥಿತಿ ಅನುಭವಕ್ಕೆ ದಕ್ಕಿತು. ತಾನು ತೇಲುತ್ತ ತೇಲುತ್ತ ಮೇಲೆ ಹೋಗುತ್ತಿರುವಂತೆ ಸಪ್ತನದಿಗಳ  ಕೊಳ್ಳದ ಆಚೀಚಿನ ಪರ್ವತಗಳ ದಾಟಿ ಮೇಲೇರುತ್ತ ವಿಶಾಲ ವ್ಯೋಮದಲ್ಲಿ ಸ್ವಚ್ಛಂದ ತೇಲುತ್ತ, ಕತ್ತಲೆ ಬೆಳಕು ಎನ್ನುವುದಿರದ, ಆದಿ ಅಂತ್ಯಗಳೇ ಕಾಣದ ವಿಸ್ತಾರ ನೀಲಿಯಲ್ಲಿ ಒಂದು ಪ್ರಜ್ವಲಿಸುವ ಬಿಂದುವಾಗಿ, ನಾದವಾಗಿ, ಕಿರಣವಾಗಿ ಹಗುರವಾಗಿ.ಉಡುತಡಿಯ ಮಹಾದೇವಿಯ ಬದುಕು ಶ್ರೀಶೈಲ ಗಿರಿಯ ಕದಳಿಯ ಗುಹೆಯವಾಸಿಯ ಬದುಕಾಗಿ ಬದಲಾಯಿತು. ಬದುಕು ಸಂಪೂರ್ಣ ಬಯಲೇ ಆಯಿತು.  ಗುಹೆಯ ಒಳಗೆ ಅಚಲ, ಬಂಡೆಯಂತೆ ಅಚಲ, ಕುಳಿತಲ್ಲಿಯೇ ವಿಶ್ವಹೃದಯದ ಮಿಡಿತ ಕೇಳುವ ಅಕ್ಕ. ಕುಳಿತಲ್ಲಿಯೇ ಕಣ್ಮುಚ್ಚಿ ಎಲ್ಲ ಕಾಣುವ.

. ಗುಹೆಯೇ ನೆಲ, ಗುಹೆಯೇ ಸೂರು, ಗುಹೆಯೇ ಬಾಗಿಲು, ಗುಹೆಯೇ ಕಿಟಕಿ, ಕೂದಲ ಒಂದೊಂದು ಎಳೆಯೂ ಮಹಾದೇವಿಯ ಸಂಗಾತಿ. ನಲ್ಲಮಲೆಯ ಶಿಖರಗಳಲ್ಲಿ, ಗುಡಿಯ ಆಚೀಚಿನ ಆವರಣಗಳಲ್ಲಿ ವರುಷಕ್ಕೆ ಒಮ್ಮೆಯೋ, ಇನ್ನೊಮ್ಮೆಯೋ ಯಾರಾದರೂ ಅಕ್ಕಮಹಾದೇವಿಯವರನ್ನು ಕಂಡಿದ್ದೆ ಎನ್ನುವುದುಂಟು. ಚೆಂಚು ಅಕ್ಕಯ್ಯ ಕಂಡಳು ಎಂಬ ಸುದ್ದಿ ಹರಡಿ ಜನ ನೆರೆಯತೊಡಗಿ ಅವಳ ಕಾಲಿಗೆ ಬಂದು ಬೀಳುವವರು ಒಬ್ಬರಿದ್ದದ್ದು ಇಬ್ಬರಾಗಿ ಮೂವರಾಗಿ ಹತ್ತಾದ ಕೂಡಲೇ ಅಕ್ಕ ಅಲ್ಲಿಂದ ಮಾಯವಾಗುವಳು. ಮಹಾದೇವಿಇಲ್ಲದಿದ್ದರೇನು? ಶ್ರೀಶೈಲದ ಗುಡಿಯ ಪ್ರತಿ ಕಲ್ಲೂ ಅಕ್ಕಮಹಾದೇವಿ ಹೇಸರು. ತಮ್ಮ ಎದೆಯೊಳಗೆ ಹೃತ್ಕಮಲ ಮಧ್ಯದೊಳಗೇ ಇರುವನೆಂಟ ಪರಮಸತ್ಯ .

ಒಂದಷ್ಟು ಜನ ಶ್ರೀಶೈಲ ಗಿರಿಯನಿಳಿದು ಕದಳಿ ವನದ ಕಡೆ ಹೋಗುವುದಿದೆ. ಯಾವ ಗುಹೆಯಲ್ಲಿ ಅಕ್ಕನಿರುವರೆಂದು ಹುಡುಕುವುದಿದೆ. ಇದು ಅಕ್ಕನ ಗವಿಯಿರಬಹುದೆಂದು ಗುರುತಿಸಿ ಹೊರಗೆ ಬುತ್ತಿಯನ್ನಿಟ್ಟು ಬರುವರು. ಕಂಬಳಿಯನ್ನಿಟ್ಟು ಬರುವರು. ಫಲತಾಂಬೂಲವನ್ನಿಟ್ಟು ಬರುವರು. ಒಂದು ಗುಹೆಯ ಬಾಯಿಯ ಎದುರು, ಬಂಡೆಯೊಂದು ಚಾಚಿ ಸೂರಿನಂತೆ ನೆರಳಾಗಿರುವ ಕಡೆ ಬೆಂಕಿ ಸದಾ ಉರಿಯುವುದು ಕಂಡು ಅವಳಲ್ಲಿಯೇ ಇರಬೇಕು ಮತ್ತು ಸುರಕ್ಷಿತವಿರಬೇಕು ಎಂದು ಸಮಾಧಾನ ತಾಳುವರು. ಅಕ್ಕಮಹಾದೇವಿಯ ಗವಿಯೆಂದು ಚೆಂಚುಗಳೂ ಆವಾಗೀವಾಗ ಹೋಗಿ ಗುಹೆಯ ಹೊರಗೆ ಪ್ರೇಮಹರಕೆ ಸಲ್ಲಿಸಿ ಬರುವರು.ಗುಹೆಯಲ್ಲಿ ಕುಳಿತೇ ಎಲ್ಲರನ್ನೂ,ನೋಡುವ, ಕದಳಿಯಲ್ಲೀಗ ಮಹಾದೇವಿ ತರುಲತೆಗಳೊಂದಿಗೂ, ಪಕ್ಷಿಪ್ರಾಣಿಗಳೊಂದಿಗೂ ಮಾತಾಡುವರು ಎನ್ನುತ್ತಾರೆ. ಅವುಗಳ ಭಾಷೆ ಕಲಿತಿದ್ದರು ಎನ್ನುತ್ತಾರೆ. ಅಕ್ಕ ಭಾಷೆಯನ್ನು ಅವೂ ಕಲಿತಿವೆ ಎನ್ನುತ್ತಾರೆ. ಕೆಲವರು ಗುಹೆಯ ತನಕ ಹೋಗಿ ಒಳಗಿನಿಂದ ಬರುವ ದನಿಯ ಕೇಳಿ ಬಂದೆ ಎನ್ನುತ್ತಾರೆ. ಕೆಲವರು ಗುಹೆಯ ಹೊರಗೆ ಅಡ್ಡ ಕಂಬಳಿ ನೇತು ಹಾಕಿರುವುದು ಕಂಡ ಎನ್ನುತ್ತಾರೆ. ಮತ್ತೆ ಕೆಲವರು ಗುಹೆಯ ಹೊರಗೆ ಆರುಣಿಯ ಹೊಗೆಯ ಆಘ್ರಾಣಿಸಿದೆ ಎನ್ನುತ್ತಾರೆ.ಇನ್ನು ಕೆಲವರು ಗುಹೆಯ ಹೊರಗೆ ಕುಳಿತವರಿಗೆಲ್ಲ ಅಕ್ಕ ಸ್ಪರ್ಶಿಸಿ ಹರಸಿದ ಅನುಭವವಾಗುವುದು ಎನ್ನುತ್ತಾರೆ.ಅರಿವನ್ನು ಒಂದೆಡೆ ನಿಲ್ಲಿಸಿ ಅದರ ಆಳ, ಅಗಲ, ಭವಿಷ್ಯಗಳನ್ನು ಕಾಣುವ ಸಂಯಮ ಅಕ್ಕಮಹಾದೇವಿಯವರಿಗೆ ಸಿದ್ಧಿಸಿದೆ. ಎಂದೇ ಮುಂಗಾಣೆಯ ಮಾತುಗಳು ಗುಹೆಯ ಬಳಿ ಹೋಗಿ ನಿಂತರೂ ಸಾಕು, ಕೇಳಿಸುತ್ತವೆ; ನಮ್ಮ ಭವಿಷ್ಯ ನಮಗೇ ಹೊಳೆಯುತ್ತದೆ ಎನ್ನುತ್ತಾರೆ.ಅವರವರ ಭಾವಕ್ಕೆ, ಅವರವರ ಭಕ್ತಿತಿಗೆ ತಕ್ಕಂತೆ ಅಕ್ಕ ಅವರವರಿಗೆ ದಕ್ಕಿದ್ದಾರೆ.

ಈಗಲೂ ನೀವೇನಾದರೂ ಮಹಾದೇವಿಯ ಕಾವ್ಯ ಕದಳಿಯ ಹೊಕ್ಕರೆ ಅಕ್ಕ ಮಾತನಾಡುತ್ತಿರುವುದು ಕೇಳುತ್ತದೆ. ಪದ ಗುಹೆಯಿಂದ ಅಕ್ಕ ಆತ್ಮದ ತುಣುಕುಗಳೋ ಎಂಬಂತಿರುವ ನುಡಿ ಧೂಪದ ಪರಿಮಳ ಪಸರಿಸುತ್ತದೆ. ಅಕ್ಕಮಹಾದೇವಿಯ ಆ ಮೆಲುದನಿಯ ಹಾಡು ಕಿವಿಗಿಂಪೆನಿಸಿ ಕೇಳುವವರ ರಕ್ತ ಹರಿವಿನಲ್ಲಿ ಸ್ಫೂರ್ತಿ ತುಂಬುತ್ತದೆ. ಏನೇನು ಪ್ರಶ್ನೆಯಿಟ್ಟುಕೊಂಡು ಹುಡುಕಿದರೂ ಮಹಾದೇವಿ ನುಡಿ ಕಡಲಿನಲ್ಲಿ ಉತ್ತರದ ಮುತ್ತು ಸಿಕ್ಕಿಯೇ ಸಿಗುತ್ತದೆ. ತನ್ನ ತಪೊಭಲದಿಂದ ಹಿಚ್ಛಾಮರಾಣಿಯಾಗಿ ದೇಹವನ್ನು ತ್ಯಜಿಸಿದರು ಚೆನ್ನಮಲ್ಲಿಕಾರ್ಜುನಲ್ಲಿ ಐಕ್ಯರಾದರು ಒಟ್ಟು **12** ವರ್ಷಗಳ ಕಾಲ ತಪಸ್ಸು ಮಾಡಿ ಶಿವನನ್ನು ಸೇರಿದರು. ಲಿಂಗವೆನ್ನೆ ಲಿಂಗೈಕ್ಯವೆನ್ನೆ, ಸಂಗವನ್ನೆ ಸಮರಸವೆನ್ನೆ, ಆಯಿತೆನ್ನೆ ಆಗದೆನ್ನೆ, ನೀನೆನ್ನೆ ನಾನೆನ್ನೆ. ಚೆನ್ನಮಲ್ಲಿಕಾರ್ಜುನಯ್ಯ, ಲಿಂಗೈಕ್ಯವಾದ ಬಳಿಕ ಏನೂ ಎನ್ನೆ ಲಿಂಗೈಕ್ಯವೆಂದರೆ ಜೀವಾತ್ಮ ಹಾಗೂ ಪರಮಾತ್ಮರ ಮಿಲನ. ಯೋಗದ ಭಾಷೆಯಲ್ಲಿ ಕುಂಡಲಿನಿ ಶಕ್ತಿಯು, ಸಹಸ್ರಾರ ಚಕ್ರದಲ್ಲಿ ಮಿಲನವಾಗುವದು. ಸಮರಸ ಸಾಧಿಸಿದಾಗ ನಾನು ನೀನು ಎಂಬ ದ್ವೈತ ಅಳಿಯುತ್ತದೆ ಅಂಗ ಬೇರೆಯಲ್ಲ, ಅಂಗೈಯಲ್ಲಿರುವ ಇಷ್ಟಲಿಂಗ ಬೇರೆಯಲ್ಲ ಎಂಬ ಸ್ಥಿತಿ ನಿರ್ಮಾಣವಾಗುತ್ತದೆ. ಇದು ಶೂನ್ಯ ಸ್ಥಿತಿ ಅಥವಾ ಬಯಲಾದ ಸ್ಥಿತಿ. ಇದನ್ನು ಸಾಧಿಸಿದ ಅಕ್ಕ ಚೆನ್ನಮಲ್ಲಿಕಾರ್ಜುನನಲ್ಲಿ ಒಂದಾಗಿ ಸಂಪೂರ್ಣ ಲಿಂಗಮಯವಾದರು. ತಾನೇ ಪರಮಾತ್ಮನೆಂಬ ಅರಿವಿನ ಸ್ಥಿತಿ ಭಕ್ತನದಾಗುತ್ತದೆ. ಅದಕ್ಕೆ ಅಕ್ಕ ಏನೂ ಹೇಳಲಿಚ್ಛಿಸುವದಿಲ್ಲ. ಶ್ರೀಶೈಲಕ್ಕೆ ಹೋಗುವವರೆಗೆ ಅಕ್ಕನದು ಸಕಾಮ ಭಕ್ತಿಯಾಗಿತ್ತು. ಪರಮಾತ್ಮನಲ್ಲಿ ಬೆರೆಯುವ, ತೀವ್ರವಾದ ಹಂಬಲ ಆತನ ಒಲುಮೆಯನ್ನು ಬೇಡುವಂತೆ ಮಾಡಿದ್ದವು. ಶ್ರೀ ಶೈಲದ ದಾರಿಯಲ್ಲಿ ಅಕ್ಕನ ನಿಷ್ಕಾಮ ಭಕ್ತಿ ಗೋಚರವಾಗುತ್ತದೆ. ಒಡಲ ಕಳವಳಕ್ಕಾಗಿ ಅಡವಿಯ ಹೊಕ್ಕೆ **1** ಗಿಡಗಿಡಗಳ ಬೇಡಿದೆನು ಎನ್ನ ಅಂಗಕ್ಕೆಂದು ಅವು ನೀಡಿದವು ತಮ್ಮ ಲಿಂಗಕ್ಕೆಂದು l ಆನು ಬೇಡಿ ಭವಿಯಾದೆ ಅವು ನೀಡಿ ಭಕ್ತರಾದವು **!** ಇನ್ನು ಬೇಡಿದೆನಾದರೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ.ಒಡಲಿನ ಬೇಗೆ ಅಕ್ಕನನ್ನು ಈಗ ಕಾಡಿಲ್ಲದಿರುವದು ಗೋಚರಿಸುತ್ತದೆ. ಹಣ್ಣು ಹಂಪಲಗಳನ್ನು ಅಕ್ಕ ತಿನ್ನಲಿಲ್ಲದಿರುವದು ಇಲ್ಲಿ ಸ್ಪಷ್ಟವಾಗಿದೆ. ಅಕ್ಕನವರು ಎಲ್ಲ ಸಿದ್ಧಿಗಳು ಕೈಗೂಡಿವೆ. ಬೇರೆಯವರಿಂದ ಬೇಡಿ ಪಡೆಯುವವನು ಭವಿ, ನೀಡುವವ ಭಕ್ತನೆನಿಸಿದ್ದಾನೆ. ಈಗ ಪರಿಪೂರ್ಣ ಭಕ್ತರಾದ ಅಕ್ಕ, ದೈಹಿಕವಾದ ಎಲ್ಲ ಬಾಧೆಗಳನ್ನೂ ಕಳೆದುಕೊಂಡವಳಾಗಿದ್ದರೆಂಬುದು ಇಲ್ಲಿ ಗಮನಾರ್ಹವಾಗಿದೆ. ಶುದ್ಧ ಸಾತ್ವಿಕ, ನಿಷ್ಕಾಮ ಪ್ರೇಮ ಭಕ್ತಿಯನ್ನು ಸಾಧಿಸಿದ ಅಕ್ಕನ ಬದುಕು ಅಪೂರ್ವವಾದುದು ನಮ್ಮ ಅಳವಿಗೆ ನಿಲುಕುವಂತಹದಲ್ಲ. ಅಕ್ಕಮಹಾದೇವಿಯ ಅಂಗ ಅಳಿದು ಲಿಂಗವಾಗಿ ಲಿಂಗದೊಳಗೆ ಕೂಡಿಕೊಂಡಾಗ ಹಾಲಿನಲ್ಲಿ ಹಾಲು ಸೇರಿ ಒಂದಾದಂತೆ ಲಿಂಗದೊಳಗೆ ಸಮರಸವಾದರು ಅಕ್ಕ

ಶ್ರೀಶೈಲದಾಚೆ ಕದಳಿಯವನದ ಗುಹೆಯಲ್ಲಿ ಜ್ಯೋತಿಯಲ್ಲಿ ಜ್ಯೋತಿಯಾಗಿ ಪರಂಜ್ಯೋತಿಯಾದರು. ಚಿಜ್ಯೋತಿಯಾದರು!

ಭ್ರಮರಾಂಭೆನನ್ನು ಮಗ್ಗುಲಲ್ಲಿಟ್ಟುಕೊಂಡ ಶಿವ ನನ್ನವನಲ್ಲ. ನನ್ನ ಚೆನ್ನಮಲ್ಲಯ್ಯ ಭಾವಶಿವ. ನಾನು ಶಿವನೊಡನೆಯ ದಾಕ್ಷಾಯಿಣಿಯಲ್ಲ. . ಶಿವ-ಭ್ರಮರಾಂಬಿಕೆಯರ ಜಾಡು ಬೇರೆ. ಚೆನ್ನಮಲ್ಲಯ್ಯ-ಅಕ್ಕನ ಜಾಡು ಬೇರೆ. ಭ್ರಮರಾಂಭೆ ಗುಡಿಯ ಜೊತೆಗಾತಿ. ನಾನು ಬಯಲ ಸಂಗಾತಿ. ಹೀಗೆನಿಸಿದ್ದೇ ಅಕ್ಕಮಹಾದೇವಿಗೆ ನಲ್ಲಮಲೆಯ ಗಿರಿಶಿಖರಗಳಲ್ಲಿ ಬಯಲುಗಳಲ್ಲಿ, ಅಡವಿ ಹೊಲಗಳಲ್ಲಿ, ಮಸಣದಲ್ಲಿ ಚೆನ್ನಮಲ್ಲಯ್ಯನ ವಿಶ್ವರೂಪ ಕಂಡುಕೊಳ್ಳುತ್ತ ಗುಡಿಯ ಸಂತರಾಗದೇ ಬಯಲ ಅಕ್ಕನಾಗಿ ಹರಡಿಕೊಂಡರು ಅಕ್ಕಮಹಾದೇವಿ ಇದನ್ನು ಕೆಳಿದ ಓದಿದ ಎಲ್ಲಾಭಕ್ತರಿಗೆ ಅಕ್ಕಮಹಾದೇವಿಯವರ ಅನುಗ್ರಹ ಸದಾ ಕಾಲ ಉಸಿರಾಗಿ ಹಸಿರಾಗಿ ಉಳಿದಿರುತ್ತದೆ.

ಇತ್ತ ಬಸವಣ್ಣ ಅಕ್ಕಮಹಾದೇವಿಯವರು ಲಿಂಗೈಕ್ಯರಾದ ವಿಷಯ ತಿಳಿದು. ಬಸವಣ್ಣನ ಮನಸಿನಲ್ಲಿ ಅಕ್ಕಮಹಾದೇವಿಯವರು ಎಂಥ ಅಪೂರ್ವವಾದ ಸಾಧನೆ ಮಾಡಿಹೋದರು. ನಾನು ಅಂಥ ಸಾಧನೆ ಭಕ್ತಿ ಮಾಡಬೇಕು , ನನ್ನ ಮನಸ್ಸುನೀಲಾಂಬಿಕೆ ಮೋಹದಲ್ಲಿ ಬಿದ್ದುಹೊಗಿದೆ, ಇನ್ನೊಬ್ಬ ಹೆಂಡತಿ ಗಂಗಾಂಬಿಕೆ ಜೀವಂತವಾಗಿ ಇದ್ದರೂ ನಾನು ಇನ್ನೊಂದು ಮದುವೆಯಾದೆ. ಹೆಣ್ಣಿನ ಮೋಹದಲ್ಲಿ ಇದ್ದುಬಿಟ್ಟೆ, ಬಸವಣ್ಣಗೆ **58**ನೇ ವಯಸ್ಸಿನಲ್ಲಿ ಭಕ್ತಿ ಮಾರ್ಗ ಸಾಧನೆ ಪ್ರಾರಂಭವಾಯಿತು, ಇಷ್ಟು ದಿನ ಬರಿ ಸಾಮಾಜ ಸೇವೆಯಾಯಿತು.ಸಂಸಾರದ ಹಂಗನ್ನು ಬಿಟ್ಟು ಭಕ್ತಿ ಸಾಧನೆ ಬಸವಣ್ಣನವರ ಮನಸ್ಸು ಪ್ರಾರಂಭವಾಯಿತು. ಜನರು ಬಸವಣ್ಣರಿಗೆ ತುಂಬ ಮೊಸಮಾಡಿದರು.ಬಸವಣ್ಣ ತನ್ನ ಭಕ್ತಿಯ ಉನ್ನತ ಗುರಿಯನ್ನು ತಲುಪಲು ಸಾಧ್ಯವಾಗಲಿಲ್ಲ . ಅವರ ಸಾವು ಸಮೀಪಿಸಿತ್ತು. ವಿಶ್ವಗುರು ಅಕ್ಕಮಹಾದೇವಿಯವರು **1130** ರಲ್ಲಿ ದವನದ ಹುಣ್ಣಿಮೆಯ ದಿನದಂದು ಹುಟ್ಟಿದರು. ಅಕ್ಕಮಹಾದೇವಿಯವರು **1160** ಕ್ಕೆ ಲಿಂಗೈಕ್ಯರಾದರು ಕೇವಲ **30** ವರ್ಷಗಳ ಕಾಲ ಮಾತ್ರ ಜೀವಿಸಿದ್ದರು. ಈಗಲು ಶ್ರೀ ಶೈಲದ ಇಡಿ ನಲ್ಲಮಲ್ಲಕಾಡನ್ನೆಲ್ಲ ಬೆಟ್ಟ ಗುಡ್ಡ ಪರ್ತವನ್ನೆಲ್ಲ ಅವರಿಸಿದ್ದರೆ ಇದನ್ನು ಸುಷ್ಮವಾಗಿ ಗಮನಿದರೆ ಅನುಭವ ವಿಸ್ಮಯ ವಾಗುತ್ತದೆ .